ಕಮಲಾ ಕೃತಿ ವಿಮರ್ಶೆ



...ದಕರು
...ರ್. ತಿಪ್ಪೇಸ್ವಾಮಿ
...ಲ್ಲಾರು ಪ್ರಸಾದ್

ಕಮಲಾಕೃತಿ ವಿಮರ್ಶೆ

(ಪ್ರೊ॥ ಕಮಲಾ ಹಂಪನಾ ಅಭಿನಂದನ ಗ್ರಂಥ)

ಪ್ರೀತಿಯಿಂದ
ಹಂಪನಾ

ಸಂಪಾದಕರು

ಜಿ. ಆರ್. ತಿಪ್ಪೇಸ್ವಾಮಿ

ನಲ್ಲೂರು ಪ್ರಸಾದ್

ಪ್ರಕಾಶಕರು

ಕಮಲಾ ಹಂಪನಾ ಅಭಿನಂದನ ಸಮಿತಿ

ಬೆಂಗಳೂರು

KAMALAKRUTI VIMARSHE—Felicitation Volume Presented to Prof. Kamala Hampana. Edited by Sri G. R. Thippeswamy and Nalluru Prasad. Published by Prof. Kamala Hampana Abhinandana Samiti, Bangalore. First Edn. 1985, Pages
Rs. 50-00

ಬೆಲೆ : ಐವತ್ತು ರೂಪಾಯಿ.

ರಕ್ಷಾಕವಚ : ಶ್ರೀ ರಾ. ಸೂರಿ

ಮುದ್ರಕರು
ಲಕ್ಷ್ಮಿ ಮುದ್ರಣಾಲಯ
ಚಾಮರಾಜಪೇಟೆ
ಬೆಂಗಳೂರು ೫೬೦ ೦೧೮

ನಿಮ್ಮೊಂದಿಗೆ ಒಂದೆರಡು ಮಾತು........

ಶ್ರೀಮತಿ ಕಮಲಾ ಹಂಪನಾ ಅವರು ವೃತ್ತಿಯಿಂದ ಉಪನ್ಯಾಸಕರಾಗಿದ್ದರೂ ಪ್ರವೃತ್ತಿಯಿಂದ ಕನ್ನಡದ ಪ್ರಸಿದ್ಧ ಬರಹಗಾರ್ತಿಯರಲ್ಲಿ ಒಬ್ಬರಾಗಿದ್ದಾರೆ. ಪೂರ್ವದ ಹಳಗನ್ನಡದಿಂದ ಹಿಡಿದು ಆಧುನಿಕ ಸಾಹಿತ್ಯದವರೆಗೆ ಗಂಭೀರವಾಗಿ ಅಧ್ಯಯನ ನಡೆಸಿದ್ದಾರೆ. ಹಳಗನ್ನಡ ಕಾವ್ಯ ಸಂಪಾದನೆಯಿಂದ ಹಿಡಿದು ಕಥಾಸಾಹಿತ್ಯ, ಶಿಶುಸಾಹಿತ್ಯ, ಅನುವಾದ, ಜೀವನ ಚರಿತ್ರೆ, ಸಂಶೋಧನೆ, ವ್ಯಕ್ತಿಚಿತ್ರಗಳು–ಇತ್ಯಾದಿ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿ ನಡೆಸಿದ್ದಾರೆ. ಇವರ ಬರವಣಿಗೆಯ ಹರವು ವಿಶಾಲವಾದುದು. ವಿಚಾರ, ವಿಮರ್ಶೆ, ಸಂಶೋಧನೆ— ಈ ಮೂರು ಕ್ಷೇತ್ರಗಳಲ್ಲಿ ಇವರ ಕೊಡುಗೆ ಮೌಲಿಕವಾದುದು. ಇವರ ಕೆಲವು ಕತೆಗಳು, ಪ್ರಬಂಧಗಳು ಬಂಗಾಳಿ, ತಮಿಳು ಮೊದಲಾದ ಇತರೆ ಭಾಷೆಗಳಿಗೆ ಅನುವಾದಗೊಂಡಿವೆ. ವಿಶ್ವಕೋಶ, ಸಾಧನೆ, ಸಾಹಿತ್ಯಚರಿತ್ರೆ, ಕನ್ನಡಭಾರತಿ—ಮೊದಲಾದ ಬೇರೆ ಬೇರೆ ಆಶಯದ ಸಂಪುಟಗಳಲ್ಲಿ ವಿದ್ವತ್ಪೂರ್ಣ ಲೇಖನಗಳನ್ನೂ ಪ್ರಕಟಣೆ ಮಾಡಿದ್ದಾರೆ. ಆಕಾಶವಾಣಿಯಲ್ಲಿ ಕಥೆಗಳು, ನಾಟಕಗಳು, ರೂಪಕಗಳು, ಶಬ್ದಚಿತ್ರಗಳು, ವಿದ್ವತ್ಪೂರ್ಣ ವಿಷಯಗಳ ಮೇಲೆ ಭಾಷಣಗಳು ಪ್ರಸಾರವಾಗಿವೆ. ಬೊಂಬಾಯಿ, ಹೈದರಾಬಾದು, ಮಂಡ್ಯ, ಚಿಕ್ಕಮಗಳೂರು, ಬೆಂಗಳೂರು, ಧರ್ಮಸ್ಥಳ, ಶಿರಸಿ ಮೊದಲಾದ ಕಡೆಗಳಲ್ಲಿ ನಡೆದ ಸಾಹಿತ್ಯ ಸಮ್ಮೇಳನಗಳಲ್ಲಿ, ಅನೇಕ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ್ದಾರೆ. ನಾಡಿನ ವಿಶ್ವವಿದ್ಯಾನಿಲಯಗಳಲ್ಲಿ ಪ್ರಚಾರೋಪನ್ಯಾಸಗಳನ್ನು ಮಾಡಿರುವರು, ಅಲ್ಲಿಯ ವಿಚಾರ ಸಂಕಿರಣಗಳಲ್ಲಿ ಪ್ರಬಂಧಗಳನ್ನು ಮಂಡಿಸಿರುವರು. ಸುಮಾರು ಇಪ್ಪತ್ತೈದು ವರ್ಷಗಳಿಂದ ಕರ್ನಾಟಕದಾದ್ಯಂತ ಹಾಗೂ ಕನ್ನಡೇತರ ಪ್ರಾಂತಗಳಲ್ಲಿ ಪ್ರವಾಸ ಮಾಡಿ ಹಲವಾರು ಸಾಹಿತ್ಯಿಕ ಉಪನ್ಯಾಸಗಳನ್ನು ನೀಡಿದ್ದಾರೆ.

ಕಮಲಾ ಹಂಪನಾ ಅವರು ಕನ್ನಡ ಬಿ.ಎ., ಆನರ್ಸ್, ಎಂ.ಎ., ಪದವೀಧರರು. ೧೯೫೦ ರಿಂದ ಬೆಂಗಳೂರು ಹಾಗೂ ಮೈಸೂರು ಮಹಾರಾಣಿ ಕಾಲೇಜು, ವಿಜ್ಞಾನ ಕಾಲೇಜು, ಬೆಂಗಳೂರು--ಇಲ್ಲಿ ಉಪನ್ಯಾಸಕಿಯಾಗಿದ್ದ ಇವರು ಈಗ ಬೆಂಗಳೂರು ಮಹಾರಾಣಿ ಕಲಾ ಕಾಲೇಜಿನ ಕನ್ನಡ ವಿಭಾಗದ ರೀಡರ್ ಆಗಿದ್ದಾರೆ. ರಾಜ್ಯ ಸಾಹಿತ್ಯ ಅಕಾಡೆಮಿಯ ಸದಸ್ಯೆಯೂ ಆಗಿದ್ದರು. ಹಲವಾರು ಸಂಘ ಸಂಸ್ಥೆಗಳಲ್ಲಿ ಪದಾಧಿಕಾರಿಯಾಗಿಯೂ ಶ್ರಮಿಸುತ್ತಿದ್ದಾರೆ. ತಮ್ಮ ಪ್ರೌಢ ಉಪನ್ಯಾಸಗಳಿಂದ ವಿದ್ಯಾರ್ಥಿ – ವಿದ್ಯಾರ್ಥಿನಿಯರ ಮನಸ್ಸನ್ನು ಗೆದ್ದಿದ್ದಾರೆ. ಅಧ್ಯಾಪಕ ವೃತ್ತಿಯ ಜೊತೆಯಲ್ಲಿಯೇ ಹಲವು ಶ್ರೇಷ್ಠ ಕೃತಿಗಳನ್ನು ಹೊರತರುವುದರ ಮೂಲಕ ಓದುಗರ ಅಭಿಮಾನಕ್ಕೆ ಪಾತ್ರರಾಗಿದ್ದಾರೆ. ಈ ಮೂಲಕ ಅವರು ನಾಡಿನಾದ್ಯಂತ ಯತೇಚ್ಛ ಸಂಖ್ಯೆಯ ತುಂಬು ಹೃದಯದ ಅಭಿಮಾನಿಗಳನ್ನು ಗಳಿಸಿಕೊಂಡವ ರಾಗಿದ್ದಾರೆ. ಸಮಕಾಲೀನ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಸಮರ್ಥ ಲೇಖಕಿಯಾಗಿ ತಮ್ಮದೇ ಆದ ಹೆಜ್ಜೆ ಗುರುತುಗಳನ್ನು ಮೂಡಿಸಿದವ ರಾಗಿದ್ದಾರೆ. ಇವರ ಬರಹಗಳು ಹೊಸ ಆಲೋಚನೆಯನ್ನು ಸ್ಫುರಿಸು ವಂಥವಾಗಿವೆ. ಇವರಿಗೆ ಐವತ್ತು ವರ್ಷಗಳು ತುಂಬುತ್ತಿರುವ ಸಂದರ್ಭದಲ್ಲಿ ಅವರು ಕನ್ನಡ ನಾಡು ನುಡಿಗಳಿಗೆ ಸಲ್ಲಿಸಿರುವ ಬಹು ಅಮೂಲ್ಯವಾದ ಸೇವೆಗೆ ಕಿರುಕಾಣಿಕೆಯಾಗಿ ಸಂಭಾವನಾ ಗ್ರಂಥ ವೊಂದನ್ನು ಅರ್ಪಿಸಬೇಕೆನ್ನುವುದು ಅಭಿಮಾನಿಗಳ ಸದುದ್ದೇಶವಾಗಿದೆ.

ಕನ್ನಡದಲ್ಲೇ ಏಕೆ ಭಾರತೀಯ ಭಾಷೆಗಳ ಸಂದರ್ಭದಲ್ಲಿ ಸಾಹಿತ್ಯ ಸೃಷ್ಟಿಯಲ್ಲಿ ಸಿಂಹಪಾಲನ್ನು ಪಡೆದುಕೊಂಡವರು ಪುರುಷರೇ ಆಗಿದ್ದಾರೆ. ಇದರ ಅರ್ಥ ಸೃಜನಶೀಲ ಮತ್ತು ಸೃಜನೇತರ ಕೃತಿರಚನೆ ಯಲ್ಲಿ ಮಹಿಳೆಯರಿಗೆ ಆಸಕ್ತಿ ಇಲ್ಲವೆಂದಾಗಲೀ ಅವರು ಅಷ್ಟೊಂದು ಪ್ರತಿಭಾವಂತರಲ್ಲವೆಂದಾಗಲೀ ಅರ್ಥವಲ್ಲ. ಪಾಶ್ಚಾತ್ಯ ಚಳುವಳಿಗಳ ಪ್ರೇರಣೆಯಿಂದ ಸ್ತ್ರೀ ಸ್ವಾತಂತ್ರ್ಯ ಮತ್ತು ಸಮಾನತೆಯ ಕೂಗು ಭಾರತೀಯ ಪರಿಸರದಲ್ಲಿ ಇತ್ತೀಚೆಗೆ ಹೆಚ್ಚು ವ್ಯಾಪಕವಾಗಿ ಕೇಳುತ್ತಾ ಬಂದಿದ್ದರೂ ಕಾರ್ಯರೂಪಕ್ಕೆ ಬಂದಿರುವುದು ಶೇಕಡ ಐದು ಭಾಗದಷ್ಟು ಮಾತ್ರ ಇರಬಹುದು. ಭಾರತೀಯ ಸಮಾಜ ಇನ್ನೂ ಪುರುಷಪ್ರಧಾನ ವಾಗಿಯೇ ಉಳಿದಿರುವುದು ಸಾಮಾಜಿಕ, ಧಾರ್ಮಿಕ, ರಾಜಕೀಯ ಸ್ಥಾನಮಾನಗಳನ್ನೆಲ್ಲ ತನ್ನ ಕೈಯಲ್ಲೇ ಇರಿಸಿಕೊಳ್ಳಬೇಕೆಂದು ಪುರುಷ ಪ್ರಯತ್ನಿಸುತ್ತಿರುವುದು ಇದಕ್ಕೆ ಬಹುಮುಖ್ಯ ಕಾರಣ. ಇಂದಿಗೂ

ಮಹಿಳೆ ಪುರುಷರಂತೆ ಮನೆಯಿಂದ ಹೊರಗೆ ನಿರ್ಭಿಡೆಯಿಂದ ಓಡಾಡ ಲಾರಳು, ವ್ಯವಹರಿಸಲಾರಳು. ಪುರುಷ ತನ್ನ ಸ್ವಾರ್ಥಕ್ಕೋಸ್ಕರ ಕಲ್ಪಿಸಿಕೊಂಡಿರುವ ಕಟ್ಟುಪಾಡುಗಳಲ್ಲಿ ತನ್ನಿಷ್ಟಕ್ಕೆ ವಿರುದ್ಧವಾಗಿ ಅವಳು ನರಳುತ್ತ ಬದುಕು ಸಾಗಿಸಬೇಕಾಗಿದೆ. ಈ ಪರಿಸ್ಥಿತಿಯಲ್ಲಿ ಅವಳಲ್ಲಿ ವಿದ್ಯಾಭ್ಯಾಸದ ಬಗೆಗೆ ಒಲವು ಮೂಡುವುದಾಗಲೀ ತಾನು ಅಪೇಕ್ಷಿಸುವಷ್ಟು ವಿದ್ಯಾಭ್ಯಾಸ ಪಡೆದುಕೊಳ್ಳುವುದಾಗಲೀ ಪುರುಷನಂತೆ ಅನುಭವದ ವ್ಯಾಪಕ ಪರಿಚಯ ಪಡೆದುಕೊಳ್ಳುವುದಾಗಲೀ ಅವಳಿಗೆ ಸಾಧ್ಯವಾಗುತ್ತಿಲ್ಲ. ಇಷ್ಟೆಲ್ಲ ಬಂಧನಗಳಿಂದ ಬಿಡಿಸಿಕೊಂಡು ಮಹಿಳೆ ಸಾಹಿತ್ಯಸೃಷ್ಟಿಯಲ್ಲಿ ತೊಡಗುವುದು ಮತ್ತು ಸಾರ್ಥಕವಾದ ಕೃತಿಗಳನ್ನು ಕೊಡುವುದು ದೊಡ್ಡ ಸಾಧನೆಯೆಂದೇ ಹೇಳಬೇಕು. ಕನ್ನಡ ಸಾಹಿತ್ಯದಲ್ಲಿ ಹಲವಾರು ಮಹಿಳೆಯರು ಕೃತಿರಚನೆ ಮಾಡುತ್ತಿದ್ದರೂ ಅವರಲ್ಲಿ ಬಹುಮಂದಿ ಚರ್ವಿತ ಚರ್ವಣ ಎನ್ನಿಸುವ ಕಥಾಸಾಹಿತ್ಯ ಮತ್ತು ಕಾದಂಬರಿ ನಿರ್ಮಾಣಕ್ಕೆ ಮಾತ್ರ ತಮ್ಮನ್ನು ಒಪ್ಪಿಸಿಕೊಂಡವರು. ಉಳಿದ ಸಾಹಿತ್ಯ ಪ್ರಕಾರಗಳಿಗಿಂತ ಇವುಗಳ ಸೃಷ್ಟಿ ಸುಲಭ ಎನ್ನುವುದು ಒಂದು ಕಾರಣವಾದರೆ ಸ್ತ್ರೀಯರ ಕಥೆ, ಕಾದಂಬರಿಗಳಿಗೆ ನಿಯತಕಾಲಿಕೆಗಳಲ್ಲಿ ಹೆಚ್ಚಿನ ಬೇಡಿಕೆ ಇರುವುದು ಮತ್ತೊಂದು ಕಾರಣ. ಈ ಎರಡೂ ಪ್ರಕಾರಗಳನ್ನು ಹೊರತುಪಡಿಸಿ ತಮ್ಮ ಅನುಭವ, ಚಿಂತನೆ, ವಿಚಾರವಂತಿಕೆ, ಪ್ರತಿಭೆ, ಪಾಂಡಿತ್ಯ ಮೊದಲಾದುವುಗಳನ್ನು ಧಾರೆ ಎರೆಯುವ ಉಳಿದ ಪ್ರಕಾರಗಳ ಕಡೆಗೆ ಗಮನ ಹೊರಳಿಸಿರುವಂಥವರು, ಅವುಗಳಲ್ಲಿ ವಿಶಿಷ್ಟ ಸಾಧನೆಗಳನ್ನು ಮಾಡಿರುವಂಥವರು ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ. ಈ ವಿಚಾರದ ಹಿನ್ನೆಲೆಯಲ್ಲಿ ಕಮಲಾ ಹಂಪನಾ ಅವರ ಸಾಹಿತ್ಯ ಚಟುವಟಿಕೆಗಳು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಮೂವತ್ತಕ್ಕೂ ಹೆಚ್ಚಿನ ಕೃತಿಗಳನ್ನು ಪ್ರಕಟಿಸಿರುವ ಸಾಧನೆ ಗಮನಾರ್ಹವಾದುದೆಂದು ಯಾರೂ ಒಪ್ಪಿಕೊಳ್ಳಲೇಬೇಕಾಗುತ್ತದೆ.

'ಶ್ರೀ' ಅವರು ಕನ್ನಡ ನಾಡು ನುಡಿಗಳ ವಿಚಾರದಲ್ಲಿ ಸಲ್ಲಿಸಿದ ಅಪೂರ್ವ ಸೇವೆಗೆ ಗೌರವದ ಕಾಣಿಕೆಯಾಗಿ ಕನ್ನಡದಲ್ಲಿ ಬಿ. ಎಂ. ಶ್ರೀಕಂಠಯ್ಯನವರ ಶಿಷ್ಯರೂ ಸ್ನೇಹಿತರೂ ಮತ್ತು ಅಭಿಮಾನಿಗಳೂ 'ಸಂಭಾವನೆ' ಎಂಬ ಹೆಸರಿನ ಗ್ರಂಥವನ್ನು ಹೊರತಂದರು. ಇದು ಕನ್ನಡದಲ್ಲಿ ಅಭಿನಂದನ ಗ್ರಂಥಗಳ ಸೃಷ್ಟಿಗೆ ನಾಂದಿ ಹಾಡಿದ ಕೃತಿ. ಇದರಲ್ಲಿ ಬಿ. ಎಂ. ಶ್ರೀ. ಅವರ ಜೀವನ, ಸಾಧನೆ, ವ್ಯಕ್ತಿತ್ವ, ಅವರ ಕೃತಿಗಳು—ಈ ವಿಚಾರಗಳ ಒಳನೋಟಗಳನ್ನು ಅವರನ್ನು ಹತ್ತಿರದಿಂದ

ಬಲ್ಲವರು ಉಲ್ಲೇಖಿಸಿದ್ದರ ಜೊತೆಗೆ ಸಮಕಾಲೀನ ಕನ್ನಡ ಸಾಹಿತ್ಯ, ಭಾಷೆ, ಪ್ರಕಟಣೆ ಇತ್ಯಾದಿಗಳನ್ನು ಕುರಿತ ಉಪಯುಕ್ತ ಲೇಖನಗಳೂ ಅದರಲ್ಲಿ ಸೇರ್ಪಡೆಯಾಗಿವೆ. ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಬಹು ಮುಖ್ಯವಾದ ಸೇವೆಸಲ್ಲಿಸಿದ ಯಾವ ವ್ಯಕ್ತಿಯೇ ಆಗಲಿ ಕನ್ನಡ ನಾಡು ನುಡಿಗಳನ್ನು ಪ್ರೀತಿಸುವವರಿಗೆ ಪೂಜ್ಯ ಮತ್ತು ನಿತ್ಯ ಸ್ಮರಣಾರ್ಹ. ಅಂತಹ ವ್ಯಕ್ತಿಯ ಸಾವಿನೊಂದಿಗೆ ಅವನೆಲ್ಲ ಸಾಧನೆಗಳು ಮರೆತು ಹೋಗುವಂತಾಗಬಾರದು. ಇದು ಅಭಿನಂದನ ಗ್ರಂಥ ಸಮರ್ಪಣೆಯ ಹಿಂದಿರುವ ಸದುದ್ದೇಶ.

ಕಮಲಾ ಹಂಪನಾ ಅವರು ಸಾಹಿತ್ಯದ ಹಲವುಕ್ಷೇತ್ರಗಳಲ್ಲಿ ತುಂಬ ಯಶಸ್ವಿಯಾದ ಬರಹಗಳನ್ನು ಕೊಟ್ಟವರು. ಜನಪ್ರಿಯ ಭಾಷಣಕಾರರೂ ಆಗಿರುವಂಥವರು. ನಾಡಿನ ವಿವಿಧ ವಿಶ್ವವಿದ್ಯಾನಿಲಯಗಳು ಸಂಘ ಸಂಸ್ಥೆಗಳು ಏರ್ಪಡಿಸಿದ ಹಲವಾರು ಸಮ್ಮೇಳನಗಳಲ್ಲಿ, ವಿಚಾರ ಸಂಕಿರಣಗಳಲ್ಲಿ ಪ್ರಬಂಧಕಾರರಾಗಿಯೋ ಅಧ್ಯಕ್ಷರಾಗಿಯೋ ಉದ್ಘಾಟಕರಾಗಿಯೋ ವಿಶೇಷ ಆಹ್ವಾನಿತರಾಗಿಯೋ ಭಾಗವಹಿಸಿ ಜನಪ್ರಿಯರಾಗಿರುವಂಥವರು. ಯಾವುದೇ ಸಾಹಿತ್ಯ ಪಂಥಗಳಿಗೆ ತಮ್ಮನ್ನು ಒಪ್ಪಿಸಿಕೊಳ್ಳದೆ ತುಂಬು ಹೊಳೆಯಂತೆ ಸದಾಕಾಲ ಗಂಭೀರವಾದ ಸಾಹಿತ್ಯ ರಚನೆಯಲ್ಲಿ ತೊಡಗಿರುವವರು. ಆಧುನಿಕ ಸಂದರ್ಭದ ವಸ್ತು ಸ್ಥಿತಿಗನುಗುಣವಾಗಿ ಸ್ಪಂದಿಸುವ ಬಹುಕಾಲ ನಿಲ್ಲುವ ಗಟ್ಟಿ ಕೃತಿಗಳನ್ನು ಕೊಡುವ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದವರು. ಎಲ್ಲ ಬಗೆಯ ವಿವಾದಗಳಿಂದ ದೂರ ನಿಂತವರು.

ದಿನಾಂಕ ೨೮-೧೦-೧೯೮೫ಕ್ಕೆ ಕಮಲಾ ಹಂಪನಾ ಅವರಿಗೆ ಐವತ್ತು ವರ್ಷ ತುಂಬಲಿದೆ. ಐವತ್ತನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ ಅವರಲ್ಲಿ ಪ್ರೀತಿ ಗೌರವಗಳನ್ನು ಇಟ್ಟುಕೊಂಡವರಿಗೆ ಅವರ ಬದುಕು ಬರಹ, ಅವರು ಏರಿದ ಎತ್ತರ, ತೋರಿದ ದಾರಿ, ನಿರ್ಮಿಸಿದ ಪರಂಪರೆಗಳನ್ನು ಸ್ಮರಿಸಿಕೊಳ್ಳುವ ಸುಸಂದರ್ಭವೂ ಆಗಬೇಕೆಂದು ಬಯಸಿ ಅದನ್ನು ಕೃತಿರೂಪದಲ್ಲಿ ಹೊರತರುವ ಪ್ರಯತ್ನ ಮಾಡಲಾಯಿತು. ಇದರಿಂದ ಕಮಲಾ ಹಂಪನಾ ಅವರ ಸಾಹಿತ್ಯಕ ಸಾಧನೆಗಳನ್ನೂ ಜೀವನದ ವಿವಿಧ ಮುಖಗಳನ್ನೂ ಆಸಕ್ತರು ತಿಳಿದುಕೊಳ್ಳಲು ಅನುಕೂಲವಾಗಲೆಂಬುದು ಒಂದು ಉದ್ದೇಶವಾದರೆ, ಕಮಲಾ ಹಂಪನಾ ಅವರು ಮುಂದೆಯೂ ತಮ್ಮ ಬದುಕಿನಲ್ಲಿ ಇದಕ್ಕಿಂತಲೂ ಮಿಗಿಲಾದ ಶ್ರದ್ಧೆ, ಉತ್ಸಾಹ, ಧೈರ್ಯಗಳಿಂದ ಕೆಲಸದಲ್ಲಿ ತೊಡಗಲಿ ಆ ಮೂಲಕ ಉಪಯುಕ್ತವೂ

ಆದ ಹಲವಾರು ಕೃತಿಗಳನ್ನು ಹೊರತರಲೆನ್ನುವುದು ಮತ್ತೊಂದು ಉದ್ದೇಶ. ಈ ನೆಪದಲ್ಲಿ ಸಾಹಿತ್ಯದ ವಿವಿಧ ಪ್ರಕಾರಗಳಿಗೆ ಸಂಬಂಧಿಸಿದಂತೆ ಹಲವಾರು ಉತ್ತಮ ಲೇಖನಗಳನ್ನು ಬೆಳಕು ಕಾಣಿಸುವ ಮತ್ತೊಂದು ಉದ್ದೇಶವೂ ಇತ್ತು. ವಿವಿಧ ವಿಷಯಗಳನ್ನು ಕುರಿತು ಬರೆಯಿಸಿರುವ ಲೇಖನಗಳನ್ನು ಒಳಗೊಂಡಿರುವ ಗ್ರಂಥಗಳು ಈಗಾಗಲೇ ಸಾಕಷ್ಟು ಹೊರಬಂದಿವೆ. ಇದುವರೆಗೆ ಬಂದಿರುವ ಅಭಿನಂದನ ಗ್ರಂಥಗಳಿಗಿಂತ ಭಿನ್ನವಾದ ರೀತಿಯಲ್ಲಿ ಪ್ರಸ್ತುತ ಗ್ರಂಥವನ್ನು ಹೊರತರಬೇಕೆಂದು ಅಭಿನಂದನ ಸಮಿತಿ ತೀರ್ಮಾನಿಸಿತು. ಆದರಂತೆ ಕಮಲಾ ಹಂಪನಾ ಅವರು ಬರೆದಿರುವ ಇದುವರೆಗಿನ ಎಲ್ಲ ಕೃತಿಗಳನ್ನು ಕುರಿತ ವಸ್ತುನಿಷ್ಠ ವಿಮರ್ಶೆಗಳನ್ನು ಮಾತ್ರ ಇದರಲ್ಲಿ ಸಂಕಲಿಸಬೇಕೆಂಬ ಆಕಾಂಕ್ಷೆಯನ್ನು ಇಟ್ಟುಕೊಂಡೆವು. ಒಂದೊಂದು ಪುಸ್ತಕವನ್ನು ಸೂಚಿಸಿ ವಿಮರ್ಶಾತ್ಮಕ ಲೇಖನ ಕೋರಿ ವಿಮರ್ಶಕ ಮಿತ್ರರಿಗೆ ಪತ್ರ ಬರೆದೆವು, ಮುಖತಃ ಭೇಟಿಮಾಡಿ ಸಂದರ್ಭವನ್ನು ವಿವರಿಸಿದೆವು. ಅವರೆಲ್ಲ ತುಂಬು ಹೃದಯದಿಂದ ಸ್ವಾಗತಿಸಿದರು, ನಿಗದಿತ ವೇಳೆಯಲ್ಲಿ ಲೇಖನವನ್ನು ಕಳಿಸಿಕೊಡುವುದರ ಮೂಲಕ ನೆರವಾದರು.

ಹಲವು ಬಗೆಯ ಸಾಹಿತ್ಯಿಕ ಸಾಧನೆಗಳನ್ನು ಮಾಡಿ ಪ್ರಸಿದ್ಧರಾಗಿರುವವರ ಜೊತೆಗೆ ಎಳೆಯದರಲ್ಲಿಯೇ ಅತ್ಯುತ್ತಮವಾದ ಸಾಹಿತ್ಯಾಭಿರುಚಿಯನ್ನು ವ್ಯಕ್ತಪಡಿಸುವ ಉದಯೋನ್ಮುಖರಿಗೂ ಅವಕಾಶ ಕಲ್ಪಿಸಿಕೊಡಲಾಗಿದೆ. ಇದರ ಪ್ರಧಾನ ಧ್ಯೇಯ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಉತ್ತಮ ಲೇಖನಗಳ ಪ್ರಕಟಣೆ ಮತ್ತು ವಿದ್ವಾಂಸರಿಗೆ, ಉದಯೋನ್ಮುಖ ಪ್ರತಿಭೆಗಳಿಗೆ ಸೂಕ್ತ ಅವಕಾಶ ಕಲ್ಪಿಸಿ, ನಮ್ಮ ಉದ್ದೇಶಕ್ಕನುಗುಣವಾಗಿ ಅನೇಕ ಜನ ವಿದ್ವಾಂಸರು ಮತ್ತು ಉದಯೋನ್ಮುಖ ಲೇಖಕರಿಗೆ ನಾವು ಆಯ್ಕೆಮಾಡಿಕೊಟ್ಟ ವಿಷಯವನ್ನು ಕುರಿತಂತೆ ತಮ್ಮ ಆಳವಾದ ಜ್ಞಾನ, ಪ್ರತಿಭೆಗಳಿಂದ ಶ್ರೇಷ್ಠ ಲೇಖನಗಳನ್ನು ಬರೆದು ಕಳಿಸಿಕೊಟ್ಟಿದ್ದಾರೆ. ಇವರೆಲ್ಲರ ಸಹಕಾರದಿಂದಾಗಿ ಕಮಲಾ ಹಂಪನಾ ಅವರ ಅಭಿನಂದನಾ ಸಮಾರಂಭದ ನೆಪದಲ್ಲಿ ಕನ್ನಡ ಸಾಹಿತ್ಯದಲ್ಲಿ ಗಟ್ಟಿಯಾದ ಸ್ಥಾನವೊಂದನ್ನು ಪಡೆದುಕೊಳ್ಳಲು ಎಲ್ಲ ಬಗೆಯ ಅರ್ಹತೆಯನ್ನು ಪಡೆದುಕೊಂಡಿರುವ ಈ ಗ್ರಂಥವನ್ನು ಹೊರತರಲು ಸಾಧ್ಯವಾಯಿತೆಂಬ ಹೆಮ್ಮೆ ನಮ್ಮದಾಗಿದೆ. ಇದರಿಂದಾಗಿ ಕಮಲಾ ಹಂಪನಾ ಅವರನ್ನು ಸೂಕ್ತ ರೀತಿಯಲ್ಲಿ ಗೌರವಿಸಿದಂತಾಯಿತು ಎಂಬ ಅಭಿಮಾನ, ಸಂತೋಷ

ನಮ್ಮದಾಗಿದೆ. ಬೇರೆ ಅಭಿನಂದನ ಗ್ರಂಥಗಳಿಗೆ ಮಾದರಿಯಾಗಬಲ್ಲ ಇಂಥದ್ದೊಂದು ಕೃತಿಯನ್ನು ಸಂಪಾದಿಸುವ ಜವಾಬ್ದಾರಿಯನ್ನು ಹೊರಿಸಿದ ಅಭಿನಂದನ ಸಮಿತಿಗೆ ನಾವು ಋಣಿಯಾಗಿದ್ದೇವೆ.

ಅಭಿನಂದನ ಸಮಾರಂಭಕ್ಕೆ ಸಂಬಂಧಿಸಿದಂತೆ ಒಂದು ವಿಷಯವನ್ನು ಇಲ್ಲಿ ಪ್ರಸ್ತಾಪಿಸಿದರೆ ತಪ್ಪಲ್ಲ ಎನಿಸುತ್ತದೆ. ಲೇಖಕಿ ಕಮಲಾ ಹಂಪನಾ ಅವರಿಗೆ ಇಂಥದೊಂದು ಸಮಾರಂಭವನ್ನು ಏರ್ಪಡಿಸಬೇಕೆಂದೂ ಆ ಸಂದರ್ಭದಲ್ಲಿ ಇಂಥದ್ದೊಂದು ಗ್ರಂಥವನ್ನು ಬಿಡುಗಡೆ ಮಾಡಬೇಕೆಂದೂ ಅಭಿನಂದನ ಸಮಿತಿ ತೀರ್ಮಾನಿಸಿದ್ದು ಕೇವಲ ಮೂರು ನಾಲ್ಕು ತಿಂಗಳ ಹಿಂದೆ ಅಷ್ಟೆ. ಸಂಪಾದಕ ಮಂಡಳಿ ಸಭೆ ಸೇರಿದ್ದೂ ಕೂಡ ಕೇವಲ ಮೂರು ಬಾರಿ ಅಷ್ಟೆ. ತೀರ್ಮಾನ ಕೈಗೊಂಡ ೧೫ ದಿನಗಳೊಳಗಾಗಿ ನಾವು ಪ್ರಾರ್ಥಿಸಿಕೊಂಡಿದ್ದ ಬರಹಗಾರರಿಂದ ಒಪ್ಪಿಗೆ ಪತ್ರಗಳು ಬಂದುಬಿಟ್ಟವು. ಅಷ್ಟೇ ರಭಸದಲ್ಲಿ ಲೇಖನಗಳೂ ನಮ್ಮ ಕೈಗೆ ಬಂದವು. ಅಷ್ಟೇ ಬೇಗ ಗ್ರಂಥವು ಒಳ್ಳೆಯ ರೂಪ ಪಡೆದು ಈಗ ನಿಮ್ಮ ಮುಂದಿದೆ. ಅನೇಕರಿಗೆ ಆಶ್ಚರ್ಯವೂ ಆಗಿರಲಿಕ್ಕೆ ಸಾಧ್ಯವಿದೆ. ಯಾಕೆಂದರೆ, ನಮ್ಮಲ್ಲಿ ಅಭಿನಂದನ ಸಮಾರಂಭ ಏರ್ಪಡಿಸುವುದಾಗಲಿ, ಗ್ರಂಥ ಅರ್ಪಿಸುವುದಾಗಲಿ ಹುಡುಗಾಟಿಕೆಯ ಮಾತಲ್ಲ. ಲೇಖನಗಳು ತಲುಪಿದರೂ ಗ್ರಂಥ ಹೊರಬರುವಲ್ಲಿ ಹಲವಾರು ತೊಂದರೆಗಳು ಉಂಟಾಗುತ್ತಿರುತ್ತವೆ. ತೊಂದರೆಗಳು ವಿಪರೀತವಾದಾಗ ಅಭಿನಂದನ ಗ್ರಂಥಗಳ ಮುದ್ರಣಕಾರ್ಯ ತಟಸ್ಥಗೊಂಡು ಕೆಲವು ಅಭಿನಂದನ ಸಮಾರಂಭಗಳು ಪೂರ್ಣವಾಗಿ ನಿಂತೇ ಹೋಗಿರುವ ಸಾಧ್ಯತೆಗಳೂ ಇವೆ. ಇಂಥ ಸಂದರ್ಭದಲ್ಲಿ ನಮಗೆ ವಹಿಸಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನೆರವೇರಿಸಿದ್ದೇವೆ ಎಂಬುದೇ ನಮಗೆ ಸಮಾಧಾನದ ಸಂಗತಿಯಾಗಿದೆ, ನೆಮ್ಮದಿಯ ವಿಷಯವಾಗಿದೆ.

ಗ್ರಂಥ ಈ ರೂಪ ಪಡೆಯಬೇಕಾದರೆ ಹಲವಾರು ಜನ ಹಲವಾರು ರೀತಿಯಲ್ಲಿ ನೆರವಾಗಿದ್ದಾರೆ. ಪ್ರಕಟಣೆಯ ಹಂತದಲ್ಲಿ ಸೂಕ್ತ ಸಲಹೆಗಳನ್ನು ನೀಡಿದ ನಮ್ಮ ನಾಡಿನ ಹೆಸರಾಂತ ಇತಿಹಾಸಕಾರರಾದ ಶ್ರೀ ಲಕ್ಷ್ಮಣ್ ತೆಲಗಾವಿ ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ. ಕೆಲವರಿಂದ ಲೇಖನಗಳನ್ನು ಪಡೆಯುವ ಸಂದರ್ಭದಲ್ಲಿ, ಅವು ಅಚ್ಚಿನ ಮನೆಗೆ ಹೋಗಿ, ಬಂದನಂತರ ಕರಡು ತಿದ್ದುವ ಸಂದರ್ಭದಲ್ಲಿ ಗೆಳೆಯ

ಶ್ರೀ ಎಸ್. ವಿ. ಮನ್ನಾಚಾರ್ ಮತ್ತು ಕುಮಾರಿ ಟಿ. ಎಸ್. ಸೀತಾಲಕ್ಷ್ಮಿ ಇವರುಗಳ ನೆರವನ್ನು ಇಲ್ಲಿ ವಿಶೇಷವಾಗಿ ಸ್ಮರಿಸಬೇಕಾಗುತ್ತದೆ. ಹೀಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಎಷ್ಟೋ ಜನ ಪ್ರಕಟಣೆಯ ಹಂತದಲ್ಲಿ ನೆರವಾಗಿದ್ದಾರೆ. ಆ ಎಲ್ಲ ಪ್ರೀತಿಯ ಹೃದಯಗಳಿಗೆ, ಕೈಗಳಿಗೆ ನಾವು ಕೃತಜ್ಞತೆ ಸಲ್ಲಿಸಬೇಕು. ಅಂದವಾಗಿ–ನಿಗದಿತ ವೇಳೆಯಲ್ಲಿ ಯಾವುದೇ ತೊಡಕಿಲ್ಲದಂತೆ ಸುಂದರವಾಗಿ ಮುದ್ರಿಸಿಕೊಟ್ಟ ಲಕ್ಷ್ಮಿ ಮುದ್ರಣಾಲಯದ ಮಾಲೀಕರಿಗೂ ಸಿಬ್ಬಂದಿವರ್ಗಕ್ಕೂ ಅಂದವಾದ ರಕ್ಷಾಪುಟ ಸಿದ್ಧಪಡಿಸಿಕೊಟ್ಟ ಕಲಾವಿದ ಶ್ರೀ ರಾ. ಸೂರಿ ಅವರಿಗೂ ನಮ್ಮ ಕೃತಜ್ಞತೆಗಳು ಸಲ್ಲಬೇಕು.

ಜಿ. ಆರ್. ತಿಪ್ಪೇಸ್ವಾಮಿ


ನಲ್ಲೂರು ಪ್ರಸಾದ್

ಒಳಗಿರುವುದು........

ಕಮಲಾಕೃತಿ ವಿಮರ್ಶೆ



ರಾಷ್ಟ್ರಕವಿ ಕುವೆಂಪು ಅವರೊಡನೆ ಹಂಪನಾ ದಂಪತಿಗಳು



ಅಭ್ಯಾಸನಿರತರು



ಮೆಚ್ಚಿದ ಮಡದಿಗೆ ಪ್ರೀತಿಯ ಹೂಮಾಲೆ



ಸಚಿವ ಡಾ॥ ಜೀವರಾಜ ಆಳ್ವರಿಂದ ಸನ್ಮಾನ



ಪೂಜ್ಯ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರಿಂದ ಗೌರವ



ಸಹಲೇಖಕಿ ವಾಣಿ ಹಾಗೂ ಡಾ॥ ಹಾ. ಮಾ. ನಾಯಕರೊಡನೆ



ವಾಹನ ನಡೆಸುತ್ತಿರುವ ಲೇಖಕಿ



'ನಕ್ಕು ನಗಿಸುವಾ ನಗೆ ಲೇಸು' : ಸರಸ ದಾಂಪತ್ಯ



ಆಗ್ರಾ : ತಾಜಮಹಲಿನ ಹಿನ್ನೆಲೆಯಲ್ಲಿ



ಕೆಂಗಲ್ ಹನುಮಂತಯ್ಯನವರು ಆಲಿಸಿ ಆನಂದಿಸುತ್ತಿರುವುದು
ಎಡದಿಂದ ಬಲಕ್ಕೆ : ಕೆಂಗಲ್ ಹನುಮಂತಯ್ಯ, ಡಾ॥ ದೇ. ಜ. ಗೌ.,
ಪಿ. ಮಲ್ಲಿಕಾರ್ಜುನಪ್ಪ



ಸ್ವಪ್ನವಾಸವದತ್ತ ನಾಟಕದಲ್ಲಿ ವಸುಂಧರೆ ಪಾತ್ರಾಭಿನಯ

ಎಡದಿಂದ ಬಲಕ್ಕೆ : ಶ್ರೀಮತಿಯರಾದ ಶಾಂತಲಕ್ಷ್ಮಿ, ಕಮಲಾ ಹಂಪನಾ
ರುಕ್ಮಿಣಿ, ಸಿ. ಜಿ.



ನಾಟಕದಲ್ಲಿ ಅಭಿನಯನಿರತೆ

ಶ್ರೀರಂಗರ ಸಂಜೀವಿನಿ ನಾಟಕದ ಸೂತ್ರದಾರ



ಊಟಿಯಲ್ಲಿ ಕುದುರೆ ಸವಾರಿ




ಭಾಷಣದಲ್ಲಿ ತಲ್ಲೀನತೆ



ಲೇಖಕಿಯ ನಾಲ್ಕು ಪುಸ್ತಕಗಳ ಬಿಡುಗಡೆ ಸಮಾರಂಭದಲ್ಲಿ
ಡಾ॥ ಸುಜನಾ, ಡಾ॥ ಕಂಬಾರ, ಚದುರಂಗ, ವೀರೇಂದ್ರ ಹೆಗ್ಗಡೆ, ಸಿದ್ಧಯ್ಯ ಪುರಾಣಿಕ, ಕಮಲಾ-ಹಂಪನಾ, ದಿವಾಕರ



ಮಕ್ಕಳ ನೃತ್ಯ ಕಾರ್ಯಕ್ರಮದಲ್ಲಿ : ಪಂಪನಾ, ರಾಜ್ಯಶ್ರೀ, ಹರ್ಷವರ್ಧನ, ಆರತಿ, ಕಮಲಾ



ರಿಜಿಸ್ಟರ್ಡ್ ಮದುವೆಯಾದ ದಿನ : ೨೪-೧೧-೧೯೬೧

ಕುಳಿತವರು : ಪಾರ್ವತಿ, ಶ್ಯಾಮಲಾದೇವಿ, ಕಮಲಾ–ಹಂಪನಾ, ಜಿ. ಶಂಕರಯ್ಯ, ಎಂ. ಎಚ್. ಕೃಷ್ಣಯ್ಯ

ನಿಂತವರು : ಎಂ. ಜೆ. ಸುರೇಂದ್ರಕುಮಾರ್, ಟಿ. ಬ್ರಹ್ಮಸೂರಯ್ಯ, ಪಿ. ಎ. ಅಬ್ದುಲ್ ಮಜೀದ್, ಮುನಿಯಪ್ಪ, ಚಂದ್ರಶೇಖರ್

ಬೀಜಾಕ್ಷರ ಮಾಲೆ

ಕಾವ್ಯಜೀವಿ

ಇದು ಸರಸ್ವತಿಬಾಯಿ ಗಿರಿಯವರ ಪುಟ್ಟ ತೆಲುಗು ಕಾವ್ಯದ ಕನ್ನಡ ರೂಪಾಂತರ. ಹೀಗಾಗಿ ಮೂಲ ತೆಲುಗು ಕಾವ್ಯವನ್ನು ನೋಡದೆ, ಈ ಅನುವಾದದ ಬಗ್ಗೆ ಹೇಳುವುದು ಖಚಿತ ವಿಮರ್ಶೆಯಾಗದು. ಈ ಮಿತಿಗೊಳಪಟ್ಟೇ ಈ ಕೃತಿಯ ಬಗ್ಗೆ ಕೆಲವು ಮಾತುಗಳನ್ನಿಲ್ಲಿ ಹೇಳಬೇಕಾಗಿದೆ. ಆದರೆ, ಇದಕ್ಕೆ ಒಂದೆರಡು ಅನುಕೂಲಕರ ಅಂಶಗಳೂ ಇವೆ. ಅದರಲ್ಲಿ ಒಂದೆಂದರೆ ಇದು ಮೂಲ ಕೃತಿಯ ಭಾವಾನುವಾದವಾಗಿರುವುದು. ಇನ್ನೊಂದು ಸರಳ ಮನಸ್ಸಿನ ಭಕ್ತೆಯೊಬ್ಬರು ತನ್ನ ಇಷ್ಟದೈವವನ್ನು ಕುರಿತು ತೆಗೆದ ಉದ್ಗಾರಗಳು, ತೋಡಿಕೊಳ್ಳುವ ಭಾವಗಳು–ಇವೇ ಇಲ್ಲಿನ ಪದ್ಯಗಳ ವಸ್ತುವಾಗಿದ್ದು, ಅದನ್ನು ಅರ್ಥಮಾಡಿಕೊಳ್ಳುವಲ್ಲಿ ಯಾವುದೇ ಸಂಕೀರ್ಣತೆಯಾಗಲೀ ಕ್ಲಿಷ್ಟತೆಯಾಗಲೀ ಇಲ್ಲದಿರುವುದು.

'ಬೀಜಾಕ್ಷರ ಮಾಲೆ' ಎಂಬುದು ಭಾರತದಲ್ಲಿ ಮೊದಲಿಂದಲೂ ಬಳಕೆಯಲ್ಲಿರುವ ಒಂದು ಸ್ತೋತ್ರಕಾವ್ಯ ಪದ್ಧತಿ. ಈ ಪದ್ಧತಿಯಲ್ಲಿ ವರ್ಣಮಾಲೆಯಲ್ಲಿರುವ ಪ್ರತಿಯೊಂದು ಅಕ್ಷರದಿಂದಲೂ ಆರಂಭವಾಗುವ ಒಂದೊಂದು ಪದ್ಯವನ್ನು ರಚಿಸಲಾಗಿರುತ್ತದೆ. ಕವಿತೆಯು ಪ್ರತಿಪಾದವೂ ಅದೇ ಅಕ್ಷರದಿಂದ ಪ್ರಾರಂಭವಾಗಿರುತ್ತದೆ ಹಾಗೂ ಅದರ ಮುಂದಿನ ಕವಿತೆ (ಹಾಗೂ ಆ ಕವಿತೆಯ ಪ್ರತಿಪಾದ) ವರ್ಣಮಾಲೆಯಲ್ಲಿ (ಹಿಂದಿನ ಕವಿತೆ ಪ್ರಾರಂಭವಾಗುವ ಅಕ್ಷರದ) ಅನಂತರ ಬರುವ ಅಕ್ಷರದಿಂದ ಪ್ರಾರಂಭವಾಗುತ್ತದೆ. ಅಂದರೆ 'ಬೀಜಾಕ್ಷರ ಮಾಲೆ'ಯು ಮೊದಲ ಕವಿತೆಯ ಪ್ರತಿಪಾದವೂ 'ಅ' ದಿಂದ ಆರಂಭವಾದರೆ, ಎರಡನೆಯದು 'ಆ' ದಿಂದ, ಮೂರನೆಯದು 'ಇ' ಯಿಂದ ಆರಂಭವಾಗುತ್ತದೆ. ಹೀಗೆ 'ಕ್ಷ' ದ ವರೆಗೂ ಮುಂದುವರೆಯುತ್ತದೆ.

ಕನ್ನಡದಲ್ಲಿ ಪೊನ್ನ, ನಾಗಚಂದ್ರರು ಜಿನಾಕ್ಷರ ಮಾಲೆಯನ್ನು ರಚಿಸಿದ್ದಾರೆ. ಅನುವಾದಕಿ ಕಮಲಾ ಹಂಪನಾ ಅವರೂ ಇದನ್ನು ತಮ್ಮ 'ಅರಿಕೆ'ಯಲ್ಲಿ ಸೂಚಿಸಿದ್ದಾರೆ. ಸಂಸ್ಕೃತದಲ್ಲಿಯೂ ಇವು ಧಂಡಿಯಾಗಿ ರಚಿತವಾಗಿರುವುದು ಎಲ್ಲರೂ ಬಲ್ಲ ವಿಷಯ.

ಶ್ರೀಮತಿ ಗಿರಿಯವರ ಈ ಕಾವ್ಯ ಶಿವನನ್ನು ಕುರಿತದ್ದು. ಆಕೆ ಶಿವಭಕ್ತೆ. ಆರಂಭದಲ್ಲಿ ಒಂದು ಪ್ರಾರ್ಥನಾ ಪದ್ಯದ ಬಳಿಕ ವರ್ಣಮಾಲಾಕ್ರಮದಲ್ಲಿ ಒಟ್ಟು ೪೫ ಪದ್ಯಗಳಿವೆ. ಅನಂತರ 'ಶಿವಸ್ತುತಿ' ಎಂಬ ಶೀರ್ಷಿಕೆಯಲ್ಲಿ ಒಟ್ಟು ೨೦ ಪದ್ಯಗಳಿವೆ. ಒಟ್ಟಾರೆ ಈ ಕಾವ್ಯದಲ್ಲಿ ಶಿವನನ್ನು ಕುರಿತ ೬೫ ಪದ್ಯಗಳಿವೆ.

ಕವಿತೆಗಳು ಸರಳವಾದ ಭಾವಲಹರಿಗಳಂತಿವೆ. ಭಕ್ತ ಹೃದಯದಿಂದ ಭಗವತ್ಪಾದದೆಡೆಗೆ ಹರಿಯುವ ಭಕ್ತಿ ಗಂಗೆಯ ಏಕಮುಖ ಧಾರಾ ಪ್ರವಾಹವನ್ನಿಲ್ಲಿ ನೋಡಬಹುದು. ಈ ಧಾರೆ ರಭಸದ್ದಲ್ಲ ಪ್ರಶಾಂತವಾದದ್ದು. ಒಂದು ರೀತಿಯ ಲಯಬದ್ಧ ನಾದದಂತೆ ಇಲ್ಲಿಯ ಭಕ್ತಿ ಸ್ರೋತ. ಕೆಲವು ತುಣುಕುಗಳನ್ನಿಲ್ಲಿ ನೋಡಬಹುದು :

ಒಡ್ಡು ದಾಂಟಲು ಒಡಲು ಓಲಾಡುತಿಹುದಯ್ಯ
ಒಡಲಲ್ಲಿ ಹೆಗ್ಗಲ್ಲುಗಳ ಎದುರಿಸಲಾಯಿತಯ್ಯ
ಒಡ್ಡೇನು ಹೊಸತಲ್ಲ ಮನಕೆ ಅತಿಶಯವಯ್ಯ
ಒಡಲೆಲ್ಲ ಒದ್ದೆ ಚಳಿಗಾಳಿ ಚಲಿಯಿಸಿತಯ್ಯ

ಒಮ್ಮೆಯಾದರೂ ಎದುರಿಸಿದ ಎಡರ ತಡೆಯಲಾರೆನಯ್ಯ
ಒಂದೆ ದಾರಿಯು ಎನಗೆ ಮೌನವೇ ಶರಣಯ್ಯ (ಪದ್ಯ ೧೪)

ಇಲ್ಲಿ ಮೂಡಿರುವ ಪಕ್ವತೆಯನ್ನೂ ಪ್ರಶಾಂತತೆಯನ್ನೂ ಗಮನಿಸಬೇಕು. ಹಾಗೆಯೇ ಕೊನೆಯ ವಾಕ್ಯದಲ್ಲಿ ಈ ಪಕ್ವತೆ ಘನೀಭವಿಸಿರುವುದನ್ನೂ ಸಂಪೂರ್ಣ ಶರಣಾಗತಿಯ ಭಾವ ತೀರಾ ಸಹಜವಾದ ರೀತಿಯಲ್ಲಿ ಸಾಧಾರಣ ಶಬ್ದಗಳಲ್ಲಿ ಇಲ್ಲಿ ಕೆನೆಗಟ್ಟಿರುವುದನ್ನೂ ಗಮನಿಸಬೇಕು. ಹೀಗೆಯೇ ಇನ್ನೊಂದು ಪದ್ಯ :

ಅಯ್ಯ ನೀನಾರಯ್ಯ ನಿನ್ನ ನಾನರಿಯೆನಯ್ಯ
ಅಯ್ಯ ಎಂದು ಕರೆಯಲು ಎನಗೆ ಅದೃಷ್ಟವಿಹುದಯ್ಯ
ಅನಾಥೆಯಯ್ಯ ಅದೇಕೆನ್ನ ಪೊರೆಯಲೊಲ್ಲೆಯಯ್ಯ
ಅಷ್ಟೆಲ್ಲ ಇದ್ದರೂ ಅಯ್ಯನಿಲ್ಲದ ಕೊರೆಯ ನಾನರಿತೆನಯ್ಯ
ಅನುಚಿತವಯ್ಯ ಎನ್ನ ಅಲ್ಲಗಳೆಯಬೇಡಯ್ಯ
ಅಪರಾಧ ಎನ್ನದಯ್ಯ, ನಿನ್ನ ನಿಂದಿಸೆನಯ್ಯಾ ! (ಪದ್ಯ ೧)

ಇಲ್ಲಿಯೂ ನಿರಲಂಕೃತ ಮಾತುಗಳು ಭಾವದ ಸಮಾನಾರ್ಥಕವಾಗಿ ನಡೆಯುವುದನ್ನೂ ಕೊನೆಯ ಸಾಲಿನಲ್ಲಿ ಅದೇ ಸಮರ್ಪಣ ಭಾವ ಮೈಪಡೆದಿರುವುದನ್ನೂ ನಾವು ಕಾಣಬಹುದು.

ಇಲ್ಲಿನ ಅನೇಕ ಕವಿತೆಗಳಲ್ಲಿ ಹೃದ್ಯವಾದ ಮಾತುಗಳು ಕಂಡುಬರುತ್ತವೆ. ಕೆಲವು ಉದ್ಗಾರಗಳೇ ಆದರೂ ಅವು ಭಕ್ತಿರಸ ತುಂಬಿದ ಕುಂಭಗಳಂತಿದ್ದು, ಆ ಪರವಶತೆಯಿಂದಾಗಿಯೇ ನಮಗೆ ಮೆಚ್ಚಿಕೆಯಾಗುತ್ತವೆ. 'ಅಂತಃಕರುಣ ಆರಾಧ್ಯ ದೇವಾ ನೀನಲ್ಲದೆನಗಾರಯ್ಯ', 'ನಿನಗೆ ನೀನೇ ಸಾಟಿಯಯ್ಯಾ', 'ಚರಿಸದೆನ್ನ ಮನವು ಚಂಚಲವಿಲ್ಲ', 'ತಪೋನಿಧಿ ನಾನಲ್ಲ, ನಿರಂತರ ನಿಶ್ಚಲಮತಿ ನಾನು', 'ಥಳ ಥಳ ಮೆರೆವುದು ತ್ಯಥ್ಯವೇನಲ್ಲ', 'ಬಲವಿಲ್ಲ ನಾನಬಲೆ, ಬಲವೆನಗೆ ನೀನು', 'ಬಡಿವಾರವೆನಗಿಲ್ಲ ಬಡಪಾಯಿ ನಾನು', 'ಹಂಗುಗಳಿಲ್ಲದ ಪಸನ್ಮುಖಿನಾನು'—ಇತ್ಯಾದಿ. ಅನುವಾದದಲ್ಲೂ ಇವು ಇಷ್ಟು ಸೊಗಸಾಗಿ ಕಾಣಲು ಮೂಲದಲ್ಲಿನ ಹೃದ್ಯತೆಯ ಜೊತೆಗೆ, ಅನುವಾದಕಿಗೆ ಭಾಷೆಯ ಮೇಲಿನ ಹಿಡಿತವೂ ಬಲವಾಗಿದ್ದು ಅದನ್ನು ಅಗತ್ಯಕ್ಕೆ ತಕ್ಕಂತೆ ಆಟವಾಡಲು ಬಿಡಲು ಸಾಧ್ಯವಾಗಿರುವುದೇ ಕಾರಣ ಎಂದು ವ್ಯಕ್ತವಾಗುತ್ತದೆ.

ಯಾವುದೇ ಕಾವ್ಯ ಕೆಲವು ಮಿತಿಗಳನ್ನಿಟ್ಟುಕೊಂಡೇ ರಚನೆಯಾದಾಗ, ಒಂದಲ್ಲ ಒಂದು ರೀತಿಯ ದೌರ್ಬಲ್ಯಕ್ಕೂ ಅದು ಸಹಜವಾಗಿ ತುತ್ತಾಗಿರುತ್ತದೆ,

ಹಾಗಾಗಿ ಕಾವ್ಯಶಿಲ್ಪ ಅಲ್ಲಲ್ಲಿ ಮುಕ್ಕಾಗಿರುತ್ತದೆ. ಈ ಸ್ಥಿತಿಯಲ್ಲೂ ಹಾಗೇ ಆಗಿದೆ. ಕೆಲವೆಡೆ ಪ್ರಾಸಕ್ಕಾಗಿಯೇ ಕೆಲವು ಶಬ್ದಗಳು, ಕೆಲವೆಡೆ ಇಡೀ ಪದ್ಯ ತುರುಕಲ್ಪಟ್ಟಿರುವುದು ಕಂಡುಬರುತ್ತದೆ. ಉದಾಹರಣೆ ಮೂರನೇ ಪದ್ಯ ನೋಡಿ :

ಇದಕಾಗಿ ತಾನೆ ಇಷ್ಟೊಂದು ಕಷ್ಟಕ್ಕೆ ಸಿಲುಕಿಸಿದೆ ಅಯ್ಯ
ಇನ್ನಾದರೂ ನಿನ್ನ ಕಂದನ ಸೊಗದಲ್ಲಿ ಇರಗೊಡಯ್ಯ
ಇತ್ಯಾದಿ ಕಷ್ಟದೊಳು ಎನ್ನ ಇರುಕಿಸಬೇಡಯ್ಯ ॥

ಪ್ರತಿಯೊಂದು ಪದ್ಯವೂ ಒಂದೊಂದು ಸ್ವತಂತ್ರ ಬಿಡಿ ಪದ್ಯವಾಗಿರುವಾಗ, ಈ ಪದ್ಯದ ಆರಂಭದಲ್ಲಿಯೇ 'ಇದಕಾಗಿ'–ಎಂದು ಬಂದಿರುವುದರ ಅರ್ಥ ಹಾಗೂ ಔಚಿತ್ಯವೇನು ? ಯಾವ ರೀತಿಯ ಕಷ್ಟವೆಂಬುದನ್ನು ಹೇಳದೆ, ಕೊನೆಯಲ್ಲಿ ಇತ್ಯಾದಿ ಕಷ್ಟಗಳು ಎಂದರೇನರ್ಥ ? ಹಿಂದಿನ ಪದ್ಯದ ಜೊತೆಗೆ ಸೇರಿಸಿ ಓದಿದಾಗಲೂ ಇಲ್ಲಿನ 'ಇದಕಾಗಿ' ಶಬ್ದಕ್ಕೆ ಸರಿಯಾದ ಅರ್ಥ, ಕೊಂಡಿ ದೊರೆಯುವುದಿಲ್ಲ.

ಇದೇ ರೀತಿ–'ಢ' ಕಾರ ಪೂರ್ತಿಗೆಂದು ಬರೆದಿರುವ ೩೨ನೇ ಪದ್ಯ ಅರ್ಥದಲ್ಲಿ ನಿಂತಹಾಗೆ ಕಾಣುತ್ತದೆ. 'ಲ' ಕಾರ ಪ್ರಾಸ ಪೂರ್ತಿಗೆ ಬಂದ ೪೬ನೇ ಪದ್ಯ 'ಲಂಬೋದರನ ತಾಯಿ ನಿನ ಮಗನು ಮಿಗಿಲು'–ಎಂದು ಲಾಗಾಯ್ತಿನಿಂದ ಬಂದ ಮುದಿ ಹೇಳಿಕೆ ನೀಡುವುದರಲ್ಲೇ ತೃಪ್ತವಾಗುತ್ತದೆ. ಈ ಎಲ್ಲ ಕೊರೆಗಳೂ ಮೂಲ ಕವಿತೆಗೆ ಸಂಬಂಧಿಸಿದ್ದೇ ಹೊರತು, ಅನುವಾದಕ್ಕಲ್ಲ.

ಅನುವಾದದ ವಿಷಯಕ್ಕೆ ಬಂದರೆ ಅದು ತೃಪ್ತಿ ತರುವಂತಿದೆ. ಶಬ್ದಶಃ ಅನುವಾದಕ್ಕಿಂತ ಭಾವಾನುವಾದದ ಮಾರ್ಗವನ್ನೂ ಆಯ್ದುಕೊಂಡದ್ದು ಉತ್ತಮವೇ ಆಯಿತೆಂದು ಕಾಣುತ್ತದೆ. ಶಬ್ದಶಃ ಅನುವಾದಿಸಿದ್ದರೆ ಕಾವ್ಯದ ಇನ್ನಷ್ಟು ಕೊರೆಗಳು ಕಣ್ಣಿಗೆ ಬೀಳುತ್ತಿದ್ದವೇನೋ ! ವಚನಗಳ ಶೈಲಿಯನ್ನು ಅನುವಾದಕ್ಕಾಗಿ ಆರಿಸಿಕೊಂಡಿದ್ದಾರೆ, ಇದು ಅನುವಾದಕಿಗೆ ಒಂದಷ್ಟು ಸ್ವಾತಂತ್ರ್ಯವನ್ನೂ ದೊರಕಿಸಿಕೊಟ್ಟಿದೆ. ಈ ರೀತಿಯಲ್ಲಿ ಅನುವಾದಿಸುವಾಗ ವಚನಗಳ ಬಂಧ ಸಡಿಲವಾಗದಂತೆ ನೋಡಿಕೊಂಡಿದ್ದಾರೆ (ವಸ್ತುವಿನ ಸಡಿಲತೆಯಿಂದಾಗಿಯೇ ಕವಿತೆ ಸಡಿಲವಾಗಿರುವ ವಿಷಯ ಬೇರೆ). ಅಂದರೆ, ವಚನಗಳ ಭಾಷಾಬಂಧ ಅನುವಾದಕಿಗೆ ಇಲ್ಲಿ ಸಿದ್ಧಿಸಿದೆ. ತುಲನಾತ್ಮಕವಾಗಿ ಹೇಳುವುದಾದರೆ ಕಮಲಾ ಹಂಪನಾರವರ ಸ್ವತಂತ್ರ ವಚನಗಳ ಸಂಕಲನ 'ಬಿಂದಲಿ'ಯಲ್ಲಿ ಕಂಡುಬರುವುದಕ್ಕಿಂತ ಇಲ್ಲಿ ಭಾಷೆಯ ಬಿಗು

ಚೆನ್ನಾಗಿದೆ. ಹಿಂದೆ ಉದಾಹರಿಸಿರುವ 'ಒಡ್ಡು ದಾಂಟಲು ಒಡಲು ಓಲಾಡುತಿಹುದಯ್ಯ' ಎಂಬ ಪದ್ಯವೇ ಇದಕ್ಕೆ ಒಳ್ಳೆಯ ಉದಾಹರಣೆ, ಅದೇ ರೀತಿ ಇನ್ನೊಂದು ಉದಾಹರಣೆ ನೋಡಿ :

ಕನಸಿನಲಿ ಕಂಡೆನು ಕಣ್ಣಿಗೆ ಬೀಳಲಿಲ್ಲ
ಕನವರಿಸಿ ಕಡೆಗೆ ಕೋಪವನಣಗಿಸಿದೆ ಭಯದಿಂದ
ಕಲ್ಮಷವೆನ್ನೊಳಿಲ್ಲ ಕಡುದಯಾನಿಧೇ
ಕಣ್ಣು ಕುಕ್ಕುವ ಕಾಂತಿರೂಪಾ ನಿನಗೆ ನೀನೇ ಸಾಟಿಯಯ್ಯಾ

(ಪದ್ಯ ೧೯)

ಅದೇ ರೀತಿ ೨೩, ೨೬, ೨೮–ಹೀಗೆ ಅನೇಕ ಕವಿತೆಗಳು ತಮ್ಮ ಬಿಗುವನ್ನು ಉಳಿಸಿಕೊಂಡಿವೆ.

ಮೂಲ ಕೃತಿಯೇ ಅಷ್ಟೇನೂ ಗಟ್ಟಿಯದಾಗಿಲ್ಲದಿರುವಾಗ ಅದನ್ನು ಅನುವಾದಿಸಿ ಒಳ್ಳೆಯ ಹೆಸರನ್ನುಳಿಸಿಕೊಳ್ಳುವುದು ಕಷ್ಟ. ವಿಮರ್ಶಕನೂ ಆ ಮಿತಿಯನ್ನು ಗುರುತಿಸಬೇಕಾಗುತ್ತದೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ, ತಮ್ಮ ಮಿತಿಯಲ್ಲಿಯೇ ಅನುವಾದಕಿ ಸಾಕಷ್ಟು ಯಶ ಸಾಧಿಸಿದ್ದಾರೆ.

ಒಂಭತ್ತು ಕತೆಗಳ ಸಂಕಲನವಿದು. ಇವತ್ತಿನ ಕನ್ನಡದ ಬಹುತೇಕ ಕತೆಗಾರ್ತಿಯರೆಲ್ಲ ತಮ್ಮದೇ ಆದ ಭ್ರಮಾಲೋಕಗಳನ್ನು ಕಟ್ಟಿಕೊಂಡು, ಆ ಲೋಕಗಳಲ್ಲಿಯೇ ಕುತ್ತುಸಿರು ಬಿಡುತ್ತಿರುವ ಸಂದರ್ಭದಲ್ಲಿ ಹುಟ್ಟಿಕೊಂಡ ಕಮಲಾ ಹಂಪನಾ ಅವರ ಕತೆಗಳು ಒಂದು ಅರ್ಥದಲ್ಲಿ ತಮ್ಮ ಸಮಕಾಲೀನ ಕತೆಗಾರ್ತಿಯರ ಕತೆಗಳಿಗಿಂತ ಭಿನ್ನವಾಗಿವೆ. ಇಲ್ಲಿಯ ಕತೆಗಳ ಮೂಲದ್ರವ್ಯ ಮಾನವೀಯ ಸಂಬಂಧಗಳನ್ನು ತಡಕಾಡುವುದೇ ಆಗಿದೆ. ಈ ಮಾನವೀಯ ಸಂಬಂಧ ಹೆಣ್ಣು-ಗಂಡಿನದೇ ಆಗಿರಲಿ ಅಥವಾ ತಂದೆ ಮಕ್ಕಳದೇ ಆಗಿರಲಿ, ಕತೆಗಾರ್ತಿ ಒಂದು ರೀತಿಯ ನಿರ್ಲಿಪ್ತತೆಯಿಂದ ಅವುಗಳನ್ನು ನೋಡುತ್ತಾರೆ. ಈ ನಿರ್ಲಿಪ್ತತೆಯೇ ಇಲ್ಲಿಯ ಕತೆಗಳನ್ನು, ಕತೆಗಾರ್ತಿಯ ವ್ಯಾಮೋಹದಿಂದ ಬೇರ್ಪ

ರೆಕ್ಕೆ ಮುರಿದಿತ್ತು

ತೇಜಸ್ವಿ ಕಟ್ಟೀಮನಿ

ಡಿಸಿದೆ. ಅಲ್ಲದೆ ಅವುಗಳಿಗೊಂದು ಸ್ವತಂತ್ರ ಅಸ್ತಿತ್ವ ಬಂದಿರುವುದು ಕೂಡ ಇದರಿಂದಲೇ. ಕೆಳವರ್ಗದ ಒಂದು ಹೆಣ್ಣು ಬಿಟ್ಟುಗಣ್ಣಿನಿಂದ ಬದುಕನ್ನು ನೋಡು ವಾಗ ಅವಳೆದುರು ಕನಸಿನ ಅನೇಕ ಲೋಕಗಳು ತೂಗುತ್ತಿರುತ್ತವೆ. ಆ ಕನಸು ಗಳೆಡೆಗೆ ನಡೆಯುವುದೇ ಅವಳ ಹಗಲು ರಾತ್ರಿಯ ಗೇಣಿಕೆಯಾಗಿರುತ್ತದೆ. ಇಲ್ಲಿ ಕತೆಗಾರ್ತಿ ಈ ಎಲ್ಲಾ ವ್ಯಾಮೋಹಗಳನ್ನು ಮೀರಿ ಮಾನವೀಯ ಸಂಬಂಧಗಳನ್ನು ವಾಸ್ತವದ ನೆಲೆಯ ಮೇಲೆ ನೋಡುವ ದಿಟ್ಟತನವನ್ನು ತೋರಿದ್ದಾರೆ. ಗಂಡು ಹೆಣ್ಣಿನಂಥ ತೀರಾ ಸಂಕೀರ್ಣ ಸಂಬಂಧ ಕುರಿತಾಗಲೂ ಕತೆಗಾರ್ತಿ ಎಲ್ಲಿಯೂ ಭಾವಾವೇಶಕ್ಕೆ ಒಳಗಾಗುವುದಿಲ್ಲ. ಅಲ್ಲದೆ, ಗಂಡಸರೆಲ್ಲ ನೀಚರು, ಹೆಂಗರೆಲ್ಲ ಸಾಧ್ವಿಯರು. ಗಂಡಸರೆಲ್ಲ ಹೆಣ್ಣಿನ ಮೇಲೆ ಅನಾದಿ ಕಾಲದಿಂದಲೂ ಬಲಾತ್ಕಾರ ಮಾಡುತ್ತಾ ಬಂದಿದ್ದಾರೆ ಎನ್ನುವ ಪೂರ್ವಾಗ್ರಹ ಪೀಡಿತ ವಾದವನ್ನು ಮುಂದುಮಾಡಿಕೊಂಡು ಬರೆಯುವ ಕತೆಗಾರ್ತಿಯರಿ ಗಿಂತ, ಕಮಲಾ ಹಂಪನಾ ಅವರು ಈ ಬಾಬತ್ತಿನಲ್ಲಿ ವಿಭಿನ್ನರಾಗು ತ್ತಾರೆ. 'ಖಾಮಾಲೆ' ಕತೆಯಲ್ಲಿ ಸಹಜ ಮಾನವೀಯ ಸ್ನೇಹ ಸೌಂದರ್ಯ ದಿಂದ ತುಂಬಿದ ಡಾ. ಗುಣಪಾಲರಂಥವರು ಇದ್ದರೆ, ಶುಭಳಂಥ ಹೆಣ್ತನ ವನ್ನೇ ಮುಂದುಮಾಡಿಕೊಂಡು ಕಂಡಕಂಡ ಗಂಡಸರ ಮೇಲೆ ಸಂಶಯ ತಾಳುವ ಹೆಂಗಸರೂ ಇದ್ದಾರೆ. 'ರೆಕ್ಕೆ ಮುರಿದಿತ್ತು' ಕತೆಯಲ್ಲಿ ಯೋಗೀಶ ನಂಥ ಕಾಮುಕನ ಚಿತ್ರಣವಿದ್ದರೂ ಶಿವಣ್ಣನಂಥ ಸಾಧು ಸ್ವಭಾವದ, ಅನ್ನದ ಋಣದಲ್ಲಿ ತನ್ನೆಲ್ಲ ರೊಚ್ಚನ್ನೂ ಒತ್ತೆಯಿಟ್ಟ ವ್ಯಕ್ತಿಗಳ ಚಿತ್ರಣವೂ ಇದೆ.

ಸಂಕಲನದ ಮೊದಲ ಕತೆ 'ಸುಗಂಧಿ'ಯಿಂದ ಹಿಡಿದು, ಕೊನೆಯ ಕತೆ 'ಕತೆಯಾಯಿತು ಘಟನೆ'ಯವರೆಗಿನ ಎಲ್ಲ ಕತೆಗಳಲ್ಲಿ ಒಂದು ಅಂತಃರ್ವಾಹಿನಿ ತಾನೇ ತಾನಾಗಿ ಗೋಚರಿಸುತ್ತದೆ. ಅದು ಕತೆಗಾರ್ತಿಯ ನೈತಿಕ ಪ್ರಜ್ಞೆ. ಕಮಲಾ ಹಂಪನಾ ಅವರು ಒಂದು ರೀತಿಯ ನೈತಿಕ ಪ್ರಜ್ಞೆಯನ್ನು ಮೈ ಗೂಡಿಸಿಕೊಂಡ ಕತೆಗಾರ್ತಿಯಾಗಿದ್ದು, ಕತೆಯ ಪಾತ್ರಗಳಲ್ಲಿ ಈ ಪ್ರಜ್ಞೆ ತಿಳಿದೋ ಅಥವಾ ತಿಳಿಯದೆಯೋ ಕತೆಗಾರ್ತಿಯನ್ನು ಯಾವಾಗಲೂ ನಿಯಂತ್ರಿಸುತ್ತಿರುತ್ತದೆ. ಅಲ್ಲದೆ ನೈತಿಕ ಪ್ರಜ್ಞೆಯ ಈ ನಿಯಂತ್ರಣ ಕತೆ ಗಾರ್ತಿಗೆ ಸುಖಕರವಾಗಿಲ್ಲ ಅಂತೇನೂ ಭಾವಿಸಲಾಗದು. ಯಾಕೆಂದರೆ ಗಂಡು ಹೆಣ್ಣಿನ ವ್ಯಕ್ತಿತ್ವದ ಸ್ವಭಾವ ಚಿತ್ರಣದಲ್ಲಿ ತಾಟಸ್ಥ್ಯವನ್ನು ತಾಳುವ ಕತೆ ಗಾರ್ತಿ, ನೈತಿಕ ಪ್ರಜ್ಞೆ ಜಾಗೃತವಾದಾಗ ಪಾತ್ರ ಘಟನೆಗಳ ಜೊತೆ ಅತ್ಯಂತ ನಿಷ್ಠುರತೆಯಿಂದ ವ್ಯವಹರಿಸುವುದನ್ನು 'ಹನಿಮೂನ್' ಕತೆಯ ಡಾ॥ ಬಸವ ರಾಜ್ ಹಾಗೂ ಹಳ್ಳಿಯ ಮುಗ್ಧ ಸುಂದರಿ ಚೆಲುವೆಯ ಚಿತ್ರಣದಲ್ಲಿ ನಾವು ಕಾಣುತ್ತೇವೆ. ಬೇರೆ ಯಾರೇ ಕತೆಗಾರರಾಗಿದ್ದರೂ ಕೇವಲ ಒಂದು ಜೋಕ್

ಆಗಬಲ್ಲ ಕತೆಯ ಹಂದರ ಹೊಂದಿರುವ 'ಹನಿಮೂನ್' ಕತೆ ನಿಷ್ಠುರ ನೈತಿಕ ಪ್ರಜ್ಞೆಯ ಕತೆಗಾರ್ತಿಯ ಕೈಯಲ್ಲಿ ಸಿಕ್ಕು ನಿಜವಾದ ಅರ್ಥದಲ್ಲಿಯ ಬ್ರಹ್ಮಚಾರಿ, ಪರಸ್ತ್ರೀ, ಸೋದರ, ಶಹರದ ಥಳಕು ಕೃತಕತೆಯನ್ನು ದ್ವೇಷಿಸುವ, ಹಳ್ಳಿಯ ಸಹಜತೆಯನ್ನು, ಮುಗ್ಧತೆಯನ್ನು ಅಗಾಧವಾಗಿ ಬಯಸುವ ಡಾ॥ ಬಸವರಾಜನ ಜೀವನ ದುರಂತವನ್ನು ತೆರೆದಿಡುವ ದುರಂತಗಾಥೆಯಾಗುತ್ತದೆ. ಗೊತ್ತಿಲ್ಲದೆಯೇ ನಾವು ಡಾ॥ ಬಸವರಾಜನಿಗಾದ ನಯವಂಚನೆಯ ಬಗೆಗೆ ಚಿಂತಿಸತೊಡಗುತ್ತೇವೆ; ಅವನ ಸ್ಥಿತಿ ಕಂಡು ಮರುಕಪಡುತ್ತೇವೆ. ಈ ಕ್ರಿಯೆ ಸಂವೇದನಶೀಲ ಓದುಗನ ಮನಸ್ಸಿನ ಪಾತಳಿಯ ಮೇಲೆಯೇ ನಡೆಯುವುದರಿಂದ ಕತೆ ಅಳಿಸಲಾಗದ ಅಚ್ಚನ್ನು ಅವನ ಮನಸ್ಸಿನ ಮೇಲೆ ಒತ್ತುತ್ತದೆ. ತೀರಾ ನಮ್ರಳಂತೆ ಕತೆಯನ್ನು ನಡೆಸಿಕೊಂಡು ಹೋಗುವ ಕತೆಗಾರ್ತಿಯ ನಿಷ್ಠುರ ವಾಸ್ತವ ದೃಷ್ಟಿ ಕೂಡಾ ನಮ್ಮ ಗಮನವನ್ನು ಸೆಳೆಯುತ್ತದೆ.

ಗೊಡ್ಡುವಾದಗಳಿಂದ ದೂರಾದ ವಿಚಿತ್ರ ಜೀವನ, ಶಾಂತಿಯಿಂದ ಕೂಡಿದ ಇಲ್ಲಿಯ ಕತೆಗಳು ಓದುಗರ ಜೀವನವನ್ನು ನೋಡುವ ದೃಷ್ಟಿಕೋನದಲ್ಲಿ ಹೊಸ ಹುನ್ನಾರವನ್ನು ತುಂಬುತ್ತವೆ. ಬದುಕನ್ನು ಉಣ್ಣುವ ಅವರ ಶೈಲಿಯಲ್ಲಿ ಹೊಸ ಹುರುಪನ್ನು ಹರಿಸುತ್ತವೆ. ಪ್ರಸ್ತುತ ಕತೆಗಳಲ್ಲಿ ಕತೆಗಾರ್ತಿಯು ಕಲೆಯ ಬೌದ್ಧಿಕ ಹಾಗೂ ನೈತಿಕ ಆಧಾರ, ವಸ್ತುವಿನ ಬಗ್ಗೆ ಪರಿಪೂರ್ಣವಾದ ತಿಳುವಳಿಕೆ ಹಾಗೂ ಕಲಾತ್ಮಕ ಒಳನೋಟವನ್ನು ಹೊಂದಿದವರಾಗಿದ್ದಾರೆ.

ಇಲ್ಲಿಯ ಕತೆಗಳಲ್ಲಿ ಇರುವ ಪಾತ್ರ ಮತ್ತು ಪರಿಸರಗಳು ಎಷ್ಟು ಜೀವಂತವಾಗಿ ಲಕಲಕಿಸುತ್ತಿವೆ ಎನ್ನುವುದು ನನ್ನಂಥವನಿಗೆ ಅತೀ ಮುಖ್ಯವಾಗಿ ಕಾಣುವ ಕಾರಣ–ಜೀವಕಳೆಯಿಂದ ಕೂಡಿದ ಕತೆಗಳ ಪರಿಸರ, ವಿಶ್ಲೇಷಣೆಗೆ ಯೋಗ್ಯ ಅಂತ ನನಗೆ ಅನ್ನಿಸುತ್ತದೆ. ಕಮಲಾ ಹಂಪನಾ ಅವರ ಕತೆಗಳನ್ನು ಕುರಿತು ಬರೆಯುವಾಗ ನನಗೆ ಹಿಂದಿಯ ಅತ್ಯಂತ ವಿವಾದಾಸ್ಪದ ಕತೆಗಾರ್ತಿ ದೀರ್ಪಿ ಬಂಡೇಲವಾಲ ಅವರ ಕತೆಗಳು ನೆನಪಾಗುತ್ತವೆ. ದೀರ್ಪಿಯವರ 'ಶಿಲುಬೆಯ ಮೇಲೆ', 'ಕಟುಸತ್ಯ', 'ಬಿಸಿಲಿನ ಅನಿಸಿಕೆ' ಮತ್ತು 'ಮೂರನೆಯವ' ಮುಂತಾದ ಕತೆಗಳಲ್ಲಿ ಕತೆಗಾರ್ತಿ ಗಂಡು ಹೆಣ್ಣಿನ ಬಗೆಗೆ ಬರೆವಾಗ ಕಾಣುವ ಉಸಿರುಗಟ್ಟುವ ನಿರ್ಲಿಪ್ತತೆ, ಒಮ್ಮೊಮ್ಮೆ ಭಯಂಕರ ಸತ್ಯವನ್ನು ಹೇಳುವಾಗಲೂ ಕಾಣುವ ನಿರ್ದ್ವಂದ್ವಗಳು, ಕಾಕತಾಳೀಯವೆನ್ನುವಂತೆ ಕಮಲಾ ಹಂಪನಾ ಅವರ ಕತೆಗಳ ಮುಖ್ಯ ಕಾಳಜಿಯಾಗಿವೆ.

'ರೆಕ್ಕೆ ಮುರಿದಿತ್ತು' ಈ ಸಂಕಲನದ ಪ್ರಾತಿನಿಧಿಕ ಕತೆ ಎನ್ನಬಹುದು. ದೇವಿ, ಶಿವಣ್ಣ, ಯೋಗೀಶರ ನಡುವಿನ ತ್ರಿಕೋನ ಸಂಬಂಧವನ್ನು ಇಲ್ಲಿ ಚಿತ್ರಿಸಲಾಗಿದೆ. ಮನೆಯ ಒಡೆಯ ಯೋಗೀಶ, ಶಿವಣ್ಣನ ಹೆಂಡತಿಯ ಮೇಲೆ ಕಣ್ಣು ಹಾಕುವುದು, ದೇವಿ ಯಾವುದನ್ನೂ ಮುಚ್ಚುಮರೆಯಲ್ಲಿಡದೆ ಗಂಡನೆದುರು ಹೇಳುವುದು, ಆದರೂ ಶಿವಣ್ಣ ಪರಿಸ್ಥಿತಿಯ ಒತ್ತಡಕ್ಕೆ ಸಿಕ್ಕು ನಿಸ್ಸಹಾಯಕನಾಗುವುದು ಕತೆಯ ಹಂದರ. ಗಿಳಿಗಳ ಮೂಲಕ ದೇವಿ, ಶಿವಣ್ಣನ ಮನಸ್ಸಿನ ಹೊಯ್ದಾಟವನ್ನು ಕತೆಗಾರ್ತಿ ಜೀವಂತವಾಗಿ ಚಿತ್ರಿಸಿದ್ದಾರೆ.

ಗಂಡು ಹೆಣ್ಣಿನ ಸಂಬಂಧವೊಂದು ಭಾವನೆಗಳ ಪರಸ್ಪರ ಹೊಂದಾಣಿಕೆ ಅಂತ ನಾವೂ ಒಪ್ಪಿಕೊಂಡ ಮೇಲೆ, ಅಲ್ಲಿ ಅಶ್ಲೀಲವೆನ್ನುವುದು ಏನೂ ಇರುವುದಿಲ್ಲ. ಯಾಕೆಂದರೆ ಅದು ಪೂರ್ಣತಃ ಕೊಟ್ಟು ತಕ್ಕೊಳ್ಳುವ ಸಂಬಂಧವಾಗಿರುತ್ತದೆ. ದೇವಿಯ ನಿಸ್ಸಹಾಯಕತೆಯನ್ನು ಶಿವಣ್ಣ ಹಾಗೂ ಶಿವಣ್ಣನ ಸೋಲನ್ನು ದೇವಿ ಪರಸ್ಪರ ಅರಿತಿದ್ದಾರೆ. ಕತೆಯಲ್ಲಿ ಯೋಗೀಶನ ಕಾಮುಕತೆ ಅಥವಾ ದೇವಿಯ ನಿಸ್ಸಹಾಯಕತೆಗಿಂತ, ಗಂಡಹೆಂಡಿರ ಪರಸ್ಪರ ತಿಳುವಳಿಕೆ—ದೇವಿಯ ಶೀಲ ಸೂರೆಯಾದ ಮೇಲೂ—ಉಳಿಯುವ ತಿಳುವಳಿಕೆ, ಗಂಡುಹೆಣ್ಣಿನ ಸಂಬಂಧದ ಹೊಸ ವ್ಯಾಖ್ಯೆಯಂತೆ ಕಾಣುತ್ತದೆ.

ಹೀಗೆ ಮಾನವೀಯ ಸಂಬಂಧಗಳ ಮೇಲೆ ಹೊಸ ಬೆಳಕನ್ನು ಚೆಲ್ಲುತ್ತ ಇಲ್ಲಿನ ಕತೆಗಳು, ಬದುಕಿನ ಉಲ್ಲಾಸದ ಕಡೆಗೆ ಓದುಗನನ್ನು ಕರೆದೊಯ್ಯುತ್ತವೆ.

ಬಾಸಿಂಗ

ಡಾ॥ ಕೆ. ಆರ್. ಸಂಧ್ಯಾರೆಡ್ಡಿ

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮ ವಿಮರ್ಶೆಗಳು, ಪ್ರಬಂಧಗಳು, ಕಥೆ, ಕಾದಂಬರಿ ಹಾಗೂ ಸಂಪಾದನೆಯ ಕೃತಿಗಳಿಂದ ಸಾಕಷ್ಟು ಹೆಸರಾಗಿರುವ ಕಮಲಾ ಹಂಪನಾ ಅವರ ಇತ್ತೀಚಿನ 'ಬಾಸಿಂಗ' ಎಂಬ ಸುಂದರ ಹೆಸರಿನ ಈ ಗ್ರಂಥದಲ್ಲಿ ಇಪ್ಪತ್ತು ಪ್ರಬಂಧಗಳಿವೆ. ಸುಮಾರು ಒಂದೂವರೆ ದಶಕದ ಅವಧಿಯಲ್ಲಿ ಪ್ರಕಟವಾಗಿರುವ ಲೇಖನಗಳಲ್ಲಿ ಸಾಹಿತ್ಯಕ ಧೋರಣೆಯ ಲೇಖನಗಳನ್ನು ಮಾತ್ರ ಇಲ್ಲಿ ಸಂಕಲಿಸಿದ್ದಾರೆ. ಇದರಲ್ಲಿ ಸ್ಮರಣ ಸಂಚಿಕೆಗಳಿಗೆ ಮತ್ತು ವಿಚಾರ ಸಂಕಿರಣಗಳಿಗೆ ಆಯಾ ಸಂದರ್ಭದಲ್ಲಿ ಬರೆದ ಲೇಖನಗಳು ಕೆಲವು, ಇನ್ನು ಕೆಲವು ಪುಸ್ತಕ ವಿಮರ್ಶೆಗೆ ಸಂಬಂಧಿಸಿದವು. ಒಂದೆರಡು ಲೇಖನಗಳೂ ವೈಚಾರಿಕ, ಇಲ್ಲವೆ, ಸಾಹಿತ್ಯ ಸಮ್ಮೇಳನಗಳಲ್ಲಿ ಮಾಡಿದ ಒಂದೆರಡು ಭಾಷಣಗಳೂ ಇಲ್ಲಿವೆ. ಹೀಗೆ

ಉದ್ದೇಶಗಳಿಗಾಗಿ ಈ ಲೇಖನಗಳನ್ನು ಬರೆದಿರುವುದರಿಂದ ಸಹಜವಾಗಿಯೇ ಸ್ವರೂಪವೂ ಇದೆ. ಆಯಾ ಉದ್ದೇಶಕ್ಕೆ ತಕ್ಕಂತೆ ಈ ಲೇಖನಗಳಿಗೆ ಕೆಲವು ಮಿತಿಗಳಿವೆ. ತೀವ್ರ ಅಧ್ಯಯನದ ಫಲವಾಗಿ ಮೂಡಿದ ಲೇಖನಗಳಲ್ಲಿ ಅಪಾರ ವಾದ ಮಾಹಿತಿ ಸಂಗ್ರಹಣೆ ಹಾಗೂ ವಸ್ತುನಿಷ್ಠ ವಿಶ್ಲೇಷಣೆ ಕಂಡುಬಂದರೆ, ಭಾಷಣಕ್ಕಾಗಿಯೋ ಪುಸ್ತಕ ವಿಮರ್ಶೆಗಾಗಿಯೋ ಬರೆದ ಲೇಖನಗಳಲ್ಲಿ ಶಬ್ದಾಡಂಬರ ಹೆಚ್ಚಾಗಿದ್ದು ಆಳವಾಗಿ ಅಧ್ಯಯನದ ಕೊರತೆ ಕಂಡುಬರುತ್ತದೆ. ಒಟ್ಟಾರೆ ನೋಡಿದಾದ ವಿವಿಧ ವಿಷಯಗಳಿಗೆ ಸಂಬಂಧಿಸಿದ ಹಲವು ಉತ್ತಮ ಲೇಖನಗಳಿಂದ 'ಬಾಸಿಂಗ' ತನ್ನ ಹೆಸರನ್ನು ಸಾರ್ಥಕಪಡಿಸಿಕೊಂಡಿದೆ.

ಈ ಕೃತಿಯ ಮೊದಲ ಲೇಖನ 'ಕನ್ನಡದಲ್ಲಿ ಜೀವನ ಚರಿತ್ರೆಗಳು'. ಕನ್ನಡದಲ್ಲಿ ಉತ್ತಮವೆನ್ನುವಂಥ ಜೀವನ ಚರಿತ್ರೆಗಳು ಬಹಳ ಕಡಿಮೆ. ಆ ಕುರಿತ ಅಧ್ಯಯನವಂತೂ ಇನ್ನೂ ಕಡಿಮೆ. ಪ್ರಸ್ತುತ ಲೇಖನ ಸಾಕಷ್ಟು ಪ್ರಬುದ್ಧವಾಗಿದ್ದು ಜೀವನ ಚರಿತ್ರೆಗಳ ಸ್ವರೂಪ, ಉದ್ದೇಶ, ಹಳಗನ್ನಡ ಸಾಹಿತ್ಯ ಕಾಲದಿಂದ ಹಿಡಿದು ಇಂದಿನವರೆಗೆ ನಮ್ಮಲ್ಲಿ ಬಂದಿರುವ ಜೀವನ ಚರಿತ್ರೆಯ ಅಂಶಗಳನ್ನೊಳಗೊಂಡ ಕೃತಿಗಳ ಸೂಕ್ಷ್ಮಾವಲೋಕನ, ಜೀವನ ಚರಿತ್ರೆಗಳ ವರ್ಗೀಕರಣ, ಅವುಗಳ ಪಟ್ಟಿ ಹೀಗೆ ಹಲವಾರು ಅಂಶಗಳನ್ನು ಸಮಗ್ರವಾಗಿ ಪರಿಚಯಿಸುವ ಒಂದು ಉತ್ತಮ ಲೇಖನ. ಶ್ರಮವಹಿಸಿ ಎಲ್ಲ ಜೀವನ ಚರಿತ್ರೆಗಳ ಹೆಸರುಗಳನ್ನು ಸಂಗ್ರಹಿಸಲಾಗಿದೆ. ಈ ಲೇಖನವನ್ನು ಓದಿ ಮುಗಿಸಿದ ನಂತರ ನಮ್ಮಲ್ಲಿ ಜೀವನ ಚರಿತ್ರೆಗಳ ಸಂಖ್ಯೆ ವಿಪುಲವಾಗಿದೆ ಎಂಬ ಅಂಶ ಮನವರಿಕೆಯಾಗುತ್ತದೆ.

ತೆಲುಗು ಸಾಹಿತ್ಯವನ್ನು ಕುರಿತ ಎರಡನೆಯ ಲೇಖನ ತೆಲುಗಿನ ಸುಪ್ರಸಿದ್ಧ ಸಾಹಿತಿ, ಅತ್ಯುತ್ತಮ ವಿಮರ್ಶಕ ಹಾಗೂ 'ಆಂಧ್ರಜ್ಯೋತಿ' ಸಂಪಾದಕರಾಗಿದ್ದ ವೆಂಕಟೇಶ್ವರರಾವ್ ನಾರ್ಲ ಅವರ ಲೇಖನದ ಅನುವಾದ. ತೆಲುಗು ಸಾಹಿತ್ಯದ ವಸ್ತುನಿಷ್ಠ ವಿಮರ್ಶೆ ಇರುವಂಥ ಲೇಖನಗಳು ಸಿಗುವುದು ಅಪರೂಪ. ಪ್ರಸ್ತುತ ಲೇಖನ ಈ ಕೊರತೆಯನ್ನು ತುಂಬಿಕೊಡುತ್ತದೆ. ನಾರ್ಲ ಅವರು ಈ ಲೇಖನದಲ್ಲಿ ಮುಖ್ಯವಾಗಿ ತೆಲುಗು ಮಹಿಳಾ ಸಾಹಿತ್ಯವನ್ನು ಹಾಗೂ ತೆಲುಗು ಕಾವ್ಯದ ನವ್ಯ ಪದ್ಯವನ್ನೂ ಪರಿಚಯಾತ್ಮಕವಾಗಿ ವಿಶ್ಲೇಶಿಸಿದ್ದಾರೆ. ಕನ್ನಡ ದಲ್ಲಿಯಂತೆ ತೆಲುಗಿನಲ್ಲಿಯೂ ಲೇಖಕಿಯರ ವಿಶೇಷ ಯಶಸ್ಸು ಕಾದಂಬರಿಕಾರ ರೆಂದೇ. ಇವರ ಕಾದಂಬರಿಗಳಿಲ್ಲದೆ ಇಲ್ಲಿಯ ವಾರಪತ್ರಿಕೆಗಳು ನಡೆಯುವುದೇ ಕಷ್ಟ. ಇಲ್ಲಿಯ ಹೆಸರಾಂತ ಲೇಖಕಿಯರೆಲ್ಲ ಮಧ್ಯಮ ವರ್ಗದಿಂದಲೇ ಬಂದವರು. ಮಧ್ಯಮ ವರ್ಗದವರ ಆಶೆ ನಿರಾಶೆ, ಸುಖ ದಃಖ, ಮುಳ್ಳು

ಮಲ್ಲಿಗೆಗಳನ್ನೇ ಕುರಿತು ಬರೆಯುವವರು. ಇವರ ಜ್ಞಾನದ ಪರಧಿ ಅನುಭವದ ವ್ಯಾಪ್ತಿ ಮತ್ತು ಸಂವೇದನೆ ಕೂಡ ಸೀಮಿತ. ತೆಲುಗು ಲೇಖಕಿಯರ ಪೈಕಿ ಬಹಳ ಯಶಸ್ವಿಯಾಗಿರುವ ಮುಪ್ಪಳ ರಂಗನಾಯಕಮ್ಮ, ಯುದ್ಧನಪೂಡಿ ಸುಲೋಚನಾರಾಣಿ, ದ್ವಿವೇಮಲ ವಿಶಾಲಾಕ್ಷಿ ಮೊದಲಾದವರ ಕೃತಿವಿಮರ್ಶೆ, ಅವರ ವೈಶಿಷ್ಟ್ಯಗಳ ಪರಿಚಯು ಇಲ್ಲಿದೆ. ನವ್ಯ ಪಂಥದ ಕಾವ್ಯವಿವೇಚನೆ ಮಾಡುತ್ತಾ ಇಲ್ಲಿನ ಫ್ರೀವರ್ಸ್ ಫ್ರಾಂಟ್, ದಿಗಂಬರ ಪಂಥ ಹಾಗೂ ವಿರಸಂ ಚಳುವಳಿಗಳ ಸ್ವರೂಪ, ಧ್ಯೇಯೋದ್ದೇಶಗಳ ಸಂಕ್ಷಿಪ್ತ ಪರಿಚಯ ಮಾಡಿ ಕೊಡುತ್ತಾರೆ. ಒಟ್ಟಿನಲ್ಲಿ ಇಂದಿನ ತೆಲುಗು ಸಾಹಿತ್ಯದ ದಿಕ್ಕು ದೆಸೆಗಳನ್ನು ಆಕರ್ಷಕ ಶೈಲಿಯಲ್ಲಿ ವಸ್ತುನಿಷ್ಠವಾಗಿ ವಿಮರ್ಶಿಸುವ ಒಂದು ಉತ್ತಮ ಲೇಖನ ಇದು.

ನಮ್ಮ ಮಹಿಳಾ ಸಾಹಿತ್ಯ ಹಾಗೂ ಲೇಖಕಿಯರನ್ನು ಕುರಿತು ಸುಮಾರು 3–4 ಲೇಖನಗಳು ಇಲ್ಲಿವೆ. ವಿಭಿನ್ನ ಸಾಹಿತ್ಯ ಕ್ಷೇತ್ರಗಳಲ್ಲಿ ಲೇಖಕಿಯರು ನಡೆಸಿರುವ ಸಿದ್ಧಿ ಸಾಧನೆಗಳ ವಿವೇಚನೆಯೇ ಗುರಿಯಾಗಿರುವ 'ಮಹಿಳಾ ಸಾಹಿತ್ಯದ ನೆಲೆ ಬೆಲೆ' ಎಂಬ ಲೇಖನದಲ್ಲಿ ಮಹಿಳೆಯರಿಗಿರುವ ಇತಿಮಿತಿಗಳನ್ನೂ ಅವರ ಸಾಧ್ಯತೆಗಳನ್ನೂ ಭಾಷಣದ ಶೈಲಿಯಲ್ಲಿ ನಿರೂಪಿಸಿದ್ದಾರೆ. ಅಂತಿಮವಾಗಿ ವಿಮರ್ಶೆ ಸಾಹಿತ್ಯವನ್ನು ಕುರಿತೇ ಹೊರತು ಅದನ್ನು ಬರೆದ ವ್ಯಕ್ತಿಯನ್ನು ಕುರಿತು ಅಲ್ಲ. ಈ ದೃಷ್ಟಿಯಿಂದ ಮಹಿಳಾ ಸಾಹಿತ್ಯ, ಪುರುಷ ಸಾಹಿತ್ಯ ಅಥವಾ ಮಹಿಳಾ ಸಾಹಿತ್ಯ ಎಂಬ ಮಾತೇ ಸಮಂಜಸವಾಗಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಇಂದಿನ ಲೇಖಕಿಯರಿಂದ ತೀರಾ ದುರ್ಬಲವಾದ, ಬಂದಳಿಕೆಯಂಥ ಸಾಹಿತ್ಯ ನಿರ್ಮಾಣವಾಗುತ್ತಿದೆ. ವಾಸ್ತವದ ನೆಲೆಗಟ್ಟಿನಲ್ಲಿ, ಶಕ್ತಿಯುತ ಭಾಷೆಯಲ್ಲಿ ಗಟ್ಟಿಯಾದ ಕೃತಿಗಳನ್ನು ನೋಡುವತ್ತ ಲೇಖಕಿಯರು ಪ್ರಯತ್ನಿಸಬೇಕು. ಲೇಖಕಿಯರು ಬರವಣಿಗೆಯನ್ನು ಗಂಭೀರವಾಗಿ ಸ್ವೀಕರಿಸಿಲ್ಲ, ಆದ್ದರಿಂದಲೇ ಇಂತಹ ಜೊಳ್ಳು ಸಾಹಿತ್ಯದ ನಿರ್ಮಾಣವಾಗುತ್ತಿದೆ ಎಂದಿದ್ದಾರೆ.

'ಪರಂಪರೆ, ಪ್ರತಿಭಟನೆ ಮತ್ತು ಲೇಖಕಿಯರು' ಎಂಬ ಇನ್ನೊಂದು ಲೇಖನದಲ್ಲಿ ನಮ್ಮ ಸ್ತ್ರೀಯರು ಅನುಭವಿಸುತ್ತಿರುವ ಶೋಷಣೆಯನ್ನು ವಿವರಿಸಿ, ಈ ಅರಿವನ್ನು ಸೂಚಿಸುವಂತಹ ವೈಚಾರಿಕ ಕೃತಿಗಳು ಲೇಖಕಿಯರಿಂದ ಬರಬೇಕು ಎಂದು ಆಶಿಸಿದ್ದಾರೆ. ಈ ವ್ಯವಸ್ಥೆಯು ದಲಿತ ವರ್ಗದಲ್ಲಿ ಹೆಣ್ಣೂ ಸೇರಿದ್ದಾಳೆ ಎಂಬುದನ್ನು ಗುರುತಿಸಿದ್ದಾರೆ. ತಾಳಿಯನ್ನು ತೆಗೆಯುವುದು ಸಮಾನತೆಯತ್ತ ಒಂದು ಹೆಜ್ಜೆ....ಇನ್ನು ಹತ್ತು ವರ್ಷವಾದರೂ ಹೆಣ್ಣಿಗೆ ಕರಿಮಣಿ ಅಗತ್ಯ, ಇಂಥ ವಿರೋಧಾಭ್ಯಾಸದ ಹೇಳಿಕೆಗಳೂ ಇಲ್ಲಿವೆ. ಈ ಲೇಖನದಲ್ಲಿ

ಗಂಭೀರ ಅಧ್ಯಯನಕ್ಕಿಂತ ಭಾಷಣಶೈಲಿಯೇ ಮೆರೆದಿದೆ ಎಂದರೆ ತಪ್ಪಾಗಲಾರದು.

ದಲಿತ ಸಾಹಿತ್ಯವನ್ನು ಕುರಿತಂತೆಯೂ ಇಲ್ಲಿ ಮೂರು ಲೇಖನಗಳಿವೆ. ಈ ಲೇಖನಗಳಲ್ಲಿ ದಲಿತ ಸಾಹಿತ್ಯದ ಬಗೆಗಿರುವ ವಿವಿಧ ಹೇಳಿಕೆಗಳ ಕಲಸು ಮೇಲೋಗರವಿದೆ. ದಲಿತ ಎಂಬ ಪದದ ನಿಷ್ಪತ್ತಿ, ಭಾರತ ಹಾಗೂ ಇತರ ದೇಶಗಳಲ್ಲಿ ದಲಿತ ಧೋರಣೆಯ ಬೆಳವಣಿಗೆ ಮುಂತಾದ ವಿಷಯಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ಹೇಳಿದ್ದಾರೆ. ಈ ಲೇಖನಗಳು ಸಾಹಿತ್ಯ ಸಮ್ಮೇಳನಗಳಲ್ಲಿ ಮಾಡಿದ ಭಾಷಣಗಳಾಗಿರುವುದರಿಂದ ಇವುಗಳಲ್ಲಿ ಸುಂದರ ಶಬ್ದಜ್ಞಾನವಿದೆ, ಭಾಷಣದ ಧಾಟಿ ಇದೆ. ದಲಿತ ಸಾಹಿತ್ಯವನ್ನು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಇವುಳಿಗಿಂದ ಹೆಚ್ಚೇನನ್ನೂ ನಿರೀಕ್ಷಿಸುವಂತಿಲ್ಲ. ಆದರೂ ದಲಿತ, ಬಂಡಾಯ ಧೋರಣೆಗಳ ಬಗೆಗೆ ಕಮಲಾ ಹಂಪನಾ ಅವರಿಗೆ ವಿಶೇಷ ಕಾಳಜಿ ಇರುವುದು ಮೆಚ್ಚತಕ್ಕ ಅಂಶ.

ಶರತ್‌ಚಂದ್ರರ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಇಲ್ಲಿ ಎರಡು ಲೇಖನಗಳಿವೆ. ಇದರಲ್ಲಿ ಒಂದು ಲೇಖನ ಶರತ್‌ಚಂದ್ರರ ಸಾಹಿತ್ಯದ ಸ್ವರೂಪ, ಧ್ಯೇಯಗಳನ್ನು ಸ್ಪಷ್ಟವಾಗಿ ಪರಿಚಯಿಸುತ್ತದೆ. ಇನ್ನೊಂದು ಲೇಖನದಲ್ಲಿ ಶರತ್‌ಚಂದ್ರರ ಕೆಲವು ಪ್ರಮುಖ ಕಾದಂಬರಿಗಳನ್ನು ಗಮನದಲ್ಲಿಟ್ಟುಕೊಂಡು ಅವುಗಳಲ್ಲಿ ಕಂಡುಬರುವ ಪ್ರಧಾನ ಸ್ತ್ರೀಪಾತ್ರಗಳ ಪರಿಚಯ ಮಾಡಿಕೊಟ್ಟಿದ್ದಾರೆ. ಶರತ್‌ಚಂದ್ರರು ಸ್ತ್ರೀಯನ್ನು ವಿವಿಧ ದೃಷ್ಟಿಕೋನಗಳಿಂದ ಆದರೆ ವಾಸ್ತವಕ್ಕೆ ದೂರವಾಗದಂತೆ ನೋಡಿದ್ದಾರೆ ಎಂಬುದನ್ನು ಸಮರ್ಪಕವಾಗಿ ವಿವೇಚಿಸಿದ್ದಾರೆ.

ಗೊರೂರರ 'ಮರೆಯಾದ ಮಾರಮ್ಮ', ಕಂಬಾರರ 'ಸಿಂಗಾರೆವ್ವ ಮತ್ತು ಅರಮನೆ' ಹಾಗೂ ಜಿ. ಆರ್. ತಿಪ್ಪೇಸ್ವಾಮಿಯವರ 'ಪ್ರಸ್ತಾಪ' ಈ ಕೃತಿಗಳ ಪರಿಚಯವೂ ಈ ಕೃತಿಯಲ್ಲಿದೆ. 'ಮರೆಯಾದ ಮಾರಮ್ಮ' ಹದಿನೇಳು ಸಣ್ಣ ಕಥೆಗಳ ಸಂಕಲನ. ಈ ಕಥೆಗಳ ವಸ್ತು ಹಾಗೂ ಗೊರೂರರು ಅದನ್ನು ನಿರೂಪಿಸಿರುವ ಧಾಟಿಯನ್ನು ಇಲ್ಲಿ ವಿಮರ್ಶಿಸಲಾಗಿದೆ.

'ಸಿಂಗಾರೆವ್ವ ಮತ್ತು ಅರಮನೆ' ತಮಗೆ ಇನ್ನೂ ಪೂರ್ಣವಾಗಿ ಅರ್ಥವಾಗದಿರುವ, ಮತ್ತೆ ಮತ್ತೆ ಓದಬೇಕೆನಿಸುವ ಹಾಗೂ ತಮ್ಮ ಮೇಲೆ ತುಂಬಾ ಪ್ರಭಾವ ಬೀರಿರುವ ಕಾದಂಬರಿ ಎಂದು ಪ್ರಾಮಾಣಿಕವಾಗಿ ನುಡಿದಿರುವ ಕಮಲಾ ಹಂಪನಾ, ತುಂಬಾ ಉತ್ತಮವಾಗಿ ಈ ಕಾದಂಬರಿಯ ಕಥೆ, ಪಾತ್ರ

ಚಿತ್ರಣ ಮತ್ತು ಅವರ ಅರ್ಥವಂತಿಕೆಗಳನ್ನು ವಿಶ್ಲೇಷಿಸಿದ್ದಾರೆ. ಕಮಲಾ ಅವರ ಬರಹದ ಉತ್ತಮ ಶೈಲಿಗೆ ಈ ಲೇಖನ ಒಂದು ನಿದರ್ಶನ.

ಜಿ. ಆರ್. ತಿಪ್ಪೇಸ್ವಾಮಿಯವರ 'ಪ್ರಸ್ತಾಪ' ಪ್ರಾಚೀನ ಭಾರತದಲ್ಲಿ ಪ್ರಚಲಿತವಿದ್ದ ಶಿಕ್ಷಾಪದ್ಧತಿಯ ಹಿನ್ನೆಲೆಯಲ್ಲಿದ್ದ ಬರ್ಬರ ಕ್ರೌರ್ಯದಿಂದ ಬಿಡಿದು ಪ್ರಸ್ತುತ ಭಾರತದಲ್ಲಿ ಬಾಳಿಗಿಡವನ್ನು ನೆಡುವಂಥ ಸಾಮಾನ್ಯ ಕ್ರಿಯೆಯ ಹಿಂದಿರುವ ಮಾನವೀಯತೆ ಮತ್ತು ಮೌಢ್ಯವನ್ನು ದಾಖಲು ಮಾಡಿದೆ. 'ಪ್ರಸ್ತಾಪ'ದಲ್ಲಿನ ಎಲ್ಲ ಪ್ರಬಂಧಗಳೂ ಸಮಾಜದ ಬಹುಪಾಲು ಮುಖಗಳನ್ನು ಸಾಂಸ್ಕೃತಿಕ ಚೌಕಟ್ಟಿನಲ್ಲಿ ತುಂಬ ಅರ್ಥಪೂರ್ಣವಾಗಿ ಅಧ್ಯಯನ ಮಾಡಲು ಕರೆಕೊಡುತ್ತವೆ. ಈ ಕೃತಿಯ ಮೌಲಿಕ ವಿಷಯಗಳೆಲ್ಲವನ್ನೂ ಕಮಲಾ ಹಂಪನಾ ಅವರು ಇನ್ನೂ ವಿಸ್ತೃತವಾಗಿ ವಿವರಿಸಿದ್ದರೆ ಈ ಕೃತಿಯ ನಿಜವಾದ ಮೌಲ್ಯವನ್ನು ಕಂಡುಕೊಳ್ಳಲು ಸಾಧ್ಯವಾಗುತ್ತಿತ್ತು.

ರಾಷ್ಟ್ರಕವಿ ಗೋವಿಂದ ಪೈ ಅವರ ಶತಮಾನೋತ್ಸವದ ಸಂದರ್ಭದಲ್ಲಿ ಏರ್ಪಡಿಸಿದ್ದ ಸಾಹಿತ್ಯಗೋಷ್ಠಿಯಲ್ಲಿ ಪೈ ಅವರ ವಿಮರ್ಶಾ ಗ್ರಂಥಗಳನ್ನು ಕುರಿತು ಕಮಲಾ ಅವರು ಓದಿದ ಪ್ರಬಂಧವೇ 'ರಾಷ್ಟ್ರಕವಿ ಗೋವಿಂದ ಪೈ ವಾಙ್ಮಯ' ಎಂಬ ಲೇಖನದ ವಸ್ತು. ಪೈ ಅವರ ವಿಮರ್ಶಾ ಪ್ರಬಂಧಗಳ ಸಂಕಲನ ಈವರೆಗೆ ಪ್ರಕಟವಾಗಿಲ್ಲ. ಬೇರೆ ಬೇರೆ ವಿಷಯಗಳಿಗೆ ಸಂಬಂಧಿಸಿದಂತೆ ಬಿಡಿ ಬಿಡಿ ಲೇಖನಗಳು ಪ್ರಕಟಗೊಂಡಿವೆ. ಪೈ ಅವರ 'ಕನ್ನಡದ ಮೊರೆ' ಎಂಬ ಗ್ರಂಥದಲ್ಲಿರುವ ಅಣಿಕವಾಡು, ಪ್ರಾಕ್ತನ ವಿಮರ್ಶನದ ಮುಂದಣ ಹೆಜ್ಜೆ, ಸಣ್ಣಕಥೆ–ಕಾದಂಬರಿಗಳು ಹಾಗೂ ಕನ್ನಡದಲ್ಲಿ ಪ್ರಬಂಧದ ಅವತಾರ ಎಂಬ ನಾಲ್ಕು ಪ್ರಬಂಧಗಳು, ಜೊತೆಗೆ ಬೇರೆ ಬೇರೆ ಸಂಚಿಕೆಗಳಲ್ಲಿ ಪ್ರಕಟಗೊಂಡಿರುವ ಆರು ಬಿಡಿ ವಿಮರ್ಶಾ ಪ್ರಬಂಧಗಳಲ್ಲಿ ದೊರೆತಿರುವ ನಾಲ್ಕು ಪ್ರಬಂಧಗಳನ್ನು ಆಧಾರವಾಗಿಟ್ಟುಕೊಂಡು ಈ ಪ್ರಬಂಧ ರಚಿಸಿದ್ದಾರೆ. ಗೋವಿಂದ ಪೈ ಅವರ ವಿಮರ್ಶಾ ದೃಷ್ಟಿ ಎಂಥದ್ದು ಎಂಬುದನ್ನು ತಿಳಿಸಲು ಪೈ ಅವರ ಹೇಳಿಕೆಗಳನ್ನೇ ಉದ್ಧರಿಸಿರುವುದು ಸೂಕ್ತವಾಗಿದೆ. ಏಕೆಂದರೆ ಪೈ ಅವರ ದೃಷ್ಟಿ ಎಷ್ಟು ವಿಶಿಷ್ಟವೋ ಅದನ್ನು ವ್ಯಕ್ತಪಡಿಸುವ ಅವರ ಶೈಲಿಯೂ ಅಷ್ಟೇ ವಿಶಿಷ್ಟ. ಅವರ ಮಾತುಗಳನ್ನೇ ಮತ್ತೆ ನೆನೆಸಿಕೊಳ್ಳುವುದು ಎಲ್ಲರಿಗೂ ಆಪ್ಯಾಯಮಾನ. ಅಲ್ಲಲ್ಲಿ ಪೈ ಅವರ ಮಾತುಗಳನ್ನೇ ಕಮಲಾ ಅವರು ಈ ಲೇಖನದುದ್ದಕ್ಕೂ ಉದ್ಧರಿಸಿ ಬಹಳ ಸಮಂಜಸವಾದ ಕೆಲಸ ಮಾಡಿದ್ದಾರೆ.

'ಪಂಪಾಯಾತ್ರೆಯ ಸ್ಮರಣೆಯ ಸುಳಿಯಲ್ಲಿ' ಇಲ್ಲಿನ ಮತ್ತೊಂದು ಚೂಡಾಮಣಿಯಾಗಿರುವ 'ಪಂಪಾಯಾತ್ರೆ' ಉತ್ತಮ ಲೇಖನ. ವೀಸೀಯವರ

ಕೃತಿಶ್ರೇಣಿಯನ್ನು ಕುರಿತ ಈ ಲೇಖನದಲ್ಲಿ ವೀಸೀ ಅವರ ವ್ಯಕ್ತಿತ್ವವನ್ನೂ ಈ ಗ್ರಂಥದ ಮಹತ್ವವನ್ನೂ ಅತ್ಯಂತ ಸಮರ್ಥವಾಗಿ ಪರಿಚಯಿಸಲಾಗಿದೆ. ಪಂಪಾಯಾತ್ರೆ ತನ್ನ ಅತ್ಯುತ್ತಮ ಗದ್ಯಶೈಲಿಗೆ ಹೇಗೆ ಹೆಸರಾಗಿದೆಯೋ ಹಾಗೆ ಈ ಲೇಖನದ ಶೈಲಿಯೂ ಮುತ್ತಿನ ಸರದಂತೆ ಮನೋಹರವಾಗಿದೆ. ಲೇಖಕಿ ಕೊಡುವ ಒಂದೊಂದು ಹೋಲಿಕೆಯೂ ಪ್ರಯೋಗಿಸುವ ಒಂದೊಂದು ಪದವೂ ಅತ್ಯಂತ ಎಚ್ಚರಿಕೆಯಿಂದ ನಾಜೂಕಾಗಿ ಪ್ರಯೋಗವಾಗಿದ್ದು ಇಡೀ ಲೇಖನ ಎಲ್ಲಿಯೂ ತನ್ನ ಬಿಗಿ ಕಳೆದುಕೊಳ್ಳದೆ ಸರ್ವಾಂಗಸುಂದರವಾಗಿದೆ.

'ಮೂರನೇ ಮಂಗರಸ–ಒಂದು ಸಮೀಕ್ಷೆ' ಎಂಬ ಲೇಖನ ಮಂಗರಸ ಕಾವ್ಯಗಳ ಪರಿಚಯ ಮತ್ತು ಸಾಹಿತ್ಯ ಚರಿತ್ರೆಯಲ್ಲಿ ಅವನ ಸ್ಥಾನ ನಿರ್ಣಯ ಮಾಡುವ ಒಂದು ಪ್ರಬುದ್ಧ ಲೇಖನ.

ಹೊಸಗನ್ನಡ ಪೂರ್ವದ ಲೇಖಕಿಯರನ್ನೂ ಮತ್ತು ಅವರ ಸಾಧನೆಗಳನ್ನೂ ವಿವಿಧ ರೀತಿಗಳಲ್ಲಿ ಪರಿಚಯಿಸುವ ಸುಮಾರು ಮೂರು ಲೇಖನಗಳು ಇಲ್ಲಿವೆ. ಇಂದಿನವರಿಗೆ ಹೆಸರಿನಿಂದ ಮಾತ್ರ ಪರಿಚಿತವಾಗಿರುವ ಇಂತಹ ಅನೇಕ ಲೇಖಕಿಯರ ವಿವರಗಳು ದೊರೆಯುವುದು ಬಹಳ ಕಷ್ಟ. ಕಮಲಾ ಅವರು ಅತ್ತ ಕಣ್ಣು ಹಾಯಿಸಿ, ವಿವಿಧ ಮೂಲಗಳಿಂದ ವಿಷಯ ಸಂಗ್ರಹಿಸಿ ಈ ಲೇಖನಗಳ ಮೂಲಕ ಆ ವಿವರಗಳು ಎಲ್ಲರಿಗೂ ಲಭ್ಯವಾಗುವಂತೆ ಮಾಡಿದ್ದಾರೆ. ಮಹಿಳಾ ಸಾಹಿತ್ಯ ಚರಿತ್ರೆಯ ಅಧ್ಯಯನಕ್ಕೆ ಈ ಲೇಖನಗಳು ಅಮೂಲ್ಯವಾದ ಕೊಡುಗೆ ಎಂಬುದರಲ್ಲಿ ಸಂಶಯವಿಲ್ಲ.

'ಬಿ ಎಂ ಶ್ರೀ ಮತ್ತು ಅವರ ಕಾಲದ ಲೇಖಕಿಯರು ಹಾಗು ಸಾಹಿತ್ಯ ಸೇವಕರು' ಎಂಬ ಲೇಖನದಲ್ಲಿ, ಇಂದಿನ ಲೇಖಕಿಯರಿಗೆ ದೊರೆಯುವ ಅನೇಕ ಸೌಲಭ್ಯಗಳಿಂದ ವಂಚಿತರಾಗಿದ್ದರೂ ಕನ್ನಡ ಸಾಹಿತ್ಯಕ್ಕೆ ಗಮನಾರ್ಹ ಸೇವೆ ಸಲ್ಲಿಸಿದ ನಂಜನಗೂಡು ತಿರುಮಲಾಂಬ, ಆರ್. ಕಲ್ಯಾಣಮ್ಮ, ಡಿ. ಚಂಪಾಬಾಯಿ, ಕೊಡಗಿನ ಗೌರಮ್ಮ, ಬೆಳಗೆರೆ ಜಾನಕಮ್ಮ ಮುಂತಾದವರ ಜೀವನ ವಿವರಗಳನ್ನೂ ಸಾಧನೆಗಳನ್ನೂ ಪರಿಚಯಿಸಿದ್ದಾರೆ. ಹೀಗೆ ಸಾಹಿತಿಗಳಾಗಿ ಹೆಸರಾದ ಬಹುಮಂದಿ ಮಹಿಳೆಯರು ಬಾಲವಿಧವೆಯರು. ಇನ್ನೂ ಕೆಲವರು ಅಕಾಲ ಮರಣಕ್ಕೆ ತುತ್ತಾದವರು ಎಂಬುದು ದಾರುಣವಾದ ಸಂಗತಿ, ಈ ಪರಿಸರದ ಬಲವು ಲೇಖಕಿಯರು ಅನುವಾದ ಕೃತಿಗಳನ್ನೂ ಜೀವನ ಚರಿತ್ರೆ, ಪ್ರಾರ್ಥನೆ, ಸ್ತುತಿಗೀತೆ ಮುಂತಾದುವನ್ನೂ ರಚಿಸಿದವರು. ಸೃಜನಶೀಲ ಎನ್ನುವಂಥ ಸಾಹಿತ್ಯ ರಚನೆ ಕೊಡಗಿನ ಗೌರಮ್ಮ ಹಾಗೂ ಬೆಳಗೆರೆ ಜಾನಕಮ್ಮ ಇವರಿಬ್ಬರದೇ.

'ಸಂಚಿ ಹೊನ್ನಮ್ಮ ಮತ್ತು ಹೆಳವನಕಟ್ಟೆ ಗಿರಿಯಮ್ಮ' ಎಂಬ ಲೇಖನದಲ್ಲಿ ಈ ಇಬ್ಬರು ಕವಯಿತ್ರಿಯರ ಪರಿಸರ, ಜೀವನ ವಿವರ ಹಾಗೂ ಕಾವ್ಯದ ಸವಿಸ್ತಾರವಾದ ಪರಿಚಯವಿದೆ. ಈ ಲೇಖನದಲ್ಲಿ ಹೊಸದೇನನ್ನೂ ಹೇಳಿಲ್ಲವಾದರೂ ಸಾಕಷ್ಟು ಮಾಹಿತಿ ಸಂಗ್ರಹಣೆಯಿಂದಾಗಿ ಇದು ಗಮನಾರ್ಹವಾಗಿದೆ. 'ಕನ್ನಡ ಸಾಹಿತ್ಯದಲ್ಲಿ ಜೈನ ಕವಯಿತ್ರಿಯರ ರಚನೆಗಳಿಂದ ತೊಡಗಿ ಸಾಕಷ್ಟು ಪ್ರಸಿದ್ಧರಾಗಿರುವ ಕಂತಿ, 'ಚಂದನಾಂಬಿಕೆಯ ಕಥೆ'ಯನ್ನು ರಚಿಸಿದ ಒಬ್ಬ ಅಜ್ಞಾತ ಕರ್ತೃ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯ 'ನೆಲ್ಲಿಕಾರು ಜೈನ ಮಹಿಳೆ' ಎಂಬ ಕಾವ್ಯನಾಮದ ರಾಧಮ್ಮ ಮುಂತಾದವರ ಜೀವನ ಹಾಗೂ ಕೃತಿ ಪರಿಚಯವಿದೆ.

'ಅಗ್ನಿವರ್ಣ' ಎಂಬ ಚಿಕ್ಕ ಲೇಖನ ಡಾ॥ ರಂ. ಶ್ರೀ. ಮುಗಳಿಯವರ ಇದೇ ಹೆಸರಿನ ಕಾದಂಬರಿ ಒಂದು ಪರಿಚಯ. ರಘುವಂಶದ ಕೊನೆಯ ರಾಜನಾದ ಅಗ್ನಿವರ್ಣ ಈ ಕಾದಂಬರಿಯ ನಾಯಕ. ಸಾರ್ವಕಾಲಿಕ ಜೀವನ ಚಿತ್ರಣ ಮತ್ತು ದರ್ಶನ ಕಲಾತ್ಮಕವಾಗಿ ಧ್ವನಿತವಾಗಿರುವ ಈ ಕಾದಂಬರಿಯನ್ನು ಪರಿಚಯ ಮಾಡಿಕೊಟ್ಟಿರುವುದು ಸೂಕ್ತವಾಗಿದೆ.

'ಹೆಣ್ಣಿನ ಹಿರಿಮೆ' ಎಂಬ ಲೇಖನ ಧವಳಶ್ರೀಯವರ 'ವಡ್ಡಾರಾಧನೆಯಲ್ಲಿ ಸ್ತ್ರೀ' ಎಂಬ ಪುಸ್ತಕಕ್ಕೆ ಬರೆದ ಮುನ್ನುಡಿ. ಇಲ್ಲಿ ವೇದಗಳ ಕಾಲದಿಂದ ಹಿಡಿದು ಇಂದಿನವರೆಗಿನ ಖ್ಯಾತನಾಮರಾದ ಸ್ತ್ರೀಯರನ್ನು ಹೆಸರಿಸಿ, ಬಣ್ಣಿಸಿ ಬರೆದಿದ್ದಾರೆ. ಬೇಕಾದರೆ ಹೆಣ್ಣುಮಕ್ಕಳ ಆಟೋಗ್ರಾಫ್‌ಗೆ ಬರೆದುಕೊಡುವಂಥ ವಾಕ್ಯಗಳ ಸರಮಾಲೆಯ ಸಂಗ್ರಹದಂತಿದೆ ಈ ಮುನ್ನುಡಿ.

'ಬಾಸಿಂಗ' ದಲ್ಲಿಯ ಅನೇಕ ಬರಹಗಳನ್ನು ಅಧ್ಯಯನಿಸುತ್ತ ಹೋದಂತೆ ಅದೇ ಲೇಖಕಿಯರಿಗೆ ಸಾಧ್ಯವಾಗಿರದ ಸವಲತ್ತುಗಳು ಕಮಲಾ ಹಂಪನಾ ಅವರಿಗೆ ಸಾಧ್ಯವಾಗಿರುವುದು ಕಂಡುಬರುತ್ತದೆ. ಇಂಥ ಸಾಧ್ಯತೆಗಳ ಹಿನ್ನೆಲೆಯಲ್ಲಿ ಕೆಲವು ಪ್ರಬಂಧಗಳು ಪ್ರೌಢವಾಗಿವೆ, ಸಂಶೋಧನಾತ್ಮಕವಾಗಿವೆ. ಕಮಲಾ ಹಂಪನಾ ಅನೇಕ ವರ್ಷಗಳಿಂದ ಕನ್ನಡ ಉಪನ್ಯಾಸಕಿಯಾಗಿರುವುದರಿಂದ ಪ್ರಾಚೀನ ಸಾಹಿತ್ಯದ ಬಗೆಗೆ ಅಧಿಕೃತವಾಗಿ ಮಾತಾಡುವವರಾಗಿದ್ದಾರೆ. ಇವರ ಬರವಣಿಗೆಯಲ್ಲಿ ಪರಂಪರೆಯ ಅರಿವು ಅಖಂಡವಾಗಿದೆ. ಇದು ಅವರ ಬರಹದ ಶಕ್ತಿಯೂ ಆಗಿದೆ. ಹೀಗಾಗಿ ಈ ಕೃತಿ ಸಾಹಿತ್ಯದ ವಿದ್ಯಾರ್ಥಿಗಳಿಗೆ ನಾನಾ ವಿಷಯಗಳಿಗೆ ಆಕರವಾಗಬಲ್ಲದು. ನಮ್ಮ ಸಾಹಿತ್ಯಕ್ಷೇತ್ರಕ್ಕೆ ಒಬ್ಬ ಲೇಖಕಿಯಿಂದ ಸಂದಿರುವ ಒಂದು ಗಮನಾರ್ಹ ಕೊಡುಗೆ 'ಬಾಸಿಂಗ' ಎಂದರೆ ತಪ್ಪಾಗಲಾರದು.

•

ಬಾಸಿಂಗ

ಎಚ್. ಎಸ್. ಪಾರ್ವತಿ

ಕಥಾಸಾಹಿತ್ಯದಲ್ಲಷ್ಟೇ ಕನ್ನಡ ಲೇಖಕಿಯರ ತಲೆ ಅಥವಾ ಲೇಖನಿ ಓಡುತ್ತದೆ ಎನ್ನುವ ಅಭಿಪ್ರಾಯ ಸಾಹಿತ್ಯ ಪ್ರಪಂಚದಲ್ಲಿ ದಟ್ಟವಾಗಿ ತುಂಬಿರುವಾಗಲೂ ಪ್ರಬಂಧರಚನೆಗೆ, ವಿಮರ್ಶೆಗೆ, ಸಂಶೋಧನೆಗೆ ತಮ್ಮ ಹೆಚ್ಚಿನ ಸಮಯವನ್ನು ಮುಡುಪಿಟ್ಟ ಲೇಖಕಿಯರು ಕೆಲವರಾದರೂ ಇದ್ದಾರೆ ಎಂಬುದು ನಮಗೆಲ್ಲ ಹೆಮ್ಮೆಯ ವಿಚಾರ. ಅಂತಹ ವಿರಳ ಲೇಖಕಿಯರಲ್ಲಿ ಪ್ರೊಫೆಸರ್ ಕಮಲಾ ಹಂಪನಾ ಮುಖ್ಯರು.

ಅವರ ಇತ್ತೀಚಿನ ಲೇಖನ ಸಂಗ್ರಹ 'ಬಾಸಿಂಗ'. ಸುಂದರವಾದ ಶೀರ್ಷಿಕೆಯನ್ನು ಹೊತ್ತ ಈ ಸಂಕಲನದಲ್ಲಿ ಒಟ್ಟು ೨೦ ಲೇಖನಗಳಿವೆ. ತುಂಬಾ ಉತ್ತಮ ಲೇಖನಗಳೊಂದಿಗೇ ಕೆಲವು ಸಾಧಾರಣ ಬರಹಗಳೂ ಈಪುಸ್ತಕದಲ್ಲಿ ಸೇರಿಕೊಂಡಿವೆ ಎಂಬುದನ್ನು ಹೇಳಲೇ

ಬೇಕಾಗುತ್ತದೆ. 'ಶರತ್‌ಚಂದ್ರರ ಕೆಲವು ಹೆಜ್ಜೆ ಗುರುತುಗಳು', 'ಶರತ್ ಚಂದ್ರರ ಪ್ರಧಾನ ಸ್ತ್ರೀ ಪಾತ್ರಗಳು', 'ರಾಷ್ಟ್ರಕವಿ ಗೋವಿಂದ ಪೈ ವಾಙ್ಮಯ', 'ಡಾ॥ ಕಂಬಾರರ ಸಿಂಗಾರೆವ್ವ ಮತ್ತು ಅರಮನೆ', 'ಸಂಚಿ ಹೊನ್ನಮ್ಮ ಮತ್ತು ಹೆಳವನಕಟ್ಟೆ ಗಿರಿಯಮ್ಮ', 'ಕನ್ನಡ ಸಾಹಿತ್ಯದಲ್ಲಿ ಜೈನ ಕವಿಯತ್ರಿ ಯರು', 'ಮೂರನೇ ಮಂಗರಸ: ಒಂದು ಸಮೀಕ್ಷೆ', 'ಅಗ್ನಿವರ್ಣ', 'ನವ್ಯೋತ್ತರ ಕನ್ನಡ ಕಾವ್ಯ'—ಈ ಲೇಖನಗಳು ಶ್ರೀಮತಿ ಕಮಲಮ್ಮನವರ ವಿಮರ್ಶನ ಶಕ್ತಿಗೆ ಸಾಕ್ಷಿಯಾಗಿವೆ.

'ತೆಲುಗು ಸಾಹಿತ್ಯ' ತೆಲುಗಿನ ಖ್ಯಾತ ಪತ್ರಿಕೋದ್ಯಮಿ, ಲೇಖಕ ವೆಂಕಟೇಶ್ವರರಾವ್ ನಾರ್ಲ ಅವರ ವಿಮರ್ಶೆಯ ಅನುವಾದ. ತೆಲುಗಿನ ಲೇಖಕಿಯರ, ಮುಖ್ಯವಾಗಿ ಆರನೆಯ ದಶಕದ ಬರಹಗಾರ್ತಿಯರ ಪರಿಚಯ ಮಾಡಿಕೊಡುವ ಈ ಲೇಖನ ಉಪಯುಕ್ತವಾಗಿದೆ.

'ಕನ್ನಡದಲ್ಲಿ ಜೀವನಚಿತ್ರಗಳು' ಜೀವನಚರಿತ್ರೆ ಹೇಗಿರಬೇಕು, ಕನ್ನಡದ ಕೆಲವು ಹಳೆಯ ಜೀವನಚರಿತ್ರೆಗಳ ವಿವರ ಮುಂತಾದ ಮಾಹಿತಿಗಳಿಂದ ಓದುಗರ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದೆ. ಆದರೆ ಲೇಖನ ಅಪೂರ್ಣ ಎನ್ನಿಸುತ್ತದೆ. ಚಿಕ್ಕ ಚಿಕ್ಕ ಹೊತ್ತಿಗೆಗಳಾದರೂ ಮಕ್ಕಳಿಗೆ ಮಹಾಚೇತನಗಳ ಪರಿಚಯ ಮಾಡಿಕೊಡುವ ಭಾರತ–ಭಾರತಿ ಪುಸ್ತಕ ಸಂಪದ, ಇಂಡಿಯನ್ ಬುಕ್ ಹೌಸ್ ಪ್ರಕಟಿಸಿರುವ ಜೀವನ ಚಿತ್ರಗಳು ಇವುಗಳನ್ನು ಲೇಖಕಿಯುವರು ಜೀವನ ಚರಿತ್ರೆಗಳೆಂದು ಸ್ವೀಕರಿಸದಿರುವುದಕ್ಕೆ ಕಾರಣ ತಿಳಿಯುವುದಿಲ್ಲ. ಸ್ವತಃ ಕನ್ನಡ ಸಾಹಿತ್ಯ ಪರಿಷತ್ತು ನಾಡು ನುಡಿಗಾಗಿ ಸೇವೆ ಸಲ್ಲಿಸಿರುವ ಅನೇಕ ಜನ ಮಹಿಳೆಯರ, ಮಹನೀಯರ ಜೀವನ ಚರಿತ್ರೆಗಳನ್ನು ಬರೆಸಿ ಪ್ರಕಟಿಸಿದೆ. ಲೇಖನದಲ್ಲಿ ಇವುಗಳ ಬಗ್ಗೆಯೂ ಉಲ್ಲೇಖವಿಲ್ಲ. ಸಂಭಾವನಾ ಗ್ರಂಥ ಗಳಲ್ಲಿಯೂ ಆಯಾ ವ್ಯಕ್ತಿಯ ಜೀವನಚರಿತ್ರೆ ವಿಪುಲವಾಗಿ ದೊರೆಯುತ್ತದೆ ಎನ್ನುವ ಲೇಖಕಿಯರು ಸ್ವತಃ ತಾವು ಕೂಡಾ ಲೇಖನ ಬರೆದಿರುವ ತಿರುಮಲೆ ರಾಜಮ್ಮನವರಿಗೆ ಅರ್ಪಿಸಿರುವ 'ಭಾರತಿ' ಸಂಭಾವನ ಗ್ರಂಥವನ್ನು, ಜಯದೇವಿ ತಾಯಿ ಲಿಗಾಡೆ ಅವರಿಗೆ ಅರ್ಪಿಸಿರುವ ಸಂಭಾವನಾ ಗ್ರಂಥವನ್ನು ಮರೆತಿರುವುದು ಸೋಜಿಗವಾಗಿದೆ. ಹಾಗೆಯೇ ಅದೇ ರೀತಿ ಕನ್ನಡ ಭಾಷೆ ಯನ್ನು ಜನಸಾಮಾನ್ಯರಿಗೆ ತಲುಪಿಸಲು ಮುಖ್ಯ ಕಾರಣರಾದ ಅ.ನ.ಕೃ. ಅವರ 'ಬರಹಗಾರನ ಬದುಕು' ಪುಸ್ತಕವೂ ಲೇಖಕಿಯರ ದೃಷ್ಟಿಯಿಂದ ದೂರವಾಗಿದೆ.

'ಬಾಸಿಂಗ'ದ ಕೆಲವು ಲೇಖನಗಳಲ್ಲಿ ಇಂತಹ ಅಪೂರ್ಣತೆ ಇರಬಹುದು, ಕೆಲವು ಲೇಖನಗಳು ಭಾಷಣದ ನೇರ ರೂಪವಾಗಿರಬಹುದು, ಕೆಲವು ಸಂಕಲದಲ್ಲಿ ಬರಲೇಬೇಕಾಗುತ್ತೆ ಎನ್ನುವ ಪ್ರಶ್ನೆ ಮೂಡಿಸುವ ಒಂದೇ ಪುಟದ ಲೇಖನಗಳೂ ಇರಬಹುದು. ಆದರೆ ಇಂತಹವುಗಳನ್ನು ಬಿಟ್ಟು ಮಿಕ್ಕ ಪ್ರೌಢ ಲೇಖನಗಳು ಹಾಗೂ ಅನೇಕ ವಿಚಾರಗಳಲ್ಲಿ ಲೇಖಕಿ ತಳೆದಿರುವ ಸ್ಪಷ್ಟ ನಿಲವು ಚಿಂತನೆಯ ಮಾರ್ಗ ತೆರೆಯುತ್ತದೆ. ಉದಾಹರಣೆಗೆ :

"ಇವರ (ಶರಚ್ಚಂದ್ರ) ಸಾಮ್ಯವಾದ ವರ್ಗಭೇದವನ್ನು ಒಪ್ಪಿಕೊಂಡಿಲ್ಲ. ಮನುಷ್ಯ ಮನುಷ್ಯನನ್ನು ಪೀಡಿಸುವುದನ್ನು, ತುಳಿಯುವುದನ್ನು, ದೌರ್ಜನ್ಯ, ದಬ್ಬಾಳಿಕೆ ಮತ್ತು ದಲಿತರ ರಕ್ತಶೋಷಣೆಯನ್ನು ಇವರು ಸಕಾರಣವಾಗಿ ಎದುರಿಸಿದವರು. ಮಾನವ ಮಾನವರ ನಡುವೆ ವೈಷಮ್ಯವನ್ನು ನಿರಾಕರಿಸಿದವರು. ಮಾನವೀಯತೆಯ ಮೂಲವನ್ನು ಬೆನ್ನುಹತ್ತಿದವರು. ಆದರಿಂದ ಧನಿಕ–ನಿರ್ಗತಿಕ, ಮೇಲು–ಕೀಳು, ಪ್ರತಿಷ್ಠಿತ–ಪತಿತ, ಉತ್ತಮ ಸ್ತ್ರೀ ಪುರುಷ–ಭ್ರಷ್ಟ ಸ್ತ್ರೀ ಪುರುಷ ಎಂಬಂಥ ವರ್ಗೀಕರಣವನ್ನು ಅವರು ಮಾನ್ಯ ಮಾಡುವುದಿಲ್ಲ....ಜೀವನದ ವಿಶೇಷ ಅಭಿಜ್ಞತೆಯನ್ನು ಪಡೆದಿದ್ದ ಶರತ್ ಚಂದ್ರರ ಕಣ್ಣಿಗೆ, ಹೃದಯಕ್ಕೆ ಹೆಣ್ಣು ದುರ್ಬಲಳೆನಿಸಲಿಲ್ಲ, ಚಂಚಲಚಿತ್ತಳೆನಿಸಲಿಲ್ಲ. ಆಕೆ ಸಂಯಮಿಯಾಗಿ ತೇಜಸ್ವಿಯಾಗಿ ತೋರಿದಳು. ಇದೇ ರೀತಿ ದಲಿತರ ಬಗೆಗೂ ಅವರ ಅಸೀಮ ಸಾಚಾ ಪ್ರೇಮ ವ್ಯಕ್ತವಾಗಿದೆ. ಸಾಮಾನ್ಯರ, ಕೂಲಿಗಾರರ, ಹಳ್ಳಿಗರ ಕಷ್ಟ ಸುಖಗಳಿಗೂ ಅವರು ಸಮರ್ಥ ಕೊರಳಾದರು."

(ಶರತ್‌ಚಂದ್ರರ ಕೆಲವು ಹೆಜ್ಜೆ ಗುರುತುಗಳು, ಪು. 33-34)

"ಶರತ್‌ರು ತಮ್ಮ ಅನುಭವವನ್ನು ಹಸಿಹಸಿಯಾಗಿ ಬರವಣಿಗೆಯಲ್ಲಿ ಸುರಿಯಲಿಲ್ಲ. 'ಜೀವನದ ಪ್ರತ್ಯಕ್ಷ ಘಟನಾವಳಿಗಳನ್ನು ಹಾಗೆಯೇ ಸಾಹಿತ್ಯದಲ್ಲಿ ತುಂಬಿಸಿಡುವುದು ಸರಿಯಲ್ಲ. ಆದರೆ ಸಾಹಿತ್ಯದ ನಿರ್ಮಾಣಕ್ಕೆ ಅವು ಅಡಿಗಲ್ಲುಗಳಾಗಿ ಪರಿಣಮಿಸುತ್ತವೆ ಅಷ್ಟೆ'—ಎಂದು ಅವರೇ ಹೇಳಿದ್ದಾರೆ. ಹೀಗೆ ದಕ್ಕಿದ ಅನುಭವ ಕಲಾಕೃತಿಗಳಾಗಿ ಅವರ ಕೈಯಲ್ಲಿ ರೂಪಿತವಾಗಿವೆ."

(ಅದೇ, ಪು. 34)

"ಅಂತರಂಗವೇ ಶರತ್‌ಚಂದ್ರರ ಕಾದಂಬರಿಗಳ ಕೇಂದ್ರ. ಅಂತರಂಗದ ಪದರುಗಳನ್ನು ಬಿಡಿಸುವುದರಲ್ಲಿ ಅವರು ನಿಸ್ಸೀಮರು. ಮಾನವೀಯತೆಯನ್ನು ಅವರ ಎಲ್ಲ ಕೃತಿಗಳಲ್ಲಿ ಒಂದಿಲ್ಲೊಂದು ರೂಪದಲ್ಲಿ ಕಾಣುತ್ತೇವೆ. ಅವರು ಮಾನವನಿಗಾಗಿ ಹೋರಾಡಿದವರು ; ಸಾಹಿತ್ಯ ಬರೆದವರು, ಕಲೆಗಾಗಿ ಕಲೆ

ಎಂದು ನಂಬಿದವರಲ್ಲ. ಇಂಥ ಒಂದು ತೀವ್ರ ಪ್ರಾಮಾಣಿಕತೆ ಅವರಲ್ಲಿದ್ದು ದರಿಂದ ಅವರು ಬಂಗಾಳದ ಗಡಿಗಳನ್ನು ದಾಟಿ ಭಾರತದ ನಾಡಿ ಮಿಡಿತವನ್ನು ಹಿಡಿದು ನೋಡಲು ಸಾಧ್ಯವಾಯಿತು."

(ಅದೇ, ಪು. 36)

"ಈ ನಿಟ್ಟಿನಿಂದ ನೋಡಿದಾಗ ಶರತ್‌ಚಂದ್ರರು ತಮ್ಮ ಸಮಕಾಲೀನರಿಗಿಂತ ಅರ್ಧ ಶತಮಾನ ಮುಂದಿದ್ದರು. ಆದ್ದರಿಂದಲೇ ಏನೋ ಅವರ ಸಾಹಿತ್ಯ ಅಂದಿಗಿಂತ ಇಂದು ಹೆಚ್ಚು ಔಚಿತ್ಯಪೂರ್ಣವಾಗಿದೆ."

(ಅದೇ, ಪು. 37)

"ಭಾರತದ ನಾರೀ ಸಮುದಾಯವನ್ನು ಒಂದು ಹೊಸ ದೃಷ್ಟಿಕೋನ ದಿಂದ ನೋಡಿ, ಹೆಣ್ಣಿನ ಬಗ್ಗೆ ಸಮಾಜದ ಕಣ್ಣು ತೆರೆಸಿದ ಶರತ್‌ರು ಭಾರತೀಯ ಸ್ತ್ರೀ ಪರಂಪರೆಯಿಂದ ವಿಶೇಷ ರೀತಿಯ ಕೃತಜ್ಞತೆಗೆ ಪಾತ್ರರಾಗಿದ್ದಾರೆಂದರೆ ಅತಿಶಯೋಕ್ತಿಯಲ್ಲ."

(ಶರತ್‌ಚಂದ್ರರ ಪ್ರಧಾನ ಸ್ತ್ರೀ ಪಾತ್ರಗಳು, ಪು. 48)

"ಒಂದು ಕೃತಿ ನಿಜವಾಗಿಯೂ ಮಹತ್ವದ ಕೃತಿಯಾಗಿದ್ದರೆ, ಸತ್ವಶಾಲಿ ಯಾದ ಕಲಾಕೃತಿಯಾಗಿದ್ದರೆ ಎಲ್ಲ ಕಾಲಕ್ಕೂ ಬೆಲೆ ಕಟ್ಟಿಸಿಕೊಳ್ಳುತ್ತ ಹೋಗು ತ್ತದೆ. ಹೀಗೆ ಕಾಲದ ಪರೀಕ್ಷೆಯಲ್ಲಿ ಗೆದ್ದು ನಿಲ್ಲಬಲ್ಲ ಸಾಹಿತ್ಯ ಕೃತಿಗಳು ದಲಿತ ಸಾಹಿತಿಗಳಿಂದ ಇನ್ನೂ ರಚನೆಯಾಗಬೇಕಾಗಿದೆ."

(ದಲಿತ ಸಾಹಿತ್ಯ, ಪು. 58)

"ದಲಿತ ಸಾಹಿತ್ಯ ಏಕಕಾಲದಲ್ಲಿ ಬಹಳ ಮುಖ್ಯವಾಗಿ ಎರಡು ಕರ್ತವ್ಯ ಗಳನ್ನು ನಿರ್ವಹಿಸಬೇಕಾಗಿದೆ. ಒಂದು, ಪುರೋಹಿತಶಾಹಿ ಲೇಖಕರಿಂದ ಹಾಗೂ ಸಾಮಾಜಿಕವಾಗಿ ದಲಿತರಿಗೆ ಆಗುತ್ತಿರುವ ಶೋಷಣೆಯನ್ನು ಎತ್ತಿ ತೋರಿಸುವುದು. ಎರಡನೆಯದು, ದಲಿತರನ್ನು ಎಚ್ಚರಿಸಿ ಕಾರ್ಯೋನ್ಮುಖ ರಾಗುವಂತೆ ಮಾಡುವುದು."

(ದಲಿತ ಸಾಹಿತ್ಯದ ಧೋರಣೆಗಳು, ಪು. 73)

"ದಲಿತ–ಬಂಡಾಯ ಕಾವ್ಯ ಎಂದು ಹೇಳುವಾಗ ಕೆಲವರಿಗೆ ಜಾತಿ ನೆಲೆಯ ಮಾತುಗಳೆನಿಸಬಹುದು. ವಾಸ್ತವವಾಗಿ ಅದು ಸರಿಯಲ್ಲ. ದಲಿತರ ಕಾವ್ಯವೆಂದು ಹೇಳುವಾಗ ದಲಿತ ವರ್ಗವೇ ದೃಷ್ಟಿಯಲ್ಲಿರುವುದೆಂಬುದು ನಿಜ. ಆದರೆ ಅದರಲ್ಲಿ ಕೇವಲ ಜಾತಿಯಷ್ಟೇ ಮುಖ್ಯ ಹಾಗೂ ಅಂತಿಮ ಆಗಿರುವು ದಿಲ್ಲ. ಅದರ ಸುತ್ತ ಹತ್ತು ಸಂಗತಿಗಳು ಹೆಣೆದುಕೊಂಡಿರುತ್ತವೆ.........

ಬ್ರಾಹ್ಮಣ ಬರೆದ ಕಾವ್ಯ ಚೆನ್ನಾಗಿದ್ದರೆ ಚೆನ್ನಾಗಿದೆ ಎನ್ನುತ್ತೇವೆ. ಇಲ್ಲವಾದರೆ ಇಲ್ಲ ಎನ್ನುತ್ತೇವೆ. ಅಷ್ಟೇ ಹೊರತು ಅದನ್ನು ಬ್ರಾಹ್ಮಣಕಾವ್ಯ ಎಂದು ಹೇಳುವುದಿಲ್ಲ. ಪಂಪನ ಕಾವ್ಯವನ್ನು ಅದು ಉತ್ಕೃಷ್ಟವೂ ಆಗಿರುವುದರಿಂದ ಶ್ರೇಷ್ಠ ಕಾವ್ಯವೆನ್ನುತ್ತೇವೆಯೇ ಹೊರತು ಜೈನ ಎಂಬ ಕಾರಣಕ್ಕಾಗಿ ಅಲ್ಲ. ದಲಿತ ಬರೆದ ಕಾವ್ಯ ಚೆನ್ನಾಗಿದ್ದರೆ ಕಲಾತ್ಮಕವಾಗಿ ಯಶಸ್ವಿಯಾಗಿದ್ದರೆ ಹಾಗೆ ಹೇಳಬೇಕು. ಅದರ ಹೊರತು ಕೇವಲ ದಲಿತ ಎಂಬ ಕಾರಣಕ್ಕಾಗಿ ಅಲ್ಲ. ನವ್ಯ ಸಾಹಿತ್ಯ ಸಾಯಲು ಕಾರಣ ಅದು ಶ್ರೇಷ್ಠ ಕಾವ್ಯವಾಗಿರಲಿಲ್ಲ ಎಂದೇ ಹೊರತು ಕೇವಲ ನವ್ಯವಾಗಿತ್ತೆಂದಲ್ಲ. ನವ್ಯೋತ್ತರದ ದಲಿತ ಕವಿಗಳೂ ಬಂಡಾಯ ಕವಿಗಳೂ ಇದರಿಂದ ಪಾಠ ಕಲಿಯಬೇಕು."

(ನವ್ಯೋತ್ತರ ಕನ್ನಡ ಕಾವ್ಯ, ಪು. 146–147)

ಕಮಲಾ ಹಂಪನಾ ಅವರ ಇಂತಹ ನಿಲುವುಗಳು ಅವರ ಆರೋಗ್ಯಕರ ಮನೋಭಾವದ ಧೋರಣೆಗೆ ಸಾಕ್ಷಿಯಾಗಿವೆ. ಪುಸ್ತಕದ ಮುದ್ರಣ, ಹೊರಮೈ ಅಂದವಾಗಿದೆ. 'ಬಾಸಿಂಗ' ಎನ್ನುವ ಹೆಸರನ್ನು ಓದಿದ ಕೂಡಲೇ ಇದೊಂದು 'ಕವನ ಸಂಕಲನವೋ' 'ಕಥಾ ಸಂಕಲನವೋ' ಎನ್ನುವ ಭ್ರಮೆಯಾಗುವ ಸಂಭವವೂ ಉಂಟು. ಆದರೆ ಕತೆಯಂತೆಯೇ ಇಲ್ಲಿನ ಲೇಖನಗಳು ಚೆನ್ನಾಗಿ ಓದಿಸಿಕೊಂಡು ಹೋಗುತ್ತವೆ ಎನ್ನುವುದು ತೃಪ್ತಿ ನೀಡುವ ಅಂಶ.

ಕಮಲಾ ಹಂಪನಾ ಅವರಿಂದ ಕನ್ನಡದ ಪ್ರಬಂಧ, ವಿಮರ್ಶೆ, ಸಂಶೋಧನೆಗಳಿಗೆ ಇನ್ನೂ ಹೆಚ್ಚಿನ ಸೇವೆ ಸಲ್ಲಲಿ ಎನ್ನುವುದು ನನ್ನ ಹಾರೈಕೆ.

ಮುಳುಬಾಗಿಲು

ಡಾ॥ ನಿಂಗಣ್ಣ ಸಣ್ಣಕ್ಕಿ

ಭಾರತ ಭೂಮಿಯಲ್ಲಿ ಪುಣ್ಯ ಹಾಗೂ ಪ್ರವಿತ್ರ ಸ್ಥಳಗಳಲ್ಲಿ ಒಂದಾದ, ಆಧ್ಯಾತ್ಮ ಮತ್ತು ಪುಣ್ಯ ಪುರುಷರ ಜೀವನ ಚರಿತ್ರೆಯಿಂದೊಡಗೂಡಿದ ದಾಖಲೆಗಳನ್ನು ಪುರಾಣ, ಇತಿಹಾಸ, ಸಾಂಸ್ಕೃತಿಕ, ಸಾಹಿತ್ಯಾದಿಗಳ ಮೂಲಕ ನಿರ್ಮಿತವಾದ 'ಮುಳುಬಾಗಿಲು' ಓದುಗರಿಗೆ ತಿಳುವಳಿಕೆಯನ್ನುಂಟು ಮಾಡುವ ಪುಸ್ತಕ, ಮಹತ್ವದ ನಿರೂಪಣೆಗಳಿಂದೊಡಗೂಡಿದೆ. ಈ ಮುಳುಬಾಗಿಲು ಕೃತಿಯನ್ನು ಕಮಲಾ ಹಂಪನಾ ೧೯೭೨ರಲ್ಲಿ ರಚಿಸಿರುವರು. ೧೯೭೩ರಲ್ಲಿ ಈ ಕೃತಿಯನ್ನು ಇಂಡಿಯಾ ಬುಕ್ ಹೌಸ್ ಬೆಂಗಳೂರು ಇವರು ಪ್ರಕಟಿಸಿ, ಕರ್ನಾಟಕದ ಗತವೈಭವವನ್ನು ತಿಳಿಯುವುದಕ್ಕೆ ಮಹದುಪಕಾರವನ್ನು ಮಾಡಿದ್ದಾರೆ.

ಮುಳುಬಾಗಿಲು (ಮುಳಬಾಗಿಲು) 'ಆಂಜನಾದ್ರಿ' ಎಂಬ ಐತಿಹಾಸಿಕ

ಹೆಸರನ್ನೂ ಪೌರಾಣಿಕ ಮಹತಿಯನ್ನೂ ನೀಡುವ ಸಚಿತ್ರ ಕೃತಿ. ಪ್ರಾಚೀನ ವಾಗಿ 'ಶತಕವಾಟಪುರಿ' ಹೆಸರಿನಿಂದ ಪೂರ್ವದ ಬಾಗಿಲು (ಮೂಡಲ ಬಾಗಿಲು) ಮುಳಬಾಗಿಲು ಎಂಬುದಾಗಿ ಅಂಜನಾದ್ರಿಗೆ ಕರೆಯುತ್ತಿರುವ ಸತ್ಯ ಸಂಗತಿಯನ್ನು ವಿವರವಾಗಿ ಲೇಖಕಿ ಕಮಲಾ ಹಂಪನಾ ಅವರು ಸಂಶೋಧನೆಯ ಎಳೆಗಳ ಮೂಲಕ ಪ್ರತಿಪಾದಿಸಿರುವುದು ಗಮನಾರ್ಹ ಸಂಗತಿಯೇ ಸರಿ. ವಿಜಯನಗರದ ಇಬ್ಬರು ಅಧಿಕಾರಿಗಳು ಲಕ್ಕಣ್ಣ(ನ್ನ) ದಣಾಯಕ (ದಂಡಿನ ನಾಯಕ) ಮತ್ತು ಮಾದಣ್ಣ(ನ್ನ) ದಣಾಯಕರು (ಪು ೫೧ ರಲ್ಲಿ ವಿವರಿಸಿದಂತೆ) ತಮ್ಮ ಪಟ್ಟಣವನ್ನಾಗಿ ಮಾಡಿ ಕೊಂಡಿರುವ ಐತಿಹಾಸಿಕ ಸತ್ಯ ಕರ್ನಾಟಕದ ಗತವೈಭವ ವಿಜಯನಗರ ಸಾಮ್ರಾಜ್ಯದ ವಿಸ್ತಾರ ನಿಜತ್ವ ಇವೆಲ್ಲ ಕಂಡು ಬರುವವು. ಆದರೆ ಬ್ರಹ್ಮಾಂಡ ಪುರಾಣ ಹಾಗೂ ಐತಿಹ್ಯಗಳನ್ನು ನೋಡುವಾಗ ಅಂಜನಾದ್ರಿಯು ಮೂಡಲ ಬಾಗಿಲು **'ಮುಳುಬಾಗಿಲು'** ಹೆಸರು ಪಡೆದಿರುವುದು ನಿಜ ವಾದರೂ ಈ ಹೆಸರುಗಳ ಮಧ್ಯೆ ಜನಪದರ ಹೆಸರೊಂದು ಕ್ರಮೇಣವಾಗಿ ಹಬ್ಬಿಕೊಂಡು ಅದು ಕಳಚಿಹೋದಂತೆ ಕಂಡುಬರುವುದು. ಶಿಲಾ ಶಾಸನ ವಾಗಲಿ, ತಾಮ್ರ ಶಾಸನಗಳಾಗಲಿ ನಿಜ ಸಂಗತಿಯನ್ನು ತಿಳಿಸಿದರೂ ಸ್ಥಳ ಮಹಾತ್ಮೆಯಲ್ಲಿ ಜನಪದರು ನೀಡಿರುವ ಹೆಸರೊಂದು ಮರೆಯಾಗಿ ರುವ ಸಂಶಯ ಕಂಡುಬರುವುದು. ಅದಾವುದೆಂದರೆ ಶತಕವಾಟಪುರಿ, ಆಂಜನೆಯ ವಾಸದಿಂದಾಗಿ ಅಂಜನಾದ್ರಿಯಾಗಿ (ಅಂಜನಾದೇವಿಯಿಂದಲೂ) ಮೂಡಲ ಬಾಗಿಲು 'ಮುಳುಬಾಗಿಲು' ಆಗಲಿಕ್ಕೆ ಯಾವ ದಿಕ್ಕಿನ ಜನಪದರು ಕರೆದಿರಬಹು ! ಅದೇನೆಂದರೆ ಮೂಡಲ (ಮಾಡು) — ಮುಳ (ಮುಳಗು–ಮುಳಗು) ಎರಡೂ ದಿಕ್ಕಿನ ಹೆಸರನ್ನು ಒಂದೇ ಸ್ಥಳ ಪಡೆದಿರು ವುದಕ್ಕೆ ಜನಪದರ ಐತಿಹ್ಯಗಳೇನಾದರೂ ಇರಬಹುದೇನೋ ಅನ್ನಿಸದೇ ಇರದು. ಕೃತಿಯಲ್ಲಿ ಇನ್ನಷ್ಟು ಈ ಬಗೆಗೆ ವಿಚಾರ ಮೂಡಿ ಬರಬೇಕಾಗಿತ್ತು.

ಕವಿ ಹುಯಿಲಗೋಳ ನಾರಾಯಣರು 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು' ಕಾವ್ಯ ರಚಿಸುವಾಗ 'ಹನುಮ (ಆಂಜನೇಯ) ನುದಿಸಿದ ನಾಡು' ಕನ್ನಡನಾಡು (ಕರ್ನಾಟಕ) ಆಗಿರುವ ಸ್ಥಳ ಯಾವುದು ? ಈ ಸಂಶಯಕ್ಕೆ ಅಥವಾ ಅರಿವಿಗೆ **ಮುಳುಬಾಗಿಲು** ಎಂಬುದು ಸರ್ವರ ಹೃದಯಕ್ಕೆ ತಿಳಿಯುವ ಪರಿಚಯ ಸ್ಪಷ್ಟವಾದ ದಾಖಲೆಗಳಿಂದ ಲೇಖಕಿ ತಿಳಿಸಿ ಮಹದುಪಕಾರವನ್ನು ಮಾಡಿರುವರು.

ಬ್ರಹ್ಮಾಂಡ ಪುರಾಣದಲ್ಲಿ ಅಗಸ್ತ್ಯ, ಕೌಶಿಕ, ಗಾರ್ಗ್ಯ, ಕಣ್ವ, ವಾತ್ಸ್ಯಾಯನ, ಮಾರ್ಕಂಡೇಯ, ಕಪಿಲ, ಮೌದ್ಗಲ್ಯ, ವೈಖಾನಸರು

ಇವರಿಗೆ ಸೂತ ಮಹರ್ಷಿಗಳು ವ್ಯಾಸಮಹರ್ಷಿಗಳು ಅಂಜನಾದ್ರಿ ಮಹಿಮೆಯನ್ನು ತಿಳಿಸಿದ್ದಾರೆ. ಆದೇನೆಂದರೆ — 'ರಾವಣನ ಸಂಹಾರಕ್ಕಾಗಿ ಶ್ರೀಹರಿಯ ಅವತಾರ ತಾಳುವೆನೆಂದೂ ಹೇಳಿ, ದೇವತೆಗಳಿರಾ ನೀವು ಈ ಕಾರ್ಯಕ್ಕಾಗಿ ನಿಮ್ಮ ಶಕ್ತಿಯಿಂದ ಬಲಿಷ್ಟವಾದ ಮಕ್ಕಳನ್ನು ಸೃಷ್ಟಿಸಿರಿ' (ಪು. ೧೦) ಎಂದು ಅಭಯ ನೀಡಿದಾಗ ವಾಯುವು ವಾನರ್ ಕೇಸರಿಯ ಮಡದಿಯಾದ ಅಂಜನಾದೇವಿಯಲ್ಲಿ ಬಲಶಾಲಿ ಬುದ್ಧಿಶಾಲಿಯಾದ ಹನುಮಂತನನ್ನು ಸೃಜಸಿದನು. ಯಾವ ಶ್ರೇಷ್ಠವಾದ ಪರ್ವತದಲ್ಲಿ ಶ್ರೀರಾಮನ ಬಂಟನಾದ ಆಂಜನೆಯನು ಹುಟ್ಟಿದನೋ ಆ ಪರ್ವತಕ್ಕೆ ಆಂಜನೇಯಾದ್ರಿ ಎಂದೂ ತಾಯಿ ಅಂಜನಾದೇವಿ ವಾಸ ಮಾಡಿದ್ದರಿಂದ ಋಷಿಗಳು ಈ ಸ್ಥಳಕ್ಕೆ ಅಂಜನಾದ್ರಿ ಎಂದೇ ಕರೆದರು (ಪುಟ. ೧೨).

ಹನುಮಂತ (ಆಂಜನೆಯ) ಭೂತ, ಪಿಶಾಚಿ, ದುಷ್ಟ ಶಕ್ತಿಗಳನ್ನು ತನ್ನ ದೃಷ್ಟಿ ಬೀರಿ ದೂರವಿಟ್ಟಿರುವ ಸಂಗತಿಗಳನ್ನೂ ಜನತೆಯು ಈಗಲೂ ನಂಬಿರುವರು. ಹನುಮಂತನ ಪಾದಧೂಳಿ ಎಂದರೆ, ಈ ಶಕ್ತಿಗಳು ದೂರ ಹೋಗಿ ಅಡಗುವವು ಇಲ್ಲವೆ ಸಾವನ್ನಪ್ಪುವವು ಎಂಬುದಕ್ಕೆ ಆಂಜನೇಯನ ಗುಡಿಯ ಎದುರಿಗೆ ಈಗಲೂ ಚರ್ಮದ ಪಾದುಕೆಗಳನ್ನು ತೂಗು ಹಾಕಿರುವ ಸಂಕೇತವೇ ಸಾಕು. ಜನಪದರ ಈ ನಂಬಿಕೆಯು ವಿಜ್ಞಾನ ಹಾಗೂ ಮನೋವಿಜ್ಞಾನಕ್ಕೆ ಸವಾಲು ಎಸಗುವಂತಿದೆ. ಹನುಮಂತನ ಚಿತ್ರ (ಭಾವಚಿತ್ರ) ಸಂಕೇತಗಳನ್ನು ನೋಡಿ ನೀಚ ಶಕ್ತಿಗಳು ದೂರ ಅಡಗುವವು ಎಂಬ ಈ ನಂಬಿಕೆಗೆ 'ಅರ್ಜುನನ ರಥದಲ್ಲಿ ಆಂಜನೆಯ ನಿಶಾನೆ (ಧ್ವಜ) ಇರುವುದು. ಬಳಿಕ ನಿಶಾನೆ ತೆಗೆದಾಗ ರಥ ಭಸ್ಮವಾಗುವುದು, ಈ ಸಂಗತಿಯನ್ನು ಶ್ರೀಕೃಷ್ಣನೇ ಅರ್ಜುನನಿಗೆ ತಿಳಿಸಿರುವುದು' ಬಹು ಮಹತ್ವದ ಕಾವ್ಯ ಕಥಾ ತರ್ಕವಾಗಿದೆ. ಅಲ್ಲದೆ ಆಗಿನ ಕಾಲದಲ್ಲಿ ಎಂತಹ ಶಸ್ತ್ರಗಳ ಆಟ ಹನುಮಂತನಿದ್ದಲ್ಲಿ ನಡೆದಿಲ್ಲ ಎಂಬ ಭಾವನೆ ಸ್ಪಷ್ಟವಾಗಿ ಅರ್ಜುನನ ರಥದಿಂದ ತಿಳಿದು ಬರುವುದು.

ಮುಳುಬಾಗಿಲಿನ 'ಅಂಜನಾದ್ರಿ'ಯು ಬೆಟ್ಟದಿಂದ ಆವೃತವಾದ ಸ್ಥಳ. ಅಲ್ಲದೆ ವೀರಾಂಜನೆಯಸ್ವಾಮಿಯ ದೇವಾಲಯ, ವೀರಾಂಜನೆಯಸ್ವಾಮಿಯ ಮೂರ್ತಿ, ಶ್ರೀ ವೆಂಕಟರಮಣ ಮೂರ್ತಿ, ಶ್ರೀ ಗೋವಿಂದಸ್ವಾಮಿ ಮೂರ್ತಿ, ಆವಾಂತರದ ಆಂಜನೇಯ, ತೋಡರಮಲ್ಲ ದಂಪತಿಗಳ ಮೂರ್ತಿಗಳು, ಶ್ರೀ ನರಸಿಂಹತೀರ್ಥ, ಶ್ರೀ ಪಾದರಾಯರ ಬೃಂದಾವನ, ಶ್ರೀ ವಿಠಲ ನಾರಾಯಣ ಸ್ವಾಮಿ, ಶ್ರೀ ಪ್ರಸನ್ ಸೋಮೇಶ್ವರ ದೇವಾಲಯ, ಸೋಮೇಶ್ವರಲಿಂಗ. ಶ್ರೀ ಷಣ್ಮುಖ,·ರಣಭೇರಿಯಮ್ಮ, (ಸಂಕೇತಮೂರ್ತಿ)

ಮುಂತಾದ ಮೂರ್ತಿಗಳು ಅವುಗಳನ್ನು ಇಟ್ಟಿರುವ ಸ್ಥಳ ವಿನ್ಯಾಸಗಳು ನಮ್ಮ ಗತವೈಭವಕ್ಕೆ, ಸಂಸ್ಕೃತಿಗೆ, ಕಲೆಗೆ ಸಾಕ್ಷಿಯಾಗಿ ನಿಂತಿರುವುದನ್ನು ಕಮಲಾ ಹಂಪಾನಾ ಅವರು ಸಚಿತ್ರ ನೀಡಿ ಕ್ರಮಬದ್ಧವಾಗಿ ತಿಳಿಸಿದ್ದಾರೆ.

ಲೇಖಕಿ ಭಾರತೀಯರ ವಿವಿಧ ಧರ್ಮಗಳ ನೆಲೆಯೂ ಮುಳುಬಾಗಿಲು ಎಂಬುದು ಸತ್ಯ ಘಟನೆಗಳ ಐತಿಹಾಸಿಕ ದಾಖಲೆಗಳಿಂದ, ಪೌರಾಣಿಕ ಸಂಕೇತಗಳಿಂದ ವಿವರಿಸಿದ್ದಾರೆ. ಈ ಭೂಮಿಯು ಅನ್ಯ ಧರ್ಮೀಯರಿಗೆ ಆಶ್ರಯ ನೀಡಿರುವ ಕುರುಹು ಇಲ್ಲೊಂದು ಇದೆ. ಮಹಮ್ಮದಿಯರಿಗೆ ಪವಿತ್ರಸ್ಥಳವಾಗಿ ಹಜರತ್‌ಬಾಬ ಹೈದರವಾಲಿ ಸಂತನದರ್ಗ ಇಲ್ಲಿದೆ. ಬಹು ಪ್ರಖ್ಯಾತಿಗೊಂಡಿರುವ ಈ ದರ್ಗಾಕ್ಕೆ ಭಾರತದ ಅನೇಕ ಭಾಗಗಳಿಂದ ಮುಸಲ್ಮಾನರು ಆಗಮಿಸಿ ತಮ್ಮ ಸೇವೆಯನ್ನು ಸಲ್ಲಿಸುವುದರ ಜೊತೆ–ಮುಳುಬಾಗಿಲನ್ನೂ ನೆನೆಯುತ್ತಾರೆ.

ಮುಳುಬಾಗಿಲಿಗೆ ಸಮೀಪವಾಗಿರುವ ಕೂಟಮಲೆ ಅಥವಾ ಕುರುಡುಮಲೆಯಲ್ಲಿ ಮಹಾಗಣಪತಿಯ ಮಹಿಮೆ ಪ್ರಸಿದ್ಧವಾಗಿದೆ. ತ್ರೇತಾಯುಗದಲ್ಲಿ ಶ್ರೀರಾಮಚಂದ್ರನೂ ದ್ವಾಪಾರ ಯುಗದಲ್ಲಿ ಪಾಂಡವರೂ ಈ ಮಹಾ ಗಣಪತಿಯನ್ನು ಪೂಜಿಸಿ ಜಯಗಳಿಸಿದರೆಂಬ ಜನಪದ ಹೇಳಿಕೆಗಳು ದಿನಾ ದಿನಾ ಬಲಿಷ್ಠವಾಗುತ್ತಿವೆ. ಮತ್ತೊಂದು ದೇವಾಲಯ ಶ್ರೀ ಸೋಮೇಶ್ವರನದು ಇದೆ. ಡಂಕಣಾಚಾರಿಯು ಈ ಗುಡಿಯ ಶಿಲ್ಪವನ್ನು ನಿರ್ಮಾಣ ಮಾಡಿದನೆಂಬ ಪ್ರತೀತಿಯೂ ಇರುವುದಾಗಿ ತಿಳಿದು ಬಂದಿದೆ. ಅಲ್ಲಿಯೇ ಸಮೀಪವಾಗಿರುವ ಶ್ರೀರಾಮೇಶ್ವರ ದೇವಾಲಯ, ಶ್ರೀ ವಾಲ್ಮೀಕಿ ಋಷಿಗಳ ಆಶ್ರಮದ ಕುರುಡು, ಸೀತಾದೇವಿಯು ಶ್ರೀರಾಮನಿಗೂ ಲವಕುಶರಿಗೂ ನಡೆದ ಯುದ್ಧವನ್ನು ನಿರೀಕ್ಷಿಸಿದ ಬಂಡೆಗಲ್ಲು, ಶ್ರೀ ವಿರೂಪಾಕ್ಷ ದೇವಾಲಯ ವಿರೂಪಾಕ್ಷಿ ಇವೆಲ್ಲವೂ ಮುಳುಬಾಗಿಲಿನ ದಕ್ಷಿಣಕ್ಕೆ ಆವಂತಿಗಿರಿ ಹೆಸರು ಪಡೆದುಕೊಂಡಿವೆ. ಶ್ರೀ ವಾಲ್ಮೀಕಿ ಆಶ್ರಮದಲ್ಲಿ ರಾಮಲಿಂಗೇಶ್ವರ, ಲಕ್ಷ್ಮಣ, ಭರತ, ಶತ್ರುಘ್ನ, ಸುಗ್ರೀವ ಮುಂತಾದವರೆಲ್ಲ ಶಿವಾರ್ಚನೆ ಮಾಡಿದ ಐತಿಹ್ಯಗಳು ಇಲ್ಲಿ ಸಾಕ್ಷಿಯಾಗಿರುವವು. ವಿಜಯನಗರದ ಶ್ರೀಕೃಷ್ಣದೇವರಾಯನ ಕಾಲದಲ್ಲಿ ಮಹತ್ವ ಪಡೆದ ಈ ಮುಳುಬಾಗಿಲು ತಿರುಪತಿಯ ತಿಮ್ಮಪ್ಪನಿಗೂ ಇತಿಹಾಸಕ್ಕೂ ಹಾಸು ಹೊಕ್ಕಾಗಿರುವ ಸಾಂಸ್ಕೃತಿಕ ಮಹತ್ವವನ್ನು ಕರ್ನಾಟಕ ಪಡೆದುಕೊಂಡಿರುವುದು ಗಮನಾರ್ಹ ವಿಷಯವಾಗಿದೆ.

'ಮುಳುಬಾಗಿಲು' ಓದಿಸಿಕೊಂಡು ಹೋಗುವ ಮನೋಜ್ಞ ಕೃತಿಯಾಗಿದೆ. ಮುಳುಬಾಗಿಲಿನ ಚರಿತ್ರೆಯ ಕೈಪಿಡಿಯೂ ಆಗಿರುವ ಸುಕೃತಿಯಾ ಆಗಿದೆ.

ಈ ಕೃತಿಯು ಸಾಂಸ್ಕೃತಿಕ ಸಂಶೋಧನೆಯನ್ನು ತಿಳಿಸುವುದರಿಂದ ಕಮಲಾ ಹಂಪನಾ ಅವರ ಶೈಲಿಯೂ ಸುಗಮ ಮಾರ್ಗದ್ದೆಂಬ ನಿದರ್ಶನವೂ ತುಂಬಿ ಬಂದಿದೆ.

ನಕ್ಕಿತು ಹಾಲಿನ ಬಟ್ಟಲು

ರಂಗಾರೆಡ್ಡಿ ಕೋಡಿರಾಂಪುರ

'ನಕ್ಕಿತು ಹಾಲಿನ ಬಟ್ಟಲು' ಕಥಾ ಸಂಗ್ರಹದಲ್ಲಿ ಹನ್ನೆರಡು ಕತೆಗಳಿವೆ. ಇದಕ್ಕೆ 'ಸೇಸೆ'ಯನ್ನು ಬರೆದ ಮಾಸ್ತಿಯವರು 'ಸಾಹಿತ್ಯ ಸಮಗ್ರವಾಗಬೇಕಾದರೆ ಅದರಲ್ಲಿ ಸ್ತ್ರೀಯರು ಒಂದು ಭಾಗವನ್ನು ನಿರ್ಮಿಸುವ ಹೊರೆ ಹೊರಬೇಕು. ಸ್ತ್ರೀಯ ವಿಷಯ ಸ್ತ್ರೀಗೆ ತಿಳಿದಂತೆ ಪುರುಷನಿಗೆ ತಿಳಿಯಲಾರದು, ಸ್ತ್ರೀ ಅದನ್ನು ಹೇಳುವಂತೆ ಪುರುಷ ಹೇಳಲಾರನು. ಬೇರೆ ಯಾವ ಕಾರಣದಿಂದ ಅಲ್ಲದಿದ್ದರೂ ಈ ಒಂದು ಕಾರಣಕ್ಕಾಗಿ ಸ್ತ್ರೀಯರು ಸಾಹಿತ್ಯ ನಿರ್ಮಾಣ ಮಾಡಬೇಕು' ಎಂದಿದ್ದಾರೆ. ಪುರುಷ ಪ್ರಧಾನವಾದ ಭಾರತೀಯ ಸಾಮಾಜಿಕ ಪರಿಸರದಲ್ಲಿ ಮಹಿಳೆಯರು ಅದರಲ್ಲೂ ದಲಿತ ಸಾಹಿತ್ಯ ವರ್ಗಕ್ಕೆ ಸೇರಿದ ಮಹಿಳೆಯೊಬ್ಬರು ಯಜಮಾನ ಸಂಸ್ಕೃತಿಯ ಹಿಡಿತದಲ್ಲಿರುವ ಸಾಹಿತ್ಯ ಕ್ಷೇತ್ರದಲ್ಲಿ ಯಶಸ್ಸನ್ನು ಸಾಧಿಸುವುದು ಸಾಹಸವೇ ಸರಿ.

ಈ ಕಥಾಸಂಕಲನ ಎಪ್ಪತ್ತರ ದಶಕದಲ್ಲಿ ಪ್ರಕಟಗೊಂಡಿದೆ. ಆ ಕಾಲ ವ್ಯಕ್ತಿಯ ಅಂತರಂಗದ ತಳಮಳಗಳನ್ನು, ಆತ್ಮರತಿಯ ಗೊಂದಲವನ್ನು ತೀರ ವೈಯಕ್ತಿಕ ಮಟ್ಟದಲ್ಲಿ ದಾಖಲೆಗೊಳಿಸುವಂಥ ನವ್ಯ ಚಳುವಳಿಯ ಆರಂಭವಾಗಿತ್ತು. ಮಡಿವಂತಿಕೆ, ಪಾವಿತ್ರ್ಯ, ಸಂಪ್ರದಾಯಗಳನ್ನು ವಿರೋಧಿಸುವ ಮನೋಭಾವ ಗರಿಗಟ್ಟಿಕೊಳ್ಳತೊಡಗಿತ್ತು. ಆ ಸಂದರ್ಭದಲ್ಲಿ ಬರಹಗಾರರೆಲ್ಲ ಒಂದಲ್ಲ ಒಂದು ರೀತಿ ಈ ಪ್ರಭಾವಕ್ಕೆ ಒಳಗಾಗುತ್ತಿದ್ದರು. ತಮ್ಮ ಬರವಣಿಗೆಯಲ್ಲಿ ಇಂಥ ಹುಸಿತನಗಳನ್ನು ವಿರೋಧಿಸುವ ಲೇಖಕರು ತೀರ ವೈಯಕ್ತಿಕ ನೆಲೆಯಲ್ಲಿ, ಕೌಟುಂಬಿಕ ಪರಿಸರದಲ್ಲಿ ಸಂಪ್ರದಾಯ, ಮಡಿವಂತಿಕೆಗಳನ್ನು ಮೀರುತ್ತಿರಲಿಲ್ಲ. ಇಂಥ ವಿರೋಧಾಭಾಸದ ನವ್ಯ ಲೇಖಕರ ಅಬ್ಬರದಲ್ಲಿ ಕಮಲಾ ಹಂಪನಾ ಅವರು ತಮ್ಮದೇ ಆದ ಶೈಲಿಯಲ್ಲಿ ಕತೆಗಳನ್ನು ಪ್ರಕಟಿಸುತ್ತಿದ್ದರು.

ಕಮಲಾ ಹಂಪನಾ ಅವರ ಕತೆಗಳ ಅಂತರಂಗವನ್ನು, ಅವರ ವೈಶಿಷ್ಟ್ಯ ಹಾಗೂ ಮಿತಿಗಳನ್ನು ಅರ್ಥಮಾಡಿಕೊಳ್ಳಲು ಈ ಹಿನ್ನೆಲೆ ಅವಶ್ಯಕ ಎಂದು ಭಾವಿಸಿದ್ದೇನೆ. ಅಂದರೆ ಅಬ್ಬರದೊಡನೆ, ನವೋದಯ ಶೈಲಿಯನ್ನು ವಿರೋಧಿಸುವುದರೊಡನೆ ಆರಂಭವಾದ ನವ್ಯ ಚಳುವಳಿಯ ಪ್ರಭಾವಕ್ಕೆ ಸಿಕ್ಕಿಕೊಳ್ಳದೆ ಕಮಲಾ ಅವರು ತಮ್ಮತನವನ್ನು ಉಳಿಸಿಕೊಂಡರೆಂಬುದು ಅವರ ವೈಶಿಷ್ಟ್ಯ. ಪರಂಪರಾಗತವಾದ 'ಭಾರತೀಯ ನಾರಿ' ಕಲ್ಪನೆಯನ್ನು ಪ್ರಶ್ನಿಸದೆ, ಮೂಲಭೂತ ಬದಲಾವಣೆಯ ತುಡಿತವನ್ನು ಪ್ರಕಟಿಸದೆ, ತೀರ ಮೇಲ್ಪದರದ ಭಾವನೆಗಳ ಜೊತೆಯಲ್ಲಿಯೇ ತಮ್ಮ ಕಲೆಗಾರಿಕೆಯನ್ನು ನಿಲ್ಲಿಸಿದ್ದು ಅವರ ಮಿತಿ. ಇದನ್ನು ಅವರ ಕತೆಗಳ ಅಂತರಂಗದಿಂದಲೇ ನಾವು ಗುರುತಿಸಬಹುದಾಗಿದೆ.

ಇಲ್ಲಿರುವ ಎಲ್ಲ ಕತೆಗಳು ತುಂಬ ಸರಳವಾದವು. ಹೆಚ್ಚಾಗಿ ವಿವರಣಾತ್ಮಕವಾಗಿರುವಂಥವು. ಒಂದೆರಡು ಕತೆಗಳನ್ನು ಬಿಟ್ಟರೆ ಮಿಕ್ಕೆಲ್ಲ ಕತೆಗಳು ಸ್ತ್ರೀ ಪ್ರಧಾನವಾಗಿರುವಂಥವು. ಹಾಗಾಗಿಯೇ ಇಲ್ಲಿರುವ ಬಹುತೇಕ ಕತೆಗಳಿಗೆ ವಸ್ತು ವೈವಿಧ್ಯ ಹಾಗೂ ಶೋಧನಾತ್ಮಕ ಆಯಾಮ ಲಭ್ಯವಾಗದೆಹೋಗಿದೆ. ಕತೆಗಳನ್ನು ನಡೆಸುವ ರೀತಿ ಆಕರ್ಷಕವಾಗಿದ್ದರೂ ಕುತೂಹಲ ಹುಟ್ಟಿಸುವ ಘಟನಾ ಪರಂಪರೆಗಳಿಲ್ಲದಿರುವುದರಿಂದ ಹಿನ್ನೋಟ ತಂತ್ರವೊಂದನ್ನೇ ಬಳಸಬೇಕಾದ ಅನಿವಾರ್ಯತೆ ಲೇಖಕಿಯವರಿಗೆ ಬಂದೊದಗಿದೆ. ಆದರೂ 'ಸೂಕ್ಷ್ಮ' ಮತ್ತು 'ವರ್ತುಲ'ದಂಥ ಕತೆಗಳಲ್ಲಿ ಲೇಖಕಿ ತಂತ್ರದಲ್ಲಿ ವೈವಿಧ್ಯತೆ, ವಸ್ತುವಿನಲ್ಲಿ ಸಂಕೀರ್ಣತೆಗಳನ್ನು ಬೆಸೆದು ಉತ್ತಮ ಕಲೆಗಾರಿಕೆಯನ್ನು ಪ್ರದರ್ಶಿಸಿದ್ದಾರೆ.

'ಯೌವನ ನುಡಿಯಿತು' ಕತೆಯಲ್ಲಿ ಒಂದು ಕಡೆ ತಂದೆ ಮಗಳ ವಾದ ಹೀಗೆ ಬರುತ್ತದೆ: "ಮನುಷ್ಯನ ಜೀವನ ಪರಿಪೂರ್ಣತೆಯನ್ನು ಪಡೆಯಬೇಕಾದರೆ ಹೆಣ್ಣಾಗಲಿ ಗಂಡಾಗಲಿ ಮದುವೆ ಆಗೇ ತೀರಬೇಕು" ಎಂದು ತಂದೆ ವಾದ ಮಾಡಿದರೆ, ಮಗಳು ಸರಳ "ಇದು ಕೇವಲ ಗಂಡಿನ ಸ್ವಾರ್ಥ ದೃಷ್ಟಿ, ತನ್ನ ದೈಹಿಕ ಸುಖಕ್ಕಾಗಿ, ತನ್ನ ಸೇವೆಗಾಗಿ ಮದುವೆ ಎನ್ನುವ ಸಂಕೋಲೆಯನ್ನು ಹೆಣ್ಣಿಗೆ ತೊಡಿಸುತ್ತಾನೆ. ಅವನ ಗುಲಾಮಳಾಗಿ ಅವಳು ನಿರಂತರ ಬದುಕಬೇಕು. ಅವಳೂ ಮನುಷ್ಯಳು, ಅವಳಿಗೂ ಆಸೆ ಆಕಾಂಕ್ಷೆಗಳಿವೆ, ನೋವು ನಲಿವನ್ನು ಅರ್ಥ ಮಾಡಿಕೊಳ್ಳಲು ಅವಳಿಗೂ ಹೃದಯವಿದೆ ಎನ್ನುವುದನ್ನು ಅವನು ಮರೆತುಬಿಡುತ್ತಾನೆ. ಅದನ್ನು ಹೆಣ್ಣು ಅವನಿಗೆ ತಿಳಿಯಪಡಿಸಲು ಪ್ರಯತ್ನಿಸಿದರೆ ಅವಳು ಗಂಡನನ್ನು ಧಿಕ್ಕರಿಸುವ ಹೆಣ್ಣೆಂದು ಇಡೀ ಸಮಾಜವೇ ಅವಳನ್ನು ದೂರುತ್ತದೆ" ಎಂದೂ, "......ತನಗೆ ಸಿಗುವವನು ಒಳ್ಳೆಯವನು ಇರಬಹುದು ಎಂದು ಭಾವಿಸಿ ಅವನನ್ನು ಮದುವೆಯಾಗಿ ಅನಂತರ ಜೀವನ ಪರ್ಯಂತ ಆತನನ್ನು ಅನುಸರಿಸಿಕೊಂಡು ನಡೆಯುವುದರಲ್ಲಿ ಅರ್ಥವಿಲ್ಲ. ಸಂಸಾರದಲ್ಲಿ ಹೆಣ್ಣು ಸಕಲ ತ್ಯಾಗಕ್ಕೂ ಸಿದ್ಧಳಿರಬೇಕಾಗುತ್ತದೆ. ಹೆಣ್ಣು ಎಷ್ಟೇ ಕಲಿತರೂ ಮದುವೆಯಾದರೆ ಅವಳ ಬದುಕಿನ ಬಳ್ಳಿಯೇ ಒಣಗಿದಂತೆ" ಎಂದೂ ಕೌಟುಂಬಿಕ ವ್ಯವಸ್ಥೆಯನ್ನೇ ಧಿಕ್ಕರಿಸುವ ವಾದ ಮಂಡಿಸುತ್ತಾಳೆ. ಕಮಲಾ ಹಂಪನಾ ಕಲಿತ ಹೆಣ್ಣಾಗಿ, ಹೆಣ್ಣಿನ ಮಾನಸಿಕ ಸ್ಥಿತಿಯನ್ನು ಸರಿಯಾಗಿ ಅರ್ಥ ಮಾಡಿಕೊಂಡಿರುವುದೂ ಪರಂಪರಾಗತ ಗುಲಾಮೀ ಪದ್ಧತಿಯನ್ನು ಹೆಣ್ಣು ಮೀರಬೇಕೆಂದು ಬಯಸಿರುವುದೂ ನಮಗೆ ಈ ಪ್ರಸಂಗದಲ್ಲಿ ಎದ್ದು ಕಾಣುತ್ತದೆ. ಆದರೆ 'ಇದೇ ನಿನ್ನ ಬದುಕು' ಕತೆಯಲ್ಲಿ ಗಂಡಿನ ತೋಳತೆಕ್ಕೆಯಲ್ಲಿ ಬಂಧಿತಳಾಗಿ ಸಕ್ಕರೆಯಂಥ ಮಾತುಗಳಿಗೆ ಮರುಳಾದ ಸುಧೆಯ ಬಾಯಿಂದ "ಎಷ್ಟು ಓದಿದ್ದರೇನು ? ಎಷ್ಟು ಧೈರ್ಯವಿದ್ದರೇನು ? ಗಂಡಿನ ಮುಂದೆ ಹೆಣ್ಣು ಹೆಣ್ಣೇ ?" ಎನ್ನುವ ಮಾತನ್ನು ಆಡಿಸಿದ್ದಾರೆ. 'ಸಲಹಿದವರು ಯಾರೊ' ಕತೆಯಲ್ಲಿ ಶೀಲ ತನ್ನ ಗಂಡ ದುಃಖದ ಕಾರಣ ತಿಳಿಯದೆ ವ್ಯಥೆಪಟ್ಟ ಎಂಬುದನ್ನು ಕೇಳಿದೊಡನೆಯೇ ಹೌಹಾರಿ "ಮೊದಲ ರಾತ್ರಿಯೇ ಮೊದಲ ಸಮಾಗಮದಲ್ಲಿಯೇ ಪತಿಯ ಬಾಯಿಂದ 'ನೀನು ನನಗೆ ಬಹಳ ದುಃಖವನ್ನುಂಟುಮಾಡಿದೆ' ಎನ್ನುವ ಮಾತನ್ನು ಕೇಳುವಂತಾಯಿತೇ ? ಅವರ ಸುಖಕ್ಕಾಗಿ ನಾನು ಇರಬೇಕೇ ಹೊರತು ಅವರಿಗೆ ನೋವನ್ನುಂಟು ಮಾಡಿದ್ದು ಸರಿಯೆ ?" ಎನ್ನುವ ಆಲೋಚನೆ ಮಾಡುವಂತೆ ಮಾಡಿದ್ದಾರೆ.

ಈ ವೈರುಧ್ಯ ಅಥವಾ ವಿರೋಧಾಭಾಸ ಕಮಲಾ ಹಂಪನಾ ಅವರ ತಪ್ಪಲ್ಲ. ಅದು ವ್ಯವಸ್ಥೆಯ ತಪ್ಪು. ಹೆಣ್ಣು ಗಂಡಿನ ಮುಂದೆ ಬಾಯಿ

ಬಿಡುವುದಕ್ಕೆ ಸಾಧ್ಯವಿಲ್ಲದ ಕಪಿಮುಷ್ಟಿಯ ಈ ಪುರುಷಪ್ರಧಾನ ವ್ಯವಸ್ಥೆಯಲ್ಲಿ ಒಂದು ಹೆಣ್ಣು ಓದಿ ನೌಕರಿ ಹಿಡಿಯುವುದೇ ಒಂದು ದೊಡ್ಡ ಬದಲಾವಣೆ. ಇನ್ನು ಸಾಹಿತ್ಯ ಕೃಷಿಗೆ ಕೈಹಾಕಿ ಅಲ್ಲಿ ಪ್ರಾಸಂಗಿಕವಾಗಿಯಾದರೂ ಸ್ತ್ರೀ ಬಂಡಾಯದ ಆಶಯವನ್ನು ಪ್ರಕಟಿಸುವುದು ಇನ್ನೂ ದೊಡ್ಡ ಬದಲಾವಣೆ. ಹೆಣ್ಣು ಎಷ್ಟೇ ವಿಚಾರವಂತಳಾದರೂ ವ್ಯವಸ್ಥೆಯನ್ನು ಯಾವ ಪ್ರಮಾಣದಲ್ಲೇ ಧಿಕ್ಕರಿಸಿದರೂ ಒಂದಲ್ಲ ಒಂದು ಹಂತದಲ್ಲಿ ವ್ಯವಸ್ಥೆ ಅವರ ದನಿಯನ್ನು ದಮನಗೊಳಿಸುತ್ತದೆ. ಎಂಬುದನ್ನು ತೋರಿಸಲು ಹೀಗೆ ಮಾಡಿರಬಹುದೇನೋ. ಯಾಕೆಂದರೆ ನವ್ಯ ಚಳುವಳಿಯ ಬಿರುಸಿನಲ್ಲಿ ಬಂದ ಅನೇಕ ಕ್ರಾಂತಿಕಾರೀ ಲೇಖಕಿಯರು ಮದುವೆಗೆ ಮುನ್ನ ತುಂಬಾ ಗಂಭೀರವಾದ ತಮ್ಮ ಕತೆಗಳಲ್ಲಿ ವ್ಯವಸ್ಥೆಗೆ ವಿರುದ್ಧವಾದ ಗಂಡು ಹೆಣ್ಣಿನ ಸಂಬಂಧಗಳನ್ನು ಸ್ಥಾಪಿಸಿ, ಮದುವೆಯ ನಂತರ ಕತೆಗಳನ್ನು ಬರೆಯುವುದನ್ನೇ ನಿಲ್ಲಿಸಿರುವಂತಿದೆ. ತಮ್ಮ ಕತೆಗಳಲ್ಲಿ ತಾವು ಯಾವುದನ್ನು ವಿರೋಧಿಸಿದ್ದರೋ ಅದಕ್ಕೇ ತಾವು ಒಳಗಾಗಬೇಕಾದ ಪರಿಸ್ಥಿತಿ ಅವರ ವೈಯಕ್ತಿಕ ಬದುಕಿನಲ್ಲಿ ತಲೆದೋರಿದೆ. ಇವರಿಗಿಂತಲೂ ಒಂದು ಸಾಹಿತ್ಯ ಚಳುವಳಿಯ ಹಿಂದೆ ಬಂದ ಕಮಲಾ ಅವರ ಬರವಣಿಗೆಯಲ್ಲಿ ಈ ವಿರೋಧಾಭಾಸ ಕಾಣಿಸಿಕೊಂಡಿದ್ದರೆ ಅದಕ್ಕೆ ಅಚ್ಚರಿ ಪಡಬೇಕಾಗಿಲ್ಲ. ಯಾಕೆಂದರೆ ಕಮಲಾ ಅವರ ಕಥೆಗಳ ವೈರುಧ್ಯ ಅವರ ನಂತರದ ತುಂಬಾ ಕ್ರಾಂತಿಕಾರಿಗಳಾದ ಲೇಖಕಿಯರ ಜೀವನದಲ್ಲೇ ಕಾಣಿಸಿಕೊಂಡಿದೆ ಎಂದರೆ ಕಮಲಾ ಅವರ ದೂರದೃಷ್ಟಿಯನ್ನು ನಾವು ಮೆಚ್ಚಬೇಕಾಗುತ್ತದೆ ಹಾಗೂ ಇಡೀ ವಿಚಾರಧಾರೆಯ ಹಿಂದಿರುವ ಹುಸಿ ಆಲೋಚನಾ ಕ್ರಮವನ್ನು ಬದಲಾಯಿಸಿಕೊಳ್ಳಬೇಕಾಗುತ್ತದೆ.

'ನಾನು ಹೀಗಾಗುತ್ತಿರಲಿಲ್ಲ' ಎಂಬ ಕತೆಯಲ್ಲಿ ಲೇಖಕಿಯವರು ಕಷ್ಟಗಳ ವಿರುದ್ಧ ಸೆಣಸಿ ಜಯಪಡೆಯುವ ವ್ಯಕ್ತಿಯ ಬದುಕನ್ನು ಚಿತ್ರಿಸಿದ್ದಾರೆ. ಪುರುಷಪ್ರಧಾನ ಸಮಾಜದಲ್ಲಿ ಒಬ್ಬ ಬಡವನಿಗೆ ಕಷ್ಟಗಳು ಎದುರಾದರೆ ಆತ ಅವುಗಳಿಗೆ ಬೆನ್ನು ತೋರಿಸುವುದಿಲ್ಲ. ಬದಲು ದಿಟ್ಟತನದಿಂದ, ಚಾಕಚಕ್ಯತೆಯಿಂದ, ಬೇರೊಬ್ಬರ ಸಹಾಯದಿಂದ ಎದುರಿಸುವ ಎದೆಗಾರಿಕೆ ತೋರುತ್ತಾನೆ. ಅಜಿತ ತಂದೆಯನ್ನು ಕಳೆದುಕೊಂಡು ಅಣ್ಣ ಅತ್ತಿಗೆಯರ ಆಶ್ರಯದಲ್ಲಿ ಸಾಕಷ್ಟು ಕಷ್ಟ ಅನುಭವಿಸಿ ಪರೀಕ್ಷೆಗೆ ಫೀಜೂ ದೊರೆಯದೆ, ತಾಯಿಯ ದುಡಿಮೆಯಿಂದ ಎಸ್. ಎಸ್. ಎಲ್. ಸಿ. ಪಾಸು ಮಾಡಿ ಮುಂದಿನ ವಿದ್ಯಾಭ್ಯಾಸಕ್ಕೆ ವಾರಾನ್ನ ಗೊತ್ತುಮಾಡಿಕೊಂಡು ಉನ್ನತ ವ್ಯಾಸಂಗವನ್ನೂ ಮುಗಿಸಿ ನೌಕರಿ ಹಿಡಿಯುತ್ತಾನೆ. ಇಲ್ಲಿ ಅವನ ಅಣ್ಣಂದಿರು ಅನಾದರ ತೋರಿದ್ದರಿಂದ ಅವನಿಗೆ ಛಲ ಹುಟ್ಟಲು ಕಾರಣವಾಯಿತು. ಇಲ್ಲದಿದ್ದರೆ ಈಗಿನ ಸ್ಥಿತಿಯನ್ನು

ಪಡೆಯುತ್ತಿದ್ದನೆಂದು ನಿಖರವಾಗಿ ಹೇಳಲು ಸಾಧ್ಯವಾಗುತ್ತಿರಲಿಲ್ಲ. ಈ ಕತೆ ತುಂಬ ಸರಳವಾಗಿ ವ್ಯಕ್ತಿಯೊಬ್ಬನ ಸಾಧನೆಯನ್ನು ಕಣ್ಣುಮುಂದೆ ನಿಲ್ಲಿಸುತ್ತದೆ. ಕತೆಯಲ್ಲಿರುವ ಒಂದೇ ಒಂದು ದೋಷವೆಂದರೆ ಅಜಿತನಿಗೆ ಒದಗಿದ ಕಷ್ಟಗಳ ವಿವರಣೆಯಿದೆಯೇ ಹೊರತು ಆ ಕಷ್ಟಗಳ ನಾಟಕೀಯ ಘಟನೆಗಳಿಲ್ಲ. ಆದರೆ ವ್ಯವಸ್ಥೆಯ ವಿರುದ್ಧದ ಸೆಣಸಾಟದಲ್ಲಿ ಆತ ತೋರುವ ಧೈರ್ಯ ಮೆಚ್ಚಿಕೆ ಯಾಗುವಂತೆ ಲೇಖಕಿ ನಿರೂಪಿಸಿದ್ದಾರೆ. ಇದಕ್ಕೆ ತದ್ವಿರುದ್ಧವಾಗಿ 'ಯೌವನ ನುಡಿಯಿತು' ಕತೆಯಲ್ಲಿ ತುಂಬಾ ದಿಟ್ಟೆಯಾದ ನಾಯಕಿ ತನ್ನೆಲ್ಲ ಹೋರಾಟದ ಮನೋಭಾವವನ್ನು ನೀಗಿಕೊಳ್ಳುವುದನ್ನು ಕಾಣುತ್ತೇವೆ. ಮದುವೆ ಯನ್ನೇ ಬೇಡವೆನ್ನುತ್ತಿದ್ದ ಸರಳ ವಿದ್ಯೆ ಕಲಿತು ನೌಕರಿ ಹಿಡಿದು ಸ್ವಂತ ಕಾಲ ಮೇಲೆ ನಿಂತ ನಂತರ ನಡೆಯುವ ಘಟನೆಗಳಿಂದ ನೌಕರಿಗಳನ್ನು ಬದಲಾಯಿ ಸುತ್ತಾ ಹೋಗುತ್ತಾಳೆ. ಕೊನೆಗೆ ಮದುವೆಯೂ ಆದ ಮೇಲೆ ಯೌವನ ನುಡಿಯಿತು "ಇಂದು ನೀನು ನಿರ್ಮಲಕುಮಾರನ ಹೆಂಡತಿ. ಇನ್ನು ಮುಂದೆ ಯಾರೂ ನಿನ್ನ ಮೇಲೆ ಕೈಮಾಡರು" ಎಂದು. ಈ ವಾಕ್ಯಗಳನ್ನು ಓದುವಾಗ ಮದುವೆಯಾದ ಕೂಡಲೇ ಎಲ್ಲ ಸಮಸ್ಯೆಗಳೂ ತೀರಿಬಿಡುತ್ತವೆ ಎಂಬ ಭಾವನೆ ಬರುತ್ತದೆ. ಜೊತೆಗೆ ಹೆಣ್ಣಿಗೆ ಮದುವೆಯಾದ ಮೇಲೂ ಅತ್ಯಾಚಾರ ಎಷ್ಟೋ ವೇಳೆ ನಡೆಯುತ್ತಲೇ ಇರುತ್ತದೆ ಎಂಬ ವಾಸ್ತವ ಕೂಡ ನಮ್ಮ ಮುಂದಿದೆ.

ಈ ಎರಡು ಕತೆಗಳನ್ನು ಗಮನಿಸಿದಾಗ ಗಂಡು ನಾಯಕನಾಗಿರುವ ಕತೆಯಲ್ಲಿರುವ ಹೋರಾಟದ ಮನೋಭಾವಕ್ಕೂ ಹೆಣ್ಣು ನಾಯಕಿಯಾಗಿರುವ ಕತೆಯ ಸೆಣಸಾಟದ ಮನೋಭಾವಕ್ಕೂ ಇರುವ ವ್ಯತ್ಯಾಸ ಗೋಚರವಾಗಿ ಲೇಖಕಿಯ ನಿಲುವು ಏನೆಂಬುದೂ ತಿಳಿದುಬಿಡುತ್ತದೆ. ಎಷ್ಟೇ ವಿದ್ಯಾಬುದ್ಧಿ, ನೌಕರಿ, ಆರ್ಥಿಕ ಸಮಾನತೆ ಇದ್ದರೂ ಹೆಣ್ಣು ಸೋಲಬೇಕಾಗುತ್ತದೆ ಎಂಬ ಆಶಯ ಲೇಖಕಿಯ ಸುಪ್ತಪ್ರಜ್ಞೆಯಲ್ಲಿ ಕೆಲಸ ಮಾಡುತ್ತಿರುವುದನ್ನು ಕಾಣ ಬಹುದು. ಎಲ್ಲಿಯವರೆಗೆ ವೈದಿಕಪ್ರಜ್ಞೆಯ, ಯಜಮಾನ ಸಂಸ್ಕೃತಿಯ ಸಂಪ್ರ ದಾಯಗಳು, ಲೈಂಗಿಕ ವಿಷಯದ ಮಡಿವಂತಿಕೆಗಳು ನಮ್ಮ ಆಲೋಚನಾ ಧಾಟಿಯನ್ನು ನಿಯಂತ್ರಿಸುತ್ತವೋ ಅಲ್ಲಿಯವರೆಗೆ ಇಂಥ ನಿರಾಶಾವಾದ, ಪಲಾಯನವಾದಗಳು ನಮ್ಮ ನಿಲುವನ್ನು ಅಪಹರಿಸಿಬಿಡುತ್ತವೆ. ಕಮಲಾ ಹಂಪನಾ ಅವರ ಸುಪ್ತಪ್ರಜ್ಞೆಯ ಆಳದಲ್ಲಿ ಅವರ ಎಚ್ಚೆತ್ತ ಶೂದ್ರ ಪ್ರಜ್ಞೆ ಯನ್ನು ನಿಯಂತ್ರಿಸುವ ಈ ವೈದಿಕ ಸಂಸ್ಕೃತಿಯ ಹುಸಿ ಮಡಿವಂತಿಕೆ ಪಾವಿತ್ರ್ಯ ಗಳು ಇನ್ನೂ ಇವೆ ಎಂಬುದನ್ನು 'ಮಂಗಳೆ' ಕತೆಯ ಉಮೆಯ ಈ ಮಾತು ಗಳು ಸಾಬೀತುಪಡಿಸುತ್ತವೆ: "ನಾನು ಅಪವಿತ್ರಳು ನನ್ನನ್ನು ಮುಟ್ಟಬೇಡಿ,

ಹಾಗೆಂದು ನನ್ನನ್ನು ಮನೆಬಿಟ್ಟು ಓಡಿಸಬೇಡಿ. ನಿಮ್ಮನ್ನು ಬಿಟ್ಟು ನಾನು ಬದುಕಲಾರೆ, ಮನೆಯ ಆಳಿನಂತೆ ನಿಮ್ಮ ಸೇವೆ ಮಾಡಿಕೊಂಡು ನಿಮ್ಮನ್ನು ದೂರದಿಂದಲೇ ನೋಡುತ್ತಾ ಸಂತೋಷಪಟ್ಟುಕೊಳ್ಳುತ್ತೇನೆ." ಹೀಗೆ ಅಸಹಾಯಕಳಾಗಿ ಉಮೆ ಶಂಕರನ ಪಾದಗಳನ್ನು ಹಿಡಿದು ಬೇಡಿಕೊಳ್ಳುವ ಬದಲು ತಾನು ಇಚ್ಚೆಪಟ್ಟು ಮಾಡದಿರುವ ತಪ್ಪಿಗೆ ಶಿಕ್ಷೆ ಅನುಭವಿಸಿ ತನ್ನ ಗಂಡನನ್ನೇ ತಿದ್ದಿ ಅವನ ಆಲೋಚನಾ ಧಾಟಿಯನ್ನೇ ಬದಲಾಯಿಸುವಂಥ ರೀತಿ ಕತೆಯನ್ನು ಬೆಳೆಸಿದ್ದರೆ ಇದು ಅತ್ಯಂತ ಉತ್ತಮ ಕತೆಯಾಗುತ್ತಿತ್ತು. ಇಲ್ಲಿ ಶಂಕರ ಉಮೆಯನ್ನು ಸಂತೈಸಿ "ಪಶ್ಚಾತ್ತಾಪದ ಅಗ್ನಿಯಲ್ಲಿ ದಗ್ಧ ಹೊಂದಿ ಪವಿತ್ರಳಾದ ಪುನೀತೆ" ಎಂದು ದಯಾಭಿಕ್ಷೆ ನೀಡುತ್ತಾನೆ. ಪ್ರಜ್ಞಾವಂತ ಮಹಿಳೆಯರಾರೂ ಗಂಡಿನ ಅಹಂಕಾರ ಜಾಸ್ತಿಯಾಗುವಂಥ ಪರಾವಲಂಬನೆಯ ದಯೆಗೆ, ಕರುಣೆಗೆ ಒಳಗಾಗಲು ಇಷ್ಟಪಡುವುದಿಲ್ಲ.

'ಇದೇ ನಿನ್ನ ಬದುಕು' ಮತ್ತು 'ಸಮಸ್ಯೆಯ ಸುಳಿಯಲ್ಲಿ' ಎರಡು ಕತೆಗಳಲ್ಲಿ ನಿರಾಶಾವಾದ ಮತ್ತು ಪಲಾಯನವಾದಗಳನ್ನು ಕಾಣಬಹುದು. ನವೋದಯ ಸಾಹಿತ್ಯದಲ್ಲಿ ನಿರಾಶಾವಾದ ಮತ್ತು ಪಲಾಯನವಾದಗಳೂ ಒಂದು ಬಗೆಯ ಮೌಲ್ಯಗಳಾಗಿದ್ದುದರ ಪ್ರಭಾವವನ್ನು ಈ ಕತೆಗಳಲ್ಲಿ ಕಾಣ ಬಹುದು. ನವೋದಯದಲ್ಲೇ ಏಕೆ ಹಿಂದಿನ ನಮ್ಮ ಸಾಹಿತ್ಯವೆಲ್ಲವೂ ಒಂದಲ್ಲ ಒಂದು ರೀತಿ ಪಲಾಯನವಾದವನ್ನೇ ಮೌಲ್ಯವೆಂದು ಒಪ್ಪಿಕೊಂಡಿರುವುದನ್ನು ಸೂಕ್ಷ್ಮ ಅವಲೋಕನದಿಂದ ಗುರುತಿಸಬಹುದು. 'ಇದೇ ನಿನ್ನ ಬದುಕು' ಕತೆಯ ಸುಧೆಯ ತಳಮಳ ನೋವು, ಸ್ತ್ರೀಯ ನಿಜವಾದ ಬಯಕೆಗಳೆಲ್ಲ ವನ್ನೂ ಲೇಖಕಿ ತುಂಬಾ ಸುಂದರವಾಗಿ ಬಿಡಿಸಿದ್ದಾರೆ. ಮಕ್ಕಳ ಬಯಕೆ ಯನ್ನು ನಾವು ಗೌರವಿಸಬಹುದು. ಗಂಡಾಗಲೀ ಹೆಣ್ಣಾಗಲೀ ಮಕ್ಕಳು ನಿಜವಾಗಿಯೂ ಆನಂದ ತರುವಂಥವು. ಆದರೆ ಇಂಥ ನಿಜವಾದ ಆನಂದ, ಅಕ್ಕರೆಗಳನ್ನು ಕಡೆಗಣಿಸಿ 'ತಾನು ಬಂಜೆ' ಎಂಬ ಅಪವಾದವನ್ನು ಹೋಗ ಲಾಡಿಸಿಕೊಳ್ಳುವಷ್ಟಕ್ಕೆ ಮಾತ್ರ ಮಕ್ಕಳ ಬಯಕೆಯಿದ್ದರೆ ಅದು ಹುಸಿ ಸಂಸ್ಕೃತಿ ಯಿಂದ ಪ್ರೇರಿತವಾಗಿರುತ್ತದೆ. ಈ ಕತೆಯಲ್ಲಿ ಸುಧಾ ಮಕ್ಕಳ ಬಗ್ಗೆ ನಿಜವಾಗಿ ಪರಿತಪಿಸುತ್ತಾಳೆ. ಭಿಕ್ಷುಕರ ಮಕ್ಕಳನ್ನು ಕಂಡು ಅಲ್ಲಿ ಅಂದವನ್ನು ಗುರುತಿಸುವ ಸಂತೋಷಪಡುತ್ತಾಳೆ. ಮಹಿಳೆಯ ಅಂತರಂಗದ ಪದರ ಪದರವನ್ನು ಈ ಕತೆಯಲ್ಲಿ ಲೇಖಕಿ ಬಿಡಿಸಿಟ್ಟಿದ್ದಾರೆ. ಆದರೆ ಇಂತಹದೇ ಪ್ರಯತ್ನ 'ಸಮಸ್ಯೆಯ ಸುಳಿ'ಯಲ್ಲಿಲ್ಲ. ತನ್ನ ತಾಯಿ ಹಾದರ ಮಾಡಿದ್ದಕ್ಕೆ ತಾನು ಪ್ರಾಣ ಕಳೆದುಕೊಳ್ಳುವಂಥ ಅವಶ್ಯಕತೆ ವಾಸಂತಿಗೆ ಇರಲಿಲ್ಲ. ಅದಕ್ಕೆ ಪೂರಕವಾಗುವಂಥ ಘಟನೆಗಳಾವುವೂ ಕತೆಯಲ್ಲಿ ನಡೆಯುವುದಿಲ್ಲ. 'ನಾನೂ

ಎಲ್ಲಿಗೂ ಹೋಗೋಲ್ಲಮ್ಮಾ' ಒಂದು ತ್ಯಾಗದ ಕಥೆ. ಅಪಘಾತದಲ್ಲಿ ಕೈಕಾಲು ಕಳೆದುಕೊಂಡ ನಾಯಕ ತಾನು ಪ್ರೀತಿಸಿದ ಹುಡುಗಿಯನ್ನು ತನ್ನ ಚಿಕ್ಕಪ್ಪನ ಮಗನಿಗೆ ಕೊಟ್ಟು ಮದುವೆ ಮಾಡಿಸುವ ವಸ್ತುವನ್ನೊಳಗೊಂಡಿದೆ. 'Marriages are made in heaven' ಎಂಬ ನಂಬಿಕೆಗನುಗುಣವಾಗಿ ಈ ಕತೆ ರಚನೆಯಾಗಿದೆ. 'ವರ್ತುಲ' ಎಲ್ಲ ದೃಷ್ಟಿಗಳಿಂದ ಈ ಸಂಕಲನದ ಅತ್ಯುತ್ತಮ ಕತೆ. ಕಥೆಯ ವಸ್ತು ಚತುಷ್ಕೋಣ ಪ್ರೇಮವಾದರೂ ಅದನ್ನು ನಿರ್ಮಿಸಿರುವ ರೀತಿ ಲೇಖಕಿಯ ಕಲಾತ್ಮಕತೆಗೆ ಸಾಕ್ಷಿಯಾಗಿದೆ. ಅಪಾಯ, ಆತಂಕದಲ್ಲಿರುವವರಿಗೆ ಮಾನವೀಯ ಸಂಬಂಧಗಳು ಅದರಲ್ಲೂ ಹೆಣ್ಣಿನ ಸಂಬಂಧಗಳು ಎಷ್ಟು ಗಾಢವಾಗಿ ನೆಮ್ಮದಿ ಮತ್ತು ಭದ್ರತೆಯೊದಗಿಸುತ್ತವೆ ಎಂಬುದನ್ನು ಈ ಕತೆ ಅತ್ಯಂತ ನವುರಾಗಿ ಚಿತ್ರಿಸುತ್ತದೆ. ಅಲ್ಲದೆ ಒಬ್ಬ ಗಂಡು 'ತಾನು ಪ್ರೀತಿಸುತ್ತೇನೆ' ಎಂದು ಒಂದು ಹೆಣ್ಣಿಗೆ ಹೇಳಿದಾಗ ಅದನ್ನು ನೇರವಾಗಿ ಸ್ವೀಕರಿಸಿ ಅಷ್ಟೇ ಖಂಡಿತವಾಗಿ ತಾನು ಪ್ರೀತಿಸುವುದಿಲ್ಲ ಎಂದು ಆ ಹೆಣ್ಣು ಸಾಮಾನ್ಯವಾಗಿ ಹೇಳುವುದಿಲ್ಲ. ಆದರೆ ಈ ಕತೆಯ ಡಾ॥ ಶಶಿರೇಖಾ ಒಂದಲ್ಲ ಎರಡು ಸಲ ಅಂತಹ ದಿಟ್ಟ ನಿಲುವನ್ನು ತೋರಿಸಿ, ದ್ವೇಷಕ್ಕೆ ಎಡೆಯಾಗದಂತೆ ತನ್ನ ವರ್ತನೆಯನ್ನು ಉಳಿಸಿಕೊಂಡಿದ್ದಾಳೆ. ಗಂಡಸಿನ ಕರುಣೆಯಲ್ಲಿ ಹೆಂಗಸು ಬದುಕಬೇಕಾದುದನ್ನು ಬೇರೊಂದು ಕತೆಯಲ್ಲಿ ಸೂಚ್ಯವಾಗಿ ಹೇಳಿದ ಲೇಖಕಿ ಈ ಕತೆಯಲ್ಲಿ ಹೆಂಗಸಿನ ಕರುಣೆಯಿಂದ ಗಂಡಸು ಉಳಿಯುವಂತೆಯೂ ಅವನು ಮನುಷ್ಯನಾಗುವಂತೆಯೂ ಮಾಡಿದ್ದಾರೆ. 'ಸೂಕ್ಷ್ಮ' ಕತೆಯಲ್ಲಿ ಸಮಸ್ಯೆಗೆ ಆತ್ಮಹತ್ಯೆಯ ಪರಿಹಾರ ವಿದ್ದರೂ ಅದರಿಂದ ಗಂಡು ಪಾಠ ಕಲಿಯುವ ರೀತಿಯಲ್ಲಿ ಅದನ್ನು ಬೆಳೆಸಿರುವ ರೀತಿ ಕಂಡುಬರುತ್ತದೆ. ಗಂಡ ಹೆಂಡಿರ ಮಧ್ಯೆ ಸರಿಯಾದ ಹೊಂದಾಣಿಕೆಯಿಲ್ಲದಿದ್ದರೆ ಹಾಗೂ ಅತಿಯಾದ ಪ್ರೀತಿಯಿದ್ದರೆ ಒಂದು ಸಣ್ಣ ಮಾತೂ ಕೂಡ ಸಹಿಸದಂತಾಗುತ್ತದೆ ಎಂಬುದನ್ನು ಈ ಕತೆ ತನ್ನೊಡಲ ಇನ್ನೊಂದು ಕತೆಯಿಂದ ಓದುಗರಿಗೆ ಮುಟ್ಟಿಸುತ್ತದೆ. ಗಂಡ ಅಸಹನೆ ತೋರಿದರೆ ಹೆಣ್ಣಿಗೆ ತೊಂದರೆ, ಹೆಣ್ಣು ಅಸಹನೆ ತೋರಿದರೆ ಗಂಡಿಗೆ ತೊಂದರೆ ಎಂಬುದನ್ನು ಲೇಖಕಿ ತಮ್ಮ ಮಾಮೂಲು ಧಾಟಿ ವಿವರಣೆಯನ್ನು ಬಿಟ್ಟು ಘಟನೆಯ ಮೂಲಕ ಕಲಾತ್ಮಕವಾಗಿ ಹೆಣೆದಿದ್ದಾರೆ. ಈ ಸಂಕಲನದ ಇನ್ನೊಂದು ಒಳ್ಳೆಯ ಕಥೆ 'ನಕ್ಕಿತು ಹಾಲಿನ ಬಟ್ಟಲು'. ವ್ಯಕ್ತಿಯೊಬ್ಬನ ಹಾಲು ಕುಡಿಯುವ ಅಭ್ಯಾಸವನ್ನು ಮೊದಲು ತುಂಬಾ ಸುಂದರವಾಗಿ ಹೇಳಿಕೊಂಡು ಬಂದು ಕೊನೆಯಲ್ಲಿ ಈ ಅಭ್ಯಾಸವೇ ಆ ವ್ಯಕ್ತಿಗೆ ದುರಂತ ತಂದುದರ ವ್ಯಂಗ್ಯವನ್ನು ಧ್ವನಿಪೂರ್ಣವಾಗಿ ಹಿಡಿದಿಟ್ಟಿದ್ದಾರೆ.

ಕಮಲಾ ಹಂಪನಾ ಅವರ ಈ ಕತೆಗಳ ಹಿಂದೆ ದಯಾರ್ದ್ರವಾದ ಹೆಣ್ಣಿನ ಹೃದಯವೊಂದು ಕೆಲಸ ಮಾಡುವುದನ್ನು ಗುರುತಿಸಬಹುದು. ಕತೆಗಳ ನಾಯಕಿಯರೆಲ್ಲ ಹೆಚ್ಚು ಕಡಿಮೆ ಮಧ್ಯಮವರ್ಗದ ಸ್ತ್ರೀಯರು. ಹಾಗಾಗಿ ಮಧ್ಯಮ ವರ್ಗದ ಸ್ತ್ರೀಯರ ಸಹಜ ಬಯಕೆಗಳಾದ ಒಳ್ಳೊಳ್ಳೆ ಸೀರೆಗಳು, ಭದ್ರತೆಗಾಗಿ ಒಂದು ನೌಕರಿ, ಮೆಚ್ಚಿದವನನ್ನು ಮದುವೆಯಾಗುವ ತಹತಹ, ಆಗದಿದ್ದಾಗ ಆತ್ಮಹತ್ಯೆ, ನಿರಾಶಾವಾದ, ಮರುಕ ಮುಂತಾದ ಭಾವನೆಗಳೇ ಕತೆಗಳ ಕೇಂದ್ರವಾಗಿವೆ. ತೀವ್ರವಾದ ಬಡತನ, ಊರು ನೆಲೆಯಿಲ್ಲದ ವ್ಯಕ್ತಿಗಳ ಸಮಸ್ಯೆಗಳು ಲೇಖಕಿಗೆ ತೀರ ಹತ್ತಿರದಿಂದ ಗೊತ್ತಾಗಿದ್ದರೂ ಅವುಗಳ ಬಗ್ಗೆ ಇಲ್ಲಿ ಗಮನ ಹರಿಸಿದಂತೆ ಕಾಣುವುದಿಲ್ಲ. ಇದು ಕಮಲಾ ಹಂಪನಾ ಅವರೊಬ್ಬರಿಗೆ ಅನ್ವಯಿಸುವ ಮಾತಲ್ಲ. ಹಳ್ಳಿಗಾಡಿಂದ ಪಟ್ಟಣಕ್ಕೆ ಬಂದ ಲೇಖಕಿಯರಲ್ಲೆಲ್ಲ ಕಾಣುವ ಕೊರತೆಯಾಗಿದೆ. ನಗರೀಕರಣ, ಯಂತ್ರ ನಾಗರಿಕತೆ, ಸಂಸ್ಕೃತೀಕರಣ ಇವೆಲ್ಲ ಹಳ್ಳಿಗಾಡಿನ ಮಣ್ಣಿನ ಸೊಗಡಿಂದ ಬಂದ ಲೇಖಕ ಲೇಖಕಿಯರ ಮೇಲೆ ಬಿಡಿಸಿಕೊಳ್ಳಲಾಗದ ಪ್ರಭಾವ ಬೀರುತ್ತವೆ. ಪೂರ್ತಿ ನಗರೀಕರಣಕ್ಕೂ ಒಳಗಾಗದ, ಹಳ್ಳಿಯ ತಾಜಾತನವನ್ನು ಬಿಟ್ಟುಕೊಡದ ಒಂದು ಸಂಕ್ರಮಣ ಕಾಲದ ಸ್ಥಿತಿಯನ್ನು ಈ ಲೇಖಕಿಯ ಕತೆಗಳ ಅಭ್ಯಾಸದಿಂದ ಅರಿಯಬಹುದು. ದಲಿತವರ್ಗದಿಂದ ಬಂದು, ಅಕ್ಷರ ಕಲಿತು, ಅಂತರ್ಜಾತೀಯ ವಿವಾಹ ಮಾಡಿಕೊಂಡು ಎಚ್ಚೆತ್ತಂಥ ವಿಚಾರ ಧಾರೆಯ ಪ್ರಭಾವಕ್ಕೆ ಒಳಗಾದವರಿಗೂ ಯಜಮಾನ ಸಂಸ್ಕೃತಿಯ ಜಿಗಿ ಹಿಡಿತ ಎಷ್ಟು ಗಾಢವಾಗಿದೆಯೆಂಬುದನ್ನು, ಅದರಿಂದ ಅವರು ಬಿಡಿಸಿಕೊಳ್ಳಲು ಸೆಣಸಾಡುತ್ತಿರುವುದನ್ನು ಅವರ 'ನಕ್ಕಿತು ಹಾಲಿನ ಬಟ್ಟಲು'ನ ಕತೆಗಳ ಅಧ್ಯಯನದಿಂದ ಕಾಣಬಹುದು. ಇಂಥ ಪ್ರಾಮಾಣಿಕ ಸೆಣಸಾಟದ ಸೋಲು ಗೆಲುವುಗಳನ್ನು ಕತೆಗಳಲ್ಲಿ ದಾಖಲಿಸುವಾಗ ಉಂಟಾಗುವ ದ್ವಂದ್ವ ಕೂಡ ಪ್ರಮುಖವಾದ ಸಾಧನೆಯಾಗಿರುತ್ತದೆ.

ಆಮುಖ

ಜಿ. ಆರ್. ತಿಪ್ಪೇಸ್ವಾಮಿ

ಪ್ರೊ॥ ಕಮಲಾ ಹಂಪನಾ ಅವರು ಕಥೆ, ಕವನ, ವಿಮರ್ಶೆ, ವಿಚಾರ, ಸಂಶೋಧನೆ, ಶಿಶುಸಾಹಿತ್ಯ, ಜೀವನ ಚರಿತ್ರೆ, ಗ್ರಂಥ ಸಂಪಾದನೆ ಮೊದಲಾದ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಸಾಹಿತ್ಯಕೃಷಿ ನಡೆಸಿದ್ದಾರೆ. ಲೇಖಕಿಯಾಗಿ, ಭಾಷಣಕಾರ್ತಿಯಾಗಿ ಮತ್ತು ಉತ್ತಮ ಉಪನ್ಯಾಸಕಿಯಾಗಿಯೂ ಹೆಸರಾಗಿದ್ದಾರೆ. ಅವರ ಪ್ರತಿಭೆಗೆ ಈ ಎಲ್ಲ ಆಯಾಮಗಳಿರುವುದರಿಂದ ಇವರಿಗೂ ಕನ್ನಡದ ಉಳಿದ ಲೇಖಕಿಯರಿಗೂ ವ್ಯತ್ಯಾಸವಿದೆ. ಕಮಲಾ ಹಂಪನಾ ಅವರು ಅಧ್ಯಾಪನದ ಜೊತೆಗೆ ಸಾಹಿತ್ಯಕೃಷಿ ಮಾಡುತ್ತ ಬಂದವರು. ಈ ದೃಷ್ಟಿಯಿಂದ ಪ್ರಾಚೀನ ಸಾಹಿತ್ಯವಾಗಲೀ ಆಧುನಿಕ ಸಾಹಿತ್ಯವಾಗಲೀ ಇವರಿಗೆ ಚಿರಪರಿಚಿತ. ಯಾವುದೇ ವಿಷಯದ ಬಗೆಗೂ ಅಧಿಕೃತವಾಗಿ ಚರ್ಚಿಸಬಲ್ಲರು, ಮಾಹಿತಿ ನೀಡಬಲ್ಲರು. ಸೃಜನಶೀಲ ಗುಣವಿರುವ

ಇವರ ಕಥಾಸಂಕಲನಗಳಲ್ಲೂ ಬದುಕನ್ನು ತುಂಬ ಪ್ರೀತಿಯಿಂದ ಕಾಣುತ್ತಾರೆ. ಒಬ್ಬ ವ್ಯಕ್ತಿಯ ಮೂಲಕ ಒಂದು ಕುಟುಂಬದ ಮೂಲಕ ಒಂದು ಪ್ರದೇಶದ ಮೂಲಕ ಒಂದು ಪರಿಸರದ ಸಾಂಸ್ಕೃತಿಕ ಒಳನೋಟಗಳನ್ನು ಗುರುತಿಸುವ ಕುಶಲ ಬರವಣಿಗೆಯೂ ಇವರಿಗೆ ಸಿದ್ಧಿಸಿದೆ. ವ್ಯಕ್ತಿ ಚಿತ್ರಗಳ ಸಾಲಿನಲ್ಲಿ ಬಂದಿರುವ 'ಮುಡಿಮಲ್ಲಿಗೆ'ಯಾಗಲೀ 'ಆಮುಖ'ವಾಗಲೀ ಈ ಮಾತಿಗೆ ಸಾಕ್ಷಿಯಾಗುತ್ತವೆ.

೧೯೮೨ ರಲ್ಲಿ ಕಮಲಾ ಹಂಪನಾ ಅವರು 'ಮುಡಿಮಲ್ಲಿಗೆ'ಯನ್ನು ಹೊರತಂದರು. ಇದು ಹತ್ತು ವ್ಯಕ್ತಿಚಿತ್ರಗಳನ್ನು ಒಳಗೊಂಡಿರುವ ಸಂಕಲನ. ೧೯೬೬ ರಿಂದ ೧೯೮೧ರ ವರೆಗಿನ ಅವಧಿಯಲ್ಲಿ ಬೇರೆ ಬೇರೆ ಸಂದರ್ಭದಲ್ಲಿ ಬರೆದ ವ್ಯಕ್ತಿಚಿತ್ರಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಒದಗಿಸಿದ್ದಾರೆ. ಗಳಗನಾಥ, ಡಾ॥ ಇಡಾಸ್ಕಡ್ಡರ್, ಕಮಲಾದೇವಿ ಚಟ್ಟೋಪಾಧ್ಯಾಯ, ನೆಲ್ಲಿಕಾರು ರಾಧಮ್ಮ, ಕಸ್ತೂರಿಬಾ, ಡಿ. ಎಲ್. ಎನ್., ಕಾ. ಸ. ಧರಣೇಂದ್ರಯ್ಯ, ಮಿರ್ಜಿ ಅಣ್ಣಾರಾಯ, ರತ್ನಮ್ಮ, ಡಾ॥ ಪು. ತಿ. ನ. ಇವರುಗಳ ಎತ್ತರದ ವ್ಯಕ್ತಿತ್ವ ಗರಿಗೆದರುವ ಗದ್ಯದಲ್ಲಿ ದಾಖಲಾಗಿದೆ. ಕೃತಿಯ ಅಂತರಾಳವಾಗಿರುವ ಈ ಎಲ್ಲರ ಅವ್ಯಾಹತ ಜೀವನಕ್ರಮ ವೈವಿಧ್ಯಮಯವಾದುದು, ನಮ್ಮ ಹೃದಯದಲ್ಲಿ ಸ್ಥಿರವಾಗಿ ನೆಲೆಸುವಂಥದ್ದು. ಈ ಕೃತಿಯಲ್ಲಿ ಪರಿಚಯಿಸ ಲಾಗಿರುವವರು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳಲ್ಲಿ ಕನ್ನಡಿಗರಿಗೆ ಅಭಿರುಚಿ, ಅಭಿಮಾನ, ಆಸಕ್ತಿ, ಅಕ್ಕರೆಗಳನ್ನು ಉಕ್ಕಿಸಿದವರು ; ಚಿರಕಾಲ ನಿಲ್ಲುವ ಬರಹಗಳನ್ನು ನೀಡಿದವರು ; ಜನತೆಯಲ್ಲಿ ಸ್ವಾಭಿಮಾನ ಕೆರಳಿಸಿ ರಾಷ್ಟ್ರಾಭಿಮಾನವನ್ನು ಅರಳಿಸಿದ ಮಹಾನುಭಾವರು ; ಸಾಮಾನ್ಯಜನರ ಮಧ್ಯೆ ಸೌಹಾರ್ದದ ಕೊಂಡಿಗಳಾದವರು ; ಶಾಂತಸ್ಥಿತಿಯಲ್ಲಿ ಬರ್ಬರ ಸಂದರ್ಭಗಳನ್ನು ಎದುರಿಸಿದವರು. ಅನೇಕರಿಗೆ ಮಾರ್ಗದರ್ಶನವಾದ ಈ ವ್ಯಕ್ತಿತ್ವಗಳನ್ನು ಕೋಮಲವಾದ ಬರವಣಿಗೆ ಹಿಡಿದಿಟ್ಟಿದೆ. ಕಮಲಾ ಹಂಪನಾ ಅವರು ಇವರುಗಳ ಬದುಕು ಬರಹಗಳನ್ನೂ ಸಂಸ್ಕೃತಿ ಸಾಹಿತ್ಯ ಪರಂಪರೆ ಗಳನ್ನೂ ಗುರುತಿಸುವುದರ ಮೂಲಕ ಈ ವ್ಯಕ್ತಿಗಳ ಬಗೆಗೆ ಇನ್ನೂ ಹೆಚ್ಚಿನ ಮಟ್ಟದಲ್ಲಿ ತಿಳಿದುಕೊಳ್ಳಲು ಆಸಕ್ತಿ ಮೂಡಿಸಿದ್ದಾರೆ. ಗಣ್ಯರ ವೈವಿಧ್ಯ ಮಯವಾದ ಬದುಕಿನ ಕಥೆಯು ಆವರಣದಲ್ಲಿ ಸಂಸ್ಕೃತಿಯ–ಸಾಹಿತ್ಯದ ವಿವಿಧ ಆಯಾಮವಾಗಿವೆ. ನಮ್ಮಲ್ಲಿ ರಾಷ್ಟ್ರಪ್ರೇಮವನ್ನೂ ಸಾಹಿತ್ಯದ ಬಗೆಗಿನ ಪ್ರೀತಿಯನ್ನೂ ಹೆಚ್ಚಿಸಿದ ಇಂಥ ಪ್ರಮುಖರ ಜೀವನ ಗಾಥೆಗಳು ಹೆಚ್ಚು ಪ್ರಕಟವಾಗಿಲ್ಲದ ಸಂದರ್ಭದಲ್ಲಿ ಅಂಥದ್ದರ ಅಗತ್ಯವನ್ನು ಈ ಕೃತಿ ಎತ್ತಿ ಹಿಡಿಯುತ್ತದೆ.

'ಆಮುಖ' ಇಂಥದ್ದೇ ಆಶಯವನ್ನೊಳಗೊಂಡಿರುವ ವಿಶಿಷ್ಟಬಗೆಯ ಇನ್ನೊಂದು ಕೃತಿ. ಸಾಹಿತ್ಯದ ವಿದ್ಯಾರ್ಥಿಯಾದವರಿಗೆ, ಉಪನ್ಯಾಸಕರಾದವರಿಗೆ, ಬರಹಗಾರರಾದವರಿಗೆ, ಭಾಷಣಕಾರರಾದವರಿಗೆ ಸಾಹಿತಿಗಳ ಪರಿಚಯವಾಗುವುದು ಸಾಮಾನ್ಯ ಸಂಗತಿ. ಆ ಸಾಹಿತಿಗಳ ಮುಖಾಂತರ ಅವರ ಕುಟುಂಬದ, ಅವರ ಪರಿಸರದ ಪರಿಚಯವೂ ಸಹಜವಾಗಿಯೇ ಆಗುತ್ತದೆ. ಅಂಥ ಪರಿಚಯದಲ್ಲಿ ಸ್ವಾರಸ್ಯವಾದ ಅನುಭವಗಳಾಗಲೂಬಹುದು. ಕಹಿ ಅನುಭವಗಳೂ ಆಗಬಹುದು. ಆಶ್ಚರ್ಯ ಹುಟ್ಟಿಸುವ ಸಂಗತಿಗಳು ಹೊರಬೀಳಲೂಬಹುದು. ಅದೇನೇ ಇರಲಿ ಅದೊಂದು ನವೀನ ಪ್ರಪಂಚ. ಪ್ರಸ್ತುತ ಸಮಾಜದಲ್ಲಿಯ ಕೆಲವರ ಬದುಕಿನಲ್ಲಿ ಸಂಭವಿಸುವ ಕೆಲ ಸನ್ನಿವೇಶಗಳು ಬಹು ಮುಖ್ಯವಾಗಿಯೇ ಕಂಡುಬರುತ್ತವೆ. ಅಂಥ ರಸಸಂದರ್ಭಗಳನ್ನು ಬರಹ ರೂಪಕ್ಕೆ ಇಳಿಸಿದಾಗ ಅದೊಂದು ವಿಶಿಷ್ಟ ಸಂದರ್ಭದ ಸಾಂಸ್ಕೃತಿಕ ಎಳೆಗಳಾಗಿ ಗೋಚರವಾಗುವುದುಂಟು. ಆ ಮೂಲಕ ವ್ಯಕ್ತಿಗಳ ಸಂಬಂಧ, ಕುಟುಂಬದ ಆತ್ಮೀಯ ವಾತಾವರಣ, ನಿತ್ಯದ ಬದುಕು ಮೊದಲಾದ ವಿಷಯಗಳನ್ನು ತಿಳಿಯಲು ಸಹಾಯವಾಗುತ್ತದೆ. ಇಂಥ ಸ್ವಾರಸ್ಯ ಸಂಗತಿಗಳ ಅಭಿವ್ಯಕ್ತಿಯೇ 'ಆಮುಖ'.

"ಭಾವುಕರೂ ಬುದ್ಧಿಜೀವಿಗಳೂ ತೀವ್ರ ಸಂವೇದನಾಶೀಲರೂ ಕೇವಲ ಅಂತರ್ಮುಖಿಗಳೂ ಆದವರು ಲೇಖಕರು. ಇಂಥವರನ್ನು ಅನುಕರಣೆ ಮಾಡುವುದೆಂದರೆ ಅದೊಂದು ಕಠಿಣವಾದ ಕೆಲಸವೆ. ಲೇಖಕರ ಪತ್ನಿಯಾಗಿ ಅವರೆಂತಹ ಸನ್ನಿವೇಶಗಳನ್ನೆದುರಿಸಿದರು, ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ತಮ್ಮ ಪತಿಯರ ಲೇಖನಕಲೆ ನಿರಾತಂಕವಾಗಿ ಸಾಗಲು ತಾವೆಂತು ನೆರವಾದರು ಎನ್ನುವ ವಿಷಯ ಅತ್ಯಂತ ಗಣನೀಯವಾದದ್ದು. ಸಾಮಾನ್ಯವಾಗಿ ನಮ್ಮೆದುರು ನಿಲ್ಲುವುದು ಉತ್ತುಂಗವಾದ ಬರಹಗಾರನ ಚಿತ್ರ. ಆದರೆ ಅವರಿಗೆ ಮರೆಯಲ್ಲಿ ನೆರವಾಗಿ ನಿಂತ ಪತ್ನಿಯರ ಚಿತ್ರ ನಮ್ಮ ಗಮನಕ್ಕೂ ಸುಳಿಯದು. ಪ್ರಾಜ್ಞರಾದ, ಪ್ರತಿಭಾಪೂರ್ಣರಾದ ಲೇಖಕರ ನಡವಳಿಕೆ, ಹವ್ಯಾಸ, ಅದರಲ್ಲೂ ಗೃಹ ಹವ್ಯಾಸಗಳನ್ನು ಕುರಿತು ಅವರ ಪತ್ನಿಯರಷ್ಟು ಚೆನ್ನಾಗಿ ಆತ್ಮೀಯರಾಗಿ ಬೇರೊಬ್ಬರು ಚಿತ್ರಿಸಲಾರರು. ಯಾವ ಯಾವ ಸಂಗತಿಗಳು ಲೇಖಕನ ಪ್ರತಿಭೆಯನ್ನು ಎರಕಹೊಯ್ಯುತ್ತವೆ, ಲೇಖಕನನ್ನು ಸೃಷ್ಟಿಸುತ್ತವೆ ಎಂಬುದನ್ನರಿಯುವುದಂತೂ ತುಂಬಾ ಮುಖ್ಯ" (ಹ. ವೆಂ. ನಾಗರಾಜರಾವ್). ನಮ್ಮ ನಾಡಿನಲ್ಲಿ ಎಷ್ಟೋ ಜನ ಉತ್ತಮ ಬರಹಗಾರರಿದ್ದಾರೆ. ಬರಹಗಾರರ ಹೆಂಡತಿಯರಾಗಿ ತಮ್ಮ ಗಂಡಂದಿರ ಬಗೆಗೆ ಎಂಥ ಅಭಿಪ್ರಾಯಗಳನ್ನು ತಳೆದಿದ್ದಾರೆಂಬುದು ಕುತೂಹಲದ ಸಂಗತಿ. ಇಂಥ

ಸುಪ್ತಪ್ರಜ್ಞೆಗಳನ್ನು ಕನ್ನಡನಾಡಿನ ಜನತೆಗೆ ಪರಿಚಯಿಸುವ ಕಾರ್ಯವನ್ನು 'ಆಮುಖ' ತುಂಬ ಸೊಗಸಾಗಿ ನಿರ್ವಹಿಸುತ್ತದೆ.

ಹತ್ತೊಂಬತ್ತು ಜನ ಹಿರಿಯ ಸಾಹಿತಿಗಳ ಶ್ರೀಮತಿಯರನ್ನು ಕುರಿತ ಪುಸ್ತಕವಿದು. ಮಾಸ್ತಿ, ಪು.ತಿ.ನ., ಗೋಕಾಕ್, ಡಿ.ಎಲ್.ಎನ್., ಶ್ರೀರಂಗ, ದೇಜಗೌ, ಅ.ನ.ಕೃ. ರಂ. ಶ್ರೀ ಮುಗಳಿ, ಕುವೆಂಪು, ಡಾ. ಎಂ. ಶಿವರಾಂ, ಎಸ್. ವಿ. ರಂಗಣ್ಣ, ಮಿರ್ಜಿ ಅಣ್ಣಾರಾಯ, ಪುಟ್ಟಸ್ವಾಮಯ್ಯ, ಶಿವಮೂರ್ತಿಶಾಸ್ತ್ರಿ, ಶಂಬಾಜೋಶಿ, ಸಿ. ಕೆ. ವೆಂಕಟರಾಮಯ್ಯ, ಸಿದ್ಧಯ್ಯ ಪುರಾಣಿಕ ಮೊದಲಾದವರ ಶ್ರೀಮತಿಯರನ್ನು ಹಾಗೂ ತಿರುಮಲೆ ರಾಜಮ್ಮ, ಶಾಂತಾದೇವಿ ಮಾಳವಾಡ ಇವರೆಲ್ಲರನ್ನು ಸಂದರ್ಶಿಸಿ ಬರೆದ ಲೇಖನಗಳು ಇಲ್ಲಿ ಪ್ರಧಾನ ಪಟ್ಟ ಪಡೆದಿವೆ. ಒಬ್ಬೊಬ್ಬರ ಜೀವನದಲ್ಲಿ ಕಾಣಿಸಿಕೊಳ್ಳುವ ಲವಲವಿಕೆಗಳು, ಸಾಂಸಾರಿಕ ವಿಷಯಗಳು ಇಂಥ ಸಂದರ್ಶನ ಗಳಿಗೆ ಪ್ರೇರಣೆಯಾಗುವ ಸಾಧ್ಯತೆಗಳು ಹೆಚ್ಚು. ಅಂದರೆ ಇಲ್ಲಿಯ ಎಲ್ಲ ಬರಹಗಳೂ ಇತ್ತೀಚೆಗೆ ಬರೆದಿರುವಂಥವು ಎಂದು ಯಾರೂ ಭಾವಿಸಬಾರದು. 'ಪ್ರತಿಭಾನ್ವಿತ ಲೇಖಕರ ಪತ್ನಿಯರು' ಎಂಬ ಶೀರ್ಷಿಕೆಯಲ್ಲಿ ಇವೆಲ್ಲ 'ಪ್ರಜಾಮತ' ವಾರಪತ್ರಿಕೆಯಲ್ಲಿ ಹೊರಬಂದಿವೆ. ದಿನಾಂಕ ೧೪-೧-೧೯೬೮ ರಿಂದ ಪ್ರಾರಂಭವಾದ ಈ ಲೇಖನಮಾಲೆ ದಿನಾಂಕ ೨೧-೭-೧೯೬೮ ರಂದು ಮುಕ್ತಾಯವಾಯಿತು. ಹೀಗೆ ಪತ್ರಿಕೆಯಲ್ಲಿ ಪ್ರಕಟಗೊಂಡ ಸಂದರ್ಶನ ಗಳನ್ನೆಲ್ಲ ೧೬ ವರ್ಷಗಳ ನಂತರ ಈಗ ಒಂದೆಡೆ ಒದಗಿಸಿಕೊಟ್ಟಿದ್ದಾರೆ. ಇದು ಸ್ವಾಗತಾರ್ಹ ವಿಷಯ.

ಶ್ರೀಮತಿ ಪಂಕಜಮ್ಮ ಮಾಸ್ತಿಯವರಿಂದ ಹಿಡಿದು ಶ್ರೀಮತಿ ಗಿರಿಜಾ ದೇವಿ ಸಿದ್ಧಯ್ಯ ಪುರಾಣಿಕರವರೆಗಿನ ಲೇಖನಗಳಲ್ಲಿ ಆಯಾ ಕುಟುಂಬಗಳ ಚಿತ್ರಣ, ಪತಿ ಪತ್ನಿಯರ ಮೈತ್ರಿ, ಶಾರೀರಿಕ ವರ್ಣನೆಗಳ ಜೊತೆ ಜೊತೆಯಲ್ಲಿ ವ್ಯಕ್ತಿ ಚಿತ್ರಣ, ನಾಡು ನುಡಿ ಪ್ರೇಮ, ದೇಶಭಕ್ತಿ, ಸಾಹಿತ್ಯಕ್ಷೇತ್ರಗಳಲ್ಲಿ ಸಲ್ಲಿಸಿದ ಕಾಣಿಕೆ, ಉತ್ತಮ ಬದುಕು, ಕಲೆಯಲ್ಲಿಯ ಆಸಕ್ತಿ, ಸಂಪ್ರದಾಯ ದಲ್ಲಿಯ ಒಲವು, ಸಹನೆ–ಪ್ರೀತಿ, ಸಾಹಿತಿಗಳ ಪರಿಚಯ, ಅಪೂರ್ವ ಸಂದರ್ಭಗಳು, ಬಹುಮುಖ ಪ್ರತಿಭೆ, ಪತಿವರ್ಯರ ಸೇವೆಯಲ್ಲಿ–ಸಾಹಿತ್ಯಿಕ ಸೇವೆಯಲ್ಲಿ ಪತ್ನಿಯರ ನೆರವು, ಹಿರಿಯರ ಪ್ರಭಾವ, ಶಿಸ್ತು ಸಂಯಮಗಳು, ಮದುವೆ, ಮನೆತನ, ಅಧ್ಯಯನದಲ್ಲಿ ಆಸಕ್ತಿ, ಬರವಣಿಗೆಯಲ್ಲಿ ಆಸಕ್ತಿ, ಆತಿಥ್ಯ, ಆತ್ಮೀಯತೆ, ಅನುಭವಗಳು, ಪ್ರಾಮಾಣಿಕತೆ ಮೊದಲಾದ ಇನ್ನು ಅನೇಕ ವಿಷಯಗಳ ಸುತ್ತ ಕುಟುಂಬವನ್ನು ಪತಿ ಪತ್ನಿಯರ ಆತ್ಮೀಯ

ವಾತಾವರಣವನ್ನು ಕಮಲಾ ಹಂಪನಾ ಅವರು ತುಂಬ ಹತ್ತಿರದಿಂದ ಪರಿಚಯಿಸಿರುವುದು ಔಚಿತ್ಯಪೂರ್ಣವಾಗಿದೆ. ಎಲ್ಲರ ಬಗೆಗೂ ಹೃದಯವಂತಿಕೆ ಇದೆ. ಪ್ರತಿಯೊಂದು ಬರಹವನ್ನು ಓದುವಾಗ ಇನ್ನಷ್ಟು ವಿಸ್ತರಿಸಿ ಬರೆದಿದ್ದರೆ ಚೆನ್ನಾಗಿತ್ತು ಎಂಬ ಭಾವನೆ ಮೂಡುವುದುಂಟು. ಅಂಥ ಆಕರ್ಷಣೆ ಬರವಣಿಗೆಯಲ್ಲಿದೆ. ಯಾವಕಡೆಯೂ ಕೊಂಕುಮಾತುಗಳು ಕೇಳಿಬರುವುದಿಲ್ಲ, ನಮ್ಮ ಗಮನಕ್ಕೆ ಬಾರದಿರುವಂಥ ಒಳನೋಟಗಳನ್ನು ದಾಖಲಿಸಿರುವುದರಿಂದ ಕೃತಿಗೆ ಸಮಗ್ರತೆ ದೊರಕಿದೆ. ಹಿಂದೆ ನಿಂತು ಅನ್ಯರ ಪ್ರತಿಭೆಗೆ ಪ್ರಾತಿನಿಧ್ಯ ನೀಡಿರುವ ಇವರ ಬರಹದಲ್ಲಿ ಸರಳತೆ ಇದೆ, ಆಕರ್ಷಣೆ ಇದೆ. ಕಾವ್ಯಾತ್ಮಕ ಹೊಳಹುಗಳಿವೆ, ಸಿದ್ಧಿಸಿದ ಶೈಲಿ ಇದೆ. ಒಟ್ಟಾರೆ ಇಡೀ ಸಂದರ್ಶನಮಾಲೆ ಒಂದು ರೀತಿಯ ತಟಸ್ಥ ಭೂಮಿಕೆಯಿಂದ ಸಾಗಿದೆ.

ಎಷ್ಟೋ ಜನ ಸಾಹಿತಿಗಳನ್ನು ನಾವು ಬಲ್ಲೆವು. ಆದರೆ ಅವರೆಲ್ಲರ ಎಲ್ಲಾ ವಿಷಯಗಳೂ ನಮಗೆ ಗೊತ್ತಿರುವುದಿಲ್ಲ. ನಮ್ಮ ಅರಿವಿಗೆ ಬಂದಿರದ ವಿಚಾರಗಳನ್ನು ಸಂದರ್ಶನದ ಮೂಲಕ ಕೊಡುವ ಪ್ರಯತ್ನ ಅಭಿನಂದನಾರ್ಹವಾದುದು. ಪತ್ನಿಯರನ್ನು ಕುರಿತ ಸಂದರ್ಶನ ಇದಾಗಿದ್ದರೂ ಪರೋಕ್ಷವಾಗಿ ಪತಿವರ್ಯರ ವಿಚಾರಗಳೂ ಬಂದಿವೆ. ಗಂಡನ ಕುಟುಂಬದ ಅಥವಾ ಆ ಪರಿಸರದ ಇಡೀ ವ್ಯಕ್ತಿತ್ವವನ್ನು ಕೆಲವೇ ಮಾತುಗಳಲ್ಲಿ ಪರಿಚಯಿಸುವ ಜಾಣ್ಮೆ ಇಲ್ಲಿ ಕಂಡುಬರುತ್ತದೆ. ಬೇರೆ ಬೇರೆ ಕುಟುಂಬಗಳ ವಿಭಿನ್ನ ಸ್ವಭಾವಗಳನ್ನು ಪರಿಚಯಿಸುವಲ್ಲಿ ಲೇಖಕಿಯ ಔಚಿತ್ಯಪ್ರಜ್ಞೆ ಎಷ್ಟು ಮಹತ್ವದ್ದು ಎಂಬುದೂ ತಿಳಿಯುತ್ತದೆ. ಶ್ರೀಮತಿಯರನ್ನು ಕುರಿತ ಬರವಣಿಗೆ ಇದಾಗಿದ್ದರೂ ಅನೇಕ ಸಂದರ್ಭಗಳಲ್ಲಿ ಪತಿಯರ ವಿಚಾರಗಳು ಪ್ರಧಾನಪಟ್ಟ ಗಿಟ್ಟಿಸಿವೆ. ಪುರುಷ ಪ್ರಧಾನ ವ್ಯವಸ್ಥೆಯನ್ನು ಟೀಕಿಸುವ ನಮ್ಮಂಥವರಿಗೂ ಇದೇನಿದು ಹೆಣ್ಣನ್ನು ಬರೀ ಹೊಗಳಿ ಅಟ್ಟಕ್ಕೇರಿಸಿದ್ದಾರೆಂಬ ಭಾವನೆ ಬರುವುದುಂಟು. ಈ ಭಾವನೆಗಿಂತ ಇಲ್ಲಿಯ ಸಾಂಸಾರಿಕ ಜೀವನ ಅಷ್ಟೊಂದು ಸೊಗಸಾಗಿತ್ತು ಎಂಬುದನ್ನು ತಿಳಿಯಬೇಕಾಗುತ್ತದೆ. ಈ ಎಲ್ಲ ಹಿನ್ನೆಲೆಗಳಿಂದ ಸಂಸಾರಮಾಲೆಗಳನ್ನು ಮೀರಿಸುವ ಪ್ರಸ್ತುತ ಕೃತಿ ತುಂಬ ಉಪಯುಕ್ತವಾದುದು ಎನಿಸುತ್ತದೆ. ಬಿ. ಶಿವಮೂರ್ತಿಶಾಸ್ತ್ರಿ ದಂಪತಿಗಳು, ಬಿ. ಪುಟ್ಟಸ್ವಾಮಯ್ಯ ದಂಪತಿಗಳು, ಪಂಕಜಮ್ಮ ಮಾಸ್ತಿ, ಇಂದಿರಮ್ಮ, ಎಸ್. ವಿ. ರಂಗಣ್ಣ, ತಿ. ತಾ. ಶರ್ಮ, ಡಿ. ಎಲ್. ಎನ್., ಅ. ನ. ಕೃ., ಮಿರ್ಜಿ, ಸಿ. ಕೆ. ವೆಂಕಟರಾಮಯ್ಯ, ರಾಶಿ, ಶ್ರೀರಂಗ ಇವರುಗಳೆಲ್ಲ ದಿವಂಗತರಾಗಿದ್ದಾರೆ. ಅವರುಗಳು ಬದುಕಿದ್ದಾಗಲೇ ಕೃತಿ ಹೊರಬಂದಿದ್ದರೆ ನೋಡಿ ಸಂತೋಷಿಸುತ್ತಿದ್ದರು.

ಪತ್ನಿಯರ ವ್ಯಕ್ತಿತ್ವವನ್ನು ಪರಿಚಯಿಸುವುದರ ಜೊತೆಗೇ ಅವರೆಲ್ಲರ ಭಾವಚಿತ್ರಗಳನ್ನೂ ಪತಿಯರ ಸಾಹಿತ್ಯಿಕ ಸಾಧನೆಗಳನ್ನೂ ಅನುಬಂಧದಲ್ಲಿ ಕಮಲಾ ಹಂಪನಾ ಅವರು ಒದಗಿಸಿದ್ದಾರೆ. ಇದೆಲ್ಲ ಪ್ರಶಂಸಾರ್ಹ ವಿಷಯವೇ. ಆದರೆ ಸಾಹಿತಿಗಳ ಸಾಹಿತ್ಯಕೃತಿಗಳ ಪಟ್ಟಿ ಕೊಡುವಾಗ ಮದುವೆಗೆ ಮುನ್ನ ಬರೆದ ಕೃತಿಗಳು, ಮದುವೆಯ ನಂತರ ಬರೆದ ಕೃತಿಗಳು ಎಂದು ಭಾಗ ಮಾಡಿ ಕೃತಿಗಳ ಪಟ್ಟಿಯನ್ನು ಒದಗಿಸಿದ್ದಿದ್ದರೆ ವೈವಾಹಿಕ ಜೀವನದಲ್ಲಿ ಅಥವಾ ಅವರ ಬದುಕಿನಲ್ಲಿ ಶ್ರೀಮತಿಯರು ತಮ್ಮ ಪತಿವರ್ಯರುಗಳಿಗೆ ಎಷ್ಟರಮಟ್ಟಿಗೆ ಸಾಹಿತ್ಯರಚನೆಗೆ ಅವಕಾಶ ಮಾಡಿಕೊಟ್ಟಿದ್ದಾರೆ, ಪ್ರೇರಣೆ ನೀಡಿದ್ದಾರೆ, ಪ್ರೋತ್ಸಾಹ ಕೊಟ್ಟಿದ್ದಾರೆ ಎಂಬುದನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗುತ್ತಿತ್ತು. ಇಂಥ ಸಣ್ಣ ಪುಟ್ಟ ಲೋಪಗಳು ಏನೇ ಇರಲಿ ಕನ್ನಡದಲ್ಲಿ ಇದೊಂದು ವಿಶಿಷ್ಟ ಬಗೆಯ ಪುಸ್ತಕ. ಈ ಕಾರಣದಿಂದ ಲೇಖಕಿಯ ಶ್ರಮ ಸಾರ್ಥಕ್ಯ ಪಡೆಯುತ್ತದೆ.

ಆಮುಖ
ಕೆಲವು ಅನಿಸಿಕೆಗಳು

ಎಂ. ಶಿವಮಲ್ಲು

ಸಂದರ್ಶನವೊಂದು ಸಾಹಸ ಯಾತ್ರೆ ಎನ್ನುವಲ್ಲಿ ಅನುಮಾನವಿಲ್ಲ. ಇದು ಪ್ರಜ್ಞಾಪೂರ್ವಕವಾಗಿದ್ದಲ್ಲಿ ಮಹತ್ಸಾಧನೆಯ ಸಾಲಿನಲ್ಲಿ ನಿಲ್ಲುವಂತಹದು. ಸಂದರ್ಶಿಸುವವರ ಮತ್ತು ಸಂದರ್ಶನಕ್ಕೆ ಒಳಗಾಗುವವರ ನಡುವೆ ಕೃತಿಯೊಂದರಲ್ಲಿ ಅಂತರ್ಗತವಾದ ಮತ್ತು ಅಂತರ್ಗತವಾಗಿಲ್ಲದ ಬಹುತೇಕ ವಿಚಾರಗಳು ಮುಖಾಮುಖಿಯ ಪರಾಮರ್ಶೆಗೆ ಒಳಪಟ್ಟು ನೈಜವಾಗಿ ಹೊರಚೆಲ್ಲಿ ಸಾಹಿತ್ಯದ ಮತ್ತೊಂದು ಸೃಜನಾತ್ಮಕತೆಗೆ ಕಾರಣವಾಗುತ್ತದೆ. ಈ ದೃಷ್ಟಿಯಿಂದ ಯೋಚಿಸಿದಲ್ಲಿ 'ಆಮುಖ' ನಿಜಕ್ಕೂ ಒಂದು ಅರ್ಥಪೂರ್ಣ ಕೃತಿಯೆಂಬ ಕೀರ್ತಿಯನ್ನು ಗಳಿಸಿಕೊಳ್ಳಬಲ್ಲದು.

ಸಂದರ್ಶನ ಸಾಹಸಕ್ಕೆ ಕೈ ಹಚ್ಚುವವರ ಮನಸ್ಸು ಹದವಾಗಿದ್ದು ಕುತೂಹಲ ಗರಿಗೆದರಿರಬೇಕು. ಇದರಲ್ಲಿ ಎರಡು ಧೋರಣೆ ಅತಿಮುಖ್ಯ.

ವೈಯಕ್ತಿಕ ಕ್ರಿಯಾಶಕ್ತಿಗಳಿಗೆ ಬಂದೊದಗುವ ಸಮಾಧಾನ ಒಂದಾದರೆ, ಸಂದರ್ಶನದ ನಂತರ ಅಭಿವ್ಯಕ್ತಗೊಂಡ ವಿಚಾರಸರಣಿಗೆ ಪ್ರತಿಸ್ಪಂಧಿಸುವಂತಹವರಲ್ಲಿ ಸಾರ್ಥಕತೆಯನ್ನು ಕಂಡುಕೊಳ್ಳುವುದು ಮತ್ತೊಂದು. ಆದರೆ ಇದಕ್ಕೆ ಪೂರ್ವ ಹಿನ್ನೆಲೆಯಾಗಿ ಸಂದರ್ಶಿಸುವವರ ಧ್ಯೇಯ ಮತ್ತು ಗುರಿಗಳಲ್ಲಿ ತಾಳ್ಮೆ ಪೂರ್ಣವಾಗಿರಬೇಕು. ವಿಶಿಷ್ಟ ಸಂದರ್ಭದಲ್ಲಿ ಎದುರಾಗುವ ಕ್ಲಿಷ್ಟತೆಗಳಿಂದ ತಾಳ್ಮೆ ಇಲ್ಲದಿದ್ದಲ್ಲಿ ಉದ್ದೇಶವೇ ಬದಲಾಗಬಹುದು. ತಾಳ್ಮೆ ಅತ್ಯವಶ್ಯವಾಗಿ ಇರಲೇಬೇಕು ಎಂಬುದನ್ನೇ "ಆ ಮುಖ"ದಲ್ಲಿನ "ಪಂಕಜಮ್ಮ ಮಾಸ್ತಿ"ಯವರ ಮೊದಲ ಉತ್ತರ ಮುಗುಳ್ನಗೆ ಎಂಬುದು ಸಾಕ್ಷಿಯಾಗಿದೆ.

ಸಂದರ್ಶನ ಸಂದರ್ಭದಲ್ಲಿ ಪ್ರಶ್ನೆ ಕೇಳುವವರ ಮನಸ್ಸು ಇದನ್ನು ಆಸ್ವಾದಿಸುವವರ ಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸುತ್ತದೆ. ಆಗ ಮೂಡುವ ಪ್ರಶ್ನೆಗಳು ಪೂರ್ವಯೋಜಿತವಾಗಿ ಇಲ್ಲವೆ ಆ ಸಂದರ್ಭದಲ್ಲಿ ಬಂದ ಉತ್ತರಗಳಿಗೆ ಅನುಗುಣವಾಗಿ ಕೂಡಿದ್ದು ಜೀವನದ ಆಳ ಅನುಭವಗಳನ್ನು ಹೊರತೆಗೆಯುವ ಧಾಟಿಯಾಗಿರುತ್ತದೆ. ಈ ಹಿನ್ನೆಲೆ "ಆ ಮುಖ"ದಲ್ಲಿ ಪ್ರಸಾರವಾಗಿರುವ ಒಳಸತ್ವಗಳ ಪದರುಗಳನ್ನು ಈ ರೀತಿಯಾಗಿ ಗಮನಿಸಬಹುದು.

ಕನ್ನಡ ಸಾಹಿತ್ಯ ಕಂಡ ಅಪೂರ್ವ ಬರಹಗಾರರ ಜೀವನ, ಚರಿತ್ರೆ, ಸಾಧನೆ, ಪೂರ್ವ ಹಿನ್ನೆಲೆ, ನಿರ್ಧಾರಗೊಂಡ ಕ್ಷೇತ್ರ ಮುಂತಾದುವುಗಳನ್ನು ಸ್ವೀಕರಿಸಿದವರ ಗುಂಪು ಎರಡು, ಸಾಹಿತ್ಯಾಭ್ಯಾಸದ ಹಿನ್ನೆಲೆಯಾಗಿ ಕಂಡವರು ಮತ್ತು ಶ್ರವ್ಯ ಮಾಧ್ಯಮದಿಂದ ಭಾವಪರವಶರಾಗಿ ಮನದಲ್ಲೆ ಅಭಿನಂದಿಸಿದವರು ಮತ್ತೊಂದು ಗುಂಪು. ಎರಡನೆಯದನ್ನು ಉದಾಹರಿಸಹೊರಟರೆ ಚಿತ್ತಾಕರ್ಷಕವಾದ ಭಾವಗೀತೆಗಳೆನ್ನಬಹುದು. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಗೆ ದಾಖಲಾಗಬೇಕಾದ ವಿಚಾರಗಳು ಇನ್ನೂ ಅಪಾರ. ಇವುಗಳ ಸಂಗ್ರಹಣ ಕಾರ್ಯ, ಕಾಲದ ಜೊತೆಯಲ್ಲಿ ಸಾಗುತ್ತಾ ಹೊರಡುತ್ತದೆ. ಈ ದೃಷ್ಟಿಯಲ್ಲಿ ಕಮಲಾ ಹಂಪನಾ ರವರ "ಆ ಮುಖ"ವೆಂಬ ಕೃತಿಯಲ್ಲಿ ವ್ಯಕ್ತವಾಗುವ ವಿಚಾರಗಳು ಕನ್ನಡ ಸಾಹಿತ್ಯ ಚರಿತ್ರೆಗೆ ಮತ್ತಷ್ಟು ಪುಷ್ಟಿ ನೀಡುತ್ತಿದೆ.

ಈ ಕೃತಿಯ ವಿಶೇಷವಿಷ್ಟು : ಲೇಖಕರ ಅಂತರಾಳದಿಂದ ಹೊರಚೆಲ್ಲದ ಎಷ್ಟೋ ವಿಷಯಗಳು ಅವರ ಬದುಕಿನ ಅರ್ಥವೆನ್ನುವ ಇನ್ನೊಂದು ಮುಖದಿಂದ, ನಿರೀಕ್ಷಿತ ಇಲ್ಲವೆ ಅನಿರೀಕ್ಷಿತ ಭೇಟಿಗೆ ಒಳಗಾಗಿ, ಅಭಿವ್ಯಕ್ತಗೊಳ್ಳುವ ಎಷ್ಟೊ ವಿಚಾರಗಳು ಜೀವನದ ನಿಜ ಸಂಗತಿಗಳಾಗಿ ಹೊರಚೆಲ್ಲುತ್ತವೆ. ಅಲ್ಲದೆ ಲೇಖಕರಿಗಿರುವ ಕಲ್ಪನಾ ಸಾಮರ್ಥ್ಯದ ಮೂಲಕ ಜೀವನವನ್ನು ವೈಭವೀಕರಿಸಿ

ನೋಡುವ ದೃಷ್ಟಿಕೋನವಿರುತ್ತದೆ. ಪ್ರತಿಭೆ ಪತ್ನಿಯರಲ್ಲಿ ಇದ್ದರೂ ಪತಿಯರಲ್ಲಿ ಉಂಟಾಗುವಷ್ಟಿರಲಾರದು. ಇದರಿಂದ ಲೇಖಕರನ್ನೆ ಸಂದರ್ಶಿಸಿದಲ್ಲಿ ಹೇಳುವ ವಿಚಾರಗಳು ಸತ್ಯದಿಂದ ದೂರ ನಿಲ್ಲಲೂಬಹುದು. ಆದರೆ ಪತ್ನಿಯರಲ್ಲಿ ನೇರ ವಿಚಾರಗಳು ಲಭ್ಯವಾಗುವುದರಿಂದ ಕನ್ನಡ ಸಾಹಿತ್ಯ ಚರಿತ್ರೆಗೆ ಮತ್ತಷ್ಟು ವಿಚಾರಗಳು ದೊರಕುತ್ತವೆ. ಅಲ್ಲದೆ ಶ್ರೀಮತಿ ಕಮಲಾ ಹಂಪನಾ ರವರು ಲೇಖಕರ ಪತ್ನಿಯರನ್ನು ಸೌಹಾರ್ದತೆಯಿಂದ ಭೇಟಿಯಾಗಿರುವುದರಿಂದ ಮುಕ್ತ ವಾತಾವರಣ ಸೃಷ್ಟಿಯಾಗಿದೆ.

ಸಾಹಿತ್ಯ ಸೃಷ್ಟಿಯ ಕಾರ್ಯ ಕೈಗೊಂಡಾಗ ಮನಸ್ಸು ಭಾವಾವೇಶಕ್ಕೊಳಗಾಗಿ ಏಕಾಗ್ರತೆ ಮೈತಳೆದು ನಿಲ್ಲುತ್ತದೆ. ಆಗಿನ ಸಂದರ್ಭದ ಮುಂದೆ ಉಳಿದವು ಗೌಣವಾಗಿರುತ್ತವೆ. ವಾಸ್ತವಿಕವಾಗಿ ಸಮಸ್ಯೆಗಳ, ಬಂಧನಗಳ ನಡುವೆ ಬದುಕಿ ಬರೆಯುವಾಗ ಬರವಣಿಗೆಗೆ ಅಷ್ಟು ಪ್ರತ್ಯೇಕತೆಯನ್ನು ಕಲ್ಪಿಸುವುದು ಕಷ್ಟವಾಗಬಹುದು. ಇದರ ಹಿನ್ನೆಲೆಯಾಗಿ ಆ ಕುಟುಂಬದ ಜವಾಬ್ದಾರಿ ಹೊತ್ತ ಅವರವರ ಗೃಹಿಣಿಯರ ಪರಿಶ್ರಮವೇ ಇದಕ್ಕೆ ಬೆಂಬಲ ಒದಗಿಸುವುದು ಎನ್ನುವಲ್ಲಿ ಸ್ಪಷ್ಟತೆಯಿದೆ. ಲೇಖಕರ ಸೃಜನಶೀಲ ಉತ್ಕೃಷ್ಟ ಕ್ರಿಯಾಶಕ್ತಿಯ ಹಿನ್ನೆಲೆಯಲ್ಲಿ ಇಂತಹ ಅಮೂರ್ತ ಶಕ್ತಿಯೊಂದರ ಜವಾಬ್ದಾರಿಯುಳ್ಳ ಪ್ರಭಾವ ಬಹಳ ಮಹತ್ವದ ಸಂಗತಿಗಳಾಗಿವೆ. ಕವಿಯಾಗಿ ಸೃಷ್ಟಿಯ ಕಾರ್ಯಕ್ಕೆ ಕೈ ಹಚ್ಚಿದಲ್ಲಂತೂ ಭಾವುಕತೆಯು ತೀವ್ರಗೊಂಡು ಎಲ್ಲಾ ಶೃಂಗಾರ ಮತ್ತು ಅಲಂಕಾರ ಸ್ವರೂಪಗಳನ್ನು ಸಹಧರ್ಮಿಣಿಯರಲ್ಲಿ ಗುರುತಿಸುವುದಾಗಿದೆ. ಅಂದರೆ ಕೃತಿರಚನೆಯ ಹಿನ್ನೆಲೆಯಲ್ಲಿ ಪ್ರೇರಕ ಮತ್ತು ಪೂರಕ ಶಕ್ತಿಯಾಗಿ ಇವರೇ ನಿಲ್ಲುತ್ತಾರೆ. ಲೇಖಕರ ಜೀವನದ ಪೂರ್ಣ ದೃಷ್ಟಿಕೋನ ಆ ಮುಖದಲ್ಲಿ ಕೇಂದ್ರೀಕರಣಗೊಂಡಿರುವುದರಿಂದ, ಸಾಮಾಜಿಕ ನಿಲುವುಗಳ ಕಡೆ ಅಭಿವ್ಯಕ್ತಿ ಕ್ರಿಯೆ ಒಂದು ರೀತಿಯ ಅನುಭವ ಸತ್ಯಗಳಾಗಿ ಪ್ರಕಟಗೊಳ್ಳುತ್ತಾ ನಡೆಯುತ್ತವೆ. ರಾಷ್ಟ್ರಕವಿ ಪುಟ್ಟಪ್ಪನವರಂತಹ ಭಾವಸ್ಪರ್ಶತೆ ಸಹಧರ್ಮಿಣಿಯ ಸಹವಾಸದಲ್ಲಿಯೇ ಉಂಟಾಗುತ್ತದೆ, ಪತ್ನಿಯನ್ನು ಕುರಿತು "ನೀ ಕೈ ಬಿಡದಿರು, ನೀನೆನ್ನ ತಾಯಿ, ತಂದೆ, ಗುರು" ಎಂದು ಸಂಬೋಧಿಸುವುದು ಆಳ ಚಿಂತನೆಗಳಿಂದ ಕವಿಯ ಜೀವನದ ಒಳ ಪದರುಗಳು ಬಿಚ್ಚುವಂತಹ ಸಂದರ್ಭಗಳು ಇವರ ಜೀವನ ಚರಿತ್ರೆಗೆ ಮಾಹಿತಿಗಳು ಕ್ರೋಢೀಕರಣಗೊಳ್ಳುತ್ತಾ ನಡೆಯುತ್ತವೆ. ಇಂತಹ ವಿಚಾರ ಸಂಗ್ರಹಣೆಯು ಕವಿಯ ಇನ್ನೊಂದು ಮುಖದ ಅಮೂರ್ತ ಶಕ್ತಿಯಿಂದ ದಾಖಲೆಗಳನ್ನು ಒದಗಿಸುವ ಶ್ರೀಮತಿ ಕಮಲಾ ಹಂಪನಾ ಅವರ ಕೃತಿ ಖಂಡಿತವಾಗಿ ಗ್ರಂಥಋಣಕ್ಕೆ ಅರ್ಹ.

ಇಲ್ಲಿ ಸಂದರ್ಶಿಸಲ್ಪಟ್ಟ ೧೯ ಪ್ರತಿಷ್ಠಿತರ ಪತ್ನಿಯರಿಂದ ಗೋಚರವಾಗುವ ಕಟುಸತ್ಯ ಅಂಶವೆಂದರೆ ಇವರ ನಂತರದ ಮತ್ತು ಪೂರ್ವದ ಒಟ್ಟು ಪರಂಪರೆ ವಿದ್ಯಾವಂತಿಕೆಯನ್ನು ಗಳಿಸಿದ ಮತ್ತು ಸಾಹಿತ್ಯಕ್ಷೇತ್ರಕ್ಕೆ ಸೇವೆ ಸಲ್ಲಿಸಿದ ಹಿರಿಮೆಯಾಗಿದೆ. ಕನ್ನಡವಲ್ಲದ ಇನ್ನೊಂದು ಭಾಷೆ ಮನೆಯ ವ್ಯವಹಾರಿಕ ಭಾಷೆಯಾಗಿದ್ದರೂ ಕನ್ನಡದ ಉಳಿವು ಮತ್ತು ಬೆಳವಣಿಗೆಗೆ ಪೂರ್ಣ ಶ್ರದ್ಧೆಯಿರಿಸಿ ದುಡಿದ ಮನೆತನಗಳಾಗಿವೆ. ಮಕ್ಕಳು ಮೊಮ್ಮಕ್ಕಳು ಸಾಹಿತ್ಯವನ್ನು ಕುರಿತು ಓದುವ ಮತ್ತು ಬರೆಯುವ ಆರೋಗ್ಯಕರ ಬೆಳವಣಿಗೆ ಸೃಷ್ಟಿಯಾದುದರ ಅರಿವು ಈ ಕೃತಿಯಿಂದ ವ್ಯಕ್ತವಾಗುತ್ತಾ ಸಾಗುತ್ತದೆ.

'ಆಮುಖ'ದಲ್ಲಿ ಸಂದರ್ಶನಕ್ಕೆ ಒಳಗಾದ ಬರಹಗಾರರ ಶ್ರೀಮತಿಯವರಿಂದ ಅತಿ ಸೂಕ್ಷ್ಮವೆನಿಸಿದ, ಸೌಹಾರ್ದತೆಯಿಂದ ಗೊತ್ತಾಗುವ ಒಂದು ಅಂಶವೆಂದರೆ ಕನ್ನಡದ ಮಹಾ ಲೇಖಕರು ಒಂದು ಮನೆಯಿಂದ ಮತ್ತೊಂದು ಮನೆಗೆ ನೆಂಟಸ್ತಿಕೆ ಬೆಳೆಸಿದ್ದ ಸಹಜರೀತಿ ಬಹಳ ಸ್ಪಷ್ಟವಾಗಿ ತಿಳಿಯಲ್ಪಡುತ್ತದೆ. ಮಾಸ್ತಿಯವರ ಶ್ರೀಮತಿಯವರಾದ ಪಂಕಜಮ್ಮನವರು ಬೇಂದ್ರೆ, ಗೋಕಾಕ್, ಮುಗಳಿ ಇವರು ನನ್ನ ಅಣ್ಣ ತಮ್ಮಂದಿರು ಎನ್ನುವ ಅವರ ಆತ್ಮೀಯತೆ ನಿಜಕ್ಕೂ ಮನೆತನಗಳಲ್ಲಿದ್ದ ಒಲವು ನಿಲವುಗಳ ದಾಖಲೆಗಳನ್ನು ಈ ಕೃತಿ ನೀಡುತ್ತಾ ಹೊರಡುತ್ತದೆ.

ಶ್ರೀಯುತರ ಶ್ರೀಮತಿಯರು ಬಾಲ್ಯದಿಂದಲೆ, ಇಲ್ಲವೆ ನಂತರ ಸಾಹಿತ್ಯದ ಅಂತರಾಳವನ್ನು ಪ್ರವೇಶಿಸುವ ಸಾಹಸಕ್ಕೆ ಕೈ ಹಚ್ಚಿದವರು. ಇದರೀದ ಕಾವ್ಯ ಜಗತ್ತಿನೊಡನೆ ವಿಲೀನಗೊಂಡು ಸೃಷ್ಟಿಸಿದ ಬಹುಪಾಲು ಕೃತಿಗಳಿಗೆ ದೊರಕುವ ಮೊದಲ ಸಹೃದಯರು ಅವರವರ ಶ್ರೀಮತಿಯವರಾಗಿರುತ್ತಾರೆ. ಇಲ್ಲಿ ನಿಜವಾಗಿಯೂ ತಾನು ಬರೆದ ಬರೆಹ ಸಹಧರ್ಮಿಣಿಯಿಂದ ಮೆಚ್ಚುಗೆಗೆ ಒಳಗಾದಾಗ ಬೇರಾರೂ ಒಪ್ಪದಿದ್ದರೂ ತನ್ನ ಹತ್ತಿರದವರೊಬ್ಬರನ್ನು ಮೆಚ್ಚಿಸಿದನೆಂಬ ಖುಷಿ ಆ ಸಂದರ್ಭದಲ್ಲಿ ಅಂತರಾಳದಲ್ಲಿಯೇ ಮನೆಮಾಡಿರುತ್ತದೆ. ಒಂದು ರೀತಿಯಲ್ಲಿ ಅಲ್ಲಿಂದ ಸ್ವೀಕಾರಕ್ಕೆ ಒಳಗೊಂಡ ಬರವಣಿಗೆ ಸಾರ್ವತ್ರಿಕವಾಗಿ ಯಶಸ್ಸನ್ನು ಕಾಣುವ ಭರವಸೆಯುತ್ತ ಖಂಡಿತ ಸಾಗಿ ನಿಲ್ಲುತ್ತದೆ, ಶ್ರೀಮತಿಯವರು ಪ್ರತಿಕ್ರಿಯಿಸಿದಂತಹವುಗಳು ಆತ್ಮಾಭಿಮಾನಗಳನ್ನು ಪುಷ್ಟಿಗೊಳಿಸಿದ ಸಂಗತಿಗಳಾಗಿವೆ. ಪ್ರಾಯಶಃ ಸಹಜಸ್ಥಿತಿಯ ಬದುಕಿನೊಡನೆ ಬರವಣಿಗೆಯು ಸಂಯೋಜಿತವಾಗಿ ಅರ್ಥಪೂರ್ಣವಾದ ಮೌಲಿಕ ಪ್ರಸಂಗಗಳು ಈ ಕೃತಿಯಿಂದ ಅರ್ಥವಾಗುತ್ತಾ ಸಾಗುತ್ತದೆ. ಹಸ್ತಪ್ರತಿಯನ್ನು ಪ್ರತಿ ಮಾಡುವುದು, ಆ ಸಂದರ್ಭದಲ್ಲಿ ಅವುಗಳನ್ನು

ಮೆಚ್ಚುವುದು ಮುಂತಾದ ಅಂಶಗಳು ಕನ್ನಡದ ಆಳ ಅರಿವಿನೊಂದಿಗೆ ಸ್ವತಃ ಬರವಣಿಗೆಗೆ ಪ್ರೇರೇಪನಗೊಳ್ಳುವ ಸಂದರ್ಭಗಳಾಗಿಯೂ ಪರಿವರ್ತಿತ ಗೊಂಡಿವೆ. ಇದರಿಂದಲೇ "ವಸಂತಾದೇವಿ ಅ.ನ.ಕೃ. ಬರೆದ ನಾಲ್ಕು ಕಾದಂಬರಿಗಳು", "ಪಂಕಜಮ್ಮ ಮಾಸ್ತಿ"ಯವರು ಬರೆದ ಸಣ್ಣ ಕತೆಗಳು ಅವರವರ ಗಂಡಂದಿರ ನಿರ್ಧಾರಿತ ಮಾರ್ಗದಲ್ಲಿಯೇ ನಡೆದಂತವುಗಳೆಂದು ಸ್ಪಷ್ಟಪಡಿಸುತ್ತದೆ. ಇದು ನಿಜವಾಗಿಯೂ ಮಾಸ್ತಿ ಇಲ್ಲವೆ ಅ.ನ.ಕೃ. ಬರವಣಿಗೆಯ ಸಂದರ್ಭದಲ್ಲಿದ್ದಾಗ ಅವರ ಮಹತ್ವದ ಪೂರ್ಣ ಅರಿವು ಸ್ವಾನುಭವದಿಂದ ರೂಪುಗೊಂಡು ಸಂಸಾರದಿಂದ ಆ ತಾತ್ಕಾಲಿಕತೆಯ ಪ್ರತ್ಯೇ ಕತೆಗೆ ಅನುವುಮಾಡಿಕೊಡುವ ಧೋರಣೆ ಅವರಲ್ಲಿ ಗಟ್ಟಿಯಾಗಿ ನೆಲೆಗೊಂಡಿದ್ದಂತಹವುಗಳನ್ನು ಈ ಕೃತಿ ನಮಗೆ ಸಾದರಪಡಿಸುತ್ತದೆ.

ಕೃತಿಯೊಂದರ ವಿಮರ್ಶೆಗೆ ತೊಡಗುವಾಗ ಲೇಖಕನ ವೈಯಕ್ತಿಕ ನಿಲುವುಗಳ, ಜೀವನ ಚರಿತ್ರೆಗಳ ಬಗ್ಗೆ ಪ್ರಸ್ತಾಪಿಸುವುದು ಅಸಂಬದ್ಧವೆನ್ನುವ ವಿಮರ್ಶಾ ದೃಷ್ಟಿಕೋನಕ್ಕೆ ವಿಷಯಗಳನ್ನು ಒದಗಿಸಿಕೊಟ್ಟು ಚರ್ಚೆ ಒಂದು ಯಶಸ್ವಿ ಚೌಕಟ್ಟನ್ನು ಕಂಡುಕೊಳ್ಳುವ ಅವಕಾಶಗಳನ್ನು 'ಆ ಮುಖ'ದಂತಹ ಕೃತಿ ಹೆಗ್ಗಳಿಕೆಯ ಸ್ಥಾನ ಪಡೆಯಬಲ್ಲದು. ಇಂಥದೊಂದು ವಿಶಿಷ್ಟ ಕೃತಿ ರಚಿಸಿರುವ ಕಮಲಾ ಹಂಪನಾ ರವರು ನಮ್ಮ ವಿಶೇಷ ಅಭಿನಂದನೆಗೆ ಪಾತ್ರರು.

ಜಾತಿಯ ನಿರ್ಮೂಲನೆ

ಬೈರಮಂಗಲ ರಾಮೇಗೌಡ

ಮಹಾತ್ಮ ಗಾಂಧೀಜಿಯವರಿಗಿಂತ ಇಪ್ಪತ್ತೆರಡು ವರ್ಷ ತಡವಾಗಿ ಹುಟ್ಟಿದರೂ ಜಾತಿಯ ಜೈಲುಗಳಲ್ಲಿ ಕೊಳೆಯುತ್ತಿದ್ದ ಭಾರತೀಯರಿಗೆ ತಮ್ಮ ಪ್ರಖರ ವಿಚಾರಧಾರೆಗಳಿಂದ, ನಿರ್ಭಿಡೆಯ ಮಾತುಗಾರಿಕೆಯಿಂದ ಶಸ್ತ್ರಚಿಕಿತ್ಸೆ ಮಾಡುತ್ತ ಮಹಾತ್ಮರಷ್ಟೇ ಪ್ರಭಾವಶಾಲಿ ವ್ಯಕ್ತಿತ್ವ ಹೊಂದಿದ್ದವರು ಡಾ॥ ಭೀಮರಾವ್ ರಾಮ್‌ಜಿ ಅಂಬೇಡ್ಕರ್. ಭಾರತೀಯ ಸಮಾಜವೆಂಬ ವಟವೃಕ್ಷಕ್ಕೆ 'ಜಾತಿ' ಎಂಬ ರೋಗ ತಗುಲಿ ಎಷ್ಟೋ ಶತಮಾನಗಳಾಗಿವೆ. ಅಂದಿನಿಂದ ಇಂದಿನವರೆಗೆ ಈ ಜಾತಿಭೂತ ನಮ್ಮನ್ನು ಒಂದಲ್ಲ ಒಂದು ವಿಧದಲ್ಲಿ ಕಾಡುತ್ತಲೇ ಬಲಿ ತೆಗೆದುಕೊಳ್ಳುತ್ತಲೇ ಬಂದಿದೆ. ಈ ಅನಿಷ್ಟದ ಸೋಂಕಿನಿಂದ ರೋಗಗ್ರಸ್ತವಾಗಿರುವ ಸಮಾಜವನ್ನು ಔನ್ನತ್ಯದ ಕಡೆಗೊಯ್ಯಲು ಎಷ್ಟೋ ಮಹನೀಯರು ಅಸಾಮಾನ್ಯ ಪ್ರಯತ್ನಗಳನ್ನು ನಡೆಸಿದ್ದರೂ ಕಾರ್ಯಸಾಧನೆ

ಮಾತ್ರ ಕುಂಟೆತ್ತಿನ ಬಂಡಿಯಂತೆ ಸಾಗಿದೆ. ಎಷ್ಟೋ ಬಾರಿ ನಾಲ್ಕು ಹೆಜ್ಜೆ ಮುನ್ನಡೆದರೆ ಎರಡು ಹೆಜ್ಜೆ ಹಿಂದೆ ಬಂದಿರುತ್ತದೆ. ಹಿಂದೂಗಳಿಗಂತೂ ತಾವು ಹೋದಲ್ಲೆಲ್ಲ ಜಾತಿಯ ಬಾವುಟಗಳನ್ನು ಮೇಲೆತ್ತಿ ಪಟಪಟಿಸದಿದ್ದರೆ ಉಂಡ ಅನ್ನವೂ ಕರಗುವುದಿಲ್ಲ. ಜಾಗತಿಕ ಮಟ್ಟದಲ್ಲಿ ಹಾಸ್ಯಾಸ್ಪದವೂ ಅವಮಾನ ಕರವೂ ಅಮಾನವೀಯವೂ ಆಗಿರುವ ಈ ದುಷ್ಟ ಪದ್ಧತಿಯ ಹಿಡಿತದಿಂದ ಭಾರತೀಯ ಸಮಾಜವನ್ನು ಮುಕ್ತಗೊಳಿಸುವುದಕ್ಕೆ ಹೋರಾಟದ ಮಾರ್ಗ ವನ್ನು ಹಿಡಿದ ಕ್ರಾಂತಿಕಾರರು ಡಾ॥ ಅಂಬೇಡ್ಕರ್.

ಜಾತಿಯ ಅನುಸರಣೆಯಿಂದಾಗಿ ಸಮಾಜದಲ್ಲಿ ಹಿಂದುಳಿದ ವರ್ಗಗಳಿಗೆ ನಷ್ಟವಾಗುವುದಿರಲಿ ಸ್ವತಃ ದೇಶಕ್ಕೇ ಅಪಾರವಾದ ಹಾನಿಯುಂಟಾಗಿದೆ. ಜಾತಿ ಭಾರತದ ಭಾವೈಕ್ಯತೆಯನ್ನು ಛಿದ್ರಛಿದ್ರವಾಗೊಡೆದಿದೆ. ಹಿಂದೂ ಗಳನ್ನು ಲೆಕ್ಕವಿಲ್ಲದಷ್ಟು ಸಣ್ಣ ಸಣ್ಣ ಚೂರುಗಳಾಗಿ ವಿಭಾಗಿಸಿದೆ. ಜನಾಂಗ ಜನಾಂಗಗಳ ನಡುವೆ ರಾಷ್ಟ್ರಾಭಿಮಾನ ಮೂಡುವುದಕ್ಕೆ ದೊಡ್ಡ ಅಡ್ಡಿಯಾಗಿ ಪರಿಣಮಿಸಿದೆ. ಪ್ರಜಾಪ್ರಭುತ್ವದ ಅಡಿಗಲ್ಲಾಗಿರುವ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವಗಳಿಗೆ ಮಾರಕವಾಗಿದೆ. ಜಾತಿ ಮನುಷ್ಯನನ್ನು ಹೇಡಿಯಾಗಿಯೂ ಸ್ವಾರ್ಥಿಯಾಗಿಯೂ ಪರಿವರ್ತಿಸಿಬಿಟ್ಟಿದೆ. ಜಾತಿ ಭಾವನೆ ಸೃಷ್ಟಿಯಾದ ಕಾಲದಲ್ಲಿ ಅಂದಿನ ಜನಕ್ಕೆ, ಸಮಾಜಕ್ಕೆ ಅದು ಎಷ್ಟು ಅಗತ್ಯವಾಗಿತ್ತೋ ಉಪಯುಕ್ತವಾಗಿತ್ತೋ ಗೊತ್ತಿಲ್ಲ; ಈಗಂತೂ ಅದು ಸಿಡಿಯುವುದಕ್ಕೆ ಸಿದ್ಧವಾಗಿರುವ ವಿನಾಶಕಾರೀ ಅಣುಬಾಂಬಿನಂತಿದೆ. ಪಂಡಿತರಂತೆ, ವಿಚಾರ ವಾದಿಗಳಂತೆ ಸೋಗು ಹಾಕಿಕೊಂಡವರು ಕೂಡ ಜಾತಿಯ ಆದರ್ಶವನ್ನಷ್ಟೇ ಚಿತ್ರಿಸಿ ಅದರ ವಾಸ್ತವ ಸ್ಥಿತಿಯನ್ನು, ಭೀಕರ ಪರಿಣಾಮಗಳನ್ನು ನಿರೂಪಿಸುವು ದಿಲ್ಲವಾದ್ದರಿಂದ ಅದು ನಿರಾತಂಕವಾಗಿ ಬೇರೂರಿಕೊಳ್ಳಲು ಕಾರಣವಾಗಿದೆ.

ಶ್ರೀಮತಿ ಕಮಲಾ ಹಂಪನಾ ಅವರು ಅನುವಾದಿಸಿರುವ "ಜಾತಿಯ ನಿರ್ಮೂಲನೆ" ಎಂಬ ಈ ಪುಸ್ತಕದ ಮೂಲರೂಪ ಅಂಬೇಡ್ಕರರು ಇಂಗ್ಲಿಷಿ ನಲ್ಲಿ ಬರೆದಿರುವ Annihilation of Caste ಎಂಬ ಕೃತಿ. ಈ ಪುಸ್ತಕ ವಾದರೋ ಪ್ರಕಟಣೆಯ ಉದ್ದೇಶವಿರಿಸಿಕೊಂಡಂತೂ ಬರೆದುದಲ್ಲ. ಜಾತಿ ವಿನಾಶಕ್ಕೆಂದು ಹುಟ್ಟಿಕೊಂಡ ಸವರ್ಣ ಹಿಂದೂ ಸಮಾಜ ಸುಧಾರಕರ ಸಂಸ್ಥೆಯಾದ ಲಾಹೋರಿನ ಜಟ್‌ಪಟ್ ತೋಡಕ್ ಮಂಡಲವು ೧೯೩೬ ರಲ್ಲಿ ನಡೆಯಲಿದ್ದ ವಾರ್ಷಿಕ ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ಅಂಬೇಡ್ಕರರನ್ನು ಆಹ್ವಾನಿಸಿತ್ತು. ಆದರೆ ವರ್ಣೀಯ ಹಿಂದೂಗಳು ನಡೆಸುವ ಯಾವ ಚಳುವಳಿ ಯಲ್ಲಿಯೂ ಭಾಗವಹಿಸಬಾರದೆಂಬ ತತ್ವಕ್ಕೆ ಬಾಬಾಸಾಹೇಬರು ಬದ್ಧರಾಗಿದ್ದು ದರಿಂದ ಮಂಡಲದವರ ಅಧ್ಯಕ್ಷ ಸ್ಥಾನದ ಆಹ್ವಾನವನ್ನು ಒಪ್ಪಿಕೊಳ್ಳಲಿಲ್ಲ.

ಆದರೆ ಮಂಡಲದವರು ಬಿಡಲಿಲ್ಲ. ಮಂಡಲದ ಕಾರ್ಯದರ್ಶಿಯನ್ನೇ ಮುಂಬಯಿಯಲ್ಲಿದ್ದ ಅಂಬೇಡ್ಕರರ ಬಳಿಗೆ ಕಳುಹಿಸಿ ಕೊನೆಗೂ ಅವರ ಸಮ್ಮತಿಯನ್ನು ಪಡೆಯುವುದರಲ್ಲಿ ಮಂಡಲ ಯಶಸ್ವಿಯಾಯಿತು. ಅಂಬೇಡ್ಕರರು 'ಜಾತಿ ನಿರ್ಮೂಲನೆ' ಎಂಬ ವಿಷಯದ ಮೇಲೆ ಭಾಷಣ ಸಿದ್ಧಪಡಿಸತೊಡಗಿದರು. ಅಷ್ಟರಲ್ಲಿ ಪಂಜಾಬಿನ ಹಿಂದೂಗಳಲ್ಲಿ ವಿವಾದವುಂಟಾಗಿ ಅದು ಎರಡು ಗುಂಪಾಗಿ ಒಡೆಯಿತು. ಮಂಡಲದ ಸದಸ್ಯರಾದ ಹರಭಗವಾನ್ ಎಂಬುವರು ಅಂಬೇಡ್ಕರರು ಸಿದ್ಧಪಡಿಸಿದ್ದ ಭಾಷಣದ ಹಸ್ತಪ್ರತಿಯೊಂದನ್ನು ತಮ್ಮೊಡನೆ ಕೊಂಡೊಯ್ದರು. ಅದರಲ್ಲಿ ಅಂಬೇಡ್ಕರರು ವೇದಗಳನ್ನು ಕುರಿತು ಮಾಡಿದ್ದ ಟೀಕೆಯನ್ನೋದಿ ಮಂಡಲದ ಸದಸ್ಯರ ತಲೆ ಬಿಸಿಯಾಯಿತು. ಮಂಡಲದ ಕಾರ್ಯದರ್ಶಿ ವೇದಗಳನ್ನು ತರಾಟೆಗೆ ತೆಗೆದುಕೊಂಡಿರುವ ಭಾಗವನ್ನು ಕೈಬಿಟ್ಟು ಉಳಿದುದನ್ನು ಹಸ್ತಪ್ರತಿಯಲ್ಲಿರುವಂತೆಯೇ ಅಚ್ಚು ಹಾಕಿಸುವುದಾಗಿಯೂ ಅಧ್ಯಕ್ಷ ಭಾಷಣದಲ್ಲಿ ಅಷ್ಟನ್ನು ಮಾತ್ರ ಓದಬೇಕೆಂದೂ ಪತ್ರ ಬರೆದರು. ಈ ಪತ್ರ ಅಂಬೇಡ್ಕರರನ್ನು ಕುಪಿತರನ್ನಾಗಿಸಿತು. ಅವರು ಮಂಡಲಕ್ಕೆ ಖಾರವಾಗಿ ಉತ್ತರ ಬರೆದು "ಅಧ್ಯಕ್ಷ ಪದವಿಯ ಗೌರವಕ್ಕಾಗಿ ನಾನು ಅಧ್ಯಕ್ಷರ ಭಾಷಣ ಸ್ವಾತಂತ್ರ್ಯವನ್ನು ಕಳೆದುಕೊಳ್ಳಲಾರೆ. ಭಾಷಣದಲ್ಲಿ ನಿರ್ದಿಷ್ಟ ಭಾಗಗಳನ್ನು ತೆಗೆಯಲಾಗದಿದ್ದರೆ ಸಮ್ಮೇಲನವನ್ನು ಮುಂದೂಡುವುದಕ್ಕೆ ಬದಲಾಗಿ ರದ್ದುಗೊಳಿಸುವುದೇ ಮೇಲು. ಜಾತೀಯತೆಗೆ ತಳಹದಿಯಾದ ಧಾರ್ಮಿಕ ಭಾವನೆಗಳನ್ನು ನಿರ್ಮೂಲ ಮಾಡದಿದ್ದರೆ ಜಾತಿವಿನಾಶ ಸಾಧ್ಯವಿಲ್ಲ. ಅಂತರ್ಜಾತೀಯ ವಿವಾಹ ಮತ್ತು ಸಹಪಂಕ್ತಿ ಭೋಜನಗಳು ಜಾತಿವಿನಾಶಕ್ಕೆ ದಾರಿಯಾಗಲಾರವು. ಅಧ್ಯಕ್ಷ ಪದವಿ ದೊಡ್ಡದೆಂದು ನಾನು ಭಾವಿಸಿಲ್ಲ. ಆ ಪದವಿಗಾಗಿ ನಾನು ನನ್ನ ಸಂಕಲ್ಪವನ್ನೂ ಧರ್ಮವನ್ನೂ ತೊರೆಯಲು ಸಿದ್ಧನಾಗಿಲ್ಲ" ಎಂದು ತಿಳಿಸಿದರು.

ಸವರ್ಣ ಹಿಂದೂಗಳ ಈ ಮತಿಹೀನ ವರ್ತನೆಯಿಂದಾಗಿ ಲಾಹೋರಿನ ಜಟ್‌ಪಟ್ ತೋಡಕ್ ಮಂಡಲದಲ್ಲಿ ಅಂಬೇಡ್ಕರರು ಮಂಡಿಸಬೇಕಾಗಿದ್ದ ಭಾಷಣ ನಿಂತುಹೋಯಿತು. ಆದರೆ ಅದರ ಪ್ರಕಟಣೆಯನ್ನು ತಡೆಯುವುದು ಯಾರಿಗೂ ಸಾಧ್ಯವಿರಲಿಲ್ಲ. ಲಾಹೋರಿನ ಸಭೆಯಲ್ಲಿ ಓದಬೇಕಿದ್ದ ಭಾಷಣವನ್ನೇ ಅವರು 'Annihilation of Caste' ಎಂಬ ಪುಸ್ತಕವಾಗಿ ಪ್ರಕಟಿಸಿದರು. ಅದರ ಪ್ರಭಾವ ಜನಮನವನ್ನು ಅತ್ಯಂತ ತೀವ್ರವಾಗಿ ಮುಟ್ಟಿತು. ಅಂಬೇಡ್ಕರರ ನಿಶಿತ ಮತಿಗೆ, ಪಾಂಡಿತ್ಯಕ್ಕೆ, ವಾಸ್ತವಾಂಶಗಳ ಗ್ರಹಿಕೆ ಮತ್ತು ವಿಶ್ಲೇಷಣಾ ಸಾಮರ್ಥ್ಯಕ್ಕೆ ಈ ಗ್ರಂಥ ಒಂದು ಉಜ್ವಲ ನಿದರ್ಶನವಾಗಿದೆ. ಕೀಳುಜಾತಿಯವರು ಪಂಡಿತರಾದರೂ ಅವರು ಗುರುಸ್ಥಾನಕ್ಕೆ ಯೋಗ್ಯರಲ್ಲ

ವೆಂಬ ಮಾತನ್ನು ಅನೇಕ ಧಾರ್ಮಿಕ ಪುರುಷರು ಮನಬಿಚ್ಚಿ ಆಡಿರುವಾಗ, ಹಿಂದೂಗಳು ಅಂತ್ಯಜರೆಲ್ಲರ ಬಗ್ಗೆ ಜುಗುಪ್ಸಾಕಾರಕವಾದ ಮನೋಭಾವ ಹೊಂದಿರುವಾಗ, ಇಂಡಿಯಾದಲ್ಲಿ ಸಮಾಜ ಸುಧಾರಣೆಯು ಸ್ನೇಹಿತರಿಗಿಂತ ಹೆಚ್ಚಾಗಿ ಶತ್ರುಗಳನ್ನೇ ನಿರ್ಮಾಣ ಮಾಡಿರುವಾಗ ಜಟ್‌ಫಟ್ ತೋಡಕ್ ಮಂಡಲ ತಮ್ಮನ್ನು ಅಧ್ಯಕ್ಷ ಸ್ಥಾನಕ್ಕೆ ಆಹ್ವಾನಿಸಿದ್ದೇ ವಿಚಿತ್ರವೆಂದು ಅಂಬೇಡ್ಕರರು ಅಭಿಪ್ರಾಯಪಡುತ್ತಾರೆ. ರಾಜಕೀಯ ಕ್ರಾಂತಿಯ ಸಫಲತೆಗೆ ಧಾರ್ಮಿಕ ಕ್ರಾಂತಿ ಅನಿವಾರ್ಯವೆಂಬುದನ್ನು ಹಲವಾರು ಚಾರಿತ್ರಿಕ ಸಂಗತಿಗಳ ಉಲ್ಲೇಖಗಳಿಂದ ಸಮರ್ಥಿಸುತ್ತಾರೆ. ಧರ್ಮ, ಸಾಮಾಜಿಕ ಪ್ರತಿಷ್ಠೆ ಮತ್ತು ಶ್ರೀಮಂತಿಕೆಗಳು ಅಧಿಕಾರದ ಕೇಂದ್ರಸ್ಥಾನಗಳಾದ್ದರಿಂದ ಆ ಎಲ್ಲ ಕ್ಷೇತ್ರಗಳಲ್ಲಿ ಕ್ರಾಂತಿಯಾಗದ ಹೊರತು ಸಮಾನತೆಯನ್ನಾಗಲೀ ಮಾನವೀಯತೆಯನ್ನಾಗಲೀ ಕಾಣಲು ಸಾಧ್ಯವಿಲ್ಲವೆಂಬುದು ಅಂಬೇಡ್ಕರರ ಖಚಿತ ಅಭಿಪ್ರಾಯವಾಗಿದೆ.

ಅಂಬೇಡ್ಕರರ 'ಜಾತಿ ನಿರ್ಮೂಲನೆ' ಕೃತಿ ಇಡೀ ದೇಶದ ಗಮನವನ್ನು ಸೆಳೆದಾಗ ಕೆಲವರು ಅದನ್ನು ಮೆಚ್ಚಿಕೊಂಡರೆ ಮತ್ತೆ ಕೆಲವರು ಅದನ್ನು ಕಟುವಾಗಿ ಖಂಡಿಸಿದರು. ಮಹಾತ್ಮ ಗಾಂಧೀಜಿಯವರು 'ಹರಿಜನ' ಪತ್ರಿಕೆಯಲ್ಲಿ 'ಡಾ॥ ಅಂಬೇಡ್ಕರರ ಆಪಾದನೆ' ಎಂಬ ಶೀರ್ಷಿಕೆಯಲ್ಲಿ ಎರಡು ಲೇಖನಗಳನ್ನು ಬರೆದು ಅವರ ಅಭಿಪ್ರಾಯಗಳನ್ನು ಖಂಡಿಸಿದರು. ಆದರೆ ಅಂಬೇಡ್ಕರರು ಅದನ್ನೋದಿ ಸುಮ್ಮನಾಗಲಿಲ್ಲ. ಜಾತಿ ವಿನಾಶಕ್ಕಾಗಿ ಎಂಥದ್ದೇ ಹೋರಾಟಕ್ಕಾದರೂ ಎಂಥವರೊಡನೆ ವಿರಸ ಕಟ್ಟಿಕೊಳ್ಳುವುದಕ್ಕಾದರೂ ಸಿದ್ಧರಿದ್ದ ಅವರು 'ಮಹಾತ್ಮರಿಗೆ ಉತ್ತರ' ಎಂಬ ಸುದೀರ್ಘ ಲೇಖನ ಬರೆದು ಅದರಲ್ಲಿ ಗಾಂಧೀಜಿಯವರ ವಾದದ ದೋಷಗಳನ್ನು ಬಯಲಿಗೆಳೆದರು. "ಅನೈತಿಕ ಸಾಮಾಜಿಕ ಜೀವನಕ್ಕೆ ನೆಲೆಯಾಗಿರುವ ಪೊಳ್ಳು ಆದರ್ಶಗಳನ್ನು ಪೋಷಿಸುವ ಹಿಂದೂ ಧರ್ಮ ನನಗೆ ಜುಗುಪ್ಸೆ ಉಂಟು ಮಾಡಿದೆ. ಹಿಂದೂ ಧರ್ಮ ಉಳಿಯಬೇಕಾದರೆ ಶೀಘ್ರ ನೈತಿಕ ಪುನರುಜ್ಜೀವನ ಅಗತ್ಯ. ಇಂಥ ಪುನರುಜ್ಜೀವನಕ್ಕೆ ಬೌದ್ಧಿಕ ಸ್ವಾತಂತ್ರ್ಯದ ಪೂರ್ವ ಸಿದ್ಧತೆ ಅನಿವಾರ್ಯ. ಹಿಂದೂ ನಾಯಕರಲ್ಲಿ ಇಂಥ ಸಾಮರ್ಥ್ಯವೇ ಲೋಪವಾಗಿದೆ. ಈ ನಾಯಕರು ಸ್ಥಿತಿಪಾಲಕರೇ ಹೊರತು ಸ್ಥಿತಿಯನ್ನು ಸೂಕ್ಷ್ಮ ರೀತಿಯಲ್ಲಿ ಪರಿವರ್ತಿಸುವವರಲ್ಲ. ಇವರ ದೃಷ್ಟಿಯಲ್ಲಿ ಪುರಾತನವಾದುದೆಲ್ಲ ನಿರ್ವಿವಾದವಾಗಿ ಪವಿತ್ರ. ಸಾಮಾನ್ಯ ಜನ ಮಾರ್ಗದರ್ಶನಕ್ಕಾಗಿ ದೃಷ್ಟಿ ಹಾಯಿಸುವುದು ಇಂಥ ಬುದ್ಧಿವಂತರ ಕಡೆ. ಈ ಬುದ್ಧಿವಂತರಾದರೋ ಅಪ್ರಾಮಾಣಿಕರು ಮತ್ತು ನಿರುತ್ಸಾಹಿಗಳು. ಇವರಿಂದ ಯೋಗ್ಯ ಮಾರ್ಗ

ದರ್ಶನ ಸಾಧ್ಯವಿಲ್ಲದ ದುರಂತಕ್ಕೆ ನಾವು ಒಳಗಾಗಿದ್ದೇವೆ" ಎಂದು ಗಾಂಧೀಜಿಯವರ ಲೇಖನಕ್ಕೆ ಉತ್ತರಿಸಿದರು. ಈ ಬಹಿರಂಗ ಪತ್ರ ಅಂಬೇಡ್ಕರರ ಬುದ್ಧಿವಂತಿಕೆಗೆ, ಕೌಶಲಕ್ಕೆ, ಸ್ವತಂತ್ರ ಮನೋಧರ್ಮಕ್ಕೆ, ನಿರ್ಭೀತಿಗೆ ಸಾಕ್ಷಿಯೊದಗಿಸುವಂತಿದೆ. ಜಾತಿ ಭಾವನೆಗಳು ಹೊತ್ತಿ ಉರಿಯುತ್ತಿದ್ದ ಆ ದಿನಗಳಲ್ಲಿ, ಅಂಬೇಡ್ಕರರಂತೆ ಖಂಡತುಂಡವಾಗಿ, ನಿರ್ದಾಕ್ಷಿಣ್ಯವಾಗಿ ಮುಕ್ತ ಕಂಠದಿಂದ ಮಾತನಾಡುತ್ತಿದ್ದ ಜನ ತೀರಾ ಅಪರೂಪ. ಗಾಂಧೀಜಿಯವರ ಲೇಖನಕ್ಕೆ ಉತ್ತರ ಕೊಡಲೇಬೇಕಾದ ಅನಿವಾರ್ಯತೆಯನ್ನು ಕುರಿತು ಅಂಬೇಡ್ಕರ್ ಹೀಗೆ ಹೇಳುತ್ತಾರೆ: "ಗಾಂಧೀಜಿಯವರಂತೆಯೇ ಇನ್ನೂ ಅನೇಕರು ನನ್ನ ಅಭಿಪ್ರಾಯಗಳನ್ನು ಕಟುವಾಗಿ ಟೀಕಿಸಿದ್ದಾರೆ. ಇಂತಹ ಟೀಕೆಗಳನ್ನು ಗಮನಿಸಿ ನನ್ನ ಉತ್ತರವನ್ನು ಗಾಂಧೀಜಿಯವರ ಟೀಕೆಗೆ ಮಾತ್ರ ಸೀಮಿತಗೊಳಿಸಿದ್ದೇನೆ. ಹೀಗೆ ನಾನು ಮಾಡಿದ್ದಕ್ಕೆ ಕಾರಣ ಗಾಂಧೀಜಿಯವರು ಉತ್ತರವನ್ನು ಪಡೆಯಲೇಬೇಕಾದಷ್ಟು ಘನವಾದ ಮಾತುಗಳನ್ನು ಆಡಿದ್ದಾರೆ ಎಂದಲ್ಲ; ಆದರೆ ಅನೇಕ ಹಿಂದುಗಳಿಗೆ ಆತನ ವಾಣಿ ದೇವವಾಣಿಯೆನಿಸಿದೆ. ಆತ ಹೇಳಿಬಿಟ್ಟರೆ ಅಲ್ಲಿಗೆ ಮುಗಿದುಹೋಯಿತು. ಮುಂದೆ ಯಾವ ನಾಯಿ ಕೂಡ ಬೊಗಳಬೇಕಾಗಿಲ್ಲ ಎಂದು ಜನ ಭಾವಿಸುತ್ತಾರೆ. ಆದರೆ ಶ್ರೇಷ್ಠ ಧರ್ಮಾಧಿಕಾರಿ ಪೋಪ್‌ನನ್ನು ಎದುರಿಸಿ ಆತನೂ ಕೂಡ ಸರ್ವಜ್ಞನಲ್ಲವೆಂದು ಸಾಧಿಸುವ ಕ್ರಾಂತಿಕಾರರಿಗೆ ಜಗತ್ತು ತುಂಬ ಋಣಿಯಾಗಿದೆ. ಪ್ರತಿಯೊಂದು ಪ್ರಗತಿಶೀಲ ರಾಷ್ಟ್ರವು ತನ್ನ ಕ್ರಾಂತಿಕಾರರಿಗೆ ಕೊಡಬೇಕಾದ ಗೌರವದ ಬಗೆಗೆ ನಾನು ಚಿಂತಿಸುತ್ತಿಲ್ಲ. ಆದರೆ ತಾವು ಭಾರತದ ರೋಗಿಗಳೆಂದೂ ತಮ್ಮ ರೋಗದಿಂದ ಇತರ ಭಾರತೀಯರಿಗೆ ಕೂಡ ಅಪಾಯವುಂಟೆಂದೂ ಹಿಂದೂಗಳು ಅರಿತುಕೊಂಡರೆ ಸಾಕು. ನನಗೆ ಅದು ತೃಪ್ತಿಯಾದೀತು." ಈ ಮಾತುಗಳು ಚುರುಕಾಗಿರುವಂತೆಯೇ ವಿಚಾರಯೋಗ್ಯವೂ ಆಗಿವೆ. ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದ ಗಾಂಧೀಜಿಯವರಿಗೆ ಸಾಮಾಜಿಕ ಸ್ಥಾನಮಾನಗಳೂ ರಾಜಕೀಯ ಪ್ರತಿಷ್ಠೆಗಳೂ ವಿಶೇಷವಾಗಿ ಪ್ರಾಪ್ತವಾಗಿದ್ದ ಕಾಲವದು. ಪರದಾಸ್ಯದಿಂದ ಮುಕ್ತರಾಗುವುದನ್ನೇ ಪ್ರಧಾನ ಉದ್ದೇಶವಾಗಿ ಹೊಂದಿದ್ದ ಜನ ಗಾಂಧೀಜಿಯತ್ತ ಆಸೆಗಣ್ಣಿನಿಂದ ನೋಡುತ್ತಿದ್ದರು. ಗಾಂಧೀಜಿ ಈ ಸಂದರ್ಭವನ್ನು ಚೆನ್ನಾಗಿಯೇ ಬಳಸಿಕೊಂಡು ಬ್ರಿಟಿಷರನ್ನು ಅಹಿಂಸಾತ್ಮಕ ಹೋರಾಟದ ಮೂಲಕ ಪ್ರತಿಭಟಿಸತೊಡಗಿದರು. ಭಾರತೀಯ ಪರಿಸರದಲ್ಲಿ ಒಬ್ಬ ಸಾಮಾನ್ಯ ವ್ಯಕ್ತಿಯಿಂದ ಈ ಬಗೆಯ ಹೋರಾಟವನ್ನು ನಿರೀಕ್ಷಿಸದಿದ್ದ ಜನ ಸಹಜವಾಗಿ ಅದರತ್ತ ಆಕರ್ಷಿತರಾಗಿ ಗಾಂಧೀಜಿಯಲ್ಲಿ ತಮ್ಮ ನಾಯಕನನ್ನು ಕಾಣತೊಡಗಿದರು. ಜನ ಅವರ ಮಾತು ನಡವಳಿಕೆಗಳಲ್ಲಿ ತುಂಬು ಭರವಸೆಯಿಡತೊಡಗಿದರು. ಮುಂದೊಮ್ಮೆ

ಇದು ಎಂಥ ಅತಿರೇಕಕ್ಕೆ ಹೋಯಿತೆಂದರೆ ಅಂಬೇಡ್ಕರ್ ಬಹು ಸ್ಪಷ್ಟ ವಾಗಿಯೇ ಹೇಳಿರುವ ರೀತಿಯಲ್ಲಿ ಗಾಂಧೀಜಿ ಹೇಳಿದ ಮೇಲೆ ಮುಗಿಯಿತು ; ಮುಂದೆ ಯಾವ ನಾಯಿ ಕೂಡ ಬೊಗಳಬೇಕಾಗಿರಲಿಲ್ಲ. ಈ ಮಾತುಗಳಲ್ಲಿ ಗಾಂಧೀಜಿಯ ಬಗೆಗೆ ಅಂಬೇಡ್ಕರರಿಗಿದ್ದ ಕಹಿ, ಅಸಹನೆಗಳು ವ್ಯಕ್ತವಾಗಿವೆ ಯೆನ್ನುವುದಕ್ಕಿಂತಲೂ ಜನರನ್ನಾವರಿಸಿಕೊಂಡಿದ್ದ ಮೌಢ್ಯ ಮತ್ತು ವಿಚಾರ ಹೀನತೆಗಳ ಬಗೆಗೆ ಕನಿಕರ ಮತ್ತು ಅನುಕಂಪ ಇಂಥ ಉರಿಯುವ ಮಾತಾಗಿ ಹೊರಬಂದಿದೆಯೆಂದು ಸ್ಪಷ್ಟವಾಗುತ್ತದೆ. ಮಹಾತ್ಮರಂಥವರೂ ಕೂಡ ಹೇಗೆ ಬಹುಸಂಖ್ಯಾತ ಮೇಲ್ಜಾತಿಯವರ ಅಭೀಪ್ಸೆ ಆಚರಣೆಗಳಿಗೆ ಭಂಗ ವುಂಟುಮಾಡಲಿಚ್ಛಿಸದೆ ನೊಂದವರ ಹೃದಯಗಳಿಗೆ ತಂಪೆರೆಯುವ ಬಣ್ಣದ ಮಾತುಗಳಾಡುತ್ತ ಕ್ರೂರ ವ್ಯವಸ್ಥೆಯ ಮುಂದುವರಿಕೆಗೆ ಕಾರಣರಾಗಿರುತ್ತಾ ರೆನ್ನುವುದು ಇದರಿಂದ ವೇದ್ಯವಾಗುತ್ತದೆ.

ಭಾರತದಲ್ಲಿರುವ ಜಾತಿಯನ್ನು ರಾಕ್ಷಸನಿಗೆ ಹೋಲಿಸುತ್ತ ಅಂಬೇಡ್ಕರ್ ಹೇಳುತ್ತಾರೆ "ನೀವು ಯಾವ ಹಾದಿಗಾದರೂ ಹೋಗಿ, ಜಾತಿಯೆಂಬ ರಾಕ್ಷಸ ನಿಮ್ಮನ್ನು ಅಡ್ಡಗಟ್ಟುತ್ತಾನೆ. ಈ ರಾಕ್ಷಸನನ್ನು ಸಂಹರಿಸದ ಹೊರತು ರಾಜಕೀಯ ಸುಧಾರಣೆಯಾಗಲೀ ಆರ್ಥಿಕ ಸುಧಾರಣೆಯಾಗಲೀ ಸಾಧ್ಯವಿಲ್ಲ." ಅನೇಕರು ದೇಶದ ಅಭಿವೃದ್ಧಿಯ ವಿಚಾರ ಬಂದಾಗಲೆಲ್ಲ ಥಟ್ಟನೆ ಕೈಗಾರಿಕಾ ಕ್ರಾಂತಿ, ವ್ಯವಸಾಯ ಕ್ರಾಂತಿ, ಅಕ್ಷರ ಕ್ರಾಂತಿ, ರಾಜಕೀಯ ಸುಧಾರಣೆ, ಆರ್ಥಿಕ ಸುಧಾರಣೆಗಳ ವಿಚಾರವನ್ನೆತ್ತಿ ಗಂಟಲು ಹರಿಯುವಂತೆ ಮಾತನಾಡಿ ಬಿಡುತ್ತಾರೆ. ಆದರೆ ಭಾರತೀಯ ಸಮಾಜದಲ್ಲಿ ಇವೆಲ್ಲವೂ ಜಾತಿಯಿಂದಲೇ ನಿಯಂತ್ರಿಸಲ್ಪಡುತ್ತಿವೆಯೆಂದೂ ಜಾತಿಯ ಉಕ್ಕಿನ ಹಿಡಿತದಿಂದ ಬಿಡಿಸಿಕೊಂಡ ಲ್ಲದೆ ಇಲ್ಲಿ ಯಾವ ಕ್ರಾಂತಿಯಾಗಲೀ ಸುಧಾರಣೆಯಾಗಲೀ ಸಾಧ್ಯವಾಗದೆಂದೂ ಅವರ ತಲೆಗಳಿಗೆ ಹೊಳೆಯುವುದೇ ಇಲ್ಲ. ಹಳ್ಳಿಗಳೇ ಹೆಚ್ಚಾಗಿರುವ ಭಾರತದ ಅನೇಕ ಶಾಲೆಗಳಲ್ಲಿ ಮೇಲ್ಜಾತಿಯ ಉಪಾಧ್ಯಾಯ ಕೀಳುಜಾತಿಯ ಹುಡುಗರಿಗೆ ಪಾಠ ಹೇಳಲು ಅಸಹ್ಯಿಸುವ ಪರಿಸ್ಥಿತಿ ಇಂದಿಗೂ ಇದೆ. ಕೀಳುಜಾತಿಯ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿರುವ ಆಸಕ್ತಿಯ ಮೇಲೆ ಕುದಿ ನೀರೆರಚುವ ಪ್ರವೃತ್ತಿಯಿರುವ ಶ್ರೀಮಂತರೂ ಅವರನ್ನು ಅವಕಾಶ ವಂಚಿತರನ್ನಾಗಿಸುವ ಪಟ್ಟಭದ್ರ ಹಿತಾಸಕ್ತಿಗಳೂ ಬೇಕಾದಷ್ಟಿವೆ. ಕೈಗಾರಿಕೋದ್ಯಮಗಳೆಲ್ಲ ಮೇಲ್ಜಾತಿಯವರ ಹಿಡಿತದಲ್ಲಿ ಇದ್ದು ಕೆಳಜಾತಿಯವರು ಅಲ್ಲಿಗೆ ಪ್ರವೇಶಿಸು ವುದು ದುಸ್ತರವೇ ಆಗಿದೆ. ಜಮೀನ್ದಾರರುಗಳಂತೂ ಮೇಲ್ಜಾತಿಯವರೇ ಆಗಿದ್ದು ಅವರ ಜಮೀನುಗಳಲ್ಲಿ ಬೆವರುಹರಿಸಿ ದುಡಿಯುವ ಕೆಳಜಾತಿಯವರು ಅವರಿಂದ ಹಲವು ತೆರನಾದ ಕಿರುಕುಳಗಳಿಗೆ ಶೋಷಣೆಗಳಿಗೆ ಗುರಿಯಾಗುತ್ತಲೇ

ಬಂದಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಇನ್ನು ಸಾಮಾಜಿಕ ಸ್ಥಾನಮಾನ ಗಳನ್ನಾಗಲೀ ರಾಜಕೀಯ ಪ್ರತಿಷ್ಠೆಗಳನ್ನಾಗಲೀ ಕೆಳಜಾತಿಯವರು ಗಳಿಸಿ ಕೊಳ್ಳುವ ವಿಚಾರವಂತೂ ದೂರವೇ ಉಳಿಯಿತು. ಹೀಗೆ ಜಾತಿಯ ಮಾನ ದಂಡದಿಂದಲೇ ಎಲ್ಲವನ್ನೂ ಅಳೆಯುವ ಪ್ರವೃತ್ತಿಯಿರುವ ದೇಶದಲ್ಲಿ ಆ ಮನೋಭಾವವನ್ನು ಬುಡಸಮೇತ ಕಿತ್ತೊಗೆಯುದ ಹೊರತು ಯಾವ ಸುಧಾ ರಣೆಯನ್ನು ತಾನೇ ಕಾಣಲಾದೀತು ? ಸಿಖ್ಖರಲ್ಲೂ ಮಹಮ್ಮದೀಯರಲ್ಲೂ ಕಾಣಬರುವ ಭ್ರಾತೃತ್ವ, ಒಗ್ಗಟ್ಟಿನ ಭಾವನೆಗಳು ಹಿಂದೂಗಳಲ್ಲಿಲ್ಲದಿರಲು ಜಾತಿಯೇ ಕಾರಣ. ಜಾತಿ ಇರುವವರೆಗೆ ಸಂಘಟನೆ ಸಾಧ್ಯವಿಲ್ಲ. ಸಂಘಟನೆ ಸಾಧ್ಯವಾಗುವವರೆಗೆ ಹಿಂದೂ ಕೈಸಾಗದವನಂತೆ ಕುಗ್ಗಿಯೇ ನಡೆಯ ಬೇಕಾಗುತ್ತದೆ.

ಪ್ರಗತಿಪರ ಆಲೋಚನೆಗಳನ್ನುಳ್ಳವರು, ಅನಿಷ್ಟಕಾರಕ ಸಂಪ್ರದಾಯ ಗಳನ್ನು ವಿರೋಧಿಸುವವರು, ಸುಧಾರಣಾವಾದಿಗಳಾಗಿರುವವರು ಎಲ್ಲ ಕಾಲ ಗಳಲ್ಲೂ ಕಷ್ಟ ನಿಷ್ಠುರಗಳಿಗೆ ಗುರಿಯಾಗಿರುವುದಕ್ಕೆ ಜಾತಿಯೇ ಕಾರಣವಾಗಿದೆ. ಒಂದು ಸಮೂಹದ ಸಂಪ್ರದಾಯ, ಅಧಿಕಾರ, ಅಭಿಪ್ರಾಯ, ನಂಬಿಕೆಗಳನ್ನು ಪ್ರಶ್ನಿಸಿ ವೈಚಾರಿಕತೆಯ ಒರೆಗಲ್ಲಿಗೆ ತಿಕ್ಕಿ ನೋಡಬಯಸುವವನೇ ಸುಧಾರಣಾ ವಾದಿಯೆನಿಸಿಕೊಳ್ಳುತ್ತಾನೆ. ಸಮೂಹ ಅವಕಾಶ ಒದಗಿಸಿದರೆ ಮಾತ್ರ ಅವನ ಸುಧಾರಣೆ ಮುಂದುವರಿದೀತು. ಸಮೂಹಕ್ಕೆ ಬೇಡವಾದಾಗ ಸುಧಾರಣೆಯ ಪ್ರಯತ್ನ ಸತ್ತುಹೋಗುತ್ತದೆ. ಯಾಕೆಂದರೆ ಜಾತಿ ತನ್ನ ಕೈಯಲ್ಲಿ ಬಹಿಷ್ಕಾರ ಎಂಬ ಬಲಿಷ್ಠವಾದ ಹಕ್ಕನ್ನಿರಿಸಿಕೊಂಡಿದೆ. ಜಾತಿಯ ನಿಯಮಗಳನ್ನು ಮೀರಿದವನನ್ನು ಸಮೂಹ ಇಚ್ಛಿಸಿದಲ್ಲಿ ಬಹಿಷ್ಕಾರದ ರೂಪದಲ್ಲಿ ಶಿಕ್ಷಿಸ ಬಹುದು. ಸಮೂಹವನ್ನು ಬಿಟ್ಟು ಮನುಷ್ಯ ಬದುಕಲಾರನಾದ್ದರಿಂದ ಸುಧಾರಣಾವಾದಿಯ ಪ್ರಗತಿಪರ ಆಲೋಚನೆಗಳೂ ಅವನೊಟ್ಟಿಗೇ ಕೊನೆ ಯುಸಿರೆಳೆಯುತ್ತದೆ. ಹೀಗಾಗಿ ಸಂಪ್ರದಾಯನಿಷ್ಠರ ಕೈಯಲ್ಲಿ ಜಾತಿ ಒಂದು ದುಷ್ಟ ಆಯುಧವಾಗಿದ್ದು ಅದು ಸುಧಾರಕನನ್ನೂ ಸುಧಾರಣೆಯನ್ನೂ ನಿರ್ಮೂಲಗೊಳಿಸುವ ಮಾರಕ ಶಕ್ತಿಯುಳ್ಳದ್ದು. ಅನಾಗರಿಕ ಜನರ ಗುಂಪಿನ ನೀತಿಯಂತೆ ಜಾತಿಯ ನೀತಿಯೂ ಸಂಕುಚಿತವಾದದ್ದು. ಸರಿಯಿರಲಿ, ತಪ್ಪಿರಲಿ ಹಿಂದೂಗಳಿಗೆ ಜಾತಿಯೇ ಮುಖ್ಯವಾಗುತ್ತದೆ. ಒಳ್ಳೆಯವನಾಗಲೀ ಕೆಟ್ಟವನಾಗಲೀ ತಮ್ಮ ಜಾತಿಯುವನೆಂಬುದೇ ಮುಖ್ಯವಾಗುತ್ತದೆ. ಹೀಗೆ ತಂತಮ್ಮ ಜಾತಿಯ ಹಿತವನ್ನೇ ನೋಡಿಕೊಳ್ಳುತ್ತ ಹಿಂದೂಗಳು ದೇಶಕ್ಕೆ ದ್ರೋಹ ಬಗೆದಿದ್ದಾರೆನ್ನುವ ಅಂಬೇಡ್ಕರರ ಮಾತು ತೀಕ್ಷ್ಣವಾದರೂ ಸತ್ಯಾಂಶದಿಂದ ಕೂಡಿರುವಂಥದ್ದಾಗಿದೆ.

ವೇದಗಳಷ್ಟೇ ಪ್ರಾಚೀನವಾದ ಚಾತುರ್ವರ್ಣ್ಯಗಳ ವಿಭಜನೆ ಕೂಡ ಹೇಗೆ ಹಿಂದೂಸಮಾಜದ ಕೆಳವರ್ಗಗಳನ್ನು ದುರ್ಬಲಗೊಳಿಸುವ, ಶೋಷಿಸುವ ಸಾಧನವಾಗಿತ್ತೆಂಬುದನ್ನು ಬಾಬಾಸಾಹೇಬರು ಅರ್ಥಪೂರ್ಣವಾಗಿ ವಿಶ್ಲೇಷಿಸಿದ್ದಾರೆ. ಭಾರತದಲ್ಲಿ ಬೇರೆ ದೇಶಗಳಲ್ಲಿನಂತೆ ಸಾಮಾಜಿಕ ಕ್ರಾಂತಿಗಳು ನಡೆಯುದಿರುವುದಕ್ಕೆ ಚಾತುರ್ವರ್ಣ್ಯವೇ ಕಾರಣವಾಗಿದೆ. ಈ ಪದ್ಧತಿಯ ಪರಿಣಾಮವಾಗಿ ಆಯುಧಧಾರಣೆ ನಿಷೇಧಿಸಲ್ಪಟ್ಟಿದ್ದ ಕೆಳವರ್ಗಗಳು ಯಾವುದೇ ಶೋಷಣೆಯ ವಿರುದ್ಧ ದಂಗೆಯೇಳಲಾರದಷ್ಟು ದುರ್ಬಲವಾಗಿದ್ದವು. ಕೈಯಲ್ಲಿ ಆಯುಧಗಳಿಲ್ಲದೆ ಕೇವಲ ಬೇಸಾಯಗಾರರಾಗಿದ್ದ ಅವರ ತಲೆಯಮೇಲೆ ಯಾರು ಯಾವಾಗ ಬೇಕಾದರೂ ಬಂದು ಕುಳಿತು ದರ್ಬಾರು ನಡೆಸಬಹುದಾಗಿತ್ತು. ಚಾತುರ್ವರ್ಣ್ಯದ ಫಲವಾಗಿ ಶಿಕ್ಷಣದಿಂದಲೂ ವಂಚಿತರಾಗಿದ್ದ ಆ ಜನ ತಮ್ಮ ವಿಮೋಚನೆಯ ಹಾದಿ ಯಾವುದೆಂದೇ ತಿಳಿಯಲಾಗದೆ ಶಾಶ್ವತವಾಗಿ ಗುಲಾಮಗಿರಿಗೆ ಹೊಂದಿಕೊಳ್ಳಬೇಕಾಯಿತು ಚಾತುರ್ವರ್ಣ್ಯದ ತತ್ವವನ್ನು ಉಲ್ಲಂಘಿಸಿ ಶೂದ್ರನಾಗಿದ್ದ ಶಂಬೂಕ ಬ್ರಾಹ್ಮಣನಾಗಲು ಹೊರಟಿದ್ದಕ್ಕಾಗಿ ಶ್ರೀರಾಮಚಂದ್ರ ಅವನನ್ನು ಕೊಲ್ಲುವ ಮೂಲಕ ತನ್ನ ಕರ್ತವ್ಯವನ್ನು ನೆರವೇರಿಸುತ್ತಾನೆ. ಮೇಲ್ವರ್ಣಗಳಿಗೆ ಮಾತ್ರ ಲಾಭಕರವಾಗಿರುವ ಬ್ರಾಹ್ಮಣಾದಿಯಾದ ಹೆಸರುಗಳುಳ್ಳ ಈ ಚಾತುರ್ವರ್ಣ್ಯವೇ ಒಂದು ಮೋಸದ ಬಲೆ. ಸಾಮಾಜಿಕ ಸಂಘಟನೆಯ ದೃಷ್ಟಿಯಿಂದ ಇದು ಅವ್ಯವಹಾರ್ಯ, ಹಾನಿಕಾರಕ ಮತ್ತು ವ್ಯರ್ಥ ಎನ್ನದೆ ವಿಧಿಯಿಲ್ಲ.

ಜಗತ್ತಿನಲ್ಲಿ ಶಾಶ್ವತವಾದದ್ದು ಯಾವುದೂ ಇಲ್ಲ. ಎಲ್ಲವೂ ಬದಲಾಗುತ್ತಲೇ ಇರುತ್ತದೆ. ಬದಲಾವಣೆಯೇ ಬಾಳಿನೊಗ್ಗರಣೆ. ವ್ಯಕ್ತಿಗಳಿಗೆ ಹೇಗೋ ಹಾಗೆಯೇ ಸಮಾಜಕ್ಕೂ ಬದಲಾವಣೆಯೆಂಬುದು ಜೀವನ ನಿಯಮ. ನಿಂತ ನೀರು ಕೊಳೆಯುವಂತೆ ಬದಲಾವಣೆಗೆ ತನ್ನನ್ನೊಪ್ಪಿಸಿಕೊಳ್ಳದ ಸಮಾಜವಾಗಲೀ ವಿಚಾರವಾಗಲೀ ಜನಾಂಗವಾಗಲೀ ನಾಶದ ಕಡೆಗೆ ಚಲಿಸುತ್ತದೆ. ಬದಲಾಯಿಸುತ್ತಿರುವ ಸಮಾಜದಲ್ಲಿ ಮೌಲ್ಯಗಳೂ ವ್ಯತ್ಯಾಸಗೊಳ್ಳುತ್ತಿರುತ್ತವೆ. ಮನುಷ್ಯರ ಕೃತಿಗಳನ್ನು ಬೆಲೆಗಟ್ಟುವ ಮಾನದಂಡಗಳೂ ಬದಲಾಗುತ್ತವೆ. ಅಗತ್ಯಬಿದ್ದಾಗ ಆ ಮಾನದಂಡಗಳನ್ನು ಪುನರ್ವಿಮರ್ಶೆಗೆ ಒಳಪಡಿಸಿ ತಿದ್ದಲೂ ಸಿದ್ಧವಾಗಿರಬೇಕಾಗುತ್ತದೆ. ತಿದ್ದುವ ಅಗತ್ಯವಿದ್ದಾಗಲೂ ಹಳೆಯ ವಿಚಾರಗಳಿಗೇ ಜೋತುಬೀಳುವುದು ಮೌಢ್ಯದ ಪರಮಾವಧಿ ಎನಿಸಿಕೊಳ್ಳುತ್ತದೆ.

ಭಾರತದಲ್ಲಿ ಜಾತಿ ಹುಟ್ಟುಹಾಕಿರುವ ವಿವಿಧ ಸಮಸ್ಯೆಗಳನ್ನೂ ಅವುಗಳಿಗೆ ಕಾರಣಗಳನ್ನೂ ಮತ್ತು ಪರಿಹಾರಗಳನ್ನೂ ಒಳಗೊಂಡಿರುವ ಈ ಕೃತಿಯಲ್ಲಿ ಸಾಧಕನೊಬ್ಬನ ಗಂಭೀರ ಚಿಂತನೆಗಳನ್ನು ಕಾಣಬಹುದಾಗಿದೆ. ಜಾತಿ ಈಗ ಹಿಂದುವಿನ ಖಾಸಗಿ ಜೀವನಕ್ಕೆ ಮಾತ್ರ ಸೀಮಿತವಾಗದೆ ಸಾವಿರಹೆಡೆಯ ರಾಕ್ಷಸ ಸರ್ಪವಾಗಿ ಸಾಮಾಜಿಕವಾಗಿಯೂ ರಾಜಕೀಯವಾಗಿಯೂ ಆಡಳಿತದಲ್ಲಿಯೂ ಅನಿಷ್ಟಕಾರಕವಾಗಿ ಪರಿಣಮಿಸಿದೆ. ರಾಷ್ಟ್ರೀಯ ಐಕ್ಯಕ್ಕೆ ಅಡ್ಡಿಯಾಗಿ ನಿಂತಿದೆ. ಪ್ರಜಾಪ್ರಭುತ್ವಕ್ಕೆ ಮಾರಕವಾಗಿದೆ. ಭಾರತ ಒಂದು ಸ್ವತಂತ್ರ ಪ್ರಜಾಪ್ರಭುತ್ವ ರಾಷ್ಟ್ರವಾಗಿ ಉಳಿಯಬೇಕಾದರೆ ತನ್ನ ಶಕ್ತಿನಾಶಕ್ಕೂ ದಾಸ್ಯಕ್ಕೂ ಕಾರಣವಾದ ಜಾತಿ ಪದ್ಧತಿಯನ್ನು ನಿರ್ಮೂಲಗೊಳಿಸಬೇಕಾಗಿದೆ. ಈ ದಾರಿಯಲ್ಲಿ ಅಂಬೇಡ್ಕರರು ಮಾಡಿರುವ ಚಿಂತನೆಗಳು ಆಶಾಕಿರಣಗಳಾಗಿವೆ. ಅವರ ಆಲೋಚನೆಗಳು ಜಾತಿಮುಕ್ತವಾದ ನವಸಮಾಜ ನಿರ್ಮಾಣಕ್ಕೆ ಬೇಕಾದ ಚೈತನ್ಯ, ಉತ್ಸಾಹಗಳನ್ನು ತುಂಬುವಷ್ಟು ಸಮರ್ಥವಾಗಿವೆ. ಈ ಕಾರಣದಿಂದಲೇ ಅವರು ಮಾನವಕುಲದ ಸ್ವಾಭಿಮಾನದ ಮತ್ತು ಹೋರಾಟದ ಸಂಕೇತವಾಗಿ, ಕೀಳು ಕುಲದಲ್ಲಿ ಹುಟ್ಟಿದರೂ ವಿಶ್ವಮಾನವರೆನಿಸಿಕೊಂಡರು. ಇಂಥ ಮಹನೀಯರ ವಿಚಾರಗಳನ್ನು 'ಜಾತಿ ನಿರ್ಮೂಲನೆ' ಎಂಬ ಹೆಸರಿನಲ್ಲಿ ಓದುಗರ ಮನಂಬುಗುವಂತೆ ಕನ್ನಡಕ್ಕೆ ಅನುವಾದಿಸಿರುವ ಶ್ರೀಮತಿ ಕಮಲಾ ಹಂಪನಾ ಅವರು ನಿಜಕ್ಕೂ ಅಭಿನಂದನಾರ್ಹರು. ಕಮಲಾ ಹಂಪನಾ ಅವರ ಭಾಷೆ ಮೂಲಗ್ರಂಥದ ಬನಿಯನ್ನು ಎಲ್ಲೂ ಹಾಳುಗೆಡವದಂತೆ ನಿರರ್ಗಳವಾಗಿ ಹರಿದಿದೆ. ಈ ಮೂಲಕ ಅವರು ಉತ್ತಮ ಗ್ರಂಥಗಳ ಅನುವಾದದಲ್ಲೂ ಸಿದ್ಧಹಸ್ತರೆಂಬುದು ಸಾಹಿತ್ಯಾಸಕ್ತರೆಲ್ಲರಿಗೂ ಪ್ರಿಯವಾಗುವಂಥ ವಿಚಾರ. ಅವರಿಂದ ಇಂಥ ಇನ್ನೂ ಅನೇಕ ಉತ್ತಮ ಗ್ರಂಥಗಳು ಅನುವಾದಗೊಂಡು ಕನ್ನಡಿಗರಿಗೆ ಪರಿಚಯವಾಗುವಂತಾಗಲೆಂದು ಹಾರೈಸುತ್ತೇನೆ. ಡಾ॥ ಬಿ. ಆರ್. ಅಂಬೇಡ್ಕರ್ ಅವರು ಆಂಗ್ಲಭಾಷೆಯಲ್ಲಿ ಬರೆದ ಪುಸ್ತಕಗಳನ್ನು ಹಾಗೂ ಕೊಟ್ಟ ಉಪನ್ಯಾಸಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಪ್ರಕಟಿಸಬೇಕೆನ್ನುವ 'ಅಮರ ಸಾಹಿತ್ಯ'ದ ಯೋಜನೆ ಕನ್ನಡ ವಾಙ್ಮಯಕ್ಕೆ ಅವರು ಸಲ್ಲಿಸಬಹುದಾದ ಒಂದು ಸಾರ್ಥಕ ಸೇವೆ ಎಂದು ಸೂಚಿಸಬಯಸುತ್ತೇನೆ.

ಮಹಾವೀರರ ಜೀವನ ಸಂದೇಶ

ಎಂ. ಎ. ಜಯಚಂದ್ರ

ಜಗತ್ತಿನ ಸನಾತನ ಧರ್ಮಗಳಲ್ಲಿ ಜೈನ ಧರ್ಮವೂ ಒಂದು. ಅತ್ಯಂತ ಅಲ್ಪ ಸಂಖ್ಯೆಯ ಅನುಯಾಯಿಗಳನ್ನುಳ್ಳ ಈ ಧರ್ಮ ಜಗತ್ತಿನ, ಅದರಲ್ಲೂ ವಿಶೇಷವಾಗಿ ಭಾರತದ ಜನ ಜೀವನದ ಪ್ರತಿಯೊಂದು ಕ್ಷೇತ್ರದಲೂ ಬೀರಿರುವ ಪ್ರಭಾವ ಅಪಾರ. ವರ್ತಮಾನ ಕಾಲದಲ್ಲಿ ಈ ಧರ್ಮವನ್ನು ವಿಶೇಷವಾಗಿ ಪ್ರಚುರಪಡಿಸಿದವರು ಭಗವಾನ್ ವರ್ಧಮಾನ ಮಹಾವೀರರು. ಇವರ 2500ನೇ ನಿರ್ವಾಣ ಮಹೋತ್ಸವು 1975 ರಲ್ಲಿ ವಿಶ್ವದಾದ್ಯಂತ ಅತಿ ವಿಜೃಂಭಣೆಯಿಂದ ಜರುಗಿತು, ಇಂಥ ಪವಿತ್ರ ಸಂದರ್ಭದಲ್ಲಿ ಕನ್ನಡಿಗರ ಹೆಮ್ಮೆಯ ಸಾಹಿತ್ಯಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ಅನೇಕ ಕಾರ್ಯಕ್ರಮಗಳನ್ನು ನಿಯೋಜಿಸಿತ್ತು. ಆಗ ಶ್ರೀಸಾಮಾನ್ಯರನ್ನು ದೃಷ್ಟಿ

ಯಲ್ಲಿಟ್ಟುಕೊಂಡು ಕಮಲಾ ಹಂಪನಾ ಅವರಿಂದ ಬರೆಯಿಸಿ ಪ್ರಕಟಿಸಿದ ಗ್ರಂಥವೇ **'ಮಹಾವೀರರ ಜೀವನ ಸಂದೇಶ'**.

ಇದು ಸುಮಾರು 64 ಪುಟಗಳ ಒಂದು ಪುಟ್ಟ ಪುಸ್ತಕ. ಇದರಲ್ಲಿ ಮಹಾವೀರರ ಜೀವನ ಪರಿಚಯು, ಅವರ ಬಗ್ಗೆ ಇಂದಿನ ಮಹಾನ್ ವ್ಯಕ್ತಿಗಳ ಅಭಿಪ್ರಾಯ, ಮಹಾವೀರ ವಾಣಿ ಹಾಗೂ ಮಹಾವೀರರ ಜೀವನ, ಬೋಧನೆ ಉಲ್ಲೇಖವಿರುವ ಗ್ರಂಥಗಳ ಪಟ್ಟಿ ಇದೆ. ಮಹಾವೀರರ ಜೀವನ ಪರಿಚಯ ಕೇವಲ ಎಂಟು ಪುಟಗಳಲ್ಲಿ ಚಿಕ್ಕದಾಗಿ ಚೊಕ್ಕವಾಗಿ ಮೂಡಿ ಬಂದಿದೆ, ಕ್ರಿ, ಪೂ. ಆರನೇ ಶತಮಾನ ವಿಶ್ವದಲ್ಲೇ ಅತ್ಯಂತ ಮಹತ್ವ ಪೂರ್ಣವಾದ ಶತಮಾನ. ಪ್ರಪಂಚದ ಅನೇಕ ಭಾಗಗಳಲ್ಲಿ ಅನೇಕ ಮಹಾತ್ಮರು ಉದಯಿಸಿ ಬೆಳಕು ನೀಡಿದರು. ಅಂದು ಭಾರತದಲ್ಲಿ ಅವಳಿ ಸೂರ್ಯಗಳಂತೆ ಭಗವಾನ್ ಮಹಾವೀರರು ಮತ್ತು ಭಗವಾನ್ ಗೌತಮ ಬುದ್ಧರು ಪ್ರಕಾಶಿಸಿದರು.

ಮಹಾವೀರರು 'ಪ್ರಜಾ ಪ್ರಭುತ್ವದ ತಾಯಿ' ಎನಿಸಿದ್ದ ವೈಶಾಲಿಯ ಕ್ಷತ್ರಿಯ ಕುಂಡ ಗ್ರಾಮದಲ್ಲಿ ಸಿದ್ಧಾರ್ಥ-ಪ್ರಿಯಕಾರಿಣಿ ರಾಜದಂಪತಿಗಳಿಗೆ ಪುತ್ರರತ್ನರಾದರು. ಇವರಿಗೆ ವರ್ಧಮಾನ, ಮಹಾವೀರ, ಸನ್ಮತಿ, ವೀರ, ಅತಿವೀರ, ವೈಶಾಲಿಕಾ, ವೈದೇಹಿಕ ಮೊದಲಾದ ಹೆಸರುಗಳು ಅನೇಕ ಕಾರಣಗಳಿಂದ ಪ್ರಾಪ್ತವಾದುವು. ತಮ್ಮ 30ನೇ ವಯಸ್ಸಿನಲ್ಲಿ ತಪೋಧನರಾಗಿ 12 ವರ್ಷ ತಪಸ್ಸು ಮಾಡಿ. ತಮ್ಮ 42ನೇ ವರ್ಷದಲ್ಲಿ ಸರ್ವಜ್ಞರಾದರು. ಆಗ ಕಾಡಿನಿಂದ ನಾಡಿಗೆ ಬಂದು ಜನಭಾಷೆಯಲ್ಲಿ ಉಪದೇಶಿಸಿದರು.

"ಮಹಾವೀರರು ದೇಶವನ್ನು ಸುತ್ತಿ ಧರ್ಮವೃಷ್ಟಿ ಮಾಡಿದರು. ಅವರ ಉಪದೇಶ ಸಮಸ್ತ ಮಾನವ ಜನಾಂಗಕ್ಕೂ ಮುಕ್ತವಾಗಿತ್ತು. ನಿಮ್ನ ವರ್ಗೀಯರಿಂದ ಹಿಡಿದು ರಾಜರವರೆಗೆ ಮಹಾವೀರರ ಶಿಷ್ಯರಿದ್ದರು... ಮಹಾವೀರರು ಸರ್ವೋದಯ ಸಿದ್ಧಾಂತವನ್ನೇ ಬೋಧಿಸಿದರು. ಸಮತಾವಾದದ ಸಮಾಜ ರಚನೆಗೆ ಅಸ್ತಿಭಾರ ಹಾಕಿದರು. ತಮ್ಮ ಜೀವನಕ್ಕೆ ಅಗತ್ಯವಾದುದಕ್ಕಿಂತ ಹೆಚ್ಚು ಸಂಗ್ರಹಿಸಿಟ್ಟುಕೊಳ್ಳಬಾರದೆಂದೂ ಅಪರಿಗ್ರಹವನ್ನೂ ಪಾಲಿಸಬೇಕೆಂದೂ ಉಪದೇಶಿಸಿದರು. ಸಹಿಷ್ಣುತೆಯ ಅಗತ್ಯವನ್ನು ಒತ್ತಿ ಹೇಳಿದರು."

"ಮಹಾವೀರರ ಆದರ್ಶ ಬದುಕು ತೆರೆದ ಪುಸ್ತಕ. ಯಾರು ಬೇಕಾದರೂ ತಮ್ಮ ದಾರಿಯಲ್ಲಿ ನಡೆದು ಮುಟ್ಟಿದ ಗುರಿಯನ್ನು ಮುಟ್ಟಬಹುದೆಂದರು.

ತಾವು ಏರಿದ ಎತ್ತರಕ್ಕೆ ಏರಬಹುದೆಂದರು. ಮೆಟ್ಟಿಲು ಕಟ್ಟಿಕೊಟ್ಟರು. ಏಣಿ ಹಾಕಿಕೊಟ್ಟರು."

"ಮಹಾವೀರರ ಉಪದೇಶಗಳು ಇಂದಿನ ಜಗತ್ತಿಗೂ ಅಗತ್ಯ ಬೇಕಾಗಿವೆ, ಅವರ ಉಪದೇಶವನ್ನು ಈ ಶತಮಾನದಲ್ಲಿ ಅರ್ಥಮಾಡಿಕೊಂಡು ಅನುಷ್ಠಾನಕ್ಕೆ ತಂದವರಲ್ಲಿ ಅಗ್ರಗಣ್ಯರು ಮಹಾತ್ಮ ಗಾಂಧಿಯವರು. ಗಾಂಧೀಜಿಯವರ ತಾಯಿ, ನಿಷ್ಠಾವಂತ ಜೈನ ಅನುಯಾಯಿಯಾಗಿದ್ದರು. ತಾಯಿಯವರಿಂದ ಹಾಗೂ ಆಚಾರ್ಯ ರಾಯಚಂದ್‌ಜೀಯವರಿಂದ ಗಾಂಧೀಜಿಯವರಿಗೆ ಜೈನ ತತ್ವಗಳು ಕರತಲಾಮಲಕವಾಗಿದ್ದುವು. ಅಹಿಂಸೆಯ ಮೂಲಕವಾಗಿ ಭಾರತಕ್ಕೆ ಬಿಡುಗಡೆ ಪಡೆದುಕೊಟ್ಟರು. ಹೀಗಾಗಿ ಮಹಾತ್ಮ ಗಾಂಧಿಯವರು ಮಹಾವೀರರ ಶಿಷ್ಯೋತ್ತಮರಾಗಿದ್ದಾರೆ."

ಜೈನಧರ್ಮ ಹಾಗೂ ಮಹಾವೀರರ ಬಗ್ಗೆ ಇಂದಿನ ಅನೇಕ ಮಹಾನ್ ಪುರುಷರು ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸಿದ್ದಾರೆ, ಅಂಥ ಹಲವನ್ನು ಲೇಖಕಿಯರು ಸಂಗ್ರಹಿಸಿ ಈ ಪುಸ್ತಕದಲ್ಲಿ ಕೊಟ್ಟಿದ್ದಾರೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಅವಲೋಕಿಸಬಹುದು.

ಡಾ॥ ಎಸ್. ರಾಧಾಕೃಷ್ಣನ್ ಅವರು, 'ಮಾನವ ವಿನಾಶ ಮಾರ್ಗದಿಂದ ಕಲ್ಯಾಣ ಮಾರ್ಗದತ್ತ ನಡೆಯಬೇಕಾದರೆ ಅವನು ಮಹಾವೀರರ ಸಂದೇಹವನ್ನು ಕೇಳಿ ಅವರು ತೋರಿದ ದಾರಿಯಲ್ಲಿ ಹೋಗದೆ ಬೇರೆ ಮಾರ್ಗವೇ ಇಲ್ಲ' ಎಂದರೆ : ಸಿ. ರಾಜಗೋಪಾಲಾಚಾರಿ ಅವರು, "ಮಹಾವೀರರು ಹೇಳಿದ ಮಾರ್ಗದಲ್ಲಿ ನಡೆದರೆ ಮಾತ್ರ ಶಾಂತಿ ದೊರಕುವುದು' ಎಂದು ಅಭಿಪ್ರಾಯಪಟ್ಟಿದ್ದಾರೆ.

ಬಾಲಗಂಗಾಧರ ತಿಲಕರು, 'ಪ್ರಾಚೀನತೆಯಲ್ಲಿ ಜೈನ ಧರ್ಮಕ್ಕೆ ಮೊದಲ ಸ್ಥಾನ ಸಿಗುವುದು. ಧರ್ಮಗಳಲ್ಲಿರುವ ಪ್ರಾಚೀನ ಧರ್ಮಗಳಲ್ಲೆಲ್ಲಾ ಜೈನ ಧರ್ಮವು ಅತಿ ಪ್ರಾಚೀನವಾದುದು, ಜೈನಧರ್ಮ ಪ್ರಭಾವನೆಯು ಮಹಾವೀರಸ್ವಾಮಿಯ ಕಾಲದಲ್ಲಿ ಬೆಳಗಿತು' ಎಂದಿದ್ದಾರೆ. ಮಹಾವೀರರಿಂದ ನಾನು ಸತ್ಯಗ್ರಾಹಿಯಾದೆ ಎನ್ನುವ ಆಚಾರ್ಯ ವಿನೋಬಾ ಭಾವೆ ಅವರು, 'ಭಗವಾನ್ ಮಹಾವೀರರ ಅಹಿಂಸಾ ದೇವಿ ನಿಶ್ಶಸ್ತ್ರಿಯಾಗಿದ್ದಾಳೆಂದು ಅನೇಕ ಜನ ಭಾವಿಸಿದ್ದಾರೆ, ಆದರೆ ಇದು ತಪ್ಪು ತಿಳಿವಳಿಕೆಯಾಗಿದೆ. ಅಹಿಂಸಾ ದೇವಿಯ ಹಸ್ತದಲ್ಲಿ ಇದು ಅತ್ಯಂತ ಶಕ್ತಿಶಾಲಿಯಾದ ಅಸ್ತ್ರವಾಗಿದೆ, ಅಹಿಂಸಾರೂಪದ ಅಸ್ತ್ರವು ಪೂರಕವಾಗಿರದೆ ಪ್ರೇಮವನ್ನು ಉತ್ಪಾದಿಸುವಂತಾಗಿರುತ್ತದೆ'

ಎಂದು ಅಭಿಪ್ರಾಯಪಟ್ಟಿದ್ದಾರೆ. 'ನನಗೆ ಜೈನಧರ್ಮದ ಉಪದೇಶಗಳು ಬಹಳ ಹಿಡಿಯುತ್ತವೆ. ಆದ್ದರಿಂದ ನಾನು ಇಚ್ಛಿಸುವುದೇನೆಂದರೆ, ಸತ್ತನಂತರ ಜೈನಧರ್ಮದಲ್ಲಿಯೇ ಹುಟ್ಟಬೇಕು. ಈ ಜೈನಧರ್ಮದ ಪ್ರಭಾವದಿಂದ ನಾನು ಮದ್ಯ ಮಾಂಸವನ್ನು ಬಿಟ್ಟು ಪವಿತ್ರವಾದ ಭೋಜನವನ್ನು ಸ್ವೀಕರಿಸುತ್ತೇನೆ' ಎನ್ನುವ ಜಾರ್ಜ್ ಬರ್ನಾರ್ಡ್ ಷಾ ಅಭಿಪ್ರಾಯ ತುಂಬ ಗಮನಾರ್ಹವಾದುದಾಗಿದೆ,

ಈ ಚಿಕ್ಕ ಹೊತ್ತಗೆಯ ಬಹುಭಾಗ ಮಹಾವೀರ ವಾಣಿಗೆ ಮೀಸಲಾಗಿದೆ. ಸುಮಾರು 250 ಸಂದೇಶ ಮಾಣಿಕ್ಯಗಳನ್ನು ಲೇಖಕಿಯರು ಸಂಗ್ರಹಿಸಿಕೊಟ್ಟಿದ್ದಾರೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಅವಲೋಕಿಸುವುದರಿಂದ ಮಹಾವೀರರ ಉಪದೇಶದ ತಿರುಳನ್ನು ಸ್ವಲ್ಪಮಟ್ಟಿಗಾದರು ಮನವರಿಕೆ ಮಾಡಿಕೊಳ್ಳಬಹುದಾಗಿದೆ :

1) ಒಳ್ಳೆಯ ನಡೆನುಡಿಗಳಿಂದ ಬಾಳುವ ಮನುಷ್ಯ, ದೇವತೆಗಳಿಗಿಂತ ಮೇಲು.

2) ಮನುಷ್ಯನ ಗುಣ. ಜ್ಞಾನಗಳು ಸಮಾಜದಲ್ಲಿ ಅವನ ಸ್ಥಾನವನ್ನು ನಿರ್ಣಯಿಸಬೇಕೇ ಹೊರತು ಅವನ ಹುಟ್ಟು ಮನೆತನ ಅಲ್ಲ.

3) ಧರ್ಮಗಳಲ್ಲೆಲ್ಲಾ ಅಹಿಂಸೆಗೆ ಮೊದಲ ಸ್ಥಾನವಿದೆ, ಎಲ್ಲಾ ಜೀವಿಗಳೊಡನೆ ಸಂಯಮ ಪೂರ್ವಕದಾಗಿ ವ್ಯವಹರಿಸುವುದು ಅಹಿಂಸೆ. ಅದರಂತೆ ಪರಸ್ಪರರ ವ್ಯವಹಾರದಲ್ಲಿ ಸಮಭಾವದಿಂದ ವರ್ತಿಸುವುದು ಅಹಿಂಸೆ, ಈ ಅಹಿಂಸೆಯೇ ಎಲ್ಲಾ ಪ್ರಕಾರವಾದ ಸುಖಗಳನ್ನು ನೀಡಬಲ್ಲುದು.

4) ಧರ್ಮಕ್ಕೆ ದಯೇ ಮೂಲ. ದಯೆ ಅಂದರೆ ಅಹಿಂಸೆ. ಸಮಸ್ತ ಜೀವರಾಶಿಗಳನ್ನು ಸಮಭಾವದಿಂದ ಕಾಣಬೇಕು. ನಾನೂ ನನ್ನಂತೆ ಬೇರೆಯವರೂ ಇರಲೆಂಬ ಭಾವನೆಯಿಂದ ಬಾಳುವುದೇ ಅಹಿಂಸೆ.

5) ಪಾಪವೆಂಬುದು ಕೆಟ್ಟ ಕರ್ಮ. ಹಿಂಸೆ ಮಾಡುವುದು, ಪರಸ್ತ್ರೀ ಚಿಂತನೆ ಮಾಡುವುದು, ಕ್ರೋಧ ಮಾನ ಮಾಯಲೋಭಗಳಿಗೆ ಒಳಗಾಗುವುದು ಇವುಗಳಿಂದ ಪಾಪ ಹುಟ್ಟುತ್ತದೆ, ಎಲ್ಲ ಪಾಪಕ್ಕೂ ಮೂಲ ಕ್ರೋಧವಾದುದರಿಂದ ಮೊದಲು ಅದನ್ನು ತೊಡೆಯಬೇಕು.

6) ಎಲ್ಲ ಆತ್ಮಗಳೂ ಸಮಾನವಾಗಿವೆ. ಒಂದು ದೊಡ್ಡದು ಮತ್ತೊಂದು ಸಣ್ಣದು ಎಂಬ ವ್ಯತ್ಯಾಸವಿಲ್ಲ.

7) ನಿರ್ಮಲ ಭಾವನೆಯಿಲ್ಲದೆ ಮೋಕ್ಷ ಪ್ರಾಪ್ತಿಯಾಗುವುದಿಲ್ಲ

8) ನಿನಗೆ ದುಃಖ ಹೇಗೆ ಪ್ರಿಯವಲ್ಲವೋ ಹಾಗೆ ಇತರರಿಗೂ ಅದು ಪ್ರಿಯವಲ್ಲ ಎಂಬುದನ್ನು ತಿಳಿ.

9) ವಸ್ತುಗಳನ್ನು ಮಿತವಾಗಿ ಬಳಸಿ, ಸಂಯಮ ಧರ್ಮವನ್ನು ಪಾಲಿಸಿ.

10) ಸಂಪತ್ತನ್ನು ಹೆಚ್ಚಿಸಿ ಅದರ ರಕ್ಷಣೆಯಲ್ಲೇ ಕಾಲ ಕಳೆದು ವಿಸ್ತರಣಾವಾದಿಯಾಗಬೇಡ,

11) ಜಾತಿ ಇರುವುದು ಒಂದೇ ಜಾತಿ, ಅದು ಮನುಷ್ಯ ಜಾತಿ.

12) ತಲೆಯನ್ನು ಬೋಳಿಸಿದ ಮಾತ್ರಕ್ಕೆ ಜೈನ ಮುನಿಯಾಗಲಾರ. ಓಂಕಾರ ಅಕ್ಷರವನ್ನು ಕಲಿತಿದ್ದ ಮಾತ್ರಕ್ಕೆ ಬ್ರಾಹ್ಮಣನಾಗಲಾರ. ಕಾಡಿನಲ್ಲಿ ವಾಸ ಮಾಡಿದ ಮಾತ್ರಕ್ಕೆ ಮುನಿಯಾಗಲಾರ. ಮನಃಶುದ್ಧಿಯನ್ನು ಮಾಡಿಕೊಳ್ಳದೆ ಆಡಂಬರ ವೇಷಧಾರಣೆಯಿಂದ ಸಾಧು ಧರ್ಮ ಬರಲಾರದು.

13) ಹೆಚ್ಚಿಗೆ ದೊರೆತಂತೆಲ್ಲಾ ಆಸೆ ಹಿರಿದಾಗುತ್ತಾ ಹಿಗ್ಗುತ್ತಾ ಹೋಗುತ್ತದೆ. ಎರಡು ದೊರೆತರೆ ನಾಲ್ಕರ, ನಾಲ್ಕುದೊರೆತರೆ ಎಂಟರ ಆಸೆಯಾಗುತ್ತದೆ. ಆದ್ದರಿಂದ ಸಂಗ್ರಹಕ್ಕೆ ಪರಿಮಿತಿಯಿರಬೇಕು.

14) ಅನೇಕ ಅವಿವೇಕಿ ಸಾಧುಗಳಿಗಿಂತಲೂ ವಿವೇಕಶೀಲನಾದ ಗೃಹಸ್ಥನೇ ಶ್ರೇಷ್ಠ.

15) ಜಗತ್ತಿನಲ್ಲಿ ಸುಮೇರುವಿನಂತೆ ಎತ್ತರವಾದ, ಆಕಾಶದಂತೆ ವಿಶಾಲವಾದ ಅನ್ಯವಸ್ತು ಯಾವುದೂ ಇಲ್ಲ, ಇದೇ ನೀತಿಯಾಗಿ ಅಖಿಲ ವಿಶ್ವದಲ್ಲಿ ಅಹಿಂಸೆಗಿಂತ ದೊಡ್ಡ ವಸ್ತು ಯಾವುದೂ ಇಲ್ಲ.

ಒಟ್ಟಿನಲ್ಲಿ ಕಮಲಾ ಹಂಪನಾ ಅವರು ಈ ಪುಟ್ಟ ಪುಸ್ತಕದಲ್ಲಿ ಭಗವಾನ್ ಮಹಾವೀರರ ಜೀವನ ಹಾಗೂ ಸಂದೇಶವನ್ನು ಶ್ರೀಸಾಮಾನ್ಯನ ಭೌದ್ಧಿಕ ಮಟ್ಟಕ್ಕೆ ಎಟುಕುವಂತೆ ಸಂಗ್ರಹಿಸಿಕೊಟ್ಟಿದ್ದಾರೆ. 20ನೇ ಶತಮಾನದ ಕೊನೆಯ ಭಾಗದಲ್ಲೂ ಜೈನಧರ್ಮದ ಬಗ್ಗೆ ಅನೇಕ ತಪ್ಪು ತಿಳುವಳಿಕೆಗಳು ಬುದ್ಧಿವಂತ ಜನರ ಮನದಲ್ಲೂ ನೆಲೆಯೂರಿವೆ. ಇದನ್ನು ಬೇರು ಸಹಿತ ಕಿತ್ತೆಸೆಯಲು ಈ ಗ್ರಂಥ ನೆರವಾಗಬಲ್ಲುದು. ಈ ದೃಷ್ಟಿಯಿಂದ ಲೇಖಕಿಯ ಶ್ರಮ ಸಾರ್ಥಕವಾಗಿದೆ.

ಅಹಿಂಸೆಯ ಅಭಿಜಾತತೆಯನ್ನು ವಿಶ್ವಕ್ಕೆ ಮನನ ಮಾಡಿಕೊಟ್ಟ ಪ್ರಾಚೀನ ಧರ್ಮ ಜೈನಧರ್ಮ. ಈ ದಯಾ ಧರ್ಮದ ಬೋಧಕನೂ ಇಪ್ಪತ್ತ ನಾಲ್ಕನೆಯ ತೀರ್ಥಂಕರನೂ ಆದ ಭಗವಾನ್ ಮಹಾವೀರನ ಜೀವನ ಮತ್ತು ಉಪದೇಶಗಳನ್ನು ಚಿಕ್ಕ ಕೃತಿಯಲ್ಲಿ ಸರಳವಾಗಿ, ಚೊಕ್ಕವಾಗಿ ಪರಿಚಯ ಮಾಡಿಕೊಟ್ಟಿದ್ದಾರೆ ಲೇಖಕಿ ಕಮಲಾ ಹಂಪನಾ ಅವರು.

ಮಹಾವೀರ ಐತಿಹಾಸಿಕ ವಿಭೂತಿ ಪುರುಷ. ಎರಡು ಸಾವಿರ ವರ್ಷಗಳ ಹಿಂದೆಯೇ 'ಪ್ರಜಾಪ್ರಭುತ್ವದ ತಾಯಿ' ಎಂದು ಕರೆಯಲ್ಪಟ್ಟ ವೈಶಾಲಿ ಗಣ ರಾಜ್ಯದ ರಾಜ ಸಿದ್ಧಾರ್ಥ-ಪ್ರಿಯ ಕಾರಣಿಯರ ಪುತ್ರನಾಗಿ ಜನ್ಮಿಸಿದ. ಅರಮನೆಯ ಕುಂದಿಲ್ಲದ ವೈಭವದ ವಾತಾವರಣದ ನಡುವೆಯೂ ಅವನ ಸ್ಥಿತಪ್ರಜ್ಞ ಮನಸ್ಸು ಶಾಶ್ವತ ಸುಖ

ಮಹಾವೀರರ ಜೀವನ ಸಂದೇಶ

ಕೆ. ರಾಜೇಶ್ವರಿಗೌಡ

ವಾದ ಮೋಕ್ಷ ಜ್ಞಾನದತ್ತ ತೆರಳಿತು. ಕೇವಲ ಮೂವತ್ತರ ಹರಯದಲ್ಲೇ ಕಠಿಣ ತಪಸ್ಸಿಗೆ ತೆರಳಿ ಹನ್ನೆರಡು ವರ್ಷಗಳ ನಿಚ್ಚಳ ಧ್ಯಾನದ ಪ್ರತೀಕವಾಗಿ ಮನುಕುಲದ ಉದ್ಧಾರರೂಪದ ಕೇವಲ ಜ್ಞಾನೋದಯವನ್ನು ತನ್ನ ನಲವತ್ತೆರಡರ ವಯಸ್ಸಿನಲ್ಲಿ ಪಡೆಯುತ್ತಾನೆ.

ಅಂದಿಗೆ ಭಾರತದ ಹಲವಾರು ಭಾಗಗಳನ್ನಾಳುತ್ತಿದ್ದ ಅನೇಕ ಹೆಸರಾಂತ ರಾಜ ರಾಣಿಯರು ಈತನ ಹತ್ತಿರದ ಸಂಬಂಧಿಕರಾಗಿದ್ದರಿಂದ ಮಹಾವೀರನಿಗೆ ತನ್ನ ಅಹಿಂಸಾಧರ್ಮದ ವ್ಯಾಪಕ ಪ್ರಚಾರಕ್ಕೆ ಅನುಕೂಲವಾಯಿತು. ಮಹಾವೀರನ ಶಿಷ್ಯಪ್ರಮುಖರಲ್ಲಿ ಆತನ ತಾತ ಚೇಟಕ ಮಹಾರಾಜ, ಚಿಕ್ಕಪ್ಪ ಶ್ರೇಣಿಕ (ಬಿಂಬಸಾರ) ಮಹಾರಾಜ ಮೊದಲಾದವರು ಸೇರಿದ್ದಾರೆ. ಶ್ರೇಣಿಕ–ಗೌತಮರ ಪ್ರಶ್ನೋತ್ತರ ರೂಪದಲ್ಲಿರುವ ಜೈನ ಸಾಹಿತ್ಯದ ಸಾರಾಂಶರೂಪ ಈ ಕೃತಿಯಲ್ಲಿದೆ.

ಹಿಂಸೆ, ವರ್ಗತಾರತಮ್ಯ, ಆಧ್ಯಾತ್ಮಿಕ ಪತನ, ಅಜ್ಞಾನ-ಮೂಢ ನಂಬಿಕೆಗಳ ಸಾಂದ್ರತೆಯಿಂದಾಗಿ ಅಲ್ಲೋಲಕಲ್ಲೋಲವಾಗಿದ್ದ ಕ್ರಿ, ಪೂ. ಆರನೆಯ ಶತಮಾನದ ಭಾರತದಲ್ಲಿ ಶಾಂತಿಚೇತನವಾಗಿ ಮೂಡಿಬಂದ ಮಹಾವೀರ ಬುದ್ಧ ಭಗವಾನನ ಸಮಕಾಲೀನ. ಈ ಇಬ್ಬರೂ ಆಧ್ಯಾತ್ಮ ಅಧ್ವರ್ಯಗಳು ; ಸಮಾಜದ ಪುನರುದ್ಧಾರಕರು. ಕಾಲದ ನಿಕಷದಲ್ಲಿ ಗೆದ್ದ, ಮಿಗಿಲಾಗಿ ಆತ್ಮವನ್ನು ಗೆದ್ದ ಅಜೇಯರು.

ಮಹಾವೀರನ ೨೫೦೦ನೇ ನಿರ್ವಾಣೋತ್ಸವದ ಸ್ಮರಣಾರ್ಥವಾಗಿ ಕನ್ನಡ ಸಾಹಿತ್ಯ ಪರಿಷತ್ತಿನವರು ಹೊರತಂದ ಈ ಕಿರುಹೊತ್ತಗೆ ಜೈನರಿಗೆ, ಜೈನೇತರರಿಗೆ, ಕನ್ನಡ ಬರುವ ಎಲ್ಲರಿಗೆ ಜೈನಧರ್ಮದ ಅರ್ಥಾತ್ ಮಹಾವೀರನ ಬೋಧನಾ ತತ್ವಗಳನ್ನು ಸುವೇದ್ಯಗೊಳಿಸುವಲ್ಲಿ ಸಫಲವಾಗಿದೆ.

ಈ ಪುಸ್ತಕದಲ್ಲಿ ಮೂರು ಭಾಗಗಳಿದ್ದು ಮೊದಲಭಾಗದಲ್ಲಿ ಮಹಾವೀರನ ಸಂಕ್ಷಿಪ್ತ ಜೀವನ ಪರಿಚಯವೂ ಎರಡನೆಯ ಭಾಗದಲ್ಲಿ ಕೆಲವು ಪ್ರಸಿದ್ಧ ವ್ಯಕ್ತಿಗಳ (ಉದಾ : ಮಹಾತ್ಮ ಗಾಂಧೀಜಿ, ಡಾ॥ ರಾಜೇಂದ್ರ ಪ್ರಸಾದ್, ಡಾ॥ ಎಸ್. ರಾಧಾಕೃಷ್ಣನ್, ಪಂ॥ ಜವಹರಲಾಲ್ ನೆಹರು, ವಿನೋಬಾ ಬಾವೆ, ರವೀಂದ್ರನಾಥ ಠಾಕೂರ್, ಬರ್ನಾಡ್ ಷಾ, ಬಾಲ ಗಂಗಾಧರ ತಿಲಕ್ ಮುಂತಾದವರು.) ಅಭಿಪ್ರಾಯ ಸಂಗ್ರಹಣೆಯೂ ಮೂರನೇ ಭಾಗದಲ್ಲಿ ಮಹಾವೀರನ ತತ್ವೋಪದೇಶವೂ ಇದೆ.

ಜೀವನ ಚರಿತ್ರ ಭಾಗದಲ್ಲಿ ಮಹಾವೀರನ ವ್ಯಕ್ತಿತ್ವವು ಪೌರಾಣಿಕವಾಗದೆ, ಪವಾಡಗಳಿಂದ ದೂರವಾಗಿ ಸಾಧ್ಯವಾದಷ್ಟು ಚರಿತ್ರೆಗೆ ಹತ್ತಿರವಿದ್ದು ವಾಸ್ತವದ ನೆಲೆಗಟ್ಟಿನಲ್ಲಿ ನಿಂತಿದೆ. ಹಾಗಾಗಿ ಓದುಗರಲ್ಲಿ ಮಹಾವೀರನ ಅಸೀಮ ಸಾಧನೆಯ ವ್ಯಕ್ತಿತ್ವದ ಬಗ್ಗೆ ಗೌರವಭಾವನೆ ಅಪಾರವಾಗಿ ಮೂಡಿ ಬರುತ್ತದೆ. ಜನಸಾಮಾನ್ಯರ ಓರೆ ಕೋರೆಗಳನ್ನು ತಿದ್ದಿ ಅವರನ್ನು ಸನ್ಮಾರ್ಗಕ್ಕೊಯ್ಯುವ ಅವನ ಸಂದೇಶಗಳನ್ನು ಪರಿಪಾಲಿಸಲು ಮನೋನಿಗ್ರಹ ಅತಿ ಮುಖ್ಯ.

'ಜಾತಿ ಇರುವುದು ಒಂದೇ ಜಾತಿ–ಅದು ಮನುಷ್ಯ ಜಾತಿ', 'ಸರಳ ಜೀವನ ಸುಖದ ಸಾಧನ', 'ಧರ್ಮಕ್ಕೆ ದಯೆಯೇ ಮೂಲ', 'ಪ್ರಾಮಾಣಿಕತೆಯೇ ಬಾಳಿನ ಬೆಳಕು', 'ಧರ್ಮದ ನಿರ್ಮಾತೃ ಮನುಷ್ಯ', ತೀರ್ಥಗಳಲ್ಲಾಗಲೀ ದೇವಾಲಯಗಳಲ್ಲಾಗಲೀ ದೇವರಿಲ್ಲ. 'ಭಗವಂತನಾದರೋ ಈ ದೇಹವೆಂಬ ದೇವಾಲಯದಲ್ಲಿ ಅಡಗಿದ್ದಾನೆ', ಆತ್ಮಜಯದ ಮುಂದೆ ಬೇರೆ ಯಾವ ಜಯವಿಲ್ಲ,' ಮುಂತಾದ ಹಲವಾರು ಉಕ್ತಿಗಳು ನುಡಿಮುತ್ತುಗಳಾಗಿವೆ. ಇಲ್ಲಿ ಸಮತಾವಾದವಿದೆ, ವಾಸ್ತವತಾವಾದವಿದೆ. ತನ್ನಲ್ಲೇ ಇರುವ ಭಗವಂತನನ್ನು ಕಾಣಲು ವ್ಯಕ್ತಿ ಚಾರಿತ್ರ್ಯಶುದ್ಧನಾಗಿ ಬದುಕುವುದೇ ಶ್ರೇಷ್ಠ ತಪಸ್ಸು ಎಂಬ ಸಾರ್ವಕಾಲಿಕ ಸತ್ಯ ಸಂದೇಶವು ಗಹನವೂ ಮನನೀಯವೂ ಆಗಿವೆ.

ಶ್ರಾವಕರು ಮತ್ತು ಸವಣರಿಗೆ ಅವರವರು ಬದುಕಬೇಕಾದ ರೀತಿಗಳನ್ನು, ಹೊಂದಿರಬೇಕಾದ ಗುಣಗಳನ್ನು ತಿಳಿಸಿಕೊಡುವ ಮಹಾವೀರನ ವಾಣಿ ಧರ್ಮದ, ಸಾಹಿತ್ಯದ ತವನಿಧಿಯಷ್ಟೇ ಅಲ್ಲ, ಜೈನೇತರ ಧರ್ಮೀಯರಿಗೂ ಅದು ಜೀವನದಲ್ಲಿ ಅಳವಡಿಸಿಕೊಳ್ಳಬಹುದಾದ, ಮನುಷ್ಯನ ಏಳಿಗೆಯನ್ನೇ ಗುರಿಯಾಗಿಟ್ಟುಕೊಂಡ ಮಾನವತಾಧರ್ಮದ ಅಕ್ಷಯ ಮಂತ್ರ.

ವೈಯಕ್ತಿಕ ಪುಸ್ತಕಭಂಡಾರದಲ್ಲಿ ಅಗತ್ಯ ಸೇರ್ಪಡೆಯಾಗಬೇಕಾದ ಅರ್ಹ ಪುಸ್ತಕ ಇದು. ಅಲ್ಲಲ್ಲಿ ಉಲ್ಲೇಖಗೊಂಡಿದ್ದ ಮಹಾವೀರನ ಉದಾತ್ತವಾಣಿಯನ್ನು ಒಂದೆಡೆ ಕಲೆಹಾಕಿ ಈ ಕೃತಿಯ ರೂಪದಲ್ಲಿ ಕೊಟ್ಟಿರುವ ಲೇಖಕಿ ಅಭಿನಂದನಾರ್ಹರು.

ಚಂದನಾ

ಮಳಲಿ ವಸಂತಕುಮಾರ್

ಆಧುನಿಕ ಕನ್ನಡ ಸಾಹಿತ್ಯದಲ್ಲಿ 'ಮಹಿಳಾ ಸಾಹಿತ್ಯ' ಒಂದು ವಿಶೇಷ ಮಜಲೆನಿಸುವಷ್ಟು ವ್ಯಾಪಕವಾಗಿ ವೈವಿಧ್ಯಮಯವಾಗಿ ಬೆಳೆದಿದೆ. ಮಹಿಳಾ ಸಾಹಿತ್ಯ ಎಂದು ಪೃಥಕ್ಕರಿಸುವುದು ಸರಿಯಲ್ಲ ಎನ್ನುವವರಿದ್ದರೂ ಅನಿವಾರ್ಯ ಎನ್ನುವಷ್ಟರಮಟ್ಟಿಗೆ ಅದು ರೂಪುಗೊಂಡಿದೆ. ಮಹಿಳಾ ಸಾಹಿತ್ಯ ಬಹಳಮಟ್ಟಿಗೆ ಕಥೆ, ಕಾದಂಬರಿ, ನಾಟಕ, ಹರಟೆ ಮುಂತಾದ ಸೃಜನ ಸಾಹಿತ್ಯಕ್ಕಷ್ಟೇ ಸೀಮಿತವಾಗಿ, ವಿದ್ವತ್ ವಲಯದಿಂದ ದೂರವಾಗಿದೆ ಎಂದೇ ಹೇಳಬೇಕು. ಹೀಗಿದ್ದರೂ ಕೇವಲ ಮೂರು ಅಥವಾ ನಾಲ್ಕು ಜನ ಲೇಖಕಿಯರು ಮಾತ್ರ ಸೃಜನ ಸಾಹಿತ್ಯ ಮತ್ತು ಸಂಶೋಧನ ಕ್ಷೇತ್ರಗಳೆರಡರಲ್ಲೂ ಉತ್ತಮವಾಗಿ ಕೃಷಿ ಮಾಡಿರುವುದು ಕಂಡುಬರುತ್ತದೆ. ಅಂತಹವರಲ್ಲಿ ಕಮಲಾ ಹಂಪನಾ ಪ್ರಮುಖರಾಗಿದ್ದಾರೆ.

ಕಮಲಾ ಹಂಪನಾ ಕನ್ನಡ ನಾಡಿನಲ್ಲಿ ಈಗಾಗಲೆ ತುಂಬ ಪ್ರಸಿದ್ಧವಾದ ಹೆಸರು. ಅವರು ಪ್ರಾಚೀನ ಅರ್ವಾಚೀನ ಸಾಹಿತ್ಯಗಳೆರಡನ್ನೂ ಆಳವಾಗಿ ಅಧ್ಯಯನ ಮಾಡಿದ್ದಾರೆ; ಶಾಸ್ತ್ರ ವಿಚಾರಗಳಲ್ಲಿ ಸಾಕಷ್ಟು ಪರಿಣತಿಯನ್ನು ಪಡೆದಿದ್ದಾರೆ. ಸುಮಾರು ಎರಡೂವರೆ ದಶಕಗಳಿಂದಲೂ ನಾಡಿನ ಹೆಸರಾಂತ ಪತ್ರಿಕೆಗಳಲ್ಲಿ ಅವರ ಮೌಲಿಕ ಬರಹಗಳು ಬೆಳಕು ಕಂಡಿವೆ. ಸುಮಾರು ಹನ್ನೆರಡು ಸಂಪುಟಗಳಷ್ಟು ಬೃಹತ್ ಪ್ರಮಾಣವನ್ನು ಅವು ಒಳಗೊಂಡಿವೆ. ಸಂಖ್ಯೆಯಿಂದ ಮಾತ್ರವಲ್ಲದೆ ಗುಣದಿಂದಲೂ ದೊಡ್ಡದಾಗಿರುವುದು ಅವುಗಳ ಹೆಗ್ಗಳಿಕೆ. ಲೇಖನ ಯಾವುದೇ ವಿಷಯವನ್ನು ಕುರಿತದ್ದಾದರೂ ಅದರಲ್ಲಿ ತಲಸ್ಪರ್ಶಿ ಅಧ್ಯಯನ ನಡೆಸುವುದು ಕಮಲಾ ಅವರ ವೈಶಿಷ್ಟ್ಯ.

ಕಮಲಾ ಹಂಪನಾ ಅವರು ಗಿರಿಜನ ಮನೆತನದಿಂದ ಬಂದ ಮಹಿಳೆ ಯಾದುದರಿಂದ ಸಹಜವಾಗಿಯೇ ತಮ್ಮ ಲೇಖನಗಳಲ್ಲಿ ಪಟ್ಟಭದ್ರ ಹಿತಗಳ ವಿರುದ್ಧ, ಶೋಷಣೆಯ ವಿರುದ್ಧ ದನಿ ಎತ್ತಿದ್ದಾರೆ; ದಲಿತ ಪರವಾದ ನಿಲುವು ತಳೆದು ಸಾಮಾಜಿಕ ಸಮಾನತೆಗಾಗಿ ಹಂಬಲಿಸಿದ್ದಾರೆ. ಹೀಗಾಗಿ ಅವರ ರಚನೆಗಳಲ್ಲಿ ಅನ್ಯಾಯದ ವಿರುದ್ಧ ಬಂಡೇಳುವ ಕ್ರಾಂತಿಯ ನವಧ್ವನಿ ಯನ್ನು ಕಾಣಬಹುದಾಗಿದೆ. ಕಮಲಾ ಹಂಪನಾ ಅವರ ಸಾಹಿತ್ಯದ ಹರವು ದೊಡ್ಡದು. ಕಥೆ, ಜೀವನ ಚರಿತ್ರೆ, ಸಂಶೋಧನೆ, ಸಂಪಾದನೆ, ವಿಮರ್ಶೆ, ವಚನ, ಅನುವಾದ, ಶಿಶುಸಾಹಿತ್ಯ ಮುಂತಾದ ಪ್ರಕಾರಗಳಲ್ಲಿ ಅವರು ಸಮರ್ಥವಾಗಿ ಕೃತಿರಚನೆ ಮಾಡಿದ್ದಾರೆ.

ನಕ್ಕಿತು ಹಾಲಿನ ಬಟ್ಟಲು, ರೆಕ್ಕೆ ಮುರಿದಿತ್ತು ಮತ್ತು ಚಂದನಾ ಕಥಾ ಸಂಕಲನಗಳು ಕನ್ನಡ ಕಥಾಸಾಹಿತ್ಯದಲ್ಲಿ ಒಂದು ಹೊಸ ಆಯಾಮವನ್ನೇ ತೆರೆದಿವೆ. ೧೯೮೦ ರಲ್ಲಿ ಪ್ರಕಟವಾದ ಡಾ॥ ಬಿ. ಆರ್. ಅಂಬೇಡ್ಕರ್ ಹೆಸರಿಗೆ ಮಕ್ಕಳ ಪುಸ್ತಕವಾದರೂ ಪ್ರಾಜ್ಞರಿಗೂ ಅರಿವು ಮೂಡಿಸುವಷ್ಟು ಉತ್ತಮ ವಾಗಿದೆ. ಅವರ 'ಸುಕುಮಾರ ಚರಿತೆಯ ಸಂಗ್ರಹ' ಒಳ್ಳೆಯಸಂಪಾದನೆಗೆ ನಿದರ್ಶನವಾಗಿದೆ. ಇತ್ತೀಚೆಗೆ (೧೯೮೪ ರಲ್ಲಿ) ಪ್ರಕಟವಾಗಿರುವ 'ಬಿಂದಲಿ' ಎಂಬ ವಚನ ಸಂಕಲನ ತುಂಬ ಮಹತ್ವದ್ದಾಗಿದ್ದು ಕಮಲಾ ಹಂಪನಾ ಅವರ ಸಾಹಿತ್ಯ ಸೃಷ್ಟಿಯಲ್ಲಿ ಅತ್ಯಂತ ಶ್ರೇಷ್ಠ ಮಟ್ಟದ್ದೆಂದು ಹೇಳಬಹುದು. ಬದುಕನ್ನು ಕುರಿತ ವ್ಯಾಪಕವಾದ ಅನುಭವ, ಅನುಕಂಪೆ, ತುಡಿತ ಮುಂತಾದವು ಬಗಬಗೆಯಲ್ಲಿ ಪ್ರತಿಮೆಗೊಂಡು ಸುಂದರ ಸಾಹಿತ್ಯವಾಗಿರುವುದು ಇಲ್ಲಿಯ ಹೆಗ್ಗಳಿಕೆ. ಬಿಂದಲಿಯ ಒಂದೊಂದು ವಚನವೂ ಜೀವನ ಚಿಂತನೆಯ ಅನರ್ಘ್ಯ ರತ್ನದಂತೆ ಭಾಸವಾಗುತ್ತವೆ. ಕಮಲಾ ಅವರ ಸೃಜನ ಪ್ರತಿಭೆಗೆ ಇದೊಂದು ಸಮರ್ಥ ಸಾಕ್ಷಿಯಾಗಿದೆ.

'ಚಂದನಾ' ಕಮಲಾ ಹಂಪನಾ ಅವರ ಮೂರನೆಯ ಕಥಾ ಸಂಕಲನ. ಮುನ್ನಿನ ಎರಡು ಕಥಾ ಸಂಕಲನಗಳಿಗಿಂತ ಇದು ತೀರಾ ಭಿನ್ನವಾಗಿದೆ. ಎಂಟು ಕಥೆಗಳ ಈ ಕೃತಿ ತನ್ನದೇ ಆದ ಕಾರಣಗಳಿಂದ ವೈವಿಧ್ಯಮಯವೂ ವೈಶಿಷ್ಟ್ಯಪೂರ್ಣವೂ ಆಗಿದೆ. ಕನ್ನಡ ಸಾಹಿತ್ಯದಲ್ಲಿ ಈ ಬಗೆಯ ಕೃತಿ ಹೊಸದು. ಏಕೆಂದರೆ ಇದು : "ಇತಿಹಾಸದ ಪುಟಗಳನ್ನು ತಿರುವಿಹಾಕಿದೆ, ಶಾಸನಗಳನ್ನು ಓದಿದೆ, ಪುರಾಣದಲ್ಲಿ ಮಿಂದಿದೆ, ಜಾನಪದದಲ್ಲಿ ಕೈಯಾಡಿಸಿದೆ." ಸಾಮಾನ್ಯವಾಗಿ ನಮ್ಮಲ್ಲಿ ಕಥೆಗಳು ಸಾಮಾಜಿಕ ವಸ್ತುವನ್ನು ಅವಲಂಬಿಸಿರುವಂತಹವೇ ಹೆಚ್ಚು. ಮಿಶ್ರ ಕಥೆಗಳು ಬಹಳ ಕಡಿಮೆ. ಆದರೆ 'ಚಂದನಾ'ದಲ್ಲಿ ಹಾಗಲ್ಲ. ಮಹಾಸತಿಯರನ್ನೂ ಮಹಾತ್ಮರನ್ನೂ ಧರ್ಮಪ್ರವರ್ತಕರನ್ನೂ ವೀರರನ್ನೂ ತ್ಯಾಗವೀರರನ್ನೂ ಕುರಿತ ಕಥೆಗಳಿವೆ. ಪ್ರಾಚೀನ ಜೀವನ ಮೌಲ್ಯಗಳು ಜೀವಂತವಾಗಿ ಕಥೆಗಳಲ್ಲಿ ಮರುಕಳಿಸಿವೆ. ಭಾರತದ ಸಾಂಸ್ಕೃತಿಕ ಭಿತ್ತಿಯ ಕೆಲವು ಸುಂದರ ಚಿತ್ರಗಳು ಇಲ್ಲಿನ ಕಥೆಗಳಲ್ಲಿ ಪಡಿಮೂಡಿ ಜೀವ ಪಡೆದಿವೆ.

ಮೊದಲನೆಯ ಕಥೆ 'ಮಹಾಸತಿ ಹರ್ಯಲೆ' ಅನೇಕ ಕಾರಣಗಳಿಂದ ತುಂಬ ಮಹತ್ವದ ಕಥೆಯಾಗಿದೆ. ತಿಪಟೂರು ತಾಲ್ಲೂಕಿನ ೯೩ನೆಯ ಶಾಸನದ ಆಧಾರದ ಮೇಲೆ ಇದು ರಚಿತವಾಗಿದೆ. ಅದು ೧೧೭೪ರ ಅವಧಿಗೆ ಸಂಬಂಧಿಸಿದೆ. ಸಂಶೋಧನೆಯ ಗರ್ಭದಿಂದ ಮುತ್ತು ರತ್ನಗಳನ್ನು ಹೇಗೆ ತೆಗೆಯಬಹುದೆಂಬುದಕ್ಕೆ ಈ ಕಥೆ ಸಾಕ್ಷಿಯಾಗಿದೆ. ಶಾಸನಾಧಾರಿತ ಕಥೆಗಳು ಇತಿ ಇತಿಹಾಸದ ಸ್ವರೂಪಗಳಾಗುತ್ತವೆಯಾದ್ದರಿಂದ ಸಹಜವಾಗಿಯೇ ಅವು ಹೆಚ್ಚು ಮೌಲ್ಯವುಳ್ಳವಾಗಿರುತ್ತವೆ ; ಸತ್ಯಕ್ಕೆ ಹತ್ತಿರವಾಗಿರುತ್ತವೆ.

ಪ್ರಕೃತ ಕಥೆ ಮಹಾಸತಿ ಹರ್ಯಲೆಯನ್ನು ಕುರಿತ ಶಾಸನ ಸಾಹಿತ್ಯವನ್ನು ಅವಲಂಬಿಸಿದೆ. ಈ ಪದ್ಯಗಳ ಕಾವ್ಯ ಸೌಂದರ್ಯವನ್ನು ಗಮನಿಸಿದರೆ ಅವು ಮಹಾಕವಿ ಕೃತ ಎಂಬುದರಲ್ಲಿ ಅನುಮಾನವಿಲ್ಲ.

> "ಅನುಪಮ ಪುಣ್ಯವಂತೆ, ಜಿನೇಂದ್ರ ಪದಾಬ್ಜ ವಿಲೀನ ಚಿತ್ತೆ
> ಪಾವನ ಸುಚರಿತೆ, ಮಹಾಸತಿ ಹರ್ಯಲೆ"

ಎಂಬ ಇಲ್ಲಿನ ಪದ್ಯಭಾಗದಲ್ಲಿ ಕಂಡುಬರುವ ಪ್ರಾಸಾನು ಪ್ರಾಸ, ಸಾಂದ್ರ ಬಂಧುರವಾದ ಅರ್ಥವಂತಿಕೆ, ಕಾವ್ಯದ ಉತ್ತಮಿಕೆಗೆ ಸಾಕ್ಷಿಯಾಗಿದೆ. ಈ ಶಾಸನ ಸಾಹಿತ್ಯದ ತಾತ್ಪರ್ಯ ಇಷ್ಟು :

ಪರಮ ಜಿನಭಕ್ತೆಯೂ ಮಹಾಸತಿಯೂ ಆದ ಹರ್ಯಲೆ ತನ್ನ ಅವಸಾನಕಾಲದಲ್ಲಿ ಮನುಜ ಮನೋಜನಂತಿರುವ ತನ್ನ ಪತಿ ಬೂವಯ

ನಾಯಕನನ್ನು ಕರೆದು "ನೀನು ನನ್ನನ್ನು ಸುಮ್ಮನೆ ಕನಸಿನಲ್ಲಾದರೂ ನೆನೆಯ ಬೇಡ. ಶಾಶ್ವತವಾದ ಧರ್ಮವೊಂದನ್ನೆ ನೆನೆ" ಎಂದು ಹೇಳುತ್ತಾಳೆ. ಇಂತಹ ನಿಷ್ಕಾಮ ಕರ್ಮಗಳಿಂದ ಸುರೇಂದ್ರ, ನರೇಂದ್ರ, ಫಣೀಂದ್ರ ರಾಜ್ಯದ ದೊರೆ ತನವನ್ನು, ಕೊನೆಗೆ ಮುಕ್ತಿಪದವನ್ನು ಪಡೆಯಬಹುದೆಂದು ಹೇಳುತ್ತಾಳೆ. ನನಗಾಗಿ ಏನನ್ನೂ ಮಾಡಬೇಕಾಗಿಲ್ಲ. ಆದರೆ ಪ್ರೀತಿಯಿಂದ ಒಂದು ಜಿನ ಮಂದಿರವನ್ನು ಕಟ್ಟಿಸು, ಧರ್ಮಧುರೀಣ ಬೂವಯನಾಯಕ ಎಂದು ತನ್ನ ಅಪೇಕ್ಷೆಯನ್ನು ವ್ಯಕ್ತಪಡಿಸುತ್ತಾಳೆ. ಇದಲ್ಲದೆ "ನನ್ನ ಮಗ ಚಿಕ್ಕಯ್ಯನನ್ನು ಕುಂದಿ ಕಾಂತಿಹೀನನಾಗದಂತೆ ಆದರದಿಂದ ರಕ್ಷಿಸಬೇಕೆಂದೂ ಉಪೇಕ್ಷಿಸಿದರೆ ದೋಷಕ್ಕೆ ಪಕ್ಕಾಗುವೆ" ಎಂದೂ ಎಚ್ಚರಿಸುತ್ತಾಳೆ. ಈ ಸದಮಳ ಸತಿ ಹರ್ಯಲೆ ಸಮಾಧಿ ವಿಧಿಯಿಂದ ಸತ್ತು ಇಂದ್ರಲೋಕವನ್ನು ಪ್ರವೇಶಿಸುತ್ತಾಳೆ. ಅವಳನ್ನು ದೇವತೆಗಳು ಓಲೈಸುತ್ತಾರೆ.

ಈ ವಸ್ತುವನ್ನು ಕಮಲಾ ಹಂಪನಾ ಅವರು ಒಂದು ಸುಂದರವಾದ ಕಥೆಯನ್ನಾಗಿ ಕಡೆದಿದ್ದಾರೆ. ಅದು ಅಮೃತಶಿಲೆಗೆ ಆಕೃತಿ ಬಂದಂತಾಗಿದೆ. ಹರ್ಷ ಎಂಬ ಸಾಹಿತ್ಯ ವಿದ್ಯಾರ್ಥಿಯ ಪಾತ್ರವೊಂದನ್ನು ಸೃಷ್ಟಿಸಿ ಅವನ ಶಾಸನಾಧ್ಯಯನದ ಹಿನ್ನೆಲೆಯಲ್ಲಿ ಕಥೆ ಸುರಳಿ ಬಿಚ್ಚಿಕೊಳ್ಳುವಂತೆ ತಂತ್ರ ವೊಂದನ್ನು ರೂಪಿಸಿದ್ದಾರೆ. ಹರ್ಷನ ಮನೋಪಟಲದಲ್ಲಿ ಸುಂದರ ದೃಶ್ಯಾ ವಳಿಗಳು ಮೂಡಿ, ಅಪ್ಸರೆಯರು ನೃತ್ಯ ಗಾಯನಕಲೆಗಳಿಂದ ಹರ್ಯಲೆಯನ್ನು ಓಲೈಸುವುದು ಕಂಡುಬರುತ್ತದೆ. ಜೈನಧರ್ಮದ ಮಹತ್ವವನ್ನು ಎತ್ತಿ ಹಿಡಿಯುವ ಈ ಕಥೆಯಲ್ಲಿ ಲೌಕಿಕಧರ್ಮವೂ ಅಡಕವಾಗಿದೆ. ಜಿನಮಂದಿರ ನಿರ್ಮಾಣ ಮತ್ತು ಜಿನಪೂಜೆಯ ಬೋಧನೆಯಲ್ಲಿ ಮೊದಲನೆಯದು ವ್ಯಕ್ತ ವಾದರೆ, ತನ್ನ ಮಗ ಚಿಕ್ಕಯ್ಯನನ್ನು ನೋಯದಂತೆ ನೋಡಿಕೊ ಎನ್ನುವಲ್ಲಿ ಲೌಕಿಕ ಧರ್ಮ ವ್ಯಕ್ತವಾಗಿದೆ. ತಾಯಿಯಲ್ಲಿ ಮಕ್ಕಳ ಬಗ್ಗೆ ಇರುವ ಪ್ರೀತಿ, ಮಮತೆ ಮತ್ತು ಮಾನವೀಯತೆಯ ಗುಣಗಳು ಇಲ್ಲಿ ಎರಕಗೊಂಡಿವೆ. ಕನ್ನಡಕ್ಕೆ ಇದೊಂದು ಹೊಸ ಬಗೆಯ ಕತೆಯಾಗಿದೆ.

'ಕಂಬದಮ್ಮ' ಬೇಡರ ಹೆಣ್ಣುಮಗಳೊಬ್ಬಳ ಮಹಾ ಬಲಿದಾನದ ದುರಂತ ಕಥೆ. ಚಿತ್ರದುರ್ಗದ ಕೋಟೆ ಇತಿಹಾಸಗಳ ಆಕರ. ಅಲ್ಲಿನ ಏಕನಾಥೇಶ್ವರಿ ದೇವಾಲಯದೆದುರು ನೂರು ಅಡಿಗಳಷ್ಟು ಎತ್ತರವಿರುವ ಏಕಶಿಲೆಯ ಅದ್ಭುತವಾದ ಗರುಡಗಂಬವೊಂದನ್ನು ಸ್ಥಾಪಿಸಲು ದೈವಭಕ್ತನಾದ ಪಾಳೆಯಗಾರನೊಬ್ಬ ನಿರ್ಧರಿಸಿದ. ಎಷ್ಟು ಪ್ರಯತ್ನಿಸಿದರೂ ಆ ಸ್ಥಂಭ ನಿಲ್ಲಲಿಲ್ಲ. ಆ ಪಾಳೆಯಗಾರನಿಗೆ ಕನಸಿನಲ್ಲಿ ಏಕನಾಥೇಶ್ವರಿ ಕಾಣಿಸಿಕೊಂಡು 'ಒಬ್ಬಳು ಗರ್ಭಿಣಿ ಸ್ತ್ರೀಯನ್ನು ಹೂತಿಟ್ಟರೆ' ಕಂಬ ನಿಲ್ಲುವುದಾಗಿ ತಿಳಿಸಿದಳು.

ಆದರೆ ಯಾವ ಸ್ತ್ರೀಯು ಅದಕ್ಕೆ ಬಲಿಯಾಗಲು ಸಿದ್ಧವಿರಲಿಲ್ಲ. ಪಾಳೆಯಗಾರ ಚಿಂತಾಕ್ರಾಂತನಾದ. ನಿದ್ರೆ ಆಹಾರಗಳನ್ನು ತೊರೆದ. ವಿಷಯ ತಿಳಿದ ಬೇಡರ ಹೆಣ್ಣುಮಗಳೊಬ್ಬಳು ಸ್ವಇಚ್ಛೆಯಿಂದ ಬಂದು ಬಲಿಯಾದಳು. ಕಂಬ ನಿಂತಿತು. ಆ ಹೆಣ್ಣು ಕಂಬದಡಿಯಲ್ಲಿ ಬಲಿಯಾದುದರಿಂದ ಸಮಾಜ ಆ ಕಂಬವನ್ನು 'ಕಂಬದಮ್ಮ' ಎಂದು ಪರಿಗಣಿಸಿತು. ಚಿತ್ರದುರ್ಗದ ಜನ ಇಂದಿಗೂ ಏಕನಾಥೇಶ್ವರಿಯ ದೇವಾಲಯದ ಮುಂದಿರುವ ಆ ಕಂಬದ-ಅಮ್ಮನನ್ನು ಭಯ ಭಕ್ತಿಗಳಿಂದ ಪೂಜಿಸುತ್ತಾರೆ.

ವಾಸ್ತವವಾಗಿ ಈ ಕಥೆ ಮೂಢನಂಬಿಕೆಯೊಂದರ ಮೇಲೆ ಬೆಳಕು ಚೆಲ್ಲುತ್ತದೆ. ನಮ್ಮ ಸಾಂಸ್ಕೃತಿಕ ಪರಂಪರೆಯಲ್ಲಿ ಒಳ್ಳೆಯದರಂತೆ ಕೆಟ್ಟ ಪದ್ಧತಿಗಳೂ ಸೇರಿವೆ ಎಂಬುದನ್ನು ಇದು ತೋರಿಸುತ್ತದೆ. ಸತಿ ಸಹಗಮನ ಪದ್ಧತಿಯಷ್ಟೇ ಅಪಾಯಕಾರಿಯಾದುದು, ಆದ್ದರಿಂದ ಇದು ನಿಷಿದ್ಧ ಎಂಬುದನ್ನು ಇದು ಧ್ವನಿಸುತ್ತದೆ. ಬಲಿಯಾದ ಹೆಣ್ಣುಮಗಳ ಬದುಕಿನ ಹಿಂದಿರುವ ನಾಡ ಪ್ರೇಮ ಮತ್ತು ರಾಜಭಕ್ತಿ ಸಹ ವ್ಯಕ್ತವಾಗುತ್ತದೆ.

'ತಾಳೆರಾಜನ ಕಥೆ' ಜನಪದ ಕಥೆಯೊಂದರ ನಿರೂಪಣೆ. ಇದೊಂದು ನೀತಿಪ್ರಧಾನ ಕತೆ. ಮೇಲುನೋಟಕ್ಕೆ ಇದು ಷೇಕ್ಸ್‌ಪಿಯರ್ ಕವಿಯ ಕಿಂಗ್ ಲಿಯರ್ ನಾಟಕದ ಕಥಾವಸ್ತುವನ್ನು ಹೋಲುತ್ತದೆ. ಅದರೆ ಅಲ್ಲಿಯಂತೆ ದುಃಖಾಂತವಾಗದೆ ಭಾರತೀಯ ಸಾಹಿತ್ಯ ಸಂಪ್ರದಾಯದಂತೆ ಸುಖಾಂತವಾಗಿದೆ. ಒಳ್ಳೆಯವರಿಗೆ ಅಂತ್ಯದಲ್ಲಿ ಗೆಲುವು ವ್ಯಕ್ತವಾಗಿದೆ.

'ವರ್ಧಮಾನ ಮಹಾವೀರ' ಹೆಸರೇ ಸೂಚಿಸುವಂತೆ ವರ್ಧಮಾನ ಮಹಾವೀರನ ಜೀವನ ಚಿತ್ರವಾಗಿದೆ. ಮಹಾವೀರನಾಗಿದ್ದ ವ್ಯಕ್ತಿಯೊಬ್ಬ ಜೀವದಯೆಯ ದೃಷ್ಟಿಯಿಂದ ಮಹಾತ್ಯಾಗಿಯಾದ ಸಂಗತಿ ಇಲ್ಲಿ ಚಿತ್ರಿತವಾಗಿದೆ. ಆತ್ಮದ ವಿಕಸನ ಕ್ರಿಯೆಯ ಆಧ್ಯಾತ್ಮ ವಿಚಾರದ ಅಭಿವ್ಯಕ್ತಿ ಇಲ್ಲಿ ಕಂಡುಬರುತ್ತದೆ.

ಅಹಿಂಸೆ, ಅಸ್ತೇಯ, ತ್ಯಾಗ, ಅಪರಿಗ್ರಹ, ಬ್ರಹ್ಮಚರ್ಯೆ ಎಂಬ ಪಂಚ ತಂತ್ರಗಳ ಮಹತ್ವವನ್ನು ಸಾರಿದ ಮಹಾತ್ಮ ಮಹಾವೀರ. ಜೈನ ಧರ್ಮದ ಮಹಾ ಪ್ರವರ್ತಕನಾದ ಈತ: "ಜೀವಕ್ಕೆ ಜಾತಿಯಿಲ್ಲ. ಈ ಪ್ರಪಂಚದಲ್ಲಿ ಎಲ್ಲ ಜೀವವೂ ಶ್ರೇಷ್ಠವಾದುದೇ. ಜಾತಿ ಬೇರೆ, ಧರ್ಮ ಬೇರೆ" ಎಂದು ಸಾರಿದ. ಜೀವದಯೆಗೆ ಇವನಷ್ಟು ಒತ್ತು ಕೊಟ್ಟ ವ್ಯಕ್ತಿ ಇನ್ನೊಬ್ಬನಿಲ್ಲ. ಕೇವಲಜ್ಞಾನ ಪಡೆದಮೇಲೂ ಸುಮಾರು ಮೂವ್ವತ್ತೆರಡು ವರ್ಷಗಳ ಕಾಲ

ಜ್ಞಾನಬೋಧೆ ಮಾಡಿ ಜನರ ಅಜ್ಞಾನವನ್ನು ಅಳಿಸಿದ ಮಹಾತ್ಮ ಈತ. 'ಭೋಗ ಜೀವನ ನಶ್ವರವೆಂದು ಯೋಗಕ್ಕೆ ಮುಖ ಮಾಡಿದ ಈ ವ್ಯಕ್ತಿ ಜನರಿಗೂ ಅದನ್ನೇ ಸಾರಿದ. ಬದುಕು ಮತ್ತು ಬೋಧನೆ ಒಂದೇ ಆದುದು ಮಹಾವೀರನ ವೈಶಿಷ್ಟ್ಯ. ಆಜನ್ಮ ಬ್ರಹ್ಮಚಾರಿಯೂ ಜಿನಮುನಿಯೂ ಆದ ಈತ ತನ್ನ ಎಪ್ಪತ್ತೆರಡು ವರ್ಷಗಳ ಬಾಳಿನಲ್ಲಿ ಮಾಡಿದ ಸಾಧನೆ ಸಿದ್ಧಿಗಳು ಅಪೂರ್ವವಾದವುಗಳು. ಈ ಪುಣ್ಯಪುರುಷನ ಜೀವನ ವಿಚಾರಗಳನ್ನು ಪ್ರಸ್ತುತ ಲೇಖಕರು ಸಂಕ್ಷಿಪ್ತವಾಗಿಯಾದರೂ ಸಮಗ್ರವಾಗಿ ಮನಂಬುಗು ವಂತೆ ಚಿತ್ರಿಸಿದ್ದಾರೆ.

ಈ ಸಂಕಲನದ ಮತ್ತೊಂದು ಕಥೆಯಾದ 'ಬಾಹುಬಲಿ' ಪರಿಣಾಮದ ದೃಷ್ಟಿಯಿಂದ ಅತ್ಯಂತ ಗಮನಾರ್ಹವಾಗಿದೆ. ಕಮಲಾ ಹಂಪನಾ ಅವರು ಇದನ್ನು ಪಂಪನ ಆದಿಪುರಾಣದ ಭರತ ಬಾಹುಬಲಿ ಪ್ರಸಂಗದಿಂದ ಆರಿಸಿ ಕೊಂಡಿದ್ದಾರೆ. ಪಂಪನ ಆದಿಪುರಾಣದ ಬಾಹುಬಲಿ ಪ್ರಸಂಗ ಕನ್ನಡ ಸಾಹಿತ್ಯದ ಅತ್ಯಂತ ಆಕರ್ಷಕ ಪ್ರಸಂಗಗಳಲ್ಲಿ ಒಂದು. ಹತ್ತನೆಯ ಶತಮಾನವನ್ನು ಕನ್ನಡ ಸಾಹಿತ್ಯದ ಸುವರ್ಣಯುಗ ಎನ್ನುತ್ತಾರೆ. ಅದಕ್ಕೆ ಪಂಪನ ಬಾಹುಬಲಿ ಮತ್ತು ಇಂದ್ರಗಿರಿಯ ಮೇಲಿನ ಬಾಹುಬಲಿ ಸಾಕಷ್ಟು ಕೊಡುಗೆ ಇತ್ತಿದ್ದಾರೆ.

ಪಂಪ ಈ ಪ್ರಸಂಗದಲ್ಲಿ ಮುಳ್ಳನ್ನು ಮುಳ್ಳಿನಿಂದ ತೆಗೆಯುವ ಕಾರ್ಯವನ್ನು ಮಾಡಿದ್ದಾನೆ. ಅಹಂಕಾರದ ಮರ್ದನ ಪ್ರತ್ಯಹಂಕಾರದಿಂದ ಎಂಬುದನ್ನು ಸೂಚಿಸುತ್ತನಾದರೂ ಅದಕ್ಕಿಂತ ಗುರುತರವಾಗಿ ಮೆಲ್ಪು ಬಲ್ಪಂ ಅಳಿಗುಂ ಎಂಬುದನ್ನು ಪ್ರಬಲವಾಗಿ ಪ್ರತಿಪಾದಿಸುತ್ತಾನೆ. ಷಟ್‌ಖಂಡ ಮಂಡಲಗಳನ್ನು ಗೆದ್ದು ವಿಶ್ವವಿಜೇತನಾದ ಭರತ ತನಗಿದ್ದಿಲ್ಲವೆಂಬ ಹಮ್ಮಿ ನಿಂದ ಸೋದರರ ಶರಣಾಗತಿಯನ್ನು ಅಪೇಕ್ಷಿಸುತ್ತಾನೆ. ಆದರೆ ಧರ್ಮವೀರ ನಾದ ಬಾಹುಬಲಿ ಇದನ್ನು ತಿರಸ್ಕರಿಸುತ್ತಾನೆ. "ಕರೆದೊಡೆ ಬೆಸನೇನೆಂಬ, ಜೀಯೆಂಬ, ದೇವೆಂಬ, ಅರಸೆಂಬ, ಆಳೆಂಬ ಆತ್ಮಕ್ಕೆ ತನುವ" ಒಡ್ಡಲು ಅವನು ಒಪ್ಪುವುದಿಲ್ಲ. ಬದಲಾಗಿ ಭರತನೊಂದಿಗೆ ಧರ್ಮಯುದ್ಧವನ್ನು ಅಪೇಕ್ಷಿ ಸುತ್ತಾನೆ. ಮಲ್ಲಯುದ್ಧದಲ್ಲಿ 'ಕನಕಾಚಲಮಂ ಪೊತ್ತುದು ಘನಮರಕತಶೈಲ' ಎನ್ನುವ ಹಾಗೆ ಬಾಹುಬಲಿ ಭರತನನ್ನು ಮೇಲೆತ್ತುತ್ತಾನೆ. ಆದರೆ ಆತ ಗುರು, ಪಿರಿಯಣ್ಣ ಮಹಿಬೂಕರ ಎಂಬ ಭಾವನೆ ಬಂದು ಕರುಣೆ ಉಕ್ಕಿ ಗೌರವದಿಂದ ಕೆಳಗಿಳಿಸುತ್ತಾನೆ. ಸೋತ ಭರತ ಅವಮಾನಿತನಾಗಿ ಬಾಹುಬಲಿಯ ಮೇಲೆ ಚಕ್ರರತ್ನವನ್ನು ಪ್ರಯೋಗ ಮಾಡುತ್ತಾನೆ. ಆದರೆ ಅದು ಆತನನ್ನು ಕೊಲ್ಲುವು ದಿಲ್ಲ; ಬದಲಿಗೆ ಅವನ ಲೌಕಿಕ ಆಸೆಗಳನ್ನೆಲ್ಲ ಕೊಲ್ಲುತ್ತದೆ. ಸಾಮ್ರಾಜ್ಯದ

ಆಸೆ ಅಣ್ಣತಮ್ಮಂದಿರಲ್ಲಿ, ತಂದೆ ಮಕ್ಕಳಲ್ಲಿ ವೈರವನ್ನುಂಟುಮಾಡುತ್ತದೆ ಎಂದು ಬಗೆದು ಸಮಸ್ತ ರಾಜ್ಯವನ್ನು ಅಣ್ಣನಿಗೊಪ್ಪಿಸಿ ತಪಸ್ಸಿಗೆ ಹೊರಟು ಹೋಗುತ್ತಾನೆ. ಈ ಘಟನೆ ಭರತನ ಮೇಲೆ ಕೂಡ ಪರಿಣಾಮ ಬೀರುತ್ತದೆ. ಅವನ ಅಹಂಕಾರ ಕೂಡ ಅಳಿಯುತ್ತದೆ. 'ಮೆಲ್ಪು ಬಲ್ಪಂ ಅಳಿಗುಂ' ಎಂಬುದು ಸ್ಪಷ್ಟವಾಗುತ್ತದೆ. ಪಂಪನ ಪದ್ಯಗಳು ಸಂಸ್ಕೃತ ಭೂಯಿಷ್ಠವೂ ಕ್ಲಿಷ್ಟವೂ ಆದುದರಿಂದ ಅವುಗಳ ಸಾಹಿತ್ಯ ಮೌಲ್ಯ ಎಷ್ಟೇ ಉತ್ಕೃಷ್ಟ ವಾಗಿದ್ದರೂ ಸಾಮಾನ್ಯರಿಗೆ ಎಟುಕುವುದಿಲ್ಲ. ಪಂಡಿತರಿಗೆ ಮಾತ್ರ ಮೀಸಲಾಗಿವೆ. ಕಮಲಾ ಹಂಪನಾ ಅವರು ಪಂಪನನ್ನು ಆಳವಾಗಿ ಅಧ್ಯಯನ ಮಾಡಿದ್ದಾರೆ. ಅವರು ಅಲ್ಲಿನ ಮುಖ್ಯ ಸಂಗತಿಗಳನ್ನು ಆಧರಿಸಿ, ಮೂಲಕ್ಕೆ ಸ್ವಲ್ಪವೂ ಕುಂದು ಬಾರದ ರೀತಿಯಲ್ಲಿ, ಸರಳವಾದ ಭಾಷೆಯಲ್ಲಿ ಹೊಸಗನ್ನಡ ದಲ್ಲಿ ಉತ್ತಮವಾಗಿ ಕಥೆಯನ್ನು ಬರೆದಿದ್ದಾರೆ. ಇವು ಪಂಡಿತ ಪಾಮರ ರೆಲ್ಲರಿಗೂ ತಲುಪುತ್ತವೆ.

ಇನ್ನು ಕನ್ನಡ ನಾಡಿನ ಸಾಂಸ್ಕೃತಿಕ ಚರಿತ್ರೆಯಲ್ಲೂ ಸಾಹಿತ್ಯ ಚರಿತ್ರೆ ಯಲ್ಲೂ ಚಾವುಂಡರಾಯ ವಿಶೇಷ ಉಲ್ಲೇಖಕ್ಕೆ ಅರ್ಹನಾದ ವ್ಯಕ್ತಿ. ಆತ ವೀರ, ವಿದ್ವಾಂಸ ಮತ್ತು ಧರ್ಮಧುರೀಣ. 'ತ್ರಿಷಷ್ಠಿ ಶಲಾಕ ಪುರುಷ ಪುರಾಣಂ' ಎಂಬ ಕೃತಿಯನ್ನು ರಚಿಸಿದವನು. ಕ್ರಿ. ಶ. ೯೮೧ ರಲ್ಲಿ ಶ್ರವಣ ಬೆಳಗೊಳದಲ್ಲಿ ಗೊಮ್ಮಟೇಶ್ವರ ಮೂರ್ತಿಯು ಸ್ಥಾಪನೆಗೆ ಕಾರಣನಾದವನು. ಚಾವುಂಡರಾಯನ ಸಾಧನೆಗಳನ್ನು ಕಮಲಾ ಹಂಪನಾ ಅವರು ಘಟನೆ ಮತ್ತು ಸಂಭಾಷಣೆಯ ಸ್ವರೂಪದಲ್ಲಿ ಸುಂದರವಾಗಿ ಚಿತ್ರಿಸಿದ್ದಾರೆ.

'ಚಂದನಾಂಬಿಕೆ' ಕಮಲಾ ಹಂಪನಾ ಅವರ ಉನ್ನತ ಮಟ್ಟದ ಕಥನ ಕಲೆಗೆ ಹಿಡಿದ ಕೈಗನ್ನಡಿಯಂತಿದೆ. ಮೇಲುನೋಟಕ್ಕೆ ಜನಪದ ಕಥೆಯಂತೆ ಭಾಸವಾಗುವ ಇದನ್ನು ಅತ್ಯುತ್ತಮ ಕಥನತಂತ್ರದಿಂದ ಒಳ್ಳೆಯ ಕಥೆಯನ್ನಾಗಿ ಸಿದ್ದಾರೆ. ಈ ಕಥೆ ಪಂಚನಮಸ್ಕಾರಗಳ ಮಹತ್ವವನ್ನೂ ಅರ್ಹಯನ ಧ್ಯಾನದ ಫಲವನ್ನೂ ತಿಳಿಸುವಂತಹದು. ಇವುಗಳ ಸಹಾಯದಿಂದ ಚಂದನಾಂಬಿಕೆ ತನಗೊದಗಿದ ಎಲ್ಲ ಕಷ್ಟಗಳಿಂದ ಹೇಗೆ ಪಾರಾದಳೆಂಬುದನ್ನು ರಮಣೀಯವಾಗಿ ನಿರೂಪಿಸಲಾಗಿದೆ.

ಪುರಾಣೇತಿಹಾಸಗಳಲ್ಲಿ ಒಂದಲ್ಲೊಂದು ಕಾರಣದಿಂದ ತುಂಬಾ ಪ್ರಸಿದ್ಧಿ ಯನ್ನು ಪಡೆದಿರುವ ವಸ್ತುಗಳನ್ನು ಆರಿಸಿಕೊಂಡು ಕಮಲಾ ಹಂಪನಾ ಅವರು ಸಮರ್ಥವಾಗಿ ಕಥೆಗಳನ್ನು ಬರೆದಿದ್ದಾರೆ. ಇವರಿಗೆ ಕಥನಕಲೆ ಕರಗತವಾಗಿದೆ.

ಶಾಸನದಂತಹ ಶಾಸ್ತ್ರವಿಚಾರಗಳನ್ನೂ ಕಲಾವಲಯಕ್ಕೆ ತಂದು ರಂಜನೀಯವಾಗಿಸುವ ಪ್ರತಿಭೆ ಇದೆ.

ಲಲಿತವೂ ಹೃದ್ಯವೂ ಆದ ಇವರ ಶೈಲಿ ಕಥಾಮಾಧ್ಯಮಕ್ಕೆ ಒಪ್ಪುವಂತಿದೆ. ಭಾವ ಭಾಷೆಗಳ ಹದವಾದ ಸಾಂಗತ್ಯ ಶೈಲಿಗೆ ಒಳ್ಳೆಯ ಮಾಧುರ್ಯವನ್ನು ಒದಗಿಸಿದೆ. ಘಟನೆ ಮತ್ತು ಸಂಭಾಷಣಾ ಪ್ರಧಾನವಾದ ಇವರ ಕಥನ ತಂತ್ರ–ಕಥೆಗಳು ಒಳ್ಳೆಯ ಯಶಸ್ಸನ್ನು ಪಡೆಯುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದೆ. ಒಟ್ಟಿನಲ್ಲಿ 'ಚಂದನಾ' ಕನ್ನಡ ಕಥಾಸಾಹಿತ್ಯಕ್ಕೆ ಒಂದು ಉತ್ತಮ ಕೊಡುಗೆಯಾಗಿದೆ.

ಸಂಪ್ರದಾಯದ ಚೌಕಟ್ಟಿನ ಸಮಾಜದ ಜೈಲಿನ ಕಂಬಿಗಳ ಹಿಡಿತಕ್ಕೆ ಕಮಲಾ ಹಂಪನಾರವರು ತಲುಪದೇ ಇದ್ದದ್ದು ಒಂದು ಶುಭಯೋಗ. ಅಂದರೆ ತಮಗೆ ಇಷ್ಟವಾದ ಗಂಡಸನ್ನು ಸ್ಪಷ್ಟವಾಗಿ ಸಂಗಾತಿಯನ್ನಾಗಿ ಆರಿಸಿಕೊಂಡಿದ್ದು ಬರವಣಿಗೆಯ ಸಾಗಾಟಕ್ಕೆ ಹೊಸ ವೇದಿಕೆಯನ್ನು ನಿರ್ಮಿಸಿಕೊಂಡಂತೆ ಆಗುತ್ತದೆ.

ಆದರ್ಶ ಜೈನ ಮಹಿಳೆಯರು

ಮಹೇಂದ್ರ

ಇನ್ನೊಂದು ದೃಷ್ಟಿ ಎಂದರೆ ಪರಿಸರ ಭ್ರಷ್ಟತೆಯ ರಾಹು ಇವರ ಬದುಕಿಗೆ ನೆರಳನ್ನೂ ಚಾಚದೆ ಇದ್ದದ್ದು ಸಾಹಿತ್ಯ ಲೋಕಕ್ಕೆ ಕೆಲವು ಕೃತಿಗಳ ಸೃಷ್ಟಿ ಕ್ರಿಯೆಗೆ ಚಾಲನೆ ದೊರಕಿದ್ದು ಖುಷಿ ಕೊಡುವ ವಿಚಾರವಾಗಿ ಉಳಿಯುತ್ತದೆ. ಸಾಹಿತ್ಯ ಸಾಂಸ್ಕೃತಿಕ ಚಟುವಟಿಕೆ ಅಂತ ನಾವು ಯಾವಾಗ ಬೊಬ್ಬೆ ಹಾಕುತ್ತೇವೆ ಅಂದ್ರೆ ಕೈತುಂಬ

ಸಂಬಳ, ಹೊಟ್ಟೆ ತುಂಬ ಊಟ, ವಾಸಕ್ಕೆ ಜಾಗ, ಮನಸ್ಸಿಗೆ ಬಂದಾಗ ಪಾನಗೋಷ್ಠಿಗಳಲ್ಲಿ ಭಾಗವಹಿಸಿದಾಗ ಮಾತ್ರ. ಇಲ್ಲಿ ಕಮಲಾ ಹಂಪನಾ ಪರಿಸರ ಭ್ರಷ್ಟತೆಯಲ್ಲದ ಮತ್ತು ಮಹಿಳೆಯೊಬ್ಬರು ಬರೆಯುವುದು ಏಕೆ ಮತ್ತು ಮಹಿಳೆಯೊಬ್ಬಳು ಬರೆಯುವುದು ಹೇಗೆ ಮತ್ತು ಯಾವಾಗ ಅನ್ನೋದನ್ನ ಮುಂದಿನ ಮಾತುಗಳು ಹೇಳುತ್ತವೆ. ನಾನು ಹುಟ್ಟಿ, ಬದುಕುತ್ತಿರುವ ಬೆಂಗಳೂರಿನಲ್ಲಿ ಮಹಿಳೆಯರು ಉದ್ಯೋಗಸ್ಥರಿದ್ದಾರೆ, ಹೂ ಕಟ್ಟುವವರಿದ್ದಾರೆ, ಕೂಲಿಗಳು, ಮೈ ಮಾರಿಕೊಳ್ಳುವವರು, ರೋಗಿಗಳು, ಹೆರಿಗೆಯಂತ್ರದಂತಿರುವವರು, ಇತ್ಯಾದಿ—ಪಟ್ಟಿ ಉದ್ದವಾಗುತ್ತದೆ. ಆದರೆ ಕಣ್ಣು ಬಿಟ್ಟಕಡೆ ಯಾವುದೇ ಬಡಾವಣೆಗೆ ಹೋಗಿ ಮಹಿಳೆಯರು ಪಾತ್ರೆ ತಿಕ್ಕುವ, ನೀರು ಹಿಡಿಯುವ, ಬಟ್ಟೆ ಒಗೆಯುವ, ಅಡಿಗೆ ಮಾಡುತ್ತಿರುವ ಚಿತ್ರಗಳೇ ನಮ್ಮ ಮುಂದೆ ಹಾಯ್ದು ಕಿರಿಕಿರಿ ಉಂಟುಮಾಡುತ್ತವೆ. ಅಲ್ಲೊಬ್ಬರು, ಇಲ್ಲೊಬ್ಬರು ಅಪರೂಪವಾಗಿ ನಮಗೆ ಆಹ್ಲಾದವಾಗಿ ಕಾಣಬಹುದು. ಹದಿನೆಂಟರಿಂದ ಮುವ್ವತ್ತು ವರ್ಷದ ಹೆಣ್ಣುಗಳು ಕಾಲೇಜು, ಸಿನಿಮಾ, ಬಾಯ್‌ಫ್ರೆಂಡುಗಳು—ವಗೈರೆಯಾಗಿ ಮೆರೆಯುತ್ತಿರುತ್ತಾರೆ.

ಇಂಥದ್ದರಲ್ಲಿ ಟಿ. ಸುನಂದಮ್ಮ ಹಾಸ್ಯ ಮಾಡೋದು, ಉಷಾ ನವರತ್ನರಾಂ ಪ್ರಣಯ ಕತೆಗಳನ್ನು ಬರೆಯೋದು, ಅನುಪಮಾ ನಿರಂಜನ ವಧುವಿಗೆ ಕಿವಿಮಾತು ಹೇಳೋದು, ಪ್ರತಿಭಾ ಪದ್ಯ ಬರೆಯೋದು, ಕಮಲಾ ಹಂಪನಾ ಲಿಟರರಿಯಾಗಿ ತಲೆಕೆಡಿಸಿಕೊಳ್ಳೋದು ಮೆಚ್ಚುವುದಕ್ಕಿಂತ ಅವರು ಏನು ಮಾಡ್ತಿದಾರೆ ಅನ್ನುವ ಸಾಹಿತ್ಯ ಸಮೀಕ್ಷೆ ನಮ್ಮ ಫಲಪೂರ್ಣ ಅಧ್ಯಯನಕ್ಕೆ ಕಸಿ ಮಾಡಿದಂತಾಗುತ್ತದೆ.

‘ಆದರ್ಶ ಜೈನ ಮಹಿಳೆಯರು’ ಪುಸ್ತಕ, ಗಾತ್ರದಲ್ಲಿ ಗುಲಾಬಿ ಹೂವಿಗಿಂತಲೂ ಹಗುರವಾಗಿರುವಂಥದ್ದು. ಸದುಪಯೋಗಕ್ಕೆ, ಹೊಸ ದಂಪತಿಗಳೊಬ್ಬರ ಮದುವೆಯ ದಿನದ ನೆನಪಿಗೆ ಪ್ರಕಟವಾಗಿರುವಂಥದ್ದು. ೧೭ ವರ್ಷಗಳ ಹಿಂದೆ (೧೯೬೭) ಬೆಳಕು ಕಂಡಿರುವ ಇಪ್ಪತ್ತುಪುಟಗಳಿಗೆ ಸೀಮಿತವಾದದ್ದು. ಇಲ್ಲಿನ ಬರವಣಿಗೆಯನ್ನು ಓದುತ್ತಿದ್ದರೆ ಲೇಖಕಿಯ ವಯಸ್ಸೂ ಆಗತಾನೆ ಬಳ್ಳಿಯಿಂದ ಹೂವು ಅರಳಿ ಮುಂಜಾನೆಯ ರಾಗವನ್ನು ದಳಗಳಿಗೆ ಪೋಣಿಸಿಕೊಳ್ಳುತ್ತ, ಮಂಜಿನ ಶೀತವನ್ನು ಒಪ್ಪಿಕೊಳ್ಳುತ್ತಿದ್ದಂಥ ಎಳೆಯದು, ಹೊಸತು ಅನ್ನಿಸುತ್ತದೆ.

ವೀಡಿಯೊ ಕ್ಯಾಸೆಟ್‌ಗೆ ಬಳಸುವ ಕ್ಯಾಮರಾ ಹೇಗೆ ಭೌತಿಕ ಆಕೃತಿಗಳನ್ನು ಸುಂದರವಾದ ಚೌಕಟ್ಟಿನಲ್ಲಿ ಸೆರೆಹಿಡಿದು ಮತ್ತೆ ಮತ್ತೆ ಪ್ರದರ್ಶನ

ಗೊಳ್ಳುತ್ತೋ ಅದೇ ರೀತಿ ಕಮಲಾ ಹಂಪನಾರವರು ಭಾಷೆಯ ಸಾಧ್ಯತೆಗಳನ್ನು ಸಯಗೊಳಿಸಿ, ನಾಜೂಕು ತರಿಸಿ ತಾವು ಆರಿಸಿಕೊಂಡಿದ್ದರ ವಿಷಯದ ಬಗ್ಗೆ ಒಳ–ಹೊರ ಆವರಣಗಳ ಸ್ಥಿತಿಲಹರಿಗಳನ್ನು ತೋರಿಸಲು ಉತ್ಸಾಹಗೊಳ್ಳುತ್ತಾರೆ.

ಕಮಲಾ ಹಂಪನಾರವರು ಕತೆಯ ರೀತಿಯಲ್ಲಿ ಬರೆದಿದ್ದಾರೆ. ಆದರೆ ಅದಕ್ಕೆ ಆಧಾರವಾಗಿ ಪ್ರಾಕೃತ, ಸಂಸ್ಕೃತ, ಕನ್ನಡದ ಹಳಗನ್ನಡ ಕಾವ್ಯಗಳು ಮತ್ತು ಶಾಸನಗಳು, ತಮಿಳು—ಇವೆಲ್ಲದರಲ್ಲಿರುವ ಸಾಮಗ್ರಿಗಳನ್ನು ಬಳಸಿಕೊಳ್ಳುವರು. ಅಲ್ಲದೆ ಶ್ವೇತಾಂಬರ ಸಂಪ್ರದಾಯದಲ್ಲಿನ ವಸ್ತುಸ್ಥಿತಿಗಳನ್ನು ಉಪಯೋಗಿಸಿಕೊಳ್ಳುತ್ತಾರೆ.

ಮದುವೆಯ ದಿನವೇ ದಾಂಪತ್ಯ ಸುಖದಲ್ಲಿ ಇರಲಾಗದ ರಾಜಮತಿ (೨೨ನೇ ತೀರ್ಥಂಕರ ನೇಮಿನಾಥನ ವಧು) ಸನ್ಯಾಸಿಯಾಗುವುದು (ಗಂಡನಂತೆ), ಸೌಂದರ್ಯ ನಶ್ವರತೆಯನ್ನು ಒತ್ತಿ ಹೇಳುವ ಮಲ್ಲಿ, ವಾದದಲ್ಲಿ ಸೋಲಿಸುವ ಯಾಕಿನಿ ಮಹತ್ತರಾ, ರಾಜ್ಯವಾಳುವ ಕಾಲಲಾದೇವಿ, ಚಂಪಾದೇವಿ, ಯುದ್ಧ ಮಾಡುವ ಸಾವಿಯಬ್ಬೆ, ಮೃಗವತಿ, ಬಾಹುಬಲಿಗೆ ಸಹಾಯ ಮಾಡುವ ಸಹೋದರಿಯರು ಬ್ರಾಹ್ಮಿ, ಸುಂದರಿ, ಕವಿಯತ್ರಿಯಾದ ಕಂತಿ, ಸಮಾಧಿಮರಣ ಹೊಂದುವ ಜಕ್ಕಿಯಬ್ಬೆ, ಸಮಾಜಕ್ಕೆ, ಕಾವ್ಯಕ್ಕೆ ಆಶ್ರಯ ನೀಡಿದ ಅತ್ತಿಮಬ್ಬೆ, ಸನ್ಯಾಸತ್ವಕ್ಕೆ ದೂಡುವ ತಾಯಿ ಶ್ರೀದೇವಿ—ಹೀಗೆ ಇನ್ನಷ್ಟು ಮಹಿಳೆಯರನ್ನು (ಜೈನ) ಲೇಖಕಿ ಆರಿಸಿಕೊಡುತ್ತಾರೆ.

ನಾವು ಬದುಕುತ್ತಿರುವ ದೇಶದಲ್ಲಿ ಗಂಡಿಗೆ ಹೆಣ್ಣು, ಹೆಣ್ಣಿಗೆ ಗಂಡು ಅನಿವಾರ್ಯ ಎಂದು ಸಮಾಜ ಹೇಳೋದಕ್ಕಿಂತ ನಮ್ಮ ಅಪ್ಪ, ಅಮ್ಮನನ್ನೇ ನೋಡಿದರೆ ಗೊತ್ತಾಗುತ್ತದೆ. ಆದರೆ ಸ್ತ್ರೀ ಇಂದು ಇಲ್ಲದ ಕ್ಷೇತ್ರ ಯಾವುದು ? ಅಥವಾ ನಮಗೆ ಯಾಕೆ ಬೇಕು ಅದು ?

ಕಮಲಾ ಹಂಪನಾರವರು ಇಂದಿನ ಬದುಕಿಗೆ ಆದರ್ಶವಾಗಬಲ್ಲ ಅಂದು ಬದುಕಿದ್ದ ಅಥವಾ ಕಲ್ಪನೆಯಾದರೂ ಆದರ್ಶಕ್ಕೆ ಉದಾಹರಣೆಯಾಗಬಲ್ಲ, ಸಮಾಜದ ವಿವಿಧ ರಂಗಗಳಲ್ಲಿ ಆಸಕ್ತಿ ತೋರಿ ಗಂಡಸಿನ ತಾಕತ್ತಿಗೆ ಸರಿಗಟ್ಟಬಲ್ಲ ಮಹಿಳೆಯರನ್ನೇ ಆಯ್ದು ತಮ್ಮ ಕೃತಿ ನೇಯ್ದಿದ್ದಾರೆ.

ದೈಹಿಕ ಅಸಮಾನತೆ ಸುಳ್ಳು ಎಂದು ಒಪ್ಪಿಕೊಳ್ಳುತ್ತಿರುವ ಸ್ತ್ರೀ ಸಮುದಾಯಕ್ಕೆ ಈ ಕೃತಿ ನಿಜವಾದ ಆಧಾರಗಳನ್ನು ಚಿತ್ರರಂಜಿತವಾಗಿ ತೋರಿಸುತ್ತದೆ.

ಯಾವುದೇ ಕೃತಿಯ ಶ್ರೇಷ್ಠತೆ ಉಳಿಯುವುದು ಸಾಹಿತ್ಯೇತರ ಕಾರಣಗಳು ಅಥವಾ ವಿಮರ್ಶಾತ್ಮಕ ನಿರ್ಣಯಗಳಿಂದ ಅಲ್ಲ. ಮಾನವೀಯ ದೌರ್ಬಲ್ಯ ಗಳನ್ನು ಕ್ಷಮಿಸುವ ಅಥವಾ ಮನುಷ್ಯ ಪಾತ್ರವಹಿಸಲಾಗದ ಅತಿಮಾನುಷ ಸ್ಥಿತಿ ಗಳು ಘಟಿಸಲು ಸಾಧ್ಯ ಎಂಬುದನ್ನೂ ವಿವರಿಸಿರಬೇಕಾಗುತ್ತದೆ.

ಶ್ರೀದೇವಿ ಎಂಬ ಹೆಣ್ಣೊಬ್ಬಳು ದೇವಸ್ಥಾನ ಕಟ್ಟಿಸುವುದರಲ್ಲಿ ಆಸಕ್ತಿ ತೋರುತ್ತಾಳೆಯೇ ಹೊರತು ಮಗು ಬೇಕೆಂಬ ಬಯಕೆ ಅವಳಿಗಿಲ್ಲ. ಹಾಗೆನೆ, ಕೋವಲನ್ ಎಂಬ ಗಂಡು ಹೆಂಡತಿಯನ್ನು ಬಿಟ್ಟು ಮಾಧವಿಯನ್ನು ಮನದನ್ನೆ ಯನ್ನಾಗಿ ಮಾಡಿಕೊಳ್ಳುವನು. ಮಾಧವಿ ಹೊರಗಟ್ಟಲು, ಪರಿಸ್ಥಿತಿಯ ಕೋಪಕ್ಕೆ ಕೋವಲನ್ ಸಿಕ್ಕಿಕೊಂಡು ನರಳಿ, ಗಲ್ಲಿನ ಕಂಬಕ್ಕೆ ಏರುತ್ತಾನೆ. ಇದನ್ನರಿತ ಧರ್ಮಪತ್ನಿ ಕನ್ನಗಿ ತನ್ನ ಅರ್ಧದೇಹವನ್ನೇ ಸೀಳಿಕೊಂಡು ರಸ್ತೆಗೆ ಎಸೆಯುತ್ತಾಳಂತೆ.

ಶ್ರೀಮತಿ ವಜ್ರಜಂಘರ ಮದುವೆಯಲ್ಲಿ ದಂಪತಿಗಳಿಗೆ ಹೆಣ್ಣಿನ ಅಪ್ಪ ಕೊಡುವ ಸಲಹೆ-ಸೂಚನೆಗಳು ಸಂಸ್ಕಾರವಂತ ಕುಟುಂಬಗಳಿಗೆ ಮಾದರಿ ಯಾಗುತ್ತವೆ.

ವಚನಗಳಲ್ಲಿ ಒಂದು ಮಾತಿದೆ : 'ಒಳಗೆ ಸುಳಿಯುವಾತ್ಮ ಗಂಡೂ ಅಲ್ಲ, ಹೆಣ್ಣೂ ಅಲ್ಲ' ಎಂದು. ಹಾಗೆಯೇ ಈ ಪುಸ್ತಕವನ್ನು ಓದಿದಾಗಲೂ ಆಗು ತ್ತದೆ. ಸ್ತ್ರೀ-ಪುರುಷರೆಂಬ ಭಿನ್ನತೆ ಸಾಹಿತ್ಯದಲ್ಲಿ ಹೇಗೆ ಅಸಾಧ್ಯವೋ ಆದರ್ಶಕ್ಕೂ ಅಷ್ಟೆ.

ಕೋಮಲವಾದ ಭಾಷೆ, ಪ್ರಿಯವಾಗದ ಆದರ್ಶಗಳ ಕಡೆ ಇಂದು ನಮ್ಮ ಮನಸ್ಸುಗಳು ಕೆಲಸ ಮಾಡುವುದಿಲ್ಲ. ಹಾಗೆಂದು ಲೇಖಕಿ ಕೂಡ ಸ್ಥಾಯಿ ಯಾಗಿ (ಹಿಂದಿನ) ಆದರ್ಶದ ನೆಲೆಗಳಲ್ಲಿ ನಿಂತಿಲ್ಲ. ಸಂಚಾರಿಯಾಗಿ ಕಮಲಾ ಹಂಪನಾರವರು ಬೆರಳೆಣಿಕೆಯ ಸಂಶೋಧನೆ, ಸಂಪಾದನೆ, ವ್ಯಕ್ತಿ ಚಿತ್ರಗಳನ್ನು ಬರೆಯುತ್ತಿರುವವರಲ್ಲಿ ಗಮನಾರ್ಹವಾಗಿದ್ದಾರೆ.

'ಆದರ್ಶ ಜೈನ ಮಹಿಳೆಯರು' ಗತಕಾಲದಲ್ಲಿ ಬಾಳಿದ ಸ್ತ್ರೀಯರಿಗೆ ಸಣ್ಣ ಪುಷ್ಪಗುಚ್ಛವನ್ನು ನೀಡುವ ಕೃತಿ. ಲೇಖಕಿಗೆ ಮುಂದಿನ ಕೃತಿಗಳನ್ನು ಬರೆ ಯುವುದಕ್ಕೆ ಆದ ಪುಟ್ಟ ಪ್ರೇರಣೆ. ಇಷ್ಟನ್ನು ಮಾತ್ರ ಈ ಸಂದರ್ಭದಲ್ಲಿ ಚಿಕ್ಕವನಾಗಿ ನಾನು ಹೇಳಬಹುದಾದದ್ದು.

ಬಿಂದಲಿ

ಸುಕನ್ಯಾ ಮಾರುತಿ

ಕಮಲಾ ಹಂಪನಾ ಅವರ 'ಬಿಂದಲಿ' ಎಪ್ಪತ್ತು ವಚನಗಳ ಸಂಕಲನ. ಮೂಲತಃ ವಚನ, 'ಬದ್ಧ ಸಾಹಿತ್ಯ'ವಾಗಿ (Committed Literature) ಜನ್ಮ ತಾಳಿದ ನುಡಿ ಕಿಡಿ.ಭಾವದ ಕಾವು ಆರುವ ಮುನ್ನ ಕಾವ್ಯವಾಗುವ ಸಾಹಿತ್ಯ ಪ್ರಕಾರವಿದು. ಅಂದಂದಿನ ಅನುಭವಗಳನ್ನು ಸರಿಯಾದ ಅರ್ಥದಲ್ಲಿ ಹಿಡಿದಿಡಲು ಯೋಗ್ಯವಾದ ಮಾಧ್ಯಮವಿದು. ಹನ್ನೆರಡನೇ ಶತಮಾನದ ನಂತರ ಕನ್ನಡದಲ್ಲಿ ಇದು ಮತ್ತೆ ಜನಪ್ರಿಯವಾಗುತ್ತಿದೆ. ಇಂದು ಈ ಪ್ರಕಾರ ಮೊದಲು ಬಳಕೆಯಾದುದು ಎಸ್. ವಿ. ರಂಗಣ್ಣನವರ 'ರಂಗ ಬಿನ್ನಪ'ದಲ್ಲಿ, ನಂತರ ಸಿದ್ಧಯ್ಯ ಪುರಾಣಿಕ. ಮಹದೇವ ಬಣಕಾರ, ಜ.ಚ ನಿ. ಮೊದಲಾದವರು ಕೃಷಿ ಗೈದಿದ್ದಾರೆ. ಅನೇಕ ಮಹಿಳೆಯರೂ ವಚನಗಳನ್ನು ರಚಿಸಿದ್ದಾರೆ.

ಆದರೆ ಈ ಮಹಿಳೆಯರು ಬರೆದುದು ಸಾಮಾನ್ಯವಾಗಿ ಧಾರ್ಮಿಕ ಉದ್ದೇಶಕ್ಕಾಗಿ. ವಚನವನ್ನು ಧಾರ್ಮಿಕ ಮತ್ತು ಇತರ ಮುಖಗಳ ಅಭಿವ್ಯಕ್ತಿಗಾಗಿ ಬಳಸಿದ ಮಹಿಳೆಯರಲ್ಲಿ ಕಮಲಾ ಹಂಪನಾ ಅವರೇ ಮೊದಲಿಗರು.

ತುಳಿಯಲ್ಪಟ್ಟ ಜನಾಂಗದಿಂದ ಎದ್ದುಬಂದ ಲೇಖಕಿಯ ಪಾಲಿಗೆ ಬಂದಿರುವುದು ಸ್ವಂತ ಆಯ್ಕೆಯಲ್ಲದ ಹೋರಾಟದ ಬದುಕು. ಸಂಘರ್ಷಮಯ ವ್ಯಕ್ತಿತ್ವಕ್ಕೆ ಅನುಭವದ ಕೊರತೆ ಎಂಬುದಿಲ್ಲ. ಹೀಗಾಗಿ ಈ ಸಂಕಲನದಲ್ಲಿ ವಸ್ತುವೈವಿಧ್ಯವಿದೆ. ಜಾತಿ, ಧರ್ಮ, ಕಾನೂನು, ದೇಶಪ್ರೇಮ, ಭಾಷಾಭಿಮಾನಗಳ ಹೆಸರಿನಲ್ಲಿ ನಡೆಯುವ ಹೇಯ ಕೃತ್ಯಗಳನ್ನು ವಚನಗಳ ಮೂಲಕ ಬಯಲಿಗೆಳೆದಿದ್ದಾರೆ.

ಎನ್ನರುಂಡವನೊಯ್ದಿತ್ತು
ಜನಿವಾರ ಒಂದು ಬಂದು
ಎನ್ನ ಮುಂಡವನೊಯ್ದಿತ್ತು
ನೇಗಿಲೊಂದು ಬಂದು
ಎನ್ನ ಕೈಕಾಲ ಕೊಂಡೊಯ್ದಿತ್ತು
ನೇಗಿಲೊಂದು ಬಂದು
ಎನ್ನ ತನು ಅಕ್ಕಟಾ
ಮೂರಾಬಟ್ಟೆಯಾಯಿತು ನೋಡಾ
ಎನ್ನಲೇನುಂಟು ದೇವ ನಿನಗೀಯೆ
ಎನ್ನ ಮನ ಒಂದು ಉಂಟು ನೋಡಾ
ಅದಕೊಂಡು ಸಲಹಯ್ಯಾ ಕಮಲಾಪ್ರಿಯ

ಎಂದು ಸಮಾಜವನ್ನು, ವ್ಯಕ್ತಿಯ ವೈಯಕ್ತಿಕ ಬದುಕನ್ನೂ ಛಿದ್ರಗೊಳಿಸುವ ಜಾತೀಯತೆಯ ಕ್ರೌರ್ಯವನ್ನು ಎತ್ತಿ ತೋರಿಸುತ್ತಾರೆ.

'ಕರ್ಮಣ್ಯೇ ವಾಧಿಕಾರಸ್ತೆ' ಇಂಥ
ನುಡಿಮುತ್ತುಗಳು ನಿಸಗಾಗಿಯೆ ನೆಯ್ದಿವೆ
ನಿನಗೂ ಹಕ್ಕುಂಟು ಕೆಲವನಿತು
ದುಡಿಯಲು ಇಲ್ಲವೆ ಮಡಿಯಲು

ಜಾತೀಯತೆಯ ಹಣೆಪಟ್ಟಿ ಇಲ್ಲದವರಿಗೆ ಈ ಸಮಾಜದಲ್ಲಿರುವ ಹಕ್ಕುಗಳೆಂದರೆ ದುಡಿಯುವುದು ಇಲ್ಲವೆ ಮಡಿಯುವುದು ಮಾತ್ರ. ವ್ಯಕ್ತಿಗೆ ನ್ಯಾಯ

ವಾಗಿ ಸಿಗಬೇಕಾದ ಸೌಲಭ್ಯಗಳನ್ನು ಜಾತಿ ಹೇಗೆ ಕುಸಿದುಕೊಳ್ಳುತ್ತದೆ ಎಂಬುದನ್ನೂ ಈ ವ್ಯವಸ್ಥೆಯಲ್ಲಿ ಜಾತಿಯನ್ನು ಬಿಟ್ಟು ಜೀವಿಸುವುದು ಎಷ್ಟು ಕಷ್ಟ ಎಂಬುದನ್ನೂ ನಿರ್ಲಿಪ್ತವಾಗಿ ಎಂಬಂತೆ ಹೇಳಿ ವಿಡಂಬಿಸುತ್ತಾರೆ.

ನಿನ್ನ ಸನಿಹವೆ ನನಗೊಂದು ಸಮ್ಮೋಹನ
ನಿನ್ನ ಸ್ಪರ್ಶವೆ ನನಗೊಂದು ಸಂಜೀವನ

ನೀ ಬೆರಳೊತ್ತಿದಲ್ಲಿ ಅರಳಿದೆ ಉತ್ಪಲ
ನೀ ಕೈಯಿಟ್ಟಲ್ಲಿ ಬಿರಿದಿದೆ ಕಮಲ

ಮುಡಿಸಿರುವೆ ತುಟಿಯಿಂದ ಒಲವಿನಾ ಹೂವ
ಬಿಡಿಸಿರುವೆ ಮೈತುಂಬಾ ರಾಗರಂಗವಲ್ಲಿಯ

ಬರೆದಿರುವೆ ಮನದ ತುಂಬೆಲ್ಲ
ಪ್ರಣಯ ಭಾವಗೀತೆಯ ಕಮಲಾಪ್ರಿಯ

ಈ ವಚನದಲ್ಲಿ ಕಮಲಾ ಹಂಪನಾ ಅವರು ಕಾವ್ಯಮಯವಾಗಿ ಬಿಚ್ಚಿಕೊಳ್ಳುತ್ತಾರೆ. "ನೀ ಬೆರಳೊತ್ತಿದಲ್ಲಿ ಅರಳಿದೆ ಉತ್ಪಲ। ನೀ ಕೈಯಿಟ್ಟಲ್ಲಿ ಬಂದಿದೆ ಕಮಲ" ಈ ಎರಡು ಸಾಲುಗಳಲ್ಲಿ ಅನುಭವ ಕಾವ್ಯವಾದ ರೀತಿ ಬೆರಗುಗೊಳಿಸುತ್ತವೆ. ನಿಜವಾದ ವಚನದ ಧ್ವನಿಯನ್ನು ಈ ಸಾಲುಗಳು ಅಭಿವ್ಯಕ್ತಿಸುತ್ತವೆ. ಇಲ್ಲಿ ಹೆಣ್ಣಾಗಿಯೂ ತನ್ನ ಅನಿಸಿಕೆಗೆ ಪ್ರಾಮಾಣಿಕ ಅಭಿವ್ಯಕ್ತಿ ಕೊಟ್ಟ ರೀತಿ ಅಭಿನಂದನೀಯ. ಪ್ರಣಯವನ್ನು ಕೇಂದ್ರವಾಗಿಟ್ಟುಕೊಂಡ ಈ ಎರಡು ಸಾಲುಗಳು ಕ್ರಿಯಾತ್ಮಕ ಗುಣದಿಂದಾಗಿ ಹೆಚ್ಚು ರಂಜಿಸುತ್ತವೆ.

ಬಿಡು ನನ್ನ ಹೊರಗೆ
ಮೆರವಣಿಗೆಯ ದೇವತೆಯಾಗಿ
ಬೀದಿ ಬೀದಿಯಲಿ ಚರಿಸಿ ಬರುವೆ
ಬಸವಿಯಾಗಲ್ಲ, ಜಂಗಮ ದೇವತೆಯಾಗಿ
ಬಿಡು ನನ್ನ ಹೊರಗೆ, ತುಡಿದು ಬರುವೆ
ಮಾನವಳಾಗಿ ಮಿಡಿದು ಬರುವೆ

ಭಾರತೀಯ ಪರಿಸರದಲ್ಲಿ ಹೆಣ್ಣಿಗೆ ಸ್ವಾತಂತ್ರ್ಯಕ್ಕಿರುವ ಇತಿಮಿತಿಗಳನ್ನು ಇಲ್ಲಿ ಹೇಳುವರಲ್ಲದೆ ಬೀದಿಗಿಳಿದರೆ ಹೆಣ್ಣು ಬಸವಿಯಾದಂತಲ್ಲ, ಮಾನವಳೂ

ಆಗುವಳೆಂಬ ಭರವಸೆಯನ್ನು ಈ ವಚನದ ಮೂಲಕ ಪುರುಷರಿಗೆ ಕೊಡು ತ್ತಾರೆ. ಮುಕ್ತ ಅವಕಾಶಗಳಿಲ್ಲದ ಹೆಣ್ಣಗಾಗಿ, ಹೆಣ್ಣಾಗಿ ತುಡಿದಿದ್ದಾರೆ.

ಪ್ರಾಧ್ಯಾಪಕಿಯಾಗಿ ವಿದ್ಯಾರ್ಥಿಗಳ ಒಡನಾಟದಿಂದ ಬಂದ ಅನುಭವ ವನ್ನೂ ವಚನೀಕರಿಸಿದ್ದಾರೆ. ಉದ್ಯೋಗಸ್ಥ ಮಹಿಳೆಯಾಗಿ ಸಹೋ ದ್ಯೋಗಿ ಪುರುಷರಿಂದ ನೊಂದಾಗ ಅವರನ್ನು 'ಮಾವ' ಎಂದು ಕರೆದು ಸಮಧಾನ ಪಟ್ಟುಕೊಂಡರೆ ಮಹಿಳೆಯರಿಂದ ತೊಂದರೆ ಅನುಭವಿಸಿದಾಗ ಅವರನ್ನು 'ಅತ್ತೆ' ಎಂದು ಕರೆದಿದ್ದಾರೆ. ಈ ಎರಡು ಶಬ್ದಗಳಿಗೆ ನಮ್ಮ ಸಂಸ್ಕೃತಿಯಲ್ಲಿರುವ ಅರ್ಥ 'ಕಿರುಕುಳ' ಎಂಬುದನ್ನು ಬೇರೆ ಬಿಚ್ಚಿ ಹೇಳ ಬೇಕಾಗಿಲ್ಲ.

ತಾಯಿಯಾದ ಇವರಿಗೆ ಮಕ್ಕಳ ಬಗ್ಗೆ ಇರುವ ಪ್ರೀತಿಯೂ ವಚನಕ್ಕೆ ವಸ್ತುವಾಗುತ್ತದೆ. ಮಗ "ಮೂಡು ಬಂದರೆ ಮಹಾರಾಜ, ಪನ್ನೀರುದಾನಿ" ಯಾದರೆ, ಮಧ್ಯಮಳು "ಮನೆಯ ಆಧಾರಸ್ತಂಭ. ರಾಜಿಗೆ ಯಾವಾಗಲೂ ತಾಯಾರಾ"ದ ರಾಜಿ. ಇನ್ನೊಬ್ಬಳು "ನಡೆದಾಡಿದಲ್ಲಿ ಮಲ್ಲಿಗೆ ಅರಳುತ್ತವೆ, ಅವಳು ಜೊನ್ನ ಬೆಳಗು. ಕನ್ನಡ ಭಾರತಿ. ಆಲಯದ ಆರತಿ" ಹೀಗೆ ಇವರಿಗೆ ಮಕ್ಕಳೆಂದರೆ ವಿಪರೀತ ಮುದ್ದು. ಈ ವಚನಗಳ ಹಿಂದೆ ಸುಶಿಕ್ಷಿತ, ಸುಸಂಸ್ಕೃತ ಮಾತೃ ಹೃದಯದ ದರ್ಶನವಾಗುತ್ತದೆ,

ಸ್ವತಃ ಹೆಣ್ಣಾಗಿ, ತಾಯಿಯಾಗಿ ಮತ್ತು ಮಾನವತೆಯ ಪ್ರತೀಕವಾಗಿ, ವರದಕ್ಷಿಣೆಯ ಭೂತಕ್ಕೆ ಬಲಿಯಾಗುವ ಮುಗ್ಧ ಬಾಲೆಯರೂ ಅಬಲೆಯರೂ ಇವರ ಆಯ್ಕೆಯಿಂದ ಹೊರಗುಳಿದಿಲ್ಲ.

ಅಕ್ಷತೆ ಸುರಿದ ಕೈಯಲೇ
ಸೀಮೆ ಎಣ್ಣೆ ಸುರಿವರಯ್ಯಾ
ಅರಿಸಿನ ಹಚ್ಚಿದ ಕೈಯಲೇ
ಬೆಂಕಿ ಹಚ್ಚಿ ಸುಡುವರಯ್ಯಾ
ವಧು ಮಾಡಿ ಮನೆತುಂಬಿಸಿಕೊಂಡವರೇ
ಹೆಣ ಮಾಡಿ ಆಚೆ ಸಾಗಿಸುವರಯ್ಯಾ

ಎಂಬ ಈ ವಚನ ಎಂಥ ಕಟುಕರ ಮನಸ್ಸನ್ನೂ ಕಲಕುವ ಸಾಮರ್ಥ್ಯ ಹೊಂದಿದೆ. ಅವರ ತೀವ್ರವಾದ ಸಾಮಾಜಿಕ ಕಳಕಳಿ ಇಲ್ಲಿ ವ್ಯಕ್ತವಾಗುತ್ತದೆ. ವೈರುಧ್ಯಗಳ ಮೂಲಕ ಅನಿಸಿಕೆಗಳನ್ನು ಎಷ್ಟು ಎತ್ತರದಲ್ಲಿ ಅಭಿವ್ಯಕ್ತಿಗೊಳಿಸ

ಬಹುದೆಂಬುದಕ್ಕೆ ಇದು ನಿದರ್ಶನವಾಗಿದೆ. "ವಧುಮಾಡಿ ಮನೆ ತುಂಬಿಸಿ ಕೊಂಡವರೇ ಹೆಣಮಾಡಿ ಆಚೆ ಸಾಗಿಸುವರಯ್ಯಾ" ಎಂಬ ಈ ಎರಡು ಸಾಲು ಗಳಂತೂ ಘಟನಾವಳಿಯನ್ನು ದೃಶ್ಯವತ್ತಾಗಿ ಚಿತ್ರಿಸುತ್ತವೆ.

ಆಧುನಿಕ ನಾಗರಿಕತೆಯಲ್ಲಿ ಮನುಷ್ಯನ ಬದುಕು ಎಂಥ ಅನಿಶ್ಚಿತತೆಯ ಕಡೆಗೆ ಹೊರಟಿದೆ ಎಂಬುದನ್ನು

ಕಾಲನ ಕರೆ ಕೇಳುತಿಹುದಯ್ಯ
ಸರ್ಕಸ್ ದುರಂತದಲಿ

ಎಂದು ಆರಂಭವಾಗಿ "ಮುಂಜಾನೆ ನಡೆದವರು ಹೊರಗೆ। ಸಂಜೆಯಲಿ ಮನೆಯ ಹೊಕ್ಕರೆ ಒಳಗೆ। ಅದುವೆ ಆಶ್ಚರ್ಯ। ಹೆಣವಾದ ಸುದ್ಧಿ ಬಂದರೆ ಅದುವೆ ಸಹಜ।" ಎಂದು ಮುಕ್ತಾಯವಾಗುವ ವಚನದಲ್ಲಿ ಹೇಳುತ್ತಾರೆ. ಗಂಗಾರಾಂ ಕಟ್ಟಡ ದುರಂತ, ಕಳ್ಳಬಟ್ಟಿ, ವಿಷಾನಿಲ, ಚಂಡಮಾರುತ, ರೈಲು ಬಸ್ಸುಗಳ ಅಪಘಾತದಂಥ ಪ್ರಚಲಿತ ವಿಷಯಗಳನ್ನು ವಚನವಾಗಿಸಿದ್ದಾರೆ.

ಜೀವನದ ಯಾಂತ್ರಿಕತೆಯಿಂದ ರೋಸಿದಾಗ
ಕುದಿಯುತ್ತಲೇ ಇದೆ
ನನ್ನ ತನುಮನ
ಅತ್ತ ಆವಿಯೂ ಆಗದು
ಇತ್ತ ಬತ್ತಿಯೂ ಹೊಗದು
....
ಅತ್ತ ಉರಿದು ಬೂದಿಯಾಗದು
ಇತ್ತ ನಂದಿ ತಣ್ಣಗಾಗದು

ಎಂದು ಬೇಸತ್ತು ನುಡಿದರೂ ಸ್ತ್ರೀಯನ್ನು ಹಾಡಿ ಹೊಗಳಿದರೂ ಸಮಾನತೆ ಎಂಬುದಿಲ್ಲದ ವ್ಯವಸ್ಥೆಯಲ್ಲಿ ಸಮಾನತೆಗಾಗಿ ಹೋರಾಡಲು ಕರೆ ಕೊಡುತ್ತಾರೆ. 'ಹೊಡೆದಾಡು' 'ಹೋರಾಡು' ಎಂದು ನುಡಿ ಕಿಡಿಯ ತೂರುತ್ತಾರೆ.

ಎನ್ನ ಆಯುಷ್ಯವೆಲ್ಲ
ಅಕ್ಕಿ ಆಯುವುದರಲ್ಲಿ
ಸೊಪ್ಪು ಸೋಸುವುದರಲಿ
ತರಕಾರಿ ಹೆಚ್ಚುವುದರಲಿ
ಮುಗಿದು ಹೋಯಿತಯ್ಯ

ಕಾಲನ ಕರೆ ಕರೆಯುತಿದೆ
ಇನ್ನು ಅಟ್ಟುಣಲು
ಕಾಲವೆಲ್ಲಿದೆ ಕಮಲಾಪ್ರಿಯಾ

ಎಂಬಲ್ಲಿ ಹೆಣ್ಣು ತಾನು ದುಡಿದುದರ ಫಲ ದೊರೆಯುವುದರೊಳಗೇ ಅವಳ ಜೀವನ ಮುಗಿದು, ಮಾನವಳಾಗಲೂ ಅವಕಾಶವಿಲ್ಲದೇ ಹೋಗುವ ವಿಪರ್ಯಾಸವನ್ನು ವಿಡಂಬಿಸುತ್ತಾರೆ.

ಕೆಣಕೆ ಕನ್ನಡತನವ
ಆಗ ನಾ ಕಾಳಿ ಮಹಾಕಾಳಿ ।

ಎಂದು ಹೆಣ್ಣು ಕೆರಳಿದರೆ ಏನಾಗಬಲ್ಲಳೆಂಬುದನ್ನು ಹೇಳುವುದರೊಂದಿಗೆ, ಮಾತೃಭಾಷಾ ಪ್ರೇಮವನ್ನು ಮೆರೆದಿದ್ದಾರೆ. ತಮ್ಮ ಮಕ್ಕಳನ್ನು ಕಾನ್ವೆಂಟಿಗೆ ಕಳಿಸಿ, ಹೆರವರ ಮಕ್ಕಳನ್ನು ಕನ್ನಡ ಶಾಲೆಗೆ ಕಳಿಸುವಂತೆ ಬೋಧಿಸುವವರನ್ನು ಭಂಡರೆಂದು ಜರೆದಿದ್ದಾರೆ. ಕನ್ನಡ ಕಲಿತವರೇ ದೇಶಕ್ಕೆ ಕೀರ್ತಿ ತಂದಿರುವರೆಂಬುವುದನ್ನು ಹೆಮ್ಮೆಯಿಂದ ಸ್ಮರಿಸುತ್ತಾರೆ.

ಇಡೀ ಸಂಕಲನವನ್ನು ನೋಡಿದಾಗ ವಚನಕಾರ್ತಿಯ ಸಾಮಾಜಿಕ, ರಾಜಕೀಯ, ಧಾರ್ಮಿಕ, ಭಾಷಿಕ, ವೈಯಕ್ತಿಕ ಅನುಭವಗಳು ವಚನಗಳಾಗಿ ಒಡಮೂಡಿವೆ. ಗಿರಿ (ಜನ) ಬಾಲೆಯೊಬ್ಬಳು ಪುರಪ್ರವೇಶಮಾಡಿ, 'ಮೆರವಣಿಗೆಯ ದೇವತೆ'ಯಾಗುವಂಥ ಮಟ್ಟಕ್ಕೇರುವಲ್ಲಿ 'ಎದುರಾದ ಸಂಘರ್ಷ. ಸಂಘರ್ಷದ ಹಾದಿಯಲ್ಲಿನ ಅನುಭವಗಳ ತುಣುಕುಗಳಾಗಿವೆ ಈ ವಚನಗಳು, ವಚನಕಾರರ ಪ್ರಭಾವದಿಂದ ಮುಕ್ತವಾಗಲು ಸಾಧ್ಯವಾಗಿಲ್ಲ. ವಚನ ಸಾಹಿತ್ಯದ ಆಳವಾದ ಅಭ್ಯಾಸದ ಫಲವಾಗಿ ಅವೇ ಶಬ್ದ, ಅವೇ ವಾಕ್ಯ, ಅದೇ ರೀತಿಯ ಪ್ರಯೋಗಗಳನ್ನು ಮೈಗೂಡಿಸಿಕೊಂಡದ್ದು ಎದ್ದು ಕಾಣುತ್ತದೆ. ಇದು ಗುಣವೂ ಹೌದು, ದೋಷವೂ ಹೌದು. ವಚನ ಸಾಹಿತ್ಯದ ಪ್ರಭಾವವೇ ಅಷ್ಟು ಪ್ರಬಲವಾದದ್ದು. ವಚನದ ಹೆಗೆಣೆಯಲ್ಲಿಯೂ ವೈವಿಧ್ಯವಿದೆ, ಬಂಧ ಇನ್ನೂ ಬಂಧುರವಾಗ ಬೇಕಿತ್ತು. ವಾಚ್ಯದಿಂದ ಇನ್ನೂ ಮುಕ್ತವಾಗಿಲ್ಲ. ಕಾವ್ಯವಾಗದೆಯೂ ಉಳಿದಿಲ್ಲ. ಶಿಲ್ಪ (Structure) ಸೌಂದರ್ಯಕ್ಕೆ ಇನ್ನೊಂದಿಷ್ಟು ಗಮನ ಕೊಡಬೇಕಾಗಿತ್ತು. ಅಂಕಿತ (ಕಮಲಾ ಪ್ರಿಯ)ದ ಬಳಕೆಯಲ್ಲಿ ಅಲ್ಲಲ್ಲಿ ಆಭಾಸ ಕಾಣುತ್ತದೆ. ಈ ಪುಸ್ತಕದ ಮುಖಪುಟದ ಅಂದ 'ಬಿಂದಲಿ'ಯಷ್ಟೇ ಚಂದ. ಕಮಲಾ ಹಂಪನಾ ಅವರದು ಈ ದಿಕ್ಕಿನಲ್ಲಿ ಇದು ಮೊದಲ ಹೆಜ್ಜೆ. ಆದರೂ ವಚನದ ಕೃಷಿ ನಿರಂತರ ಸಾಗಿ ಹುಲಸಾಗಿ ಬೆಳೆದೀತು ಎಂದು ನಿರೀಕ್ಷಿಸಿದರೆ ತಪ್ಪೇನಿಲ್ಲ. 'ಬಿಂದಲಿ' ಯಶಸ್ವೀ ಸಂಕಲನ.

ಬಿಂದಲಿ : ಬೆಡಗು

ಡಾ॥ ಸಾ. ಶಿ. ಮರುಳಯ್ಯ

ಕನ್ನಡ ಸಾಹಿತ್ಯವನ್ನು ವಿಶ್ವಸಾಹಿತ್ಯದ ಉನ್ನತಿಗೆ ಕೊಂಡೊಯ್ದ ಕೀರ್ತಿ ವಚನ ಕಾರರಿಗೆ ಸಲ್ಲುತ್ತದೆ. ಅವರ ಆಧ್ಯಾತ್ಮದ ಹಸಿವು, ಧರ್ಮದ ಮೇಲಣ ಮೋಹ, ಏಕದೇವೋಪಾಸನೆಯ ನಿಷ್ಠೆ, ಸಮಾಜ ಸುಧಾರಣೆಯ ಕಳಕಳಿ ಇವೆಲ್ಲವೂ ಸಂಗಮಿಸಿದ ಸಂಕೀರ್ಣ ಭಾವಗಳು ಸರಳವಾದ ನುಡಿಯಲ್ಲಿ ಸಹಜವಾಗಿ ಮೂಡಲು ಯತ್ನಿಸಿದುವು. ಅವು ವಚನಗಳು ಎಂದಾದುವು. ಸೇಂದ್ರಿಯ ಅನುಭವಗಳನ್ನೂ ಅತೀಂದ್ರಿಯ ಅನುಭಾವವನ್ನೂ ಅರ್ಥಪೂರ್ಣವಾಗಿ ಅಭಿವ್ಯಕ್ತಪಡಿಸಲು ಸಮರ್ಥ ಸಾಧನವನ್ನಾಗಿ ಮಾಡಿ ಕೊಂಡರು ವಚನಕಾರರು. ಪದ್ಯವನ್ನು ಗದ್ಯದ ಮಟ್ಟಕ್ಕಿಳಿಸಲಿಲ್ಲ ; ಗದ್ಯವನ್ನೇ ಪದ್ಯದ ಮಟ್ಟಕ್ಕೇರಿಸಿದರು. ಅದರ ಲಯದಲ್ಲಿ ಹೊಸತನವನ್ನು ತಂದರು.

ಅದಕ್ಕೆ ಭಾವಗೀತಾತ್ಮಕ ಚಾಲನೆ ಕೊಟ್ಟರು. ಅವರು ಬಳಸಿದ್ದು ಭಾಷ್ಯದ ಭಾಷೆಯಲ್ಲ, ಭಾವದ ಭಾಷೆ. ರೂಪ–ಸ್ವರೂಪಗಳೆರಡರಲ್ಲೂ ತಮ್ಮತನವನ್ನು ಮೆರೆದ ವಚನಗಳು ಬಿಡಿ ಮುಕ್ತಕಗಳಾಗಿ ಅನುಭವ ಹಾಗೂ ಅನುಭಾವಗಳಿಂದ ಕನ್ನಡ ಸಾಹಿತ್ಯ ಶರಧಿಯಲ್ಲಿ ತುಂಬಿ ತುಳುಕಿದುವು.

ಇಂತಹ ವೈಶಿಷ್ಟ್ಯಪೂರ್ಣವಾದ ವಚನಗಳ ಆವತಾರಕ್ಕೆ ಅಂದಿನ ಸಾಮಾಜಿಕ ಅಸಮಾನತೆ ಒಂದು ಪ್ರಬಲ ಕಾರಣ. ವಚನಕಾರರು ತಮ್ಮ ಪರಿಸರಕ್ಕೆ ಸ್ಪಂದಿಸಿದರು. ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದರು. ಅವರು ಹೇಳಹೊರಟದ್ದು ಘಟಿಕಾಸ್ಥಾನಗಳಲ್ಲಿ ಓದಿದ ವಿದ್ಯಾವಂತರಿಗಲ್ಲ, ನಿರಕ್ಷರಕುಕ್ಷಿಗಳಿಗೆ. ಮತ್ತೆ ತಮ್ಮ ತಮ್ಮ ಅನಿಸಿಕೆಗಳನ್ನು ಅನುವದಿಸಲು ಯತ್ನಿಸಿದ ಶ್ರೀಸಾಮಾನ್ಯ ಅಕ್ಷರದ್ವೇಷಿಗಳೇ ! ಹೀಗಾಗಿ ಶಿಷ್ಟ ಭಾಷೆ ಅವರಿಗೆ ಅಗತ್ಯ ಅಥವಾ ಅನಿವಾರ್ಯ ಅನ್ನಿಸಲಿಲ್ಲ. ತಮಗೆ ತಿಳಿದಿದ್ದ ತಿಳಿಗನ್ನಡದ ನುಡಿಯ ಮೂಲಕ ಮಿಡಿದ ಭಾವಗಳನ್ನು ಸಂವಹಿಸಿಬಿಟ್ಟರು. ಕಸುವುಳ್ಳ ಆಡುನುಡಿಯ ಬನಿಯನ್ನು ಬಳಸಿಕೊಳ್ಳುವ ಯತ್ನದಲ್ಲಿ ವಚನಸಾಹಿತ್ಯವು ಯಶಸ್ವಿಯಾಯಿತು. ಭಾವ, ಭಾಷೆ, ಬಂಧ ಇವುಗಳ ಮಧುರಬಾಂಧವ್ಯದ ಹೆಪ್ಪು ಒಡೆಯದಂತೆ ಎಚ್ಚರಿಕೆ ವಹಿಸಿತು. ಇವೆಲ್ಲದರ ಪರಿಣಾಮವಾಗಿ ವಚನಸಾಹಿತ್ಯ ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಒಂದು ಹೊಸ ಪ್ರಸ್ಥಾನವನ್ನೇ ಸ್ಥಾಪಿಸಿತು.

ವಚನ ವಾಙ್ಮಯಕ್ಕೆ ಸುಮಾರು ಒಂದು ಸಾವಿರ ವರ್ಷಗಳ ಇತಿಹಾಸ ಇದೆ. ಹನ್ನೆರಡನೆಯ ಶತಮಾನದಲ್ಲಿ ಅದರ ಸೃಷ್ಟಿ ಸಂಮೃದ್ಧವಾಗಿದ್ದರೂ ಆ ಸುಗ್ಗಿಗೆ ಹಿನ್ನೆಲೆಯಾಗಿ ನೂರಿನ್ನೂರು ವರ್ಷಗಳ ಕೃಷಿಕಾರ್ಯ ನಡೆದಿದೆ. ಹೀಗೆ ವಚನ ಸುಮಾರು ಹತ್ತನೆಯ ಶತಮಾನದಿಂದ ಆರಂಭವಾಗಿ, ಹನ್ನೆರಡನೆಯ ಶತಮಾನದಲ್ಲಿ ಪ್ರಬುದ್ಧತೆಯ ಪ್ರಸ್ಥಾನವೆನಿಸಿ, ಅನಂತರ ಹದಿನೈದನೆಯ ಶತಮಾನದಲ್ಲಿ ಪುನರುತ್ಥಾನ ಪಡೆದು, ಹದಿನೆಂಟನೆಯ ಶತಮಾನದವರೆಗೂ ಹರಿದು ಬಂದು, ಇಪ್ಪತ್ತನೆಯ ಶತಮಾನದ ಈ ಆಧುನಿಕ ಯುಗದಲ್ಲಿ ಹೊಸ ರೂಪು, ಹೊಸ ಹುರುಪು ಇವುಗಳಿಂದ ಮುಂದುವರಿಯುತ್ತಿದೆ. ಏನೇ ಇರಲಿ, ಹೊಸ ಮಧುವನ್ನು ಹಳೆಯ ಪಾತ್ರೆಯಲ್ಲಿ ತುಂಬಿ ನೋಡಿದ ಆಧುನಿಕ ವಚನಕಾರರಲ್ಲಿ ಎಸ್. ವಿ. ರಂಗಣ್ಣನವರು ಮೊದಲಿಗರು. ಅವರಾದಮೇಲೆ ತೀ.ನಂ.ಶ್ರೀ., ಜ.ಚ.ನಿ., ಗು. ಶಂಕರಮ್ಮ, ಓಂಕಾರಮ್ಮ, ಬಿ. ಎನ್. ಮಹಾದೇವಯ್ಯ, ಸುಧಾಕರ, ಜೋಳದರಾಶಿ ದೊಡ್ಡನಗೌಡ, ಎಸ್. ವಿ. ಪರಮೇಶ್ವರಭಟ್ಟ, ಶಿವಕವಿ (ಸಂಗಮೇಶ ಹೊಸಮನಿ, ಹುನಗುಂದ), ಮಾತೆ ಮಹಾದೇವಿ, ಮೂಜಗಂ (ಶ್ರೀಮನ್ಮಹಾರಾಜ ನಿರಂಜನ

ಜಗದ್ಗುರು ಶ್ರೀ ಶ್ರೀ ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು, ಮೂರುಸಾವಿರ ಮಠ, ಹುಬ್ಬಳ್ಳಿ), ಬಸವಕುಮಾರ, ಸಿದ್ಧಯ್ಯ ಪುರಾಣಿಕ, ಮಹದೇವ ಬಣಕಾರ, ನಾ. ಚಿ. ರಾಯಚೂರ, ಮಹಾಂತಪ್ರಿಯ (ಬಿ. ಶೇಖರಪ್ಪ, ಹೂಲುಗೇರಿ), ವಾಣಿ ಮೊದಲಾದವರು ವಚನಗಳನ್ನು ರಚಿಸಿದ್ದಾರೆ. 'ಚೌಡಿಕೆಯ ಜೋಗಿ' ಅಂಕಿತದಲ್ಲಿರುವ ಆಧುನಿಕ ವಚನಗಳು ಗಮನಾರ್ಹವಾಗಿವೆ. ಈ ಪರಂಪರೆಯಲ್ಲೇ ಬರುತ್ತಾರೆ ಸೋದರಿ ಕಮಲಾ ಹಂಪನಾ.

ಕಮಲಾ ಹಂಪನಾ ರವರ 'ಬಿಂದಲಿ' ಹೆಸರಿನಷ್ಟೇ ಮುದ್ದಾದ ಒಂದು ವಚನ ಸಂಕಲನ. ಅದರಲ್ಲಿ ವಸ್ತು ವೈವಿಧ್ಯವನ್ನೂ ರಚನಾ ವೈಶಿಷ್ಟ್ಯವನ್ನೂ ಕಾಣುತ್ತೇವೆ. ವಚನ ಪರಂಪರೆಯಲ್ಲಿ ಬೆಳೆದಿದ್ದರೂ ಇಲ್ಲಿನ ಭಾವಗೀತಾತ್ಮಕ ರಚನೆಗಳಲ್ಲಿ ಅಧ್ಯತನ ಬದುಕಿನ ಅರ್ಥಪೂರ್ಣ ವಿಶ್ಲೇಷಣೆ ಇದೆ. ಸಮ ಕಾಲೀನ ಜೀವನವನ್ನು ಕುರಿತ ಕವಯಿತ್ರಿಯ ಸೂಕ್ಷ್ಮ ಸಂವೇದನೆ ಇದೆ. ಇಲ್ಲಿ ಬಂಡಾಯದ ತೊಂಡು, ಕನ್ನಡಾಭಿಮಾನದ ಗಂಡು, ಹೃದಯ ಹೀನ ಸಮಾಜ ಖಂಡನೆಯ ಮೊಂಡು ಮೊನಚು, ಎಲ್ಲ ಇವೆ. ನಾನು ಮೆಚ್ಚಿದ್ದು ಇವರ ನಿರ್ಭಿಡೆಯ ನಿಲುವನ್ನು, ಹೇಳುವುದರಲ್ಲಿನ ಸ್ಪಷ್ಟತೆ ಅಥವಾ 'ತಿಳಿ'ಯನ್ನು ಇವರ ಭಾವ ಗುರುತಿಸುವಷ್ಟು ಸ್ಪಷ್ಟ, ಭಾಷೆ ಪಾರದರ್ಶಕ, ಬರೆಹ ಶುದ್ಧ ಸಲಿಲ್ಲ! ಇಲ್ಲಿ ವಿವೇಚನೆಯ ವಚನಗಳಿವೆ, ವೈಚಾರಿಕ ನುಡಿಗಳಿವೆ. ಇಲ್ಲಿನವು ಕೆಲವು ಒಳ್ಳೆಯ ಭಾವಗೀತೆಗಳು, ಹಲವು ವಿಡಂಬನಾತ್ಮಕವಾದ ಹೊಸಬಗೆಯ ರಚನೆಗಳು. ಇವರು ಎತ್ತಿಕೊಂಡ ವಸ್ತು ದಿನನಿತ್ಯದ್ದು, ದುಡಿಸಿಕೊಂಡ ಭಾಷೆ ಜನರ ಬಾಯಿನದು, ಮೂಡಿಸಿದ ಪ್ರತಿಮೆಗಳು ನಮ್ಮ ಪರಿಸರದವು. ಅವು ಗಳಾವುವೂ ಅಲೌಕಿಕಗಳಲ್ಲ, ಅಗ್ರಾಹ್ಯಗಳಲ್ಲ; ಸಹಜ ಸುಂದರ ಹಾಗೂ ಸಮರ್ಥ ಸಂವಹನ ಸಾಧನಗಳು. 'ಕಮಲಾಪ್ರಿಯ' ಎಂಬ ಅಂಕಿತದಲ್ಲಿ ಲೌಕಿಕ ಪಾರಮಾರ್ಥಗಳೆರಡನ್ನೂ ಸಮೀಕರಿಸಿದ ಸಮನ್ವಯ ದೃಷ್ಟಿ ಅಡಗಿದೆ. ಅದರಲ್ಲಿ ಕವಯಿತ್ರಿಯ ದರ್ಶನವೂ ಇಂಗಿತ. ಒಟ್ಟಾರೆ ಕವಯಿತ್ರಿ ಕಮಲಾ ಹಂಪನಾ ರವರ 'ಬಿಂದಲಿ'ಯಲ್ಲಿ ಅಂದ ಇದೆ, ಅಚ್ಚುಕಟ್ಟು ಇದೆ. ಅದನ್ನು ಓದಲಿ ಅಥವಾ ಹಾಡಲಿ ಎರಡೂ ಮೆಚ್ಚು.

ಹೆಣ್ಣು ಪುರುಷನ ನಿರಂತರ ಶೋಷಣೆಗೆ ಸಿಕ್ಕ ವಸ್ತು. ಅದಕ್ಕೆ ತನ್ನ ಆತ್ಮಪ್ರತ್ಯಯವನ್ನು ಬೆಳಸಿಕೊಳ್ಳುವ ಅವಕಾಶವನ್ನೇ ಕೊಟ್ಟಿಲ್ಲ ಈ ಗಂಡು ಕುಲ. ಅವಳಿರುವುದು ಶರಪಂಜರದಲ್ಲಿ. ಅವಳಿಗೆ 'ಗಂಡನೊಂದು ಶೂಲ, ಮಗಳೊಂದು ದ್ವಿಶೂಲ, ಮಗನೊಂದು ತ್ರಿಶೂಲ, ಬಂಧುಗಳೋ ಬಹು ಶೂಲಗಳು !' ಇವರ ಸೇವೆ, ಸಾಂತ್ವನ, ಸಂಧಾನ ಕಾರ್ಯಗಳಲ್ಲಿ ಸದಾ

ನಿರತಳಾದ ಇವಳಿಗೆ ಸ್ವಂತದ ಕೆಲಸ ಮಾಡಿಕೊಳ್ಳಲು ಸವುಡೇ ಸಿಕ್ಕಿಲ್ಲ. ಹೇಳುತ್ತಾಳೆ—

> ನಾನೊಬ್ಬ ನಿರ್ಗತಿಕಳು ನೋಡಾ
> ಎನ್ನ ಬದುಕಿನ ಕಾಲುಭಾಗ
> ಕಾಲೇಜಿನಲಿ ಕಳೆಯಿತಯ್ಯ
> ಎನ್ನ ಬದುಕಿನ ಕಾಲುಭಾಗ
> ಅಡಿಗೆ ಮನೆಯಲಿ ಕಳೆಯಿತಯ್ಯ
> ಇನ್ನು ಕಾಲುಭಾಗ ಗಂಡ–ಮಕ್ಕಳ ಸೇವೆಯಲಿ
> ಉಳಿದ ಭಾಗ ಸಮಾಜ ಸೇವೆಯಲಿ
> ಸೋರಿ ಹೋಯಿತಯ್ಯ
> ಎನಗಾಗಿ, ಎನ್ನ ಸಾಹಿತ್ಯಕ್ಕಾಗಿ
> ಏನೂ ಉಳಿಯಲಿಲ್ಲ ನೋಡಾ ಕಮಲಾಪ್ರಿಯ
>
> (ಬಿಂದಲಿ/೬೦)

ಆದದ್ದಾಯಿತು. ಗಂಡನಿಗಾಗಿ ಮಕ್ಕಳಿಗಾಗಿ ಕರ್ಪೂರದಂತೆ ಉರಿದು, ಶ್ರೀಗಂಧದಂತೆ ಸವೆದು ಏನಿಲ್ಲವಾಗಿರುವ ಹೆಣ್ಣಿಗೆ ದೊರೆತ ಬಹುಮಾನವಾದರೂ ಏನು ?

> ಅಕ್ಷತೆ ಸುರಿದ ಕೈಯಲೇ
> ಸೀಮೆ ಎಣ್ಣೆ ಸುರಿವರಯ್ಯಾ
> ಅರಿಸಿನ ಹಚ್ಚಿದ ಕೈಯಲೇ
> ಬೆಂಕಿ ಹಚ್ಚಿ ಸುಡುವರಯ್ಯಾ
> ವಧು ಮಾಡಿ ಮನೆ ತುಂಬಿಸಿಕೊಂಡವರೇ
> ಹೆಣ ಮಾಡಿ ಆಚೆ ಸಾಗಿಸುವರಯ್ಯಾ
> ಕಮಲಾಪ್ರಿಯ
>
> (ಬಿಂದಲಿ/೭೦)

ಕೇಳುಗರ ಕರುಳು ಹಿಂಡುವ ಈ ನುಡಿಗಳಲ್ಲಿ ಎಂತಹ ಕವಿತೆ ಅಡಗಿದೆ ಎಂಬುದನ್ನು ಸಹೃದಯರು ಮನಗಾಣದಿರರು.

'ಪುರುಷನ ಮುಂದೆ ಸ್ತ್ರೀ ಎಂಬುದೊಂದು ಮಾಯೆ' ಎಂದರು ಶರಣರು. ಆದರೆ 'ಬಿಂದಲಿ'ಯ ಕವಯಿತ್ರಿಗೆ ಪುರುಷನೂ ಮತ್ತೆ ಪರಮಾತ್ಮನೂ ಬಿಡಿಸಲಾಗದ, ಅರ್ಥೈಸಲಾಗದ ಎರಡು ಒಗಟುಗಳಾಗಿದ್ದಾರೆ. ಹೇಳುತ್ತಾರೆ :

ನಿನ್ನ ಸುಪ್ಪತ್ತಿಗೆಯ ಸುಖವೂ ಬೇಡ
ನಿನ್ನ ವಿಪತ್ತಿನ ಸರಪಣಿಯೂ ಬೇಡ
ನಿನ್ನ ಮುದ್ದಾಟದ ಒದ್ದಾಟವಂತೂ ಬೇಡ
ನಿನ್ನ ಪಾಪ-ಪುಣ್ಯಗಳ ಕಳೆವ ಕೂಡುವ
ಗಣಿತವಂತೂ ಬೇಡವೇ ಬೇಡ
ನಿನ್ನ ಕಾಣದ ಮೋಸದ ಆಟ
ಕಂಡಾಗ ಕರುಣೆಯ ನೋಟ
ಅಗೆದಷ್ಟು ಉಸುಕನ್ನೇ ನೀಡುವ
ನೀನು ನನಗೊಂದು ದೊಡ್ಡ ಒಗಟು ಕಮಲಾಪ್ರಿಯ

(ಬಿಂದಲಿ/೨)

ಮತ್ತು,

ಸಾಗರದ ತಳವ ಕಂಡವರ ಬಲ್ಲೆ
ಆಗಸದ ಬಯಲ ಅಳೆದವರ ಬಲ್ಲೆ
ನಕ್ಷತ್ರಗಳ ಎಣಿಸಿ ಗುಣಿಸಿದವರ ಬಲ್ಲೆ
ಪಾತಾಳ ಹೊಕ್ಕು ಬದುಕಿ ಉಳಿದವರ ಬಲ್ಲೆ
ನನ್ನ ತನು-ಮನದಲ್ಲೆ ನೆಲಸಿದ ನಿನ್ನ
ನಾ ಬಲ್ಲೆನೇ ಕಮಲಾಪ್ರಿಯ

(ಬಿಂದಲಿ/೩)

ಒಬ್ಬನು ಗೋಚರ, ಮತ್ತೊಬ್ಬ ಅಗೋಚರ, ಇವನು ಭವಕ್ಕೆ ಸಾಧ್ಯನಾದವನು, ಅವನು ಅನುಭಾವಕ್ಕೆ ವೇದ್ಯನಾದವನು. ಇವರಿಬ್ಬರನ್ನೂ ಅರಿಯಲು ಹೆಣ್ಣು ಜೀವ ಹೆಣಗಿ ವಿಫಲವಾಗಿದೆ. ಆದರೆ,

ನಿನ್ನ ಸನಿಹವೆ ನನಗೊಂದು ಸಮ್ಮೋಹನ
ನಿನ್ನ ಸ್ಪರ್ಶವೆ ನನಗೊಂದು ಸಂಜೀವನ
ನೀ ಬೆರಳೊತ್ತಿದಲ್ಲಿ ಅರಳಿದೆ ಉತ್ಪಲ
ನೀ ಕೈಯಿಟ್ಟಲ್ಲಿ ಬಿರಿದಿದೆ ಕಮಲ
ಮುಡಿಸಿರುವೆ ತುಟಿಯಿಂದ ಒಲವಿನಾ ಹೂವ
ಬಿಡಿಸಿರುವೆ ಮೈತುಂಬಾ ರಾಗ ರಂಗವಲ್ಲಿಯ
ಬರೆದಿರುವೆ ಮನದ ತುಂಬೆಲ್ಲ
ಪ್ರಣಯ ಭಾವಗೀತೆಯ ಕಮಲಾಪ್ರಿಯ

(ಬಿಂದಲಿ/೧೮)

ಇಂಥ ಸ್ಪರ್ಶ ಸುಖದ ಸವಿಯನ್ನನುಭವಿಸಿದ ಈ ಚೇತನ ಸಕಲವನ್ನೂ ಅರ್ಪಿಸುತ್ತಾ ಹೀಗೆ ಹೇಳುತ್ತದೆ :

ನೀನಿತ್ತ ಮುತ್ತು
ತನು ತುಂಬಿ ಮುಡಿದಿದೆ
ನಿನ್ನಪ್ಪುಗೆಯ ಮುತ್ತು
ಮೈತುಂಬಿ ಹೊದ್ದಿದೆ
ಅಡಿಯಿಂದ ಮುಡಿಗೆ
ಛಾಪಿಸಿದೆ ಪ್ರೇಮಮುದ್ರೆ
ತನು ಮನದೆ ಪಸರಿಸಿದೆ
ಶೃಂಗಾರ ಪ್ರಣಯ ನಿದ್ರೆ
ಹರಿದಾಡಿದೆ ತುದಿ ಬೆರಳು
ನಿಸ್ಸಂಕೋಚದೆ
ಮೂಡಿದೆ ರೋಮಾಂಚದ
ಕಚಗುಳಿ ಮುದದೆ
ನಿನ್ನ ಹೆಸರ ಕೇಳಿದಲ್ಲೆ
ನಿಂತೆ ನಾ ಮಂತ್ರಮುಗ್ಧೆ
ನನ್ನದೇನು ಉಳಿಯಲಿಲ್ಲ
ನಿನ್ನದೆ ಆಯಿತಲ್ಲ ಎಲ್ಲ ಕಮಲಾಪ್ರಿಯ

(ಬಿಂದಲಿ/೨೧)

ಇಂತಹ ಸರ್ವ ಸಮರ್ಪಣಭಾವ ಅಭಿವ್ಯಕ್ತವಾದರೂ ಈ ಚೇತನಕ್ಕೆ ಸಕಲ ಸ್ವಾತಂತ್ರ್ಯದ ಹಂಬಲ ಇದೆ, ಬೇಡುತ್ತದೆ :

ನನ್ನನೇಕೆ ಬಂಧಿಸುವೆಯಯ್ಯಾ
ಕತ್ತಲೆಯ ಗರ್ಭಗುಡಿಯಲಿ
ನನ್ನನೇಕೆ ಪೂಜಿಸುವೆಯಯ್ಯಾ
ದೇವತೆಯ ಮಾಡಿ ಸ್ತುತಿಯಲಿ
ಬಿಡು ನನ್ನ ಹೊರಗೆ
ಮೆರವಣಿಗೆಯ ದೇವತೆಯಾಗಿ
ಬೀದಿ ಬೀದಿಯಲಿ ಚರಿಸಿ ಬರುವೆ
ಬಸವಿಯಾಗಲ್ಲ, ಜಂಗಮ ದೇವತೆಯಾಗಿ
ಬಿಡು ನನ್ನ ಹೊರಗೆ, ತುಡಿದು ಬರುವೆ
ಮಾನವಳಾಗಿ ಮಿಡಿದು ಬರುವೆ ಕಮಲಾಪ್ರಿಯ

(ಬಿಂದಲಿ/೧೯)

ಎಂದು, ಇಲ್ಲಿನ ಭಾವ ಎಷ್ಟು ನವುರು, ಎಷ್ಟು ತಿಳಿ, ಅದೆಷ್ಟು ದೃಢ. ಇಲ್ಲಿ ಕವಿತೆ ಇದೆ, ಅದರ ಕಮನೀಯ ಕಾಂತಿ ಇದೆ.

'ಬಿಂದಲಿ'ಯ ವಚನಕಾರ್ತಿ ಕನ್ನಡದ ಕಟ್ಟಾಭಿಮಾನಿ, ಆದ್ದರಿಂದಲೇ ವಚನವನ್ನು ಒಲಿದರೆಂದು ತೋರುತ್ತದೆ. ಒಂದೆಡೆ ಹೇಳುತ್ತಾರೆ :

ಮಾನಕೆ ಅಂಜೆ
ಅಭಿಮಾನಕೆ ಅಳುಕೆ
ಹಣ, ಅಧಿಕಾರಕೆ ಸೋಲೆ
ನಿಂದಿಸಲು ಕೆರಳೆ ನಾ
ವಂದಿಸಲು ಉಬ್ಬೆ ನಾ
ಕೆಣಕೆ ಕನ್ನಡತನವ
ಆಗ ನಾ ಕಾಳಿ ಮಹಾಕಾಳಿ
ನೋಡಾ ಕಮಲಾಪ್ರಿಯ

(ಬಿಂದಲಿ/೫೮)

ಇದೇ ರೀತಿ ಈ ಕವಯಿತ್ರಿ ತಮ್ಮ ಪರಿಸರಕ್ಕೆ ವಿಶೇಷವಾಗಿ ಸ್ಪಂದಿಸಿದ್ದಾರೆ. ಅದ್ಯತನದ ಆಗು ಹೋಗುಗಳನ್ನು ಕಂಡು ವಿಡಂಬಿಸಿದ್ದಾರೆ, ವಿಚಾರಿಸಿ ಕೊಂಡೂ ಇದ್ದಾರೆ ! ಅವರಲ್ಲಿ ಬಂಡಾಯ ಗುಡುಗಾಡಿದೆ. ಉತ್ತಮ ಕುಲ ದವರೆನಿಸಿಕೊಂಡ ವೀರಶೈವ, ಬ್ರಾಹ್ಮಣ ಹಾಗೂ ಒಕ್ಕಲಿಗರನ್ನು ಕುರಿತೂ ತುಂಬಾ ತರಾಟೆಗೆ ತೆಗೆದುಕೊಂಡಿದ್ದಾರೆ :

ಎನ್ನ ರುಂಡವನೊಯ್ದಿತ್ತು
ಜನಿವಾರ ಒಂದು ಬಂದು
ಎನ್ನ ಮುಂಡವನೊಯ್ದಿತ್ತು
ಶಿವದಾರ ಒಂದು ಬಂದು
ಎನ್ನ ಕೈಕಾಲ ಕೊಂಡೊಯ್ದಿತ್ತು
ನೇಗಿಲೊಂದು ಬಂದು
ಎನ್ನ ತನು ಅಕ್ಕಟಾ
ಮೂರಾ ಬಟ್ಟೆಯಾಯಿತು ನೋಡಾ
....

(ಬಿಂದಲಿ/೧೪೪)

ಇಂಥವಲ್ಲದೆ ಕೆಲವು ಅಪಕ್ವ ವಚನಗಳೂ ಇವೆ ಈ ಸಂಕಲನದಲ್ಲಿ. ಅವು ಬರಿಯ ಆವೇಶದ ರಚನೆಗಳು. ಭಾವ ಭುಗಿಲೆದ್ದು ಭಾಷೆಯನ್ನಾಶ್ರಯಿ

ಸಿದರೆ ಖಂಡಿತಾ ಕಾವ್ಯವಾಗದು. ಅದು ಕವಿಯ ರಸಕೋಶದಲ್ಲಿ ರಸಾರ್ದ್ರ ವಾಗಿ, ರಸವಸ್ತುವಾಗಿ ಪಕ್ವಾನುಭವದ ಸಹಜಾಭಿವ್ಯಕ್ತಿ ಪಡೆಯಬೇಕು, ಆಗಲೇ ಅದು ಒಂದು ಉತ್ತಮ ಗೀತೆ ಅನ್ನಿಸಿಕೊಳ್ಳುವುದು. ಇಲ್ಲವಾದರೆ :—

ಬಿಗುಮಾನ ಬೇಡ
ಬಿಂಕ ಬೇಡ
ಬದಿಗೊತ್ತು ಅಭಿಮಾನ
ಮಾನಾಪಮಾನ
ಅಧಿಕಾರ ಮರೆ
ಅಂತಸ್ತು ತೊರೆ
ಮದ ಮೋಹ ಎಲ್ಲ ಮರೆ
ಕೈಗೂಡಲು ಕಾರ್ಯ
ಕಟ್ಟು ಕತ್ತೆಯ ಕಾಲ ಕಮಲಾಪ್ರಿಯ

(ಬಿಂದಲಿ/೪೧)

ಎಂಬಂತಹ ಬುಡ ಭದ್ರವಿಲ್ಲದ ಗಿಡವಾಗುತ್ತದೆ. ಆದರೆ ಈ ಕವಯಿತ್ರಿಯ ಹಿರಿಮೆ ಇರುವುದು ಈ ವಚನದಲ್ಲಿ—

ಬಿಂದಲಿ ನಾನಾಗುವೆ
ಕಿರೀಟ ನಾನಾಗುವುದು ಬೇಡ
ಕಾಲುಂಗುರ ನಾನಾಗುವೆ
ಕಂಠಿಹಾರ ನಾನಾಗಲಾರೆ
ಮೂಗುತಿ ನಾನಾಗುವೆ
ವಡ್ಯಾಣ ನಾನಾಗಲಾ
ಅಭಿಮಾನಿ ನಾನಾಗುವೆ
ದುರಭಿಮಾನಿ ನಾನಾಗಲಾರೆ
ಕಮಲಾಪ್ರಿಯ

(ಬಿಂದಲಿ/೪೯)

ಪ್ರಾಚೀನ ವಚನಕಾರರ ನೆರಳು ನೇರವಾಗಿ ಬಿದ್ದಿದೆ ಕೆಲವು ಕವನಗಳಲ್ಲಿ. ಉದಾಹರಣೆಗೆ : 'ಅಧಿಕಾರಕೆ ಆಸೆಪಟ್ಟವರ ಕಂಡೆ, ಅಂತಸ್ತಿಗೆ ಮಾರು ಹೋದಹರ ಕಂಡೆ, ಅಹಂಕಾರಕೆ ಬೀಗಿದವರ ಕಂಡೆ, ಪ್ರಶಂಸೆಗೆ ಬಡಿದಾಡಿ ದವರ ಕಂಡೆ, ಪ್ರಸಿದ್ಧಿಗೆ ಹೊಡೆದಾಡಿದವರ ಕಂಡೆ, ಪ್ರಚಾರಕೆ ಹೋರಾಡಿ ದವರ ಕಂಡೆ, ನಿನಗಾಗಿ ಬದುಕಿದವರಾರನೂ ಕಾಣೆ' ಎಂಬ ವಚನ, ಹೆಣ್ಣಿಗಾಗಿ,

ಹೊನ್ನಿಗಾಗಿ, ಮಣ್ಣಿಗಾಗಿ ಸತ್ತವರುಂಟು, ಆದರೆ ನಿನಗಾಗಿ ಸತ್ತವನಾರರನೂ ಕಾಣೆ' ಎಂಬ ಅಲ್ಲಮಪ್ರಭುವಿನ ವಚನವನ್ನು ನೆನಪಿಗೆ ತಂದರೆ, 'ನಗುವಾಗ ಬಂದವರು ಅಳುವಾಗ ಇರಲಿಲ್ಲ, ನಲಿದಾಗ ಬಂದವರು ಕೊರಗಿನಲಿ ನಿಲಲಿಲ್ಲ, ಸಿರಿತನಕೆ ಬಂದವರು ಬಡತನಕೆ ಬರಲಿಲ್ಲ, ಎಲ್ಲರಿಗೂ ಎಲ್ಲರೂ ಇರಲೊಲ್ಲರು ಯಾವಾಗಲೂ' ಎಂಬುದರಲ್ಲಿ, 'ಆರಿಗಾರೂ ಇಲ್ಲ ಕೆಟ್ಟವಂಗೆ ಕೆಳೆಯಿಲ್ಲ' ಎಂಬ ಅಣ್ಣನ ನುಡಿಯ ಮರುಧ್ವನಿ ಕೇಳಿಬರುತ್ತದೆ.

ಈ ಮಾತುಗಳಿಗೆ ವಿದಾಯ ಹೇಳುವ ಮುನ್ನ ನಾನು ಸ್ಪಷ್ಟವಾಗಿ ಕವಯಿತ್ರಿ ಕಮಲಮ್ಮನವರನ್ನು ಕಂಡದ್ದು ಒಂದು ವಚನದಲ್ಲಿ : ಕೇಳಿ :—

ಇರುಳು ಉರಳಲೇ ಬೇಕು
ಹಗಲು ಮೂಡಲೇ ಬೇಕು
ಹಬೆಯಾಗಿ ಮೇಲೇರಿ
ಇಳಿಯಲೇ ಬೇಕು ಇಳೆಗೆ ಮಳೆಯಾಗಿ
ಹೊರಟಲ್ಲೆ ಬಂದು ನಿಲಬೇಕು
ವಿಶ್ವಪರ್ಯಟನದೆ
ಬದುಕ ಪರಿಭ್ರಮಿಸುವ ಗಾಲಿ
ಸಹಿಸಿಕೊ ದುಃಖವ
ಸುಖದ ಬರುವಿಕೆಗಾಗಿ ಕಮಲಾಪ್ರಿಯ

(ಬಿಂದಲಿ/೪೩)

ಬಿಂದಲಿ : ಒಂದು ಸಮೀಕ್ಷೆ

ಅನಿಲ್ ಕುಮಾರ್

'ಬಿಂದಲಿ' ಎಂಬ ಶಬ್ದ ನಮ್ಮಲ್ಲಿ ಬಳಕೆಯಲ್ಲಿಲ್ಲದಿದ್ದರೂ ಮೈಸೂರು ಬೆಂಗಳೂರು ಕಡೆಯವರಿಗೆ ಈ ಶಬ್ದ ಚಿರಪರಿಚಿತವಾಗಿದೆ. 'ಬಿಂದಲಿ' ಎಂಬುದು ಚಿಕ್ಕ ಮಕ್ಕಳ ಕೈಗೆ ತೊಡಿಸುವ ಪುಟ್ಟ ಆಭರಣ ಹಾಗೂ ಮಕ್ಕಳ ಕೈಗೆ ಪ್ರೀತಿಯಿಂದ ಕೊಡಿಸುವ ಪ್ರಥಮ ಆಭರಣ. ಅದೇ ರೀತಿಯಲ್ಲಿ ಕಮಲಾ ಹಂಪನಾ ಅವರು, ತಮ್ಮ ಪ್ರಥಮ ಹಾಗೂ ಪುಟ್ಟ ವಚನ ಸಂಕಲನಕ್ಕೆ 'ಬಿಂದಲಿ' ಎಂದು ಶೀರ್ಷಿಕೆ ನೀಡಿರುವುದು ತುಂಬಾ ಔಚಿತ್ಯಪೂರ್ಣವಾಗಿದೆ.

'ಬಿಂದಲಿ' ಕಮಲಾ ಹಂಪನಾ ಅವರು ರಚಿಸಿದ ಆಧುನಿಕ ವಚನಗಳ ಒಂದು ಕಟ್ಟು, ಅವರ ಕವಿ ಹೃದಯ ಇಲ್ಲಿ ಹುರುಳುಗೊಂಡಿದೆ, ಸಾಮಾಜಿಕ ಪ್ರಜ್ಞೆ ಜಾಗೃತವಾಗಿರುವ ಸಂವೇದನಾಶೀಲ ಮನಸ್ಸಿನ ಪ್ರತಿಕ್ರಿಯೆ 'ಬಿಂದಲಿ'.

ಇದು ವರ್ತಮಾನಕ್ಕೆ ಹಿಡಿದ ಕನ್ನಡಿ, ವಚನಗಳು ಕ್ಷಣದ ಚಿಂತನೆಗಳನ್ನು ಹಿಡಿದುಕೊಡಲು ಸರಿಯಾದ ಪಾತ್ರ ಎಂದು ಲೇಖಕಿಯವರೇ ಹೇಳಿಕೊಂಡಿದ್ದಾರೆ.

ವಚನ ಸಾಹಿತ್ಯವೆಂಬ ಸಾಹಿತ್ಯ ಮಾಧ್ಯಮವು ಕನ್ನಡ ಸಾಹಿತ್ಯದಲ್ಲಿ ೧೨ನೇ ಶತಮಾನದ ಅಂತ್ಯ ಹಾಗೂ ೧೨ನೇ ಶತಮಾನದುದ್ದಕ್ಕೂ ಕಂಡು ಬಂದಿದೆ. ಲೇಖಕಿಯವರೇ ಹೇಳಿಕೊಂಡಂತೆ ಕ್ಷಣದ ಚಿಂತನೆಗಳನ್ನು ಹಿಡಿದುಕೊಡಲು ಇದರಷ್ಟು ಖಚಿತವಾದ ಅಭಿವ್ಯಕ್ತಿ ಮಾಧ್ಯಮ ಬೇರೊಂದಿಲ್ಲ. ಲೇಖಕಿಯವರು ತಾವು ಆಧುನಿಕ ನಾಗರಿಕ ಜೀವನದಲ್ಲಿ ಕಂಡ, ಮನುಷ್ಯರ ನಡವಳಿಕೆಗೆ ಹಾಗೂ ಘಟನೆಗಳಿಗೆ ಸ್ಪಂದಿಸಿದ ಬಗೆಯನ್ನು ಬೇರೆ ಬೇರೆ ವಚನಗಳ ಮೂಲಕ ಚಿತ್ರಿಸಿದ್ದಾರೆ.

ಆಧುನಿಕ ಮಾನವ ಇವತ್ತು ಅನೇಕ ಕ್ಷೇತ್ರಗಳಲ್ಲಿ ಸಂಶೋಧನೆ ನಡೆಸಿ ತನ್ನ ಸಾಧನೆಗೆ ಹುಸಿ ಜಂಭಕೊಟ್ಟುಕೊಂಡರೂ ಸಾವನ್ನು ಮಾತ್ರ ಅವನಿಗೂ ಮೀರಲಾಗಲಿಲ್ಲ. ಆತ್ಮ ಮತ್ತು ದೇಹವನ್ನು ಪ್ರತ್ಯೇಕಿಸಲು ಯಾವ ವಿಜ್ಞಾನಿಗೂ ಇಂದು ಸಾಧ್ಯವಾಗಿಲ್ಲ.

ಒಟ್ಟು ಕೃತಿಯ ಉದ್ದೇಶ ಸಮಾಜದ ವ್ಯಂಗ್ಯ ಚಿತ್ರಣವೆಂದೋ ವಿಡಂಬನೆ ಎಂದೋ ಅಥವಾ ಸ್ವಜನಪಕ್ಷಪಾತ ರಾಜಕೀಯಕ್ಕೆ ಕೂಗಿದ ಧಿಕ್ಕಾರವೆಂದೋ ಸ್ವಾರ್ಥಸಹಿತ ಲಂಚಕೋರ ಕಛೇರಿಗಳಿಗೆ ಹಿಡಿದ ಕನ್ನಡಿ ಎಂದೋ ಹೇಳಲಾಗದು. ಕಾರಣ, ಪ್ರತಿಯೊಂದು ವಚನಗಳ ಉದ್ದೇಶವೂ ಬೇರೆ ಬೇರೆಯಾಗಿರುತ್ತದೆ. ಆದ್ದರಿಂದ ಇಡೀ ಕೃತಿಯ ಉದ್ದೇಶ ಹೀಗೆಯೇ ಎಂದು ನಾವು ಇತರ ಸಾಹಿತ್ಯಮಾಧ್ಯಮಗಳಿಗೆ ಕೊಡುವ ತೀರ್ಮಾನವನ್ನು ಇಲ್ಲಿ ಕೊಡಲು ಸಾಧ್ಯವಿಲ್ಲ.

ಸಮಾಜದಲ್ಲಿ ಸತ್ಯ, ನ್ಯಾಯ, ಧರ್ಮ, ನೀತಿ, ಶಾಂತಿ ಇಲ್ಲದಾಗ ಮತ್ತು ಜೈನ ಧರ್ಮವು ಸಮಾಜದಲ್ಲಿ ಶ್ರೇಷ್ಠ ಧರ್ಮವೆಂದು, ಮನ್ನಿಸಲ್ಪಟ್ಟಾಗ, ಉಳಿದವರನ್ನು ಅವರು ಈ ಧರ್ಮದ ಹೆಸರಿನಲ್ಲಿ ಶೋಷಣೆಗೊಳಪಡಿಸಿದರು. ಇಂತಹ ಸಂದರ್ಭದಲ್ಲಿ ಬಂದುದೇ 'ವಚನ' ಎಂಬ ಸಾಹಿತ್ಯ ಮಾಧ್ಯಮ. ಅದರ ಉದ್ದೇಶ ಇಂತಹದ್ದೇ ಎಂದು ನಿರ್ಧಿಷ್ಟವಾಗಿ ಹೇಳಲು ಬರುವುದಿಲ್ಲ. ಆದ್ದರಿಂದ ಬಸವಣ್ಣನವರ ಪ್ರತಿಯೊಂದು ವಚನದ ಉದ್ದೇಶವೂ ವಚನದಿಂದ ವಚನಕ್ಕೆ ಬೇರೆಯಾಗಿದೆ.

'ಜಿಂದಲಿ' ವಚನ ಸಂಕಲನದಲ್ಲಿ ಒಟ್ಟು ಎಪ್ಪತ್ತು ವಚನಗಳಿದ್ದು, ಇದು ಕೇವಲ ಆಧುನಿಕ ಜೀವನದ ವಿಡಂಬನೆಯಲ್ಲದೆ, ಪ್ರಾಚೀನ, ಮೌಲ್ಯಗಳ ಬಗ್ಗೆ ಗೌರವ ಹಾಗೂ ನಿಷ್ಠೆ ವ್ಯಕ್ತಪಡಿಸಿರುವುದು ಕಂಡುಬರುತ್ತದೆ. ಆದರೆ ಲೇಖಕಿಯವರು ಕೇವಲ ಪ್ರಾಚೀನ ಮೌಲ್ಯಗಳನ್ನು ಒಪ್ಪಿಕೊಂಡು, ಆಧುನಿಕ ಬದಲಾವಣೆಯನ್ನು ಹೊಸ ಹೊಸ ಮೌಲ್ಯಗಳನ್ನು ಪ್ರಶ್ನಿಸುವವರಂತೂ ಅಲ್ಲವೇ ಅಲ್ಲ. ಹೊಸ ಬದಲಾವಣೆಯನ್ನು ನಾವು ಸ್ವೀಕರಿಸುವ ಬಗೆ ಹೇಗೆ ಎಂಬುದನ್ನು ಅವರ ಮೂವತ್ತೊಂದನೆಯ ವಚನದ ಮೂಲಕ ನೋಡಬಹುದು :

ಬುದ್ಧಿ ಇದೆಯಲಾ, ಹಿಡಿ ಸಾಣೆ
ಪಡೆ ನಿನ್ನ ಸಂಸ್ಕೃತಿಗೆ ತಿಳಿನೀರ
ಬಾಳುಬೆಳಗಿತು, ದೇಶ,
ಬೆಳೆದೀತು ಕಮಲಾಪ್ರಿಯ

ಎಂಬುದಾಗಿತನ್ನ ಬುದ್ಧಿಶಕ್ತಿಯ ಮೂಲಕ ಯಾವುದು ಒಳಿತು, ಯಾವುದು ಕೆಡುಕು, ಯಾವುದು ತನ್ನ ಸಂಸ್ಕೃತಿಗೆ ಹತ್ತಿರವಾದದ್ದು, ಯಾವುದು ಅಲ್ಲವೆಂಬುದನ್ನು ತಾನೇ ನಿರ್ಧಾರ ಮಾಡಿಕೊಳ್ಳಬೇಕು ಎಂಬುದಾಗಿ ಹೇಳಿದ್ದಾರೆ. ಎಲ್ಲಾ ವಚನಗಳ ಒಟ್ಟು ಉದ್ದೇಶವನ್ನು ಹೀಗೆ ಸಂಗ್ರಹಿಸಿ ಹೇಳಬಹುದೆಂದು ಕಾಣುತ್ತದೆ:

ಸ್ತ್ರೀ ಸ್ವಾತಂತ್ರ್ಯ, ಹೊಲಸು ರಾಜಕೀಯದ ಟೀಕೆ, ಆಧುನಿಕ ಮನುಷ್ಯನ ಸ್ವಾರ್ಥ, ಸಮಾನತೆ ಇಲ್ಲದ ಸಮಾಜ, ಲಂಚಕೋರ ಅಧಿಕಾರಿಗಳು. ಸ್ವಜನ ಪಕ್ಷಪಾತದಿಂದ ಕೂಡಿರುವ ವಿಶ್ವವಿದ್ಯಾನಿಲಯ, ಕನ್ನಡದ ಬಗ್ಗೆ ಕನ್ನಡಿಗರಿಗೆ ಇಲ್ಲದ ಕಾಳಜಿ, ಪರಮಾತ್ಮನ ವರ್ಣನೆ, ಅಸತ್ಯ, ಅನ್ಯಾಯ ವಂಚನೆ, ಅಧರ್ಮಿಗಳಿಂದ ಕೂಡಿದ ಸಮಾಜ ಜೀವನ, ಸಾಮಾನ್ಯ ಮನುಷ್ಯನ ಗುಣ, ಸುಖ, ಕಷ್ಟ ಹೀಗೆ ಪ್ರತಿ ವಚನವು ಕೂಡ ಒಂದಕ್ಕಿಂತ ಒಂದು ಭಿನ್ನವಾಗಿದೆ.

ಕೃತಿ ವಿಮರ್ಶೆ ಮಾಡುವ ಮೊದಲು ನಾವು ಗಮನಿಸಬೇಕಾದ ಇನ್ನೊಂದು ಸಂಗತಿ ಎಂದರೆ ವಚನದಲ್ಲಿ ವ್ಯಕ್ತವಾದ 'ಕಮಲಾಪ್ರಿಯ' ಎಂಬ ನಾಮಾಂಕಿತ. ಇಲ್ಲಿ ಕಮಲಾ ಎಂದರೆ ಲೇಖಕಿಯ ಹೆಸರು ಹಾಗೂ ಈ ಲೇಖಕಿ ಪ್ರಿಯವಾದವನು, ಅವನೇ ಅವಳ ಪತಿ, ಇದು ವಾಚ್ಯಾರ್ಥವಾದರೂ ಸೂಚ್ಯಾರ್ಥ ವಿಷ್ಣು ಅಥವಾ ಸೂರ್ಯ. ಕೆಲವೊಮ್ಮೆ ನಾವು

ಎರಡು ಅರ್ಥವನ್ನು ಗ್ರಹಿಸಬಹುದಾದರೂ ಸೂಚ್ಯಾರ್ಥವನ್ನು ಗ್ರಹಿಸಿದಾಗ ವಚನದ ಅರ್ಥದ ಸಾಧ್ಯತೆಯು ವಿಸ್ತರಿಸುತ್ತದೆ.

ಆಧುನಿಕ ಕಾಲದಲ್ಲಿ ನಮಗೆ ಯಾವುದಕ್ಕೂ ಅವಕಾಶವಿಲ್ಲ. ವೇದ ಕಾಲದಲ್ಲಿ ಪ್ರಕೃತಿಯೊಂದಿಗಿದ್ದ ನಮ್ಮ ಸಂಬಂಧವನ್ನು ಇಂದು ನಾವು ಕಳೆದುಕೊಂಡು ಆಧುನಿಕಕಾಲದ ಯಾಂತ್ರಿಕ ಜೀವನದಲ್ಲಿ ಹುಡುಕುತ್ತಿದ್ದೇವೆ. ಈ ಬದುಕಿನಲ್ಲಿ ನಮಗೆ ಪ್ರಕೃತಿಯ ಮಹತ್ವದ ಅರಿವಾಗದು ಹಾಗೂ ನಮ್ಮ ಅಂತರಂಗದ ವಾಣಿ ಆತ್ಮಸಾಕ್ಷಿಯ ಕಲೆಯನ್ನು ಆಲಿಸಲೂ ಕೂಡ ಸಮಯವಿಲ್ಲ. ಈ ವಿಚಾರವನ್ನು ಅವರು ಆರಂಭದ ವಚನದಲ್ಲಿ ಹೀಗೆ ಹೇಳಿಕೊಂಡಿದ್ದಾರೆ :

ಆಕಾಶವಾಣಿಯ ಸಮಾಚಾರದ ಮೊರೆ
ದೂರವಾಣಿಯ ಟ್ರಿಣ್ ಟ್ರಿಣ್ ಕರೆ
ಕರೆಗಂಟೆಯ ಕುಕಿಲ ಕರೆ
ಮಕ್ಕಳ ಮಮತೆಯ ಕರೆ
ಇನಿಯನ ಇನಿದನಿಯ ಕರೆ
ಈ ವಿವಿಧ ಕರೆಗಳ ನಡುವೆ
ಎಂತು ಕೇಳುವೆ ನಾನು
ನನ್ನಂತರಂಗದ ಕರೆಯ ಕಮಲಾಪ್ರಿಯ

ಎಂಬುದಾಗಿ ಹೇಳಿಕೊಂಡಿದ್ದಾರೆ. ಮೊದಲಿನ ಮೂರು ಆಧುನಿಕ ಸಂಶೋಧನೆಯ ಸಂಕೇತವಾದರೆ, ಉಳಿದೆರಡು ಕರೆ ಸಂಸಾರದ ಬಂಧನಕ್ಕೆ ಹಿಡಿದ ಕನ್ನಡಿ. ಈ ವೈಜ್ಞಾನಿಕ ಸಂಶೋಧನೆಯ ಜಂಜಾಟದಲ್ಲಿ ನಿರತನಾದ ಮಾನವನಿಗೆ ಈ ಎಲ್ಲದಕ್ಕೂ ಸವಾಲಾಗಿ ನಿಂತ ಪರಮಾತ್ಮನ ಸಂಶೋಧನೆ ಇನ್ನೂ ಸಾಧ್ಯವಾಗಿಲ್ಲ. ಅದಕ್ಕಾಗಿಯೇ ಹೇಳುತ್ತಾರೆ :

ಸಾಗರದ ತಳವ ಕಂಡವರ ಬಲ್ಲೆ
ಆಗಸದ ಬಯಲು ಅಳೆದವರ ಬಲ್ಲೆ
ನಕ್ಷತ್ರಗಳ ಎಣಿಸಿ ಗುಣಿಸಿದವರ ಬಲ್ಲೆ
ನನ್ನೀ ತನು ಮನದಲ್ಲಿ ನೆಲೆಸಿದ ನಿನ್ನ
ನಾಬಲ್ಲೆನೇ ಕಮಲಾಪ್ರಿಯ

ಎಂಬುದಾಗಿ ಪರಮಾತ್ಮನ ರಹಸ್ಯದ ಬಗ್ಗೆ ಆಶ್ಚರ್ಯಪಡುತ್ತಾರೆ. ಪರಮಾತ್ಮ ಎಲ್ಲಾ ಕಡೆಯಲ್ಲೂ ಇದ್ದಾನೆಂದೂ ಋಷಿ ಮುನಿಗಳು ಹಿಂದೆ ಹೇಳಿದ್ದಾರೆ,

ಆದರೆ ಯಾರಿಗೂ ಅವನನ್ನು ಪ್ರಯೋಗದ ಮೂಲಕ ಬಂಧಿಸಿ ತೋರಿಸಲಿಕ್ಕಾಗಿಲ್ಲ. ಕಾರಣ ಆದಕ್ಕೆಲ್ಲಾ ಆತ ಬಗ್ಗದವನು. ಅದಕ್ಕಾಗಿಯೇ ಲೇಖಕಿಯವರು ಅಗೆವಷ್ಟು ಉಸುಕನ್ನೇ ನೀಡುವ ನೀನು ನನಗೊಂದು ದೊಡ್ಡ ಒಗಟು ಕಮಲಾಪ್ರಿಯ ಎಂಬುದಾಗಿ ಹೇಳುತ್ತಾರೆ.

ಸಂಶೋಧನೆಗೆ ಎಟುಕದಂತಹ ಆ ಶಕ್ತಿಯನ್ನು ಧಿಕ್ಕರಿಸುವವರಿದ್ದಾರೆ. ಅವರೇ ನಾಸ್ತಿಕರು, ಆತನನ್ನು ಒಪ್ಪಿಕೊಳ್ಳುವವರೇ ಆಸ್ತಿಕರು. ಆದರೆ ಇಂದು ಮೊದಲಿನವರ ಸಂಖ್ಯೆಯೇ ಅತಿಯಾಗಿ ಬೆಳೆಯುತ್ತಿದೆ. ಆ ವರ್ಗದವರಿಗೆ ಧರ್ಮದಲ್ಲಿ ನಂಬಿಕೆ ಇಲ್ಲ. ನ್ಯಾಯ ಅನ್ಯಾಯದ ವಿವೇಚನೆ ಇಲ್ಲ, ಸತ್ಯ ಅಸತ್ಯದ ಬಗ್ಗೆ ಪರಾಮರ್ಶೆ ಇಲ್ಲ, ಮಾನ ಅಪಮಾನದ ಪ್ರಶ್ನೆಯೂ ಇಲ್ಲ. ಇವರು ನನ್ನತನವನ್ನು ನುಂಗುವವರು ಎಂಬುದಾಗಿ ಲೇಖಕಿ ಅಭಿಪ್ರಾಯಪಡುತ್ತಾರೆ ಮತ್ತು 'ಈ ನುಂಗಣ್ಣಗಳ ನಡುವೆ ಬದುಕಲಾರನೆಯ್ಯಾ ಕಮಲಾಪ್ರಿಯ, ಎಂಬುದಾಗಿ ಮೊರೆ ಇಡುತ್ತಾರೆ. ಧರ್ಮ ಅಧರ್ಮಗಳ ವಿವೇಚನೆ ಇಲ್ಲದೆ ಇರುವ ಜನರೇ ಇಂದು ಬಹುಮಂದಿ ಇರುವಾಗ ಸಮಾಜದ ರೀತಿ, ನೀತಿ, ನಡವಳಿಕೆ ಅದೆಷ್ಟು ಹೊಲಸಾಗಿದೆ ಎಂದು ಈ ಕೆಳಗಿನ ವಚನದಲ್ಲಿ ತೋಡಿಕೊಂಡಿದ್ದಾರೆ.

ಬೆಂಕಿಯ ಮಧ್ಯೆ ಬೇಯುತ್ತಾ ಇರಬಲ್ಲೆ
ಬಿ.ಟಿ.ಎಸ್. ಬಸ್ಸಿಗಾಗಿ ಕಾಯುತ್ತ ನಿಲ್ಲಬಲ್ಲೆ
....
ರಾಜಕಾರಣಿಗಳ ಭಾಷಣ ಕುಳಿತು ಕೇಳಬಲ್ಲೆ...

ಇಲ್ಲಿ ಸಮಾಜದ ವಿಡಂಬನೆ ಇದೆ. ಬೆಂಕಿಯಲ್ಲಿ ಕಾಯುವುದೂ ಒಂದೆ! ಬಿ. ಟಿ. ಎಸ್. ಬಸ್ಸಿಗಾಗಿ ಬಸಿಲಿನಲ್ಲಿ ಕಾಯುವುದೂ ಒಂದೇ! ನಮ್ಮನ್ನು ಆಳುವಂತಹ ಸ್ವಾರ್ಥ ಪಕ್ಷಪಾತ ಮಂತ್ರಿ ಮಹಾಶಯರ ಭಾಷಣವನ್ನು ಕೇಳುವುದೂ ಬೆಂಕಿಯಲ್ಲಿ ಕಾಯುವುದೂ ಒಂದೇ. ಇಂತಹವರು ಇರುವ ಸಮಾಜದಲ್ಲಿ ಬದುಕುವುದು ಎಷ್ಟು ಕಷ್ಟವಾಗುವುದು ಮನಒಡೆದವರ ಮಧ್ಯೆ ಇದ್ದು ಬಾಳುವುದು.

ಸಾಮಾನ್ಯವಾಗಿ ಪ್ರಾಚೀನ ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣಿಗೆ ವಿಶೇಷವಾದ ಸ್ಥಾನ ಮಾನ ಗೌರವಗಳಿತ್ತು. ಆದರೆ ಪ್ರಾಚೀನ ಸಂಪ್ರದಾಯವನ್ನು ಲೇವಡಿ ಮಾಡುವವರಿಗೆ, ಇವತ್ತು ಆಧುನಿಕ ಸಮಾಜವು ಹೆಣ್ಣನ್ನು ಕಾಣುವ ದೃಷ್ಟಿಯನ್ನು ಕೆಳಗಿನ ವಚನದಲ್ಲಿ ಹಿಡಿದಿಟ್ಟಿದ್ದಾರೆ :

ಅಕ್ಷತೆ ಸುರಿದ ಕೈಯಲಿ
ಸೀಮೆ ಎಣ್ಣೆ ಸುರಿವರಯ್ಯಾ
ಅರಸಿನ ಹಚ್ಚಿದ ಕೈಯಲೇ
ಬೆಂಕಿಹಚ್ಚಿ ಸುಡುವರಯ್ಯ
ವಧು ಮಾಡಿ ಮನೆ ತುಂಬಿಸಿ ಕೊಡುವವರೆ
ಹೆಣಮಾಡಿ ಆಚೆ ಸಾಗಿಸುವರಯ್ಯಾ
ಕಮಲಾಪ್ರಿಯ

ಎಂಬಲ್ಲಿ ಯಾವ ರೀತಿ ಹೆಣ್ಣನ್ನು ವರದಕ್ಷಣೆಯ ಹೆಸರಿನಲ್ಲಿ ಅನುಕಂಪ ಗೌರವ ಇಲ್ಲದ ಆಧುನಿಕ ಸಮಾಜ ನಡೆಸಿಕೊಳ್ಳುತ್ತವೆಂಬುದಕ್ಕೆ ಇದಕ್ಕಿಂತ ಹೆಚ್ಚಿನ ವಿವರಣೆ ನಮಗೆ ಬೇಡ. ಆಧುನಿಕ ಸಮಾಜ ಹಣಕ್ಕೆ ಕೊಡುವ ಬೆಲೆ ಎಷ್ಟೆಂಬುದೂ ಇದರಿಂದ ತಿಳಿಯುತ್ತದೆ.

ಈ ಕಾರಣಕ್ಕಾಗಿಯೇ ಲೇಖಕಿ, ಹೆಣ್ಣಿಗೆ ಎಂದಿನಿಂದ ತಾಳಿಯ ಬಂಧನವಾಗುತ್ತದೋ ಅಲ್ಲಿಂದ ಕಷ್ಟಗಳ ಸರಮಾಲೆ ಅವರ ಕುತ್ತಿಗೆಯನ್ನ ಲಂಕರಿಸುತ್ತದೆ ಎನ್ನುತ್ತಾರೆ. ಅದನ್ನು ಹೀಗೆ ಹೇಳುತ್ತಾರೆ :

ಗಂಡನೊಂದು ಶೂಲ
ಮಗಳೊಂದು ಶೂಲ
ಮಗನೊಂದು ಶೂಲ
ಬಂಧುಗಳೂ ಬಹುಶೂಲವಯ್ಯಾ

ಅವಳಿಗೆ ಗಂಡನೊಂದು ಶೂಲ, ಕಾರಣ ಅವಳ ಎಲ್ಲಾ ಆಸೆ ಆಕಾಂಕ್ಷೆಗಳು ಯಶಸ್ವಿಯಾಗಿ ನೆರವೇರಬೇಕೆಂದಾದರೆ ಅದಕ್ಕೆ ಅವನೇ ಹೊಣೆಗಾರ. ಎಷ್ಟೋ ಬಾರಿ ಅವಳ ಇಚ್ಛೆಯನ್ನರಿತೊ, ಅಪೇಕ್ಷೆ ಯನ್ನರಿತೋ ಅವನು ನಡೆಯಲಾರ. ಅದಕ್ಕೆ ಆತನೊಂದು ಶೂಲ ಎಂಬು ದಾಗಿ ಹೇಳಿದ್ದಾರೆ. ಇನ್ನು ಮಕ್ಕಳು ಮತ್ತು ಬಂಧುಗಳು ಶೂಲವೇ. ಕಾರಣ ಅನೇಕ ಬಾರಿ ಇವರಿಂದಲೂ ವಿಪತ್ತು ಬರಲಾರದು ಎಂದು ಹೇಳಲಿಕ್ಕಾಗುವುದಿಲ್ಲ.

ಕೆಲವರಿಗೆ ಸ್ತ್ರೀಯ ಬಗ್ಗೆ ಗೌರವ ಪ್ರೀತಿ ಇದೆ. ಆದರೆ ಯಾವುದೇ ರೀತಿಯ ಸ್ವಾತಂತ್ರ್ಯ ಕೊಡಲಾರರು, ತನ್ನ ಮನೆಯ ಬಂಧನದಲ್ಲೇ ಇರಿಸಿ ಕೊಳ್ಳುವ ಪತಿಯ ಬಗೆಗೆ ಲೇಖಕಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಅವರನ್ನು ಹೀಗೆ ಪ್ರಶ್ನಿಸುತ್ತಾರೆ.

ನನ್ನನ್ನೇಕೆ ಬಂಧಿಸುವೆಯಯ್ಯಾ
ಕತ್ತಲೆಯ ಗರ್ಭಗುಡಿಯಲಿ
ನನ್ನನ್ನೇಕೆ ಪೂಜಿಸುವೆಯಯ್ಯಾ
ದೇವತೆಯ ಮಾಡಿಸ್ತುತಿಯಲಿ

ಎಂದು ಕೇಳುತ್ತಾ ಹಾಗೆಯೇ ಮುಂದುವರಿದು

ಬಿಡು ನನ್ನ ಹೊರಗೆ ತುಡಿದು ಬರುವೆ
ಮಾನವಳಾಗಿ ಮಿಡಿದು ಬರುವೆ ಕಮಲಾಪ್ರಿಯ"

ಎಂದು ಬಿಡುಗಡೆಯನ್ನು ಬೇಡುತ್ತಾಳೆ. ಇದರೊಂದಿಗೆ ಆಧುನಿಕ ಕಾಲದ ಸ್ತ್ರೀಯರ ಸಮಾನತೆಯ ತತ್ವವನ್ನು ಖಂಡಿಸಿದ್ದಾರೆ. ಪುರುಷರಿಗೆ ಸಿಗುವ ಸೌಲಭ್ಯ, ಅರ್ಹತೆಗಳು ತಮಗೆ ಸಿಗಬೇಕೆಂದು ಕಾತರಿಸುವುದು ಸಹಜವಾದರೂ ಕೆಲವರು ಆಧುನಿಕ ಸ್ತ್ರೀಯರು, ಸಮಾನತೆಯ ಅರ್ಥವನ್ನು ತಪ್ಪಾಗಿ ತಿಳಿದಿದ್ದಾರೆ. ಅವರರ್ಥದಲ್ಲಿ ಹುಡುಗರಂತೆ ವೇಷಭೂಷಣಗಳನ್ನು ಮಾಡಿಕೊಳ್ಳುವದು, ಜಡೆಯನ್ನು ಬಿಡದೆ ಇರುವುದು. ಕೈಗೆ ಬಳೆಗಳನ್ನು ಧರಿಸದೆ ಇರುವುದು, ಹೂ ಮುಡಿಯದೆ ಇರುವುದು, ಮೂಗಿಗೆ ಮೂಗುತಿಯನ್ನು ಹಾಕಿಕೊಳ್ಳದೆ ಇರುವುದು, ಹೀಗೆ ಮಾಡಿದಾಗ ನಾವು ಪುರುಷರಿಗೆ ಸರಿಸಮಾನರು ಎಂದು ತಿಳಿದವರ ಬಗ್ಗೆ ಲೇಖಕಿಗೆ ಗೌರವವಿಲ್ಲ (ಅದೇ ರೀತಿ ನನಗೂ ಕೂಡ). ಮಾತೃ ದೇವೋ ಭವ ಎಂದು ಸ್ತ್ರೀಯರಿಗೆ ಭಾರತೀಯ ಸಂಸ್ಕೃತಿಯಲ್ಲಿ ವಿಶೇಷ ಸ್ಥಾನಮಾನವನ್ನು ಕೊಟ್ಟಿದ್ದಾರೆ. ಮನ್ನಣೆಯನ್ನು ಕೊಟ್ಟಿದ್ದಾರೆ. ಕೆಲವರು ಇದಾವುದನ್ನೂ ಗಮನಿಸದೆ ? ಸ್ತ್ರೀಯ ಹೆಣ್ಣುತನವನ್ನು ಶೋಷಣೆಮಾಡು ವವರಿದ್ದಾರೆ. ಇದಕ್ಕೆ ಲೇಖಕಿ :

"ಹೊಡೆದಾಡು ಹೋರಾಡು
ಕಳೆದುಕೊಂಡಿರುವ ಮೊದಲ ಸ್ಥಾನಕೆ
ಸಮಾನತೆಗೆ ಸಲ್ಲ" ಎಂದು ಹೇಳುತ್ತಾರೆ. ಆದ್ದರಿಂದ

ಸ್ತ್ರೀ ಸ್ವಾತಂತ್ರ್ಯದ ಕಲ್ಪನೆ ಏನು ಎಂಬ ಬಗ್ಗೆ ಆಧುನಿಕ ಸ್ತ್ರೀಯರಿಗೆ ಅರಿವು ಮೂಡಿಸಿದ್ದಾರೆ.

ಸ್ತ್ರೀಯರು ಪುರುಷರಿಗೆ ಸಮಾನರು ಯಾವ ಜವಾಬ್ದಾರಿಯನ್ನು ಕೂಡ ಪುರುಷರಂತೆ ಯಶಸ್ವಿಯಾಗಿ ನಿರ್ವಹಿಸಬಲ್ಲರೆಂಬುದಕ್ಕೆ ನಮ್ಮ ದೇಶದ ಹಿಂದಿನ ಪ್ರಧಾನಿ ಇಂದಿರಾ ಗಾಂಧಿಯವರೇ ಸಾಕ್ಷಿ, ಲೇಖಕಿಗೆ

ಯವರಿಗೆ ದಿವಂಗತ ಪ್ರಧಾನಿಯವರ ಮೇಲೆ ಗೌರವ ಭಾವನೆ ಇದೆ. ಅವರನ್ನು ತಮ್ಮ ವಚನದಲ್ಲಿ ಲಕ್ಷ್ಮೀ ನಾರಾಯಣನ ಪತ್ನಿಯಾದ ಇಂದಿರೆಯ ಮಹಿಮೆಯನ್ನು ಹೊಗಳುವಾಗ ಅವರೊಂದಿಗೆ ಸಮೀಕರಿಸಿ ಹೊಗಳಿದ್ದೂ ಇದೆ. ಉದಾ ;

"ಕಾಣುವೆ ನಿನ್ನ ಅಲ್ಪಸಂಖ್ಯಾತರ
ಆನ ದಡಲಿ
ಮುಗ್ಧ ಜನರ ಕಂಗಳ ಜ್ಯೋತಿಯಲಿ
ಕಾಣುವೆ ನಿನ್ನ ದೇಶ ದ್ರೋಹಿಗಳಲಿ...
ಚಂಡಿ ಚಾಮುಂಡಿಯಾಗಿ ಇಂದಿರಾ
ಕಾಣುವೆ ನಿನ್ನ ಎಲ್ಲ ಮಣ್ಣಿನ ಮಕ್ಕಳ
ಮಕ್ಕಳ ಉಸಿರಾಗಿ ಕಮಲಾಪ್ರಿಯ"

ಎಂಬುದಾಗಿ ಹೇಳುತ್ತಾರೆ. ತಮ್ಮ ಮುಂದಿನ ಒಂದು ವಚನದಲ್ಲಿ ಮನುಷ್ಯ ಸ್ವಭಾವವನ್ನು ಹೀಗೆ ಚಿತ್ರಿಸಿದ್ದಾರೆ :

ನಗುವಾಗ ಬಂದವರು
ಅಳುವಾಗ ಇರಲಿಲ್ಲ....

ಹಾಗೆಯೇ ಮುಂದುವರಿದು....

"ಸಿರಿತನಕ್ಕೆ ಬಂದವರು
ಬಡತನಕೆ ಬರಲಿಲ್ಲ" ಎಂದು ಉದ್ಧರಿಸಿದ್ದಾರೆ. ಇದು

ಎಲ್ಲಾ ಕಾಲದ ಮನುಷ್ಯನ ಸ್ವಭಾವದ ಚಿತ್ರಣ. ನಮ್ಮ ಕೊರಗಿಗೆ, ನಮ್ಮ ಗೋಳಿಗೆ ನಮ್ಮಷ್ಟಕ್ಕೆ ನಾವೇ ಹೊಣೆ. ಆದರೆ ನಮ್ಮಲ್ಲಿ ಹಣವಿರುವಾಗ, ಸುಖವಿರುವಾಗ ಎಲ್ಲರೂ ನಮ್ಮವರೇ ಆಗುತ್ತಾರೆ.

ಹೀಗೆ ಮನುಷ್ಯನ ಕೆಲವು ಮೂಲ ಸ್ವಭಾವದಲ್ಲಿ ಯಾವ ಬದಲಾವಣೆಗಳೂ ಆಗಿಲ್ಲ. ಆತ ಹಿಂದಿನಿಂದಲೂ ತನ್ನ ಅಭಿವೃದ್ಧಿ, ತನ್ನ ಪ್ರಶಂಸೆಗಾಗಿ ಹೋರಾಡುವುದೇ ಹೊರತು ಬೇರೆಯವರ ಬಗ್ಗೆ ಕಿಂಚಿತ್ತೂ ಚಿಂತಿಸುವುದಿಲ್ಲ. ಆದರೆ ನಿಜವಾಗಿ ಪರಿಪೂರ್ಣವಾದ ಜ್ಞಾನಿಯಾದವನು, ಆತನೂ ಪರಮಾತ್ಮನ ಒಂದು ಅಂಗವೆಂದು ಭಾವಿಸುತ್ತಾನೆ ಹಾಗೂ

ಎಲ್ಲರೂ ಒಂದು ದಿನ ಆತನ ಪಾದದಲ್ಲಿ ಐಕ್ಯ ಹೊಂದಲೇ ಬೇಕು ಎಂಬ ಅರಿವಿರುತ್ತದೆ. ಆದರೆ ಎಷ್ಟೋ ಮಂದಿಗೆ ಈ ಪರಿವೇ ಇರುವುದಿಲ್ಲ. ಹಣಬಂದಾಗ ಅಧಿಕಾರ ಬಂದಾಗ, ಪರಮಾತ್ಮನ ನೆನಪನ್ನು ಪೂರ್ತಿಯಾಗಿ ಮರೆತು ಬಿಡುತ್ತೇವೆ, ಅದನ್ನು ಲೇಖಕಿ ಹೀಗೆ ಹೇಳಿದ್ದಾರೆ :

"ಅಧಿಕಾರಕ್ಕೆ ಆಸೆಪಟ್ಟವರ ಕಂಡೆ
ಅಂತಸ್ಸಿಗೆ ಮಾರು ಹೋದವರ ಕಂಡೆ
....
ನಿನಗಾಗಿ ಬದುಕಿದವರ ನಾನು ಕಾಣೆ
ಕಮಲಾಪ್ರಿಯ" ಎಂಬುದಾಗಿ ಹೇಳುತ್ತಾರೆ.

ಮುಂದಿನ ಒಂದು ವಚನದಲ್ಲಿ ಲೇಖಕಿ ಸಾವಿನ ಬಗ್ಗೆ ಬರೆಯುತ್ತಾರೆ. ಸಾವನ್ನು 'ಕಾಲನ ಕರೆ' ಎಂಬುದಾಗಿ ಅವರು ಕರೆದಿದ್ದಾರೆ. ಈ ಕರೆ ಯಾವಾಗಲೂ ಬಂದೀತು. ಆಧುನಿಕ ಮನುಷ್ಯನ ಸಂಶೋಧನೆಯು ಎಷ್ಟೇ ಮುಂದುವರಿದಿದ್ದರೂ ಆತನಿಗೆ ಸಾವನ್ನು ತಡೆಯಲು ಇನ್ನೂ ಆಗಿಲ್ಲ ಎಂದರೆ ಇದೊಂದು ಪ್ರಕೃತಿದತ್ತವಾದ ಸಹಜಕ್ರಿಯೆ.

ಮನೆಯಿಂದ ಬೆಳಗ್ಗೆ ಹೊರಗೆ ಹೋದವರು ಸಂಜೆ ಪುನಃ ಮನಸೇರಿದರೇ ಆಶ್ಚರ್ಯ ಹೊರತು ಸೇರಲಿಲ್ಲ ಎಂದರೆ ಅದೊಂದು ಆಶ್ಚರ್ಯವಲ್ಲ. ಕಾರಣ, ರಸ್ತೆ ಅಪಘಾತ, ಕಟ್ಟಡ ದುರಂತ, ಬಿರುಗಾಳಿ, ನೆರೆ, ಬೆಂಕಿ, ವಿಮಾನಿಲ—ಹೀಗೆ ಅನೇಕ ರೀತಿಯಲ್ಲಿ ಕಾಲನ ಕರೆ ಕಾಣಿಸಿಕೊಳ್ಳುತ್ತದೆ, ಇವುಗಳು ಸದಾ ನಡೆಯುತ್ತಲೇ ಇರುವಾಗ ಇವುಗಳಿಂದ ನಾವು ಪಾರಾಗಿದ್ದೇವೆಂದರೆ ಆಶ್ಚರ್ಯ. ಈ ಅಭಿಪ್ರಾಯವನ್ನು ಅವರ ವಚನದಲ್ಲಿ ಹೀಗೆ ಸಂಗ್ರಹಿಸಿದ್ದಾರೆ :

"ಸಂಜೆಯಲಿ ಮನೆಯ ಹೊಕ್ಕರೆ, ಒಳಗೆ
ಅದುವೆ ಆಶ್ಚರ್ಯ
ಹೆಣವಾದ ಸುದ್ದಿ ಬಂದರೆ
ಅದುವೆ ಸಹಜ ಕಮಲಾಪ್ರಿಯ" ಎನ್ನುತ್ತಾರೆ.

ಇನ್ನು ನಮ್ಮ ಸಂವಿಧಾನದಲ್ಲೇ ಚರ್ಚಿತವಾದ ಸಮಾನತೆಯ ಬಗ್ಗೆಯೂ ಒಂದು ವಚನದಲ್ಲಿ ಹೀಗೆ ಹೇಳುತ್ತಾರೆ :

ಒಂದು ಕಣ್ಣಿಗೆ ಸುಣ್ಣ
ಮತ್ತೊಂದಕೆ ಬೆಣ್ಣೆ
ಇದು ಇತರರ ಅರಳಿಸಲೂ ಇಲ್ಲ.
ಮತ್ತಾರನೂ ಬೆಳಗಿಸಲೂ ಇಲ್ಲ—

ಎಂಬುದಾಗಿ ಹೇಳಿದ್ದಾರೆ. ಸಂವಿಧಾನದಲ್ಲಿ ಹೇಳಿದಂತೆ ನಾವೀಗ ಸಮಾನತೆಯ ನೀತಿಯನ್ನು ಪಾಲಿಸಿಕೊಂಡು ಬರುತ್ತಿಲ್ಲ. ಕಾರಣ ಕೆಲವರು ತುಂಬ ಹಿಂದುಳಿದವರಿದ್ದಾರೆಂಬ ಕಾರಣಕ್ಕಾಗಿ. ಆದರೆ ಈ ರೀತಿ ಒಂದು ಕಣ್ಣಿಗೆ ಸುಣ್ಣ ಮತ್ತೊಂದು ಕಣ್ಣಿಗೆ ಬೆಣ್ಣೆ ಸವರುವ ನೀತಿಯೂ ದೇಶದ ಒಟ್ಟು ಹಿತದೃಷ್ಟಿಯಿಂದ ಒಳಿತಲ್ಲ.

ಪ್ರತಿಯೊಂದು ರಾಜ್ಯಕ್ಕೂ ಕೂಡ ಭಾರತದಲ್ಲಿ ತನ್ನದೇ ಆದ ಭಾಷೆ ಇದೆ ಹಾಗೂ ಅಲ್ಲಿಯ ಜನಗಳಿಗೆ ಆ ಭಾಷೆಯ ಬಗ್ಗೆ ಅಪಾರವಾದ ಗೌರವ ಇದೆ, ಪ್ರೀತಿ ಇದೆ. ಆದರೆ ಅನೇಕ ಕಾರಣಗಳಿಂದಾಗಿ ನಮಗೆ ನಮ್ಮ ಭಾಷೆಯ ಬಗ್ಗೆ ಗೌರವ ಇಲ್ಲ, ಪ್ರೀತಿ ಇಲ್ಲ ಆದರೆ ಗೋಕಾಕರ ವರದಿಯಿಂದಾಗಿ ಇತ್ತೀಚೆಗ ಸ್ವಲ್ಪ ಬದಲಾವಣೆ ಕಾಣಬಹುದಷ್ಟೆ.

ಕನ್ನಡದ ಬಗ್ಗೆ ಒಂದಿನಿತೂ ಆಸಕ್ತಿ ಇಲ್ಲದವರೂ ಆ ಭಾಷೆಯ ಬೆಳವಣಿಗೆಯ ಬಗ್ಗೆ ಕಿಂಚಿತ್ತೂ ಅಭಿಮಾನ ಇಲ್ಲದವರು ಆ ಭಾಷೆಯಲ್ಲಿ ಸ್ವಲ್ಪ ಕೃಷಿ ಮಾಡದ ಜನ, ಕೇವಲ ತಾನೊಬ್ಬ ಜವಾಬ್ದಾರಿಯುತ ಕುರ್ಚಿಯಲ್ಲಿ ಕೂಡ ಮಾತ್ರಕ್ಕೆ ಕನ್ನಡದಲ್ಲಿ ಮಾತಾಡಿ, ಕನ್ನಡ ಬೆಳೆಸಿ ಎಂದು ಕರೆ ಕೊಡುವುದು ಕೇವಲ ಪತ್ರಿಕೆಯ ಪ್ರಚಾರಕ್ಕಾಗಿ, ಅವರ ಸ್ವಂತ ಲಾಭಕ್ಕಾಗಿ, ಭಡ್ತಿಗಾಗಿ, ಜನ ಪ್ರಿಯತೆಗಾಗಿಯೇ ವಿನಹ ನಿಜವಾದ ಭಾಷಾಭಿಮಾನ ಇವರಿಗಿಲ್ಲ. ಇದನ್ನು ಕಮಲಾ ಹಂಪನಾ ಅವರು ಹೀಗೆ ಹೇಳುತ್ತಾರೆ:

'ನುಡಿ ಪ್ರೇಮ ನಿನಗಿಲ್ಲ
ಪರೀಕ್ಷಿಸಿಕೊಳ್ಳುವ ಅಂತರಂಗವೂ ಇಲ್ಲ
ನಿನಗಿಲ್ಲ ಕನ್ನಡದ ಮಾನ ಅಭಿಮಾನ
ಕಮಲಾಪ್ರಿಯ' ಎಂಬುದಾಗಿ ಹೇಳುತ್ತಾರೆ.

ಹೀಗೆ ಮಾಡುವವರನ್ನು ಕುರಿತು

ಈ ನುಡಿ ದ್ರೋಹಿಯನೆಂತು
ದಂಡಿಸುವೆ ಕಮಲಾಪ್ರಿಯ —ಎಂಬುದಾಗಿ ವಿಷ್ಣುವಿ

ನಲ್ಲಿ ಮೊರೆಯಿಡುತ್ತಾರೆ, ಈ ರೀತಿ ಕನ್ನಡ ನಾಡು ನುಡಿಯ ಬಗ್ಗೆ ಕನ್ನಡಿಗರಿಗೇ ಅಭಿಮಾನ ಇಲ್ಲದುದರಿಂದ ಕನ್ನಡದಲ್ಲಿ ಬರೆದರೆ ಸಹಿಮಾಡಿದರೆ ಹೀಯಾಳಿಸಿ ಲೇವಡಿ ಮಾಡುವ ಕಾಲವಿತ್ತು. ಆದರೆ ವಿನಾಯಕ ಕೃಷ್ಣ ಗೋಕಾಕರಂತಹ ಮಹಾ ವ್ಯಕ್ತಿಗಳು, ಕನ್ನಡಕ್ಕಾಗಿ ಬೀದಿಗಿಳಿದು ದುಡಿಯದೇ ಇದ್ದರೆ ಇವತ್ತಿಗೂ ಅದೇ ಸ್ಥಿತಿ ಮುಂದುವರಿಯುತ್ತಿತ್ತೋ ಏನೋ. ಆದರೆ ಗೋಕಾಕರಿಂದಾಗಿ, ಕನ್ನಡದ ಬಗ್ಗೆ ಎಲ್ಲರಿಗೂ ಗೌರವದ ಭಾವನೆ ಮೂಡಿದೆ ಎಂಬುದು ಲೇಖಕರ ಅಭಿಪ್ರಾಯ. ಅದನ್ನು ನಾವು ಕೂಡ ಒಪ್ಪಲೇ ಬೇಕು, ಈ ವಿಚಾರವನ್ನು ಹೀಗೆ ಹೇಳುತ್ತಾರೆ :

ಇಂದುನೋಡಾ ವಿಜೃಂಭಿಸಿದೆ ಇಲ್ಲೆಲ್ಲೂ
ಗೋಕಾಕ ಪುಕ್ಕ ಹಚ್ಚಿ ಕಮಲಾಪ್ರಿಯಾ —ಎಂಬುದಾಗಿ

ಹೇಳುತ್ತಾರೆ,

೧೨ನೇ ಶತಮಾನದಲ್ಲಿ ವಚನ ಸಾಹಿತ್ಯವು ಹೇಗೆ ಸಮಾಜದ ಶೋಷಣೆ ಅನ್ಯಾಯವನ್ನು ಪ್ರತಿಭಟಿಸಿತೋ ಅದೇ ರೀತಿಯಲ್ಲಿ ಪುನಃ ಈ ಸಾಹಿತ್ಯವು ಸಾರ್ವತ್ರಿಕವಾಗಿ ಎಲ್ಲಾ ಲೇಖಕರಿಂದಲೂ ಈ ಕಾಲದಲ್ಲಿ ರಚನೆಯಾಗುವ ಅವಶ್ಯಕತೆ ಇದೆ. ಕಾರಣ ರಾಜಕೀಯ ಸ್ಥಿತಿಯ ಭ್ರಷ್ಟಾಚಾರ ಸ್ವಾರ್ಥದಿಂದ ಹದಗೆಟ್ಟಿದೆ, ವಿದ್ಯಾಸಂಸ್ಥೆಗಳೂ ಕೂಡಾ ವ್ಯಾಪಾರೀ ಮನೋಭಾವದಿಂದ ಕೂಡಿದ್ದು ವಾಣಿಜ್ಯ ಸಂಸ್ಥೆಗಳಾಗಿ ಪರಿವರ್ತನೆಗೊಂಡಿವೆ, ಒಂದು ಕಾಲದಲ್ಲಿ ರಾಜಕೀಯದಿಂದ ಪೂರ್ತಿಯಾಗಿ ಮುಕ್ತವಾದಂತಹ ವಿಶ್ವವಿದ್ಯಾನಿಲಯವೂ ಇಂದು ರಾಜಕಾರಣಿಗಳ ಕೈಗೊಂಬೆಯಾಗಿದ್ದು ಸ್ವಜನಪಕ್ಷಪಾತ, ಸ್ವಾರ್ಥ ಕಂಡು ಬರುತ್ತಿದೆ, ಇವೆಲ್ಲವನ್ನೂ ಧ್ವನಿಸುವ ಒಂದೇ ಒಂದು ವಚನವನ್ನು ಕೃತಿಯಲ್ಲಿ ಹೀಗೆ ತಂದಿದ್ದಾರೆ ;

ಹೂವಿಂದ ಹಾರಿ ಬೆಂಕಿಗ ಬಿದ್ದೆ
ಸರ್ಕಾರಿ ಕಾಲೇಜನಿಂದ ವಿಶ್ವವಿದ್ಯಾನಿಲಯವ ಹೊಕ್ಕೆ
ನಿನ್ನ ಮಾವನೊಬ್ಬ ನಿಹನಲ್ಲ ಅಲ್ಲೆ
ಅವನಿಗೆ ಒಬ್ಬಳಲ್ಲಿ ಪತ್ನಿ
ಹದಿನಾರು ಸಾವಿರವೆ ಕೃಷ್ಣನಂತೆ
....
ಇದ್ದಾರು ಬಿಡು ಎಷ್ಟೊ
ಸಾಕಷ್ಟು ಅತ್ತೆಯರು ನಿನಗೆ
ಬೇಕಾದಷ್ಟು ಕಷ್ಟ ಕೊಡಲು ಕಮಲಾಪ್ರಿಯ. ಎಂಬು

ದಾಗಿ ಹೇಳುತ್ತಾರೆ. ಪ್ರತಿಭೆಗೆ ಮನ್ನಣೆ ಇಲ್ಲ ಎಂದು ಇದನ್ನು ಪುನಃ ವಿವರಿಸ ಬೇಕಾಗಿಲ್ಲ.

ಇನ್ನು ಕಮಲಾ ಹಂಪನಾ ಅವರು ಆಧುನಿಕ ವಿಮರ್ಶೆಯ ಬಗ್ಗೆ ಕಟು ವಾಗಿಯೇ ಒಂದು ವಚನವನ್ನು ಬರೆದಿದ್ದಾರೆ, ಇವತ್ತಿನ ಅನೇಕ ಶ್ರೇಷ್ಠ ವಿಮರ್ಶಕರು ಎಂದು ಎನ್ನಿಸಿಕೊಂಡವರು ವಿಶ್ವವಿದ್ಯಾನಿಲಯದ ಭವ್ಯವಾದ ಕಟ್ಟಡದೊಳಗೆ ಫ್ಯಾನಿನಡಿಯಲ್ಲಿ ಕುಳಿತು, ನಗರ ಪ್ರದೇಶಗಳಲ್ಲಿಯೇ ವಾಸ ಮಾಡಿಕೊಂಡಿರುವರು. ಇನ್ನು ಕೆಲವರು ನಿಜವಾಗಿಯೂ ಹಳ್ಳಿಯಲ್ಲಿ ಹುಟ್ಟಿ ದರೂ ಅವರು ಬೆಳೆದದ್ದೆಲ್ಲಾ ಪಟ್ಟಣಗಳಲ್ಲಿಯೇ. ಇಂಥವರು ಎಲ್ಲಾ ರೀತಿಯ ಕೃತಿಯ ನಿಜವಾದ ಮೌಲ್ಯವನ್ನು ಗ್ರಹಿಸದೆ ತಮ್ಮ ನಾಲ್ಕು ಗೋಡೆಯ ಒಳಗೆ ಕಲಿತ ವಿದ್ವತ್ತಿನ ಆಧಾರದ ಮೇಲೆ ಕೃತಿ ವಿಮರ್ಶೆ ಮಾಡು ತ್ತಾರೆ. ನಿಜವಾಗಿಯೂ ಕೃತಿಯನ್ನು ಸ್ವತಃ ಬರೆದೋ ಅಥವಾ ವೈಯಕ್ತಿಕ ಅನುಭವವನ್ನು ಪಡೆದೋ ಗೊತ್ತಿಲ್ಲದೆ, ತನ್ನ ದೃಷ್ಟಿಕೋನಕ್ಕನುಗುಣವಾಗಿ ಕೃತಿಯನ್ನು ವಿಮರ್ಶಿಸುತ್ತಾನೆ. ಆದರೆ ಈ ರೀತಿಯ ವಿಮರ್ಶೆ ಸಮಂಜಸ ವಾದುದಲ್ಲ, ಅವನ್ನು ಕುರಿತು ಲೇಖಕಿ :

ಕಣ್ಣಾಪಟ್ಟಿ ಕಳಚಿ ಒಗೆದು
ಮೈಯ ಚಳಿಯ ಬಿಟ್ಟು ಹೊರಗೆ
ಬಾ ಬಾರಾ, ಕಮಲಾಪ್ರಿಯ —ಎಂದು ಹೇಳುತ್ತಾರೆ,

ಹೀಗೆ ಆಧುನಿಕ ಜೀವನದಲ್ಲಿ ಕಾಣುವ ಹತ್ತು ಹಲವು ಘಟನೆಗಳನ್ನು ಸೂಕ್ಷ್ಮವಾಗಿ ಗ್ರಹಿಸಿದ ಲೇಖಕಿ ಸರಳವಾದ ವಚನಗಳಲ್ಲಿ ತಂದಿದ್ದಾರೆ. ಲೇಖಕಿ ಅಲ್ಲಮಪ್ರಭು, ಬಸವಣ್ಣ, ದೇವರ ದಾಸಿಮಯ್ಯ, ಅಕ್ಕಮಹಾದೇವಿ ಯವರು ರಚಿಸಿದ ವಚನಗಳನ್ನು ಓದಿಕೊಂಡಿದ್ದು, ಅವರೆಲ್ಲರ ಪ್ರಭಾವವೂ ಇವರ ವಚನದ ಮೇಲಾಗಿರುವುದು ಕಂಡು ಬರುತ್ತದೆ. ಉದಾ :

ಆಸೆಗೆ ಸತ್ತುದು ಕೋಟಿ
ಆಮಿಷಕ್ಕೆ ಸತ್ತುದು ಕೋಟಿ
ಹೊನ್ನು ಹೆಣ್ಣು ಮಣ್ಣಿಗೆ ಸತ್ತುದು ಕೋಟಿ
ಗುಹೇಶ್ವರ ನಿಮಗಾಗಿ ಸತ್ತವರಾರನೂ ಕಾಣೆ.

ಎಂದಿರುವ ಅಲ್ಲಮಪ್ರಭು ಅವರ ಒಂದು ವಚನಕ್ಕೂ ಬಿಂದಲಿ ವಚನ ಸಂಕಲನದ ಇಪ್ಪತ್ತೊಂಬತ್ತನೆಯ ವಚನಕ್ಕೂ ಹೋಲಿಕೆ ಇರುವುದನ್ನು ಗಮನಿಸ

ಬಹುದು. ಅದು ಹೀಗಿದೆ: ಅಧಿಕಾರಕ್ಕೆ ಆಸೆ ಪಟ್ಟವರ ಕಂಡೆ, ಅಂತಸ್ತಿಗೆ ಮಾರುಹೋದವರ ಕಂಡೆ (ಕೊನೆಯ ಸಾಲು) ನಿನಗಾಗಿ ಬದುಕಿದವರಾರನೂ ಕಾಣೆ ಎಂದು ಮುಗಿಯುತ್ತದೆ.

ಆದೇ ರೀತಿಯಲ್ಲಿ ಬಿಂದಲಿಯಲ್ಲಿ ಬರುವ ೧೩ನೇ ವಚನಕ್ಕೂ ಬಸವಣ್ಣನವರ ವಚನಕ್ಕೂ ಸಾಮ್ಯ ಇರುವುದನ್ನು ಗಮನಿಸಬಹುದು.

"ಪರಚಿಂತೆ ಎನಗೇಕಯ್ಯಾ
ನಮ್ಮ ಚಿಂತೆ ನಮಗೆ ಸಾಲದೇ
ಕೂಡಲ ಸಂಗಯ್ಯ ಒಲಿದಾನೋ ಒಲಿಯನೋ ಎಂಬ ಚಿಂತೆ
ಹಾಸಲುಂಟು, ಹೊದೆಯಲುಂಟು"

ಎಂದಿದ್ದಾರೆ, ಬಿಂದಲಿಯಲ್ಲಿ

"ಹಾಸಲುಂಟು ಹೊದೆಯಲುಂಟು
ನನ್ನ ಕಷ್ಟವ ನನಗೆ...

ಎಂಬುದಾಗಿ ಮುಂದುವರಿಯುತ್ತದೆ. ಬಿಂದಲಿಯಲ್ಲಿ ಬಂದಿರುವ ಕೆಳಗಿನ ವಚನವೊಂದು ಹೀಗಿದೆ :

"ಎನ್ನ ಕಣ್ಣು ನಿನ್ನನಲ್ಲದೆ
ಮತ್ತೇನನ್ನೂ ಕಾಣದಯ್ಯಾ
ಎನ್ನ ಕಿವಿ ನಿನ್ನನಲ್ಲದೆ
ಮತ್ತೇನನ್ನೂ ಕೇಳದಯ್ಯಾ
ಎನ್ನ ನಾಸಿಕ ನಿನ್ನನಲ್ಲದೆ
ಮತ್ತೇನನ್ನೂ ಘ್ರಾಣಿಸದಯ್ಯಾ
ಎನ್ನ ತನು ನಿನ್ನನಲ್ಲದೆ
ಮತ್ತೇನನ್ನೂ ಆಲಿಂಗಿಸದಯ್ಯಾ
ಎನ್ನ ಪಂಚೇಂದ್ರಿಯಗಳೂ
ನಿನ್ನವೇ ಅಯ್ಯಾ ಕಮಲಾಪ್ರಿಯ"

ಎಂಬ ಈ ಮೇಲಿನ ವಚನಕ್ಕೂ ದೇವರ ದಾಸಿಮಯ್ಯನು ಬರೆದ.

"ಕಣ್ಣು ಮಾಸಲು ಶಿವನ
ಕೈ ಮಾಸಲು ಶಿವನ

ಕಾಲು ಮೀಸಲು ಶಿವನ
ನಾಲಗೆ ಮೀಸಲು ಶಿವನ
ನಾಸಿಕ ಮೀಸಲು ಶಿವನ
ತನು ಮೀಸಲು ಮನವೆಲ್ಲ ಮೀಸಲು
ಈ ಮೀಸಲು ಬೇಸರವೋಗದಂತಿದ್ದರೆ
ಆತನೇ ಜಗದೀಶ ಕಾಣಾ ರಾಮನಾಥ" ಎಂಬ ಈ

ವಚನಕ್ಕೂ ಪರಸ್ಪರ ನೇರವಾದ ಅರ್ಥಸಂಬಂಧವಿದೆ ಎಂದು ತೋರುತ್ತದೆ.

..."ಭವದ ಮರೆಯ ಬ್ರಹ್ಮವಾಗಿಪ್ಪ
ಚೆನ್ನಮಲ್ಲಿಕಾರ್ಜುನನ ನಿಲುವಬಾರದು"

ಎಂಬ ವಚನಕ್ಕೂ ಬಿಂದಲಿ ಸಂಕಲನದಲ್ಲಿ ಬರುವ

"ನನ್ನ ತನು ಮನದಲೇ ನೆಲೆಸಿದ ನಿನ್ನ
ನಾ ಬಲ್ಲೆನೆ ಕಮಲಾಪ್ರಿಯ" ಎಂಬ ವಚನಕ್ಕೂ ಇರುವ

ಸಾಮ್ಯತೆಯನ್ನು ನಾವು ಗುರುತಿಸಬಹುದು,

ಮೇಲಿನ ಎಲ್ಲಾ ಹೋಲಿಕೆಯಿಂದ, ಹಿಂದಿನ ವಚನಕಾರರ ಪರಿಚಯ ಲೇಖಕಿಗಿದೆ ಎಂದು ತಿಳಿಯಬಹುದಲ್ಲದೆ ಹಿಂದಿನ ವಚನಕಾರರ ಭಾವವನ್ನೂ ಲಯವನ್ನೂ ಅಲ್ಲಲ್ಲಿ ಯಥಾವತ್ತಾಗಿ ಸ್ವೀಕರಿಸಿದ್ದಾರೆ ಮತ್ತು ವಚನಕ್ಕೆ ಬೇಕಾದ ಸರಳವಾದ ಕನ್ನಡ ನುಡಿಗಳನ್ನು ಸಲೀಸಾಗಿ ರೂಢಿಸಿಕೊಂಡಿದ್ದಾರೆಂದು ಹೇಳಬಹುದು.

ಆಧುನಿಕ ವಚನಕಾರರ ಪ್ರಭಾವ: ವಚನ ಸಾಹಿತ್ಯವು ಸುಮಾರು ೧೧ನೇ ಶತಮಾನದ ಪ್ರಾರಂಭದಲ್ಲೇ ಉಗಮವಾಗಿ ಅನಂತರ ಹದಿನೈದನೆಯ ಶತಮಾನದಲ್ಲಿ ಪುನರುತ್ಥಾನ ಪಡೆದು ಹದಿನೆಂಟನೆಯ ಶತಮಾನದವರೆಗೆ ಹರಿದು ಬಂದು ಇಪ್ಪತ್ತನೆಯ ಶತಮಾನದ ಈ ಆಧುನಿಕ ಯುಗದಲ್ಲಿ ಹೊಸ ರೂಪು ಹೊಸ ಹುರುಪಿನಿಂದ ಮುಂದುವರಿಯುತ್ತಿದೆ, ಅಂತೆಯೇ ಹನ್ನೆರಡನೆಯ ಶತಮಾನದ ವಚನಗಳ ಪ್ರಭಾವ ಇತರ ಕವಿಗಳ ಮೇಲೆ ಆಗದೆ ಇಲ್ಲ. ಹರಿಹರನ ಗದ್ಯವಾಗಲೀ ಸರ್ವಜ್ಞನ ತ್ರಿಪದಿಯಾಗಲೀ ಇವೆಲ್ಲವೂ ವಚನ ವಾಙ್ಮಯದ ಪ್ರಭಾವಕ್ಕೆ ಸಿಕ್ಕಿವೆ. ಆದರೆ ಕುವೆಂಪುರವರ ಕಿಂಕಿಣಿ,

ಬೇಂದ್ರೆಯವರ ಕರುಳಿನ ವಚನಗಳು, ಗುಂಡ್ಮಿ ಚಂದ್ರಶೇಖರ ಐತಾಳರ 'ಮಾತೃ ಸಂಹಿತೆ' ಸಿದ್ಧಯ್ಯ ಪುರಾಣಿಕರ, ವಚನೋದ್ಯಾನ ಇವು ವಚನ ಕಕ್ಷೆಯಲ್ಲಿ ಬರುವಂಥದ್ದಾದರೂ ಆಧುನಿಕ ವಚನವೆಂಬುದನ್ನು ಮರೆಯ ಬಾರದು,

ಇನ್ನು ಎಸ್. ವಿ. ರಂಗಣ್ಣ, ಎಸ್. ವಿ. ಪರಮೇಶ್ವರ ಭಟ್ಟ, ಮಹಾ ದೇವ ಬಣಕಾರ ಮೊದಲಾದವರ ವಚನಗಳು ಒಂದೇ ಗುಂಪಿನಲ್ಲಿ ಬರುತ್ತವೆ, ಇವರ ವಚನಗಳಲ್ಲಿ ಭಾವಗೀತದ ಲಯ, ಲಾವಣಿಯ ಧಾಟಿ ಇದೆ ಹಾಗೂ ಸೂಕ್ಷ್ಮ ಸಂವೇದನೆಯ ಮೂಲಕ ಸಮಕಾಲೀನ ಜೀವನವನ್ನು ಕುರಿತು ವಿಮರ್ಶೆ ಅಡಗಿದೆ.

ಆಧುನಿಕ ವಚನಕಾರರ ಪ್ರಖ್ಯಾತ ಪಂಕ್ತಿಯಲ್ಲಿ ಸಿದ್ಧಯ್ಯ ಪುರಾಣಿಕ ರದು ಬಹುದೊಡ್ಡ ಹೆಸರು. ಪರಂಪರೆಯನ್ನು ಬಿಡದೆ ರಮ್ಯತೆ, ನವ್ಯತೆ ಗಳನ್ನು ಮರೆಯದೆ ಪರಿಸರಕ್ಕೆ ಸ್ಪಂದಿಸಿದವರು ಸಹಜ ಸಂವೇದನೆಯನ್ನು ರೂಢಿಸಿಕೊಂಡವರು, ಪ್ರಾಚೀನ ಬದುಕಿನ ಮೌಲ್ಯಗಳನ್ನು ಅವು ಪ್ರಾಚೀನ ವೆಂಬ ಮಾತ್ರಕ್ಕೆ ಧಿಕ್ಕರಿಸುವುದನ್ನು ಅವರೆಂದೂ ಸಹಿಸರು. ಅವರ ಸ್ವತಂತ್ರ ಮನೋಧರ್ಮಕ್ಕೆ "ಸ್ವತಂತ್ರ ಧೀರ ಸಿದ್ಧೇಶ್ವರಾ" ಎಂಬ ಅಂಕಿತ ನಾಮವೇ ಸಾಕ್ಷಿ. ಸ್ವಾತಂತ್ರ್ಯದ ಅನಂತರದ ರಾಮರಾಜ್ಯವನ್ನು ನೋಡಿ ಹೀಗೆ ಬರೆದಿ ದ್ದಾರೆ. ತಮ್ಮ ವಚನದಲ್ಲಿ :

> ಮಂತ್ರಿಗಳ ಮನೆಗೆ ಎಡತಾಕುವ ಸ್ವಾಮಿಗಳು ಕೆಲವರು
> ರಾಜಕಾರಣಿಗಳ ಬಾಲ ಹಿಡಿದು ತಿರುಗುವ ಬುದ್ಧಿಜೀವಿಗಳು ಹಲ
> ವರು ನಟನಟಿಯರ ಬೆಂಬತ್ತಿ ಅಲೆವ ನವಯುವಕರನೇಕರು
> ಶಾಸನಕಾರರಿಗೆ ಕೊಡೆಹಿಡಿದು ನಡೆವ ಸರಕಾರದ
> ಅಧಿಕಾರಿಗಳು ಸಾಕಷ್ಟು ಜನರು.
>
> ಇಂಥ ಅದಾಃಪಾತವನ್ನು ಈ ಹಿಂದೆ
> ನೋಡಿದ್ದೇವೇನಯ್ಯ — ನೀನಾದರೂ ?
> ....
> ಮೇಲೆತ್ತು, ಇಂದೆ ಶರಣು ಬಂದೆ ಸ್ವಂತಂತ್ರ ಧೀರ
> ಸಿದ್ದೇಶ್ವರಾ

ಇಲ್ಲಿ ನೇರವಾದ ಮಾತಿನಿಂದ ಸಮಾಜದ ಡೊಂಕನ್ನು ಎತ್ತಿ ಹಿಡಿದಿದ್ದಾರೆ. ಕಮಲಾ ಹಂಪನಾ ಅವರ ವಚನಗಳಿಗೂ ಇವರ ವಚನಗಳಿಗೂ ಇರುವ

ಮುಖ್ಯ ವ್ಯತ್ಯಾಸವೇ ಇದು. ಎಂದರೆ ಕಮಲಾ ಹಂಪನಾ ಅವರು ಸೂಚ್ಯಾರ್ಥದಲ್ಲಿಯೇ ಹೇಳುತ್ತಾರೆ ಹೊರತು ವಾಚ್ಯವಿಡಂಬನೆ ಹೆಚ್ಚಾಗಿ ಕಂಡುಬರುವುದಿಲ್ಲ. ಇನ್ನು ಭಾಷೆಯ ಬಗೆಗೆ ಹೇಳುವುದಾದರೆ, ಸಿದ್ಧಯ್ಯ ಪುರಾಣಿಕರ ಗಡಸುತನ ಕಮಲಾ ಹಂಪನಾ ಅವರ ಭಾಷೆಗಿಲ್ಲ.

ಆಧುನಿಕ ವಚನಕಾರರಲ್ಲಿ ಇನ್ನೊಂದು ಪ್ರಮುಖವಾದ ಹೆಸರು ಎಸ್. ವಿ. ಪರಮೇಶ್ವರ ಭಟ್ಟ ಅವರದು. ಕೆಳಗಿನ ವಚನದ ಅರ್ಥದ ದೃಷ್ಟಿಯಿಂದ ಹೇಳುವುದಾದರೆ ಇಬ್ಬರದೂ ಮನೋಭಿಪ್ರಾಯ ಒಂದೇ ಎಂದು ಹೇಳಬಹುದು. ಉದಾ : ಕಮಲಾ ಹಂಪನಾ ಅವರ ಮಚನದಲ್ಲಿ :

'ಅಗೆದಷ್ಟು ಉಸುಕನ್ನೇ ನೀಡುವ ನೀನು ನನಗೊಂದು ದೊಡ್ಡ ಒಗಟು ಕಮಲಾಪ್ರಿಯ' ಎಂದು ಬಂದರೆ, ಎಸ್. ವಿ. ಪರಮೇಶ್ವರ ಭಟ್ಟ ಅವರ ವಚನ ಸಂಕಲನದಲ್ಲಿ 'ನನಗೆ ನೀನೊಂದು ಒಗಟೆ ಸದಾಶಿವ ಗುರು' ಎಂದು ಬರುತ್ತದೆ.

ಆದರೂ ಇವರಿಬ್ಬರ ವಚನ ಸಂಕಲನಕ್ಕೂ ಇರುವ ವ್ಯತ್ಯಾಸ ಎಂದರೆ, ಪರಮೇಶ್ವರ ಭಟ್ಟರು ಆಧುನಿಕ ಬದುಕಿನ ಎಲ್ಲಾ ಕ್ಷೇತ್ರದ ಡೊಂಕನ್ನು ಸಮಗ್ರವಾಗಿ ತಂದಿದ್ದಾರೆ. ಆದರೆ ಕಮಲಾ ಹಂಪನಾ ಅವರು ಎದ್ದುಕಾಣುವ ಕೆಲವೇ ಕುಂದು ಕೊರತೆಯನ್ನು ಎತ್ತಿ ಹಿಡಿದಿದ್ದಾರೆ.

ಆಧುನಿಕವಾದ ಶ್ರೇಷ್ಠ ಕವಿಯೂ ಮತ್ತು ವಚನಕಾರರೂ ಆದ ಕುವೆಂಪು ಅವರ ಕಿಂಕಿಣಿಯನ್ನು ಬಿಂದಲಿಯೊಂದಿಗೆ ಹೋಲಿಸಲಿಕ್ಕಾಗುವುದಿಲ್ಲ. ಕಾರಣ ಕುವೆಂಪು ಅವರು ನಿಸರ್ಗ ಮತ್ತು ಪರಮಾತ್ಮನನ್ನು ಸಮೀಕರಿಸಿ ವಚನಗಳನ್ನು ಬರೆದುದರಿಂದ ಪ್ರಕೃತಿಯ ವರ್ಣವೈಭವದೊಂದಿಗೆ, ಆತ್ಮಸಾಕ್ಷಿ ಬಾನೆಡೆಗೇರುವ ಭಗವದನುಸಂದಾನವೂ ಸೇರಿದೆ. ಇಲ್ಲಿ ವಿಡಂಬನೆಯೋ ಅಥವಾ ಆಧುನಿಕ ಬದುಕಿನ ಹೊನಲನ್ನು ಎತ್ತಿ ಹಿಡಿಯುವುದೋ ಅವರ ಪ್ರಧಾನ ಉದ್ದೇಶವಲ್ಲ. ಉದಾ :

ಹೂಗಳನು ಕೊಯ್ದು ತಂದಿರುವೆ, ಮಾಲೆಗಳನು ನೆಯ್ದು
ನಿಂದಿರುವೆ, ಗುಡಿಯ ಗುಡಿಸಿರುವೆ, ತೊಳೆದು ರಂಗವಲ್ಲಿಯ
ಬರೆದು, ಸಿಂಗಾರ ಮಾಡಿರುವ ಗಂಧಗುಗ್ಗಳ ಹೊತ್ತಿಸಿರುವೆ
ಕೀರ್ತನೆಗಳನು ಹಾಡುತಿರುವೆ, ನೀ ಬರುವೆ ಎಂಬುದನು
ಜನರಿಗೊರೆದೆ–ನೀನೆಂದಿಗೈತರುವೆ ? (೨೨)

ಇಲ್ಲಿ ಪ್ರಕೃತಿಯ ಮೂಲಕ ಪರಮಾತ್ಮನನ್ನು ನಿರೀಕ್ಷಿಸುತ್ತಿದ್ದಾರೆ. ಸಮಾಜದ ಉನ್ನತ ಮೌಲ್ಯಗಳ ಪತನವಾಗುವುದನ್ನು ಕಂಡ ಕವಿ ಹೃದಯ, ಪರಮಾತ್ಮನ ಆಗಮನಕ್ಕಾಗಿ ಹಾತೊರೆಯುವುದನ್ನು ಸೂಚ್ಯವಾಗಿ ತಂದಿದ್ದಾರೆ.

ಇನ್ನೊಂದು ವಿಶೇಷ, ಪೂರ್ತಿ ಗದ್ಯದ ಲಯವೆಂಬುದನ್ನು ಗಮನಿಸ ಬಹುದು ಮತ್ತು ಕೊನೆಯಲ್ಲಿ ಯಾವುದೇ ನಾಮಾಂಕಿತ ಇಲ್ಲ. ಆದ್ದರಿಂದ ಕಮಲಾ ಹಂಪನಾ ಅವರ ಬಿಂದಲಿ 'ಕಿಂಕಿಣಿ'ಯಿಂದ ಪೂರ್ತಿ ಭಿನ್ನವಾಗಿ ನಿಲ್ಲುತ್ತದೆ.

ಆಧುನಿಕ ಕಾಲದಲ್ಲಿ ವಚನವನ್ನು ರಚಿಸಿದವರಲ್ಲಿ ಗುಂಡ್ಮಿ ಚಂದ್ರಶೇಖರ ಐತಾಳರೂ ಒಬ್ಬರು. ಆ ಸಂಕಲನದ ಹೆಸರು, 'ಮಾತೃಸಂಹಿತೆ' ಎನ್ನುವುದು ನಮಗೆಲ್ಲಾ ತಿಳಿದೇ ಇದೆ. ಇಲ್ಲಿ ತಾಯಿಯ ಬಗೆಗಿನ ಪ್ರೀತಿ ವಾತ್ಸಲ್ಯದಲ್ಲಿ ಭಗವಂತನನ್ನು ಕಾಣುವ ಎಂದರೆ "ಮಾತೃದೇವೋ ಭವ" ಎನ್ನುವ ಮಾತನ್ನು ಭಾಷೆಯಲ್ಲಿ ಸಾಕ್ಷಾತ್ಕರಿಸುವ ಮಹತ್ವಪೂರ್ಣ ಪ್ರಯೋಗವೇ 'ಮಾತೃಸಂಹಿತೆ' ಈ ಕೃತಿಗೂ ಆಧುನಿಕ ವಚನಗಳ ಸಾಲಿನಲ್ಲಿ ಮಹತ್ವಪೂರ್ಣವಾದ ಸ್ಥಾನವಿದೆ. ಕಾರಣ ಅಂತರ್‌ರಾಷ್ಟ್ರೀಯ ವಿಶ್ವವಿದ್ಯಾನಿಲಯವೊಂದರಿಂದ ಮನ್ನಣೆ ದೊರಕಿರುವುದೇ ಇದಕ್ಕೆ ಸಾಕ್ಷಿ.

ಕಮಲಾ ಹಂಪನಾ ಅವರ ಬಿಂದಲಿಯನ್ನೂ ಮಾತೃಸಂಹಿತೆಯನ್ನೂ ಕೇವಲ ವಚನವೆಂಬ ಮಾತ್ರಕ್ಕೆ ತೌಲನಿಕವಾಗಿ ಸಮೀಕ್ಷೆ ಮಾಡಬಾರದು. ಕಾರಣ ಬಿಂದಲಿಯು ಪ್ರಾಚೀನ ವಚನಕಾರರ ಪ್ರೇರಣೆಯಿಂದ ರಚಿತವಾದ ಒಂದು ಸಮಕಾಲೀನ ಬದುಕಿನ ವಿಮರ್ಶೆ. ಆದರೆ ಮಾತೃಸಂಹಿತೆಯು ಶಿಶು ಮತ್ತು ತಾಯಿಯ ಸಂಬಂಧದ ಹಿರಿಮೆಯನ್ನು ಹೇಳಿ, ತನ್ಮೂಲಕ "ಮಾತೃ ದೇವೋಭವ" ಎಂಬುದನ್ನು ಅರಿವುಂಟುಮಾಡಿಕೊಡುವ ಸಾರ್ವಕಾಲಿಕ ಮೌಲ್ಯವುಳ್ಳ ವಚನವಾಗಿದೆ.

ಹೀಗೆ ಕಮಲಾ ಹಂಪನಾ ಅವರು ಆಧುನಿಕ ವಚನಕಾರರಲ್ಲಿ ಒಬ್ಬ ರಾಗುತ್ತಾರಾದರೂ ಮೇಲೆ ಹೇಳಿದ ಕೆಲವು ವಿಚಾರದಲ್ಲಿ ಇವರು ಮೇಲಿನವ ರೆಲ್ಲರಿಗಿಂತಲೂ ಭಿನ್ನವಾಗಿ ನಿಲ್ಲುತ್ತಾರೆ. ಆದರೆ ಭಾಷೆಯ ಬಿಗಿ, ಧಾಟಿ, ಲಯ, ಮನೋಧರ್ಮವನ್ನು ಗುರುತಿಸಿ ಹೇಳುವುದಾದರೆ ಎಸ್. ವಿ. ಪರಮೇಶ್ವರ ಭಟ್ಟರಿಗೆ ಸಮೀಪವಾಗಿ ನಿಲ್ಲುತ್ತಾರೆಂದು ಹೇಳಬಹುದು. ಒಟ್ಟಿನಲ್ಲಿ ಆಧುನಿಕ ವಚನಕಾರರಲ್ಲಿ ಇವರಿಗೆ ವಿಶಿಷ್ಟಸ್ಥಾನ ಸಲ್ಲಬೇಕಾಗುತ್ತದೆ.

ಅನೇಕ ಪ್ರಕಾರದ ಸಾಹಿತ್ಯಕೃಷಿಯಲ್ಲಿ ಕೆಲಸ ಮಾಡಿದ ಲೇಖಕಿ ಆಧುನಿಕ ನಾಗರೀಕತೆಯ ಹೆಸರಿನಲ್ಲಾಗುವ ಎಷ್ಟೋ ಕುಂದು ಕೊರತೆಗಳನ್ನು ವಚನದಲ್ಲಿ ಎತ್ತಿ ಹೇಳಿಲ್ಲ. ಹೇಗೆ ಮೌಲ್ಯಗಳು ಬದಲಾವಣೆಗೊಂಡಿವೆ ಎಂಬುದನ್ನು ಎಲ್ಲಿಯೂ ಹೋಲಿಸಿ ಹೇಳಿಲ್ಲ. ಬಹುಶಃ ವಿಶ್ವವಿದ್ಯಾನಿಲಯ ದಲ್ಲಿ ನಡೆಯುವ ಅನ್ಯಾಯ, ರಾಜಕೀಯದ ಬಗ್ಗೆ ಒಂದು ಸಂಕಲನವನ್ನೇ ಹೊರತರುವಷ್ಟು ವಿಷಯಗಳಿದ್ದರೂ ಕೇವಲ ಒಂದೊಂದೇ ವಚನದಲ್ಲಿ ಎಲ್ಲಾ ವಿಷಯಗಳನ್ನು ಹೇಳಲು ಪ್ರಯತ್ನಿಸಿದ್ದಾರೆ. ಇವತ್ತಿನ ಶಿಕ್ಷಣ ಸಂಸ್ಥೆಗಳು ಹೇಗೆ ವಾಣಿಜ್ಯ ಸಂಸ್ಥೆಗಳಾಗಿ ಪರಿವರ್ತನೆಗೊಂಡು ರಕ್ಷಕರನ್ನು ಶಿಕ್ಷಕರನ್ನು ಸುಲಿಗೆ ಮಾಡುತ್ತಿದ್ದಾರೆ ಎಂದು ಈ ಪ್ರಸ್ತಾಪ ವಚನದಲ್ಲಿ ಕಂಡುಬಂದಿಲ್ಲ. ಹೀಗೆ ಇನ್ನಿತರ ಎಷ್ಟೋ ವಿಷಯಗಳು, ಹಿಂದಿನ ವಚನಕಾರರ ಕಾಲದಲ್ಲಿ ಇಲ್ಲದಿರುವ ವಿಚಾರಗಳು ಇಂದಿವೆ. ಬಹುಶಃ ಇವನ್ನೆಲ್ಲಾ ಸಂಗ್ರಹಿಸಿ ಇನ್ನೂ ದೊಡ್ಡ ಮತ್ತು ಉತ್ತಮವಾಗಿ ಸಂಕಲನವನ್ನು ಲೇಖಕಿಗೆ ತರಲು ಸಾಧ್ಯವಾದರೂ ಕೇವಲ ಚುಟುಕಾದ ಎಪ್ಪತ್ತು ವಚನಗಳಲ್ಲಿ ಹೇಳಬಹುದಾದ ಕೆಲವೇ ವಿಚಾರಗಳನ್ನು ಮಾತ್ರ ಹೇಳಿದ್ದಾರೆ. ಆದರೆ 'ಬಿಂದಲಿ' ಎಂಬ ಶೀರ್ಷಿಕೆಯನ್ನು ನಾವು ಸದಾ ಗಮನದಲ್ಲಿಡಬೇಕಾಗುತ್ತದೆ.

ಮುಡಿಮಲ್ಲಿಗೆ

ಸಿ. ನಾಗರಾಜು

ಆಧುನಿಕ ಕನ್ನಡದ ಲೇಖಕಿಯರಲ್ಲಿ ಕಮಲಾ ಹಂಪನಾ ಅವರದು ಒಂದು ದೊಡ್ಡ ಹೆಸರು. ಈವರೆಗೆ ಅವರು ಸೃಷ್ಟಿಸಿರುವ ಸಾಹಿತ್ಯ ವಿಪುಲವೂ ವೈವಿಧ್ಯಮಯವೂ ಆಗಿದೆ. ಸಮಕಾಲೀನ ಸಾಮಾಜಿಕ ಸಂವೇದನೆಗಳಿಗೆ ಸದಾ ಸ್ಪಂದಿಸುತ್ತಲೇ ಬರೆಯುತ್ತಿರುವ ಕಮಲಾ ಹಂಪನಾ ಅವರು ತಮ್ಮ ಅನುಭವಗಳು ವಿಸ್ತಾರವಾದಂತೆಲ್ಲ ತಮ್ಮ ಬರವಣಿಗೆಯ ಸ್ವರೂಪವನ್ನು ವಿಸ್ತಾರವಾಗಿಸಿಕೊಂಡು ಬೆಳೆದವರು. ವಿಚಾರ, ವಿಮರ್ಶೆ, ಸಂಶೋಧನೆ, ಕಥೆ, ಶಿಶು ಸಾಹಿತ್ಯ, ಜೀವನ ಚರಿತ್ರೆ, ಹಳಗನ್ನಡ ಗ್ರಂಥಗಳ ಸಂಪಾದನೆ ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ತಮ್ಮ ಲೇಖನಿಯನ್ನು ಹರಿಯಬಿಟ್ಟು ತಮ್ಮ ಕಲಾತ್ಮಕ ಬರವಣಿಗೆಯಿಂದ ಓದುಗರನ್ನು ಸೆಳೆಯುತ್ತಿದ್ದಾರೆ. ಸೃಜನಶೀಲ

ಹಾಗೂ ಸೃಜನೇತರ ಸಾಹಿತ್ಯ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಕಮಲಾ ಹಂಪನಾ ಅವರು ವೃತ್ತಿಯಲ್ಲಿ ಕಾಲೇಜು ಅಧ್ಯಾಪಕಿ. ಆಕರ್ಷಕವಾಗಿ ಮಾತನಾಡುವಂತವರು. ವಿಶ್ವವಿದ್ಯಾನಿಲಯಗಳ ಪ್ರಚಾರೋಪನ್ಯಾಸ ಮಾಲೆಯಲ್ಲಿ ಅನೇಕ ಉಪನ್ಯಾಸಗಳನ್ನು ಕೊಟ್ಟಿದ್ದಾರಲ್ಲದೆ ಅನೇಕ ವಿಚಾರ ಸಂಕಿರಣಗಳಲ್ಲಿ, ಸಾಹಿತ್ಯ ಸಮ್ಮೇಳನಗಳಲ್ಲಿ, ಆಕಾಶವಾಣಿಯಲ್ಲಿ ಸಂದರ್ಭ ಒದಗಿ ಬಂದಾಗಲೆಲ್ಲ ತಮ್ಮ ಪ್ರತಿಭಾಪೂರ್ಣವಾದ ಸಂಶೋಧನಾ ಪ್ರಬಂಧಗಳನ್ನು ಮಂಡಿಸಿ ತಮ್ಮ ಪ್ರತಿಭೆಯನ್ನು ವ್ಯಕ್ತಪಡಿಸಿದ್ದಾರೆ. ಯಾವುದೇ ಒಂದು ವಿಷಯದ ಬಗ್ಗೆ ಮಾತನಾಡುವಾಗಲಾಗಲಿ ಅಥವಾ ಬರೆಯುವಾಗಲಾಗಲಿ ಅಲ್ಲಿ ಎದ್ದು ಕಾಣುವ ಅಂಶವೆಂದರೆ ವಿಷಯದ ಬಗೆಗಿನ ಖಚಿತತೆ ಮತ್ತು ಪರಿಪೂರ್ಣತೆ. ಈ ಬಗೆಯ ಖಚಿತತೆ ಮತ್ತು ಪರಿಪೂರ್ಣತೆಯನ್ನು ಕಮಲಾ ಹಂಪನಾ ಅವರು ತಮ್ಮ ಆಳವಾದ ಅಧ್ಯಯನದಿಂದ ರೂಢಿಸಿಕೊಂಡಿದ್ದಾರೆ. ಅಧ್ಯಯನ ಶೀಲತೆಯೇ ಅವರ ಸತ್ವಯುತ ಸಾಹಿತ್ಯದ ಕುರುಹು ಹಾಗೂ ಭದ್ರವಾದ ಬುನಾದಿಯೂ ಆಗುತ್ತದೆ ಎಂದು ಹೇಳಬಹುದು. ಪ್ರಸ್ತುತ ಅವರು ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯೆಯಾಗಿರುವುದು ಅವರ ಸಾಹಿತ್ಯಿಕ ಸಾಧನೆಗೆ ಸಂದ ಗೌರವವಾಗಿದೆ. ಈ ಸಂದರ್ಭದಲ್ಲಿ ಅವರಿಗೆ ಅಭಿನಂದನ ಗ್ರಂಥ ತರುತ್ತಿರುವುದು ಔಚಿತ್ಯಪೂರ್ಣವಾಗಿದೆ.

'ಮುಡಿ ಮಲ್ಲಿಗೆ' ಕಮಲಾ ಹಂಪನಾ ಅವರ ಹತ್ತು ವ್ಯಕ್ತಿಚಿತ್ರಗಳನ್ನೊಳಗೊಂಡಿರುವ ಅಪರೂಪದ ಕೃತಿ. ಲೇಖಕಿಯೇ ಹೇಳುವಂತೆ ೧೯೬೬ ರಿಂದ ೧೯೮೧ರ ವರೆಗಿನ ಅವಧಿಯಲ್ಲಿ ಬೇರೆ ಬೇರೆ ಸಂದರ್ಭದಲ್ಲಿ ಬರೆದ ವ್ಯಕ್ತಿಚಿತ್ರಗಳಲ್ಲಿ ಹತ್ತು ವ್ಯಕ್ತಿಗಳನ್ನಿಲ್ಲಿ ಅಡಕಗೊಳಿಸಿದ್ದಾರೆ. ಇಲ್ಲಿ ಬಿತ್ತರಿಸಲ್ಪಟ್ಟಿರುವ ಹತ್ತು ವ್ಯಕ್ತಿಚಿತ್ರಗಳು ಒಬ್ಬೊಬ್ಬ ವ್ಯಕ್ತಿಯು ಒಂದೊಂದು ಕ್ಷೇತ್ರದಲ್ಲಿ ತಮ್ಮ ತಮ್ಮ ಸಾಧನೆಯ ಮೂಲಕ ತಾವು ಪಡೆದ ಸಿದ್ಧಿಯನ್ನು ಹಾಗೂ ಆ ಸಿದ್ದಿಯನ್ನು ಸಂಪಾದಿಸುವ ಹಾದಿಯಲ್ಲಿ ಎದುರಿಸಿದ ಅಡ್ಡಿ ಆತಂಕಗಳನ್ನು ಲೇಖಕರು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಇಲ್ಲಿರುವ ಹತ್ತು ವ್ಯಕ್ತಿಚಿತ್ರಗಳ ಒಂದು ಕಿರು ವಿಮರ್ಶೆ ಈ ಪ್ರಬಂಧದ ಉದ್ದೇಶ. ಇಲ್ಲಿ ಚಿತ್ರಿಸಿರುವ ಈ ಹತ್ತು ವ್ಯಕ್ತಿಗಳನ್ನು ಕಮಲಾ ಹಂಪನಾ ಅವರು ತೀರ ಸಮೀಪದಿಂದ ನೋಡಿದವರಾಗಿದ್ದಾರೆ. ಆ ವ್ಯಕ್ತಿಗಳ ಸರಳತೆ ಸೌಜನ್ಯತೆ ಹಾಗೂ ನಿಷ್ಕಾಮ ಕರ್ಮ ದುಡಿಮೆಯೇ ಈ ಕೃತಿಯ ಸೃಷ್ಟಿಗೆ ಕಾರಣವಾಗಿದೆ ಎಂದು ಹೇಳಬಹುದು,

'ಕನ್ನಡ ಕಟ್ಟಿದ ಗಳಗನಾಥರು' ವ್ಯಕ್ತಿಚಿತ್ರದಲ್ಲಿ ಗಳಗನಾಥರ ಸಾಹಿತ್ಯಿಕ ಸಾಧನೆ ಮತ್ತು ಕನ್ನಡ ನಾಡು, ನುಡಿಗಳ ಏಳ್ಗೆಗಾಗಿ ಅವರು ಮಾಡಿದ ಕೆಲಸ

ಚಿತ್ರಿತವಾಗಿದ್ದು ಕನ್ನಡದ ಬಗ್ಗೆ ಮೂಗು ಮುರಿಯುತ್ತಿದ್ದ ಆ ಕಾಲದಲ್ಲಿ ಗಳಗನಾಥರು ತೋರಿಸಿದ ಕನ್ನಡಾಭಿಮಾನ ಮತ್ತು ದೇಶಪ್ರೇಮ ಎಷ್ಟು ಆದಮ್ಯವಾದುದೆಂಬುದನ್ನು ಸ್ಪಷ್ಟಪಡಿಸುತ್ತದೆ, ಅವರ ನಾಡು–ನುಡಿಗಳ ಕಾಳಜಿ ಯಾರೂ ಮೆಚ್ಚುವಂತಾದ್ದು. ಕನ್ನಡಿಗರಲ್ಲಿ ಕನ್ನಡ ಭಾಷೆಯ ಬಗ್ಗೆ, ಸಾಹಿತ್ಯ ಸಂಸ್ಕೃತಿಯ ಬಗ್ಗೆ, ಕನ್ನಡವನ್ನು ಓದುವುದರ ಬಗ್ಗೆ ಅಭಿಮಾನ ಅಕ್ಕರೆಗಳನ್ನು ಉಕ್ಕಿಸಿದವರು. ಗಳಗನಾಥರು ಹೇಗೆ ನಾಡವರಲ್ಲಿ ಸ್ವಾಭಿಮಾನ ಸ್ವಂತಿಕೆಗಳನ್ನು ಉಕ್ಕಿಸಿದರೊ ಹಾಗೆ ಕಮಲಾ ಹಂಪನಾ ಅವರು ತಮ್ಮ ಸರಳ, ಸುಂದರ ನುಡಿಗಳಿಂದ ಗಳಗನಾಥರ ಬಗ್ಗೆ ಓದುಗರಲ್ಲಿ ಆಸಕ್ತಿ ಕೆರಳಿಸಿದ್ದಾರೆ. ಇಲ್ಲಿ ನಾವು ಗುರುತಿಸಬೇಕಾದುದು ಗಳಗನಾಥರ ಕನ್ನಡದ ಕೈಂಕರ್ಯ. ಆ ಕೆಲಸವನ್ನು ಲೇಖಕರು ಸ್ಪಷ್ಟವಾಗಿ ನಿರ್ವಹಿಸಿದ್ದಾರೆ.

ಡಾ॥ ಇಡಾ ಸ್ಕಡ್ಡರ್ ಒಬ್ಬ ಆದರ್ಶ ಮಹಿಳೆ. ವೈದ್ಯಕೀಯ ಸೇವೆಯನ್ನು ಕೇವಲ ರೋಗಿಯೊಬ್ಬನಿಗೆ ಔಷಧಿ ಕೊಡುವ ಕೆಲಸವಾಗಿ ನೋಡದೆ ಮಾನವೀಯ ದೃಷ್ಟಿಯಿಂದ ನೋಡಿ ವೈದ್ಯಕೀಯ ಸೇವೆಯ ಮಹೋನ್ನತಿಯನ್ನು ಗುರುತಿಸಿದವಳು. ಅಮೆರಿಕನ್ ಹೆಣ್ಣೊಬ್ಬಳು ಸುಖದ ಸುಪ್ಪತ್ತಿಗೆಯಲ್ಲಿ ಓಲಾಡುವ ಕನಸು ಕಂಡದ್ದು ಸಹಜ, ಆದರೆ ಅವಳನ್ನು ಇದ್ದಕ್ಕಿದ್ದ ಹಾಗೆಯೇ ಜೀವನದ ಆಕಸ್ಮಿಕ ಘಟನೆಯೊಂದು ಉನ್ನತ ಮಟ್ಟದ ವೈದ್ಯಳಾಗುವಂತೆ ಮಾಡಿದ ಪರಿಯನ್ನು ಲೇಖಕರು ಸೊಗಸಾಗಿ ಸೆರೆಹಿಡಿದಿದ್ದಾರೆ. ಆ ಸೇವೆಯ ಮಹತ್ವವನ್ನು ಸಹ ಎತ್ತಿಹಿಡಿದಿದ್ದಾರೆ. ಓದುವಾಗ ವ್ಯಕ್ತಿಯೇ ಎದುರು ನಿಂತಂತೆ ಭಾಸವಾದರೂ ವ್ಯಕ್ತಿಚಿತ್ರದ ನಿರೂಪಣೆ ಸ್ವಲ್ಪ ಮಂದಗತಿಯಲ್ಲಿ ಸಾಗುತ್ತದೆ.

'ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ' ಒಬ್ಬ ಹುಟ್ಟು ಬಂಡಾಯಗಾರ್ತಿಯ ಬದುಕಿನ ಹಿನ್ನೆಲೆಯನ್ನಿಟ್ಟುಕೊಂಡು ಚಿತ್ರಣವಾಗಿರುವ ವ್ಯಕ್ತಿಚಿತ್ರ. ಕಮಲಾದೇವಿಯವರ ಬಂಡಾಯದ ಬದುಕು ಸಮರ್ಥವಾಗಿ ಅಭಿವ್ಯಕ್ತಿಗೊಂಡಿದೆ. ಚಟ್ಟೋಪಾಧ್ಯಾಯರ ವ್ಯಕ್ತಿತ್ವದ ಹಲವು ಮಜಲುಗಳನ್ನು ಮತ್ತು ವ್ಯಕ್ತಿತ್ವದ ಬಹುಮುಖ ಛಾಯೆಯನ್ನು ಸಾಂಪ್ರದಾಯಕ ವಿರೋಧಿ, ಹಸ್ತಕುಶಲ ಕಲೆ, ಅಂತರರಾಷ್ಟ್ರೀಯ ನಾಯಕಿ ಹಾಗೂ ಸಮಾಜವಾದಿ ಎನ್ನುವಂತಹ ವಿವಿಧ ಸ್ತರಗಳಲ್ಲಿ ಎಳೆ ಎಳೆಯಾಗಿ ಬಿಡಿಸಿ ನೋಡಿದ್ದಾರೆ. ಕಮಲಾದೇವಿಯವರ ದಿಟ್ಟತನವನ್ನು ಒಬ್ಬ ಸ್ತ್ರೀಯಾಗಿ ಕಮಲಾ ಹಂಪನಾ ಅವರು ನೋಡಿರುವ ರೀತಿ ಹಿತವಾಗಿದೆ, ಮೇಲ್ಮೆಯಾಗಿದೆ. ವ್ಯಕ್ತಿಚಿತ್ರದ ನಿರೂಪಣೆಯಲ್ಲಿ ಬರುವ ಚಟ್ಟೋಪಾಧ್ಯಾಯರ ಬದುಕಿನ ಹಲವು ಮಜಲುಗಳು ಹೆಚ್ಚೆನಿಸಿದರೂ ಒಂದೊಂದು ಮಜಲು ವ್ಯಕ್ತಿಚಿತ್ರವನ್ನು

ಪೋಷಿಸುತ್ತಾ ಹೋಗಿ ಕೊನೆಯಲ್ಲಿ ಇಡೀ ಚಿತ್ರವನ್ನು ನಮ್ಮ ಮುಂದಿಡಲು ಸಹಾಯವಾಗುತ್ತದೆ. ವಿವಿಧ ಸ್ತರಗಳಲ್ಲಿ ವ್ಯಕ್ತಿಸಾಧನೆಯನ್ನು ಗುರುತಿಸಿ ಸಾಧನೆಗಳನ್ನು ಪೋಣಿಸುವಲ್ಲಿ ಕಮಲಾ ಹಂಪನಾ ಯಶಸ್ವಿಯಾಗಿದ್ದಾರೆ.

'ತೆಂಕನಾಡಿನ ಕನ್ನಡ ಕೋಗಿಲೆ ನೆಲ್ಲಿಕಾರು ರಾಧಮ್ಮನವರು' 'ನೆಲ್ಲಿಕಾರು ಜೈನ ಮಹಿಳೆ' ಎಂಬ ಕಾವ್ಯನಾಮದಿಂದ ಎಲೆಮರೆಯ ಕಾಯಿಯಂತೆ ಸದ್ದು ಗದ್ದಲವಿಲ್ಲದೆ ಸಾಹಿತ್ಯ ಸೃಷ್ಟಿಸಿ ತುಂಬು ಬಾಳನ್ನು ಬದುಕಿದವರು ರಾಧಮ್ಮ ನವರು. ಇಂದಿನ ನಮ್ಮ ಬರಹಗಾರರಲ್ಲಿ ಇಂಥವರೇ ಹೆಚ್ಚು. ತಮ್ಮ ಆಶು ಕವಿತ್ವದಿಂದ ಪ್ರಸಿದ್ಧರಾಗಿದ್ದ ರಾಧಮ್ಮನವರ ಸಾಹಿತ್ಯದ ಸ್ಥಾಯಿ ಭಕ್ತಿರಸ. ಕಮಲಾ ಹಂಪನಾ ಅವರು ತಾವೂ ಒಬ್ಬ ಬರಹಗಾರರಾಗಿ ಮತ್ತೊಬ್ಬ ಬರಹಗಾರ್ತಿಯನ್ನು ಗುಣಕ್ಕೆ ಮತ್ಸರವಿಲ್ಲದಂತೆ ಚಿತ್ರಿಸಿರುವುದು ಅವರ ಸಹೃದಯತೆಗೆ, ಸೌಜನ್ಯಕ್ಕೆ ಸಾಕ್ಷಿಯಾಗುತ್ತದೆ. ಸಾಹಿತ್ಯಿಕ ಸಾಧನೆಯ ಮುಖಕ್ಕೆ ಈ ವ್ಯಕ್ತಿಚಿತ್ರ ಕನ್ನಡಿ ಹಿಡಿದಂತಿದೆ. ರಾಧಮ್ಮನವರ ಬಹುಪಾಲು ಸಾಧನೆ ಸಾಹಿತ್ಯಿಕವಾಗಿರುವುದರಿಂದ ಅಲ್ಲಿ ಬೇರೇನನ್ನೂ ನಿರೀಕ್ಷಿಸುವಂತಿಲ್ಲ.

'ದಿಟ್ಟ ಹೆಣ್ಣು ಕಸ್ತೂರಿ ಬಾ' ಅವರು ತನ್ನ ಪತಿ ಗಾಂಧೀಜಿಯವರ ಜೀವನದ ಹಲ ಕೆಲವು ಘಟನೆಗಳಲ್ಲಿ ಒರಿದಾದ ಪಾತ್ರವಹಿಸಿ, ಕೆಲವು ವೇಳೆ ಗಾಂಧೀಜಿಯವರಿಗೂ ಮಾರ್ಗದರ್ಶಕರಾಗಿದ್ದ ಬಗೆಯನ್ನು ಲೇಖಕರು ಸೂಕ್ಷ್ಮವಾಗಿ ಗ್ರಹಿಸಿ ಅಲ್ಲೆಲ್ಲಾ ಕಸ್ತೂರಿ ಬಾ ಅವರ ವ್ಯಕ್ತಿತ್ವದ ಹೊಳಹನ್ನು ತೋರಿದ್ದಾರೆ. ಬೇರೆ ಬೇರೆ ಸನ್ನಿವೇಶಗಳ ಮೂಲಕ ಕಸ್ತೂರಿ ಬಾ ಅವರ ದಿಟ್ಟತನವನ್ನು ಚಿತ್ರಿಸಿರುವ ಕಮಲಾ ಹಂಪನಾ ಅವರು ರುಸ್ತುಂಜೀಯ ಮನೆ ಯಲ್ಲಿ ಅವಿತುಕೊಂಡಿದ್ದ ಗಾಂಧೀಜಿಯವರನ್ನು ರಕ್ಷಿಸಿದ ಕಸ್ತೂರಿ ಬಾ ಅವರ ಪವಾಡದಂತಹ ಘಟನೆಯ ಮೂಲಕ ಬಾ ಅವರ ದಿಟ್ಟತನಕ್ಕೆ ಕಿರೀಟವಿಟ್ಟಿ ದ್ದಾರೆ. ಬಾ ಅವರ ದಿಟ್ಟತನಕ್ಕೆ ಈ ಒಂದು ಘಟನೆ ಜೀವಂತ ಸಾಕ್ಷಿಯಾಗು ತ್ತದೆಯಲ್ಲದೆ ವ್ಯಕ್ತಿಚಿತ್ರದ ಲೇಖಕರ ನಿರೂಪಣಾಕೌಶಲವನ್ನು ಸಂಕೇತಿಸುತ್ತದೆ. ನೂರು ಘಟನೆಗಳು ಉಂಟುಮಾಡುವ ಪರಿಣಾಮವನ್ನು ಈ ಒಂದು ಘಟನೆ ಉಂಟುಮಾಡುತ್ತದೆ. ಈ ಘಟನೆಯನ್ನು ಬಾ ಅವರ ವ್ಯಕ್ತಿಚಿತ್ರಣಕ್ಕೆ ಬಳಸಿಕೊಂಡಿರುವ ಕಮಲಾ ಹಂಪನಾ ಅವರು ತಮ್ಮ ಕಲಾವಂತಿಕೆಯನ್ನು ಸಾಕಷ್ಟು ಕಂಗೊಳಿಸಿದ್ದಾರೆ.

'ಪ್ರಾಧ್ಯಾಪಕ ಡಿ. ಎಲ್. ಎನ್.'ರ ವ್ಯಕ್ತಿಚಿತ್ರ ಕನ್ನಡ ಸಾಹಿತ್ಯದಲ್ಲಿ "ನಭೂತೊ ನಭವಿಷ್ಯತಿ" ಎನ್ನುವಂತಹ ಮಾತಿಗೆ ಹೆಚ್ಚು ಕಡಿಮೆ ಒಪ್ಪುವಂತಹ ಕನ್ನಡದ ಪ್ರಖಾಂಡ ಪಂಡಿತರಾಗಿದ್ದ ಡಿ. ಎಲ್. ನರಸಿಂಹಾಚಾರ್ಯರನ್ನು

ಕುರಿತದ್ದು. ಈ ವ್ಯಕ್ತಿಚಿತ್ರ ಡಿ. ಎಲ್. ಎನ್. ಮತ್ತು ಕಮಲಾ ಹಂಪನಾ ಅವರ ಮಧ್ಯೆ ಅತಿ ಆತ್ಮೀಯವಾದ ಗುರುಶಿಷ್ಯೆ ಸಂಬಂಧ ಇದ್ದುದರಿಂದ ಉಳಿದೆಲ್ಲ ವ್ಯಕ್ತಿಚಿತ್ರಗಳಿಗಿಂತ ತುಸು ಭಿನ್ನರೀತಿಯಲ್ಲಿದೆ. ಇಲ್ಲಿ ವ್ಯಕ್ತಿಚಿತ್ರಕ್ಕಿಂತ ಲೇಖಕರ ಮತ್ತು ಡಿ. ಎಲ್. ಎನ್.ರ ಖಾಸಗಿ ಭೇಟಿ ಚಿತ್ರಣಗಳು ಹೆಚ್ಚಾಗಿವೆ. ಈ ಭೇಟಿ ಚಿತ್ರಗಳು ಡಿ.ಎಲ್.ಎನ್. ರವರ ಖಾಸಗಿ ಬದುಕಿನ ವ್ಯಕ್ತಿತ್ವವನ್ನು ಚಿತ್ರಿಸಿದರೂ ಡಿ. ಎಲ್. ಎನ್. ರವರದ್ದೇ ಆದ ವ್ಯಕ್ತಿ ಚಿತ್ರವನ್ನು ಕೊಡುವುದಿಲ್ಲ. ಡಿ. ಎಲ್. ಎನ್ ರವರದ್ದೇ ಆದ ವ್ಯಕ್ತಿತ್ವವಿರುವುದು ಹಳಗನ್ನಡ ಕಾವ್ಯಗಳ ಗ್ರಂಥ ಸಂಪಾದನೆಯಲ್ಲಿ ಮತ್ತು ಪಾಠ ಪರಿಷ್ಕರಣಗಳಲ್ಲಿ. ಈ ವಿಷಯಗಳಲ್ಲಿ ಡಿ. ಎಲ್. ಎನ್. ರವರ ವ್ಯಕ್ತಿಚಿತ್ರ ಸ್ವಲ್ಪ ಮಸಕು ಮಸಕಾಗಿದೆ. ಈ ಒಂದು ಕೊರತೆಯನ್ನು ಬಿಟ್ಟರೆ ಉಳಿದಂತೆಲ್ಲಾ ಲೇಖಕಿ ಡಿ. ಎಲ್. ಎನ್. ರವರ ಒಟ್ಟಾರೆ ವ್ಯಕ್ತಿತ್ವವನ್ನು ನಯವಾಗಿ ಚಿತ್ರಿಸಿದ್ದಾರೆ. ಆದಾಗ್ಯೂ ಡಿ.ಎಲ್.ಎನ್. ಅವರ ಮಟ್ಟಕ್ಕೆ ಲೇಖಕರ ಲೇಖನಿ ಏಕೋ ಸರಾಗವಾಗಿ ಮುನ್ನುಗ್ಗಲಿಲ್ಲ. ಕನ್ನಡದ ಮಾತು ಬಂದಾಗ ಡಿ. ಎಲ್. ಎನ್.ರ ನಾಲಗೆ ಹೇಗೆ ಹರಿತವಾಗುತ್ತಿತ್ತು ಎಂಬುದನ್ನು ರಾಜಾಜಿಯವರ ಘಟನೆಯಲ್ಲಿ ಅತ್ಯಂತ ಮನೋಜ್ಞವಾಗಿ ನಿರೂಪಿಸಿದ್ದಾರೆ. ಡಿ. ಎಲ್. ಎನ್.ರ ಚಿತ್ರ ಕನ್ನಡಿಗರಲ್ಲಿ ಅಚ್ಚಳಿಯದೆ ದೀರ್ಘಕಾಲ ಉಳಿಯುವಂತೆ ಚಿತ್ರಿಸಿದ್ದಾರೆ.

ಕನ್ನಡ ನಾಡಿನ ಸಂಸ್ಕೃತಿಗೆ, ಸಾಹಿತ್ಯಕ್ಕೆ ಜೈನರ ಕೊಡುಗೆ ಅಪಾರವಾದುದು, ಅನನ್ಯವಾದುದು. ಒಂದು ದೃಷ್ಟಿಯಲ್ಲಿ ಕನ್ನಡ ಸಾಹಿತ್ಯ ಸೌಧಕ್ಕೆ ಭದ್ರವಾದ ತಳಹದಿಯನ್ನು ಹಾಕಿದವರು ಜೈನ ಮಹನೀಯರು ಎಂದರೆ ಅತಿಶಯೋಕ್ತಿಯಾಗಲಾರದು. ಇಂತಹ ಮಹನೀಯರುಗಳಲ್ಲಿ ಕಾ. ಸ. ಧರಣೇಂದ್ರಯ್ಯನವರು ಒಬ್ಬರು. ಕಾ. ಸ. ಧ. ರವರ ಸಾಮಾಜಿಕ ಸೇವೆ, ಧರ್ಮನಿಷ್ಠೆ, ಪರಮತ ಸಹಿಷ್ಣುತೆ, ಸಾರ್ವಜನಿಕ ಜೀವನ ವಿಧಾನಗಳು ಅವರನ್ನು ಎತ್ತರದ ವ್ಯಕ್ತಿಯನ್ನಾಗಿ ಮಾಡಿವೆ. ಅವರ ಕನ್ನಡ ಶ್ರದ್ಧೆ ಶ್ಲಾಘನೀಯವಾದುದು, ಸಂಘಟನಾಶಕ್ತಿ ಅಪೂರ್ವವಾದುದು. ಈ ಎಲ್ಲ ಗುಣಗಳ ಗಣಿಯಾಗಿದ್ದ ಕಾ. ಸ. ಧರಣೇಂದ್ರಯ್ಯನವರು ಹೋದೆಡೆಯಲ್ಲೆಲ್ಲಾ ಕನ್ನಡದ ಕಹಳೆಯನ್ನು ಮೊಳಗಿಸಿದವರು. ಸ್ವತಃ ತಾವು ಬರೆಯದಿದ್ದರು ಬರಹಗಾರರ ಬೆನ್ನು ತಟ್ಟಿ ಬರೆಸಿದ್ದಾರೆ. ಕಾ. ಸ. ಧ. ರವರ ವ್ಯಕ್ತಿತ್ವದ ಹಲವು ಮುಖಗಳನ್ನು ಲೇಖಕರು ತಮ್ಮ ಹೃದ್ಯವಾದ ಗದ್ಯದಲ್ಲಿ ಕಡೆದಿಟ್ಟಿದ್ದಾರೆ. ವ್ಯಕ್ತಿಚಿತ್ರ ಸ್ವಲ್ಪ ದೀರ್ಘವೆನಿಸಿದರೂ ಗಂಭೀರವಾದ ಸನ್ನಿವೇಶಗಳ ಪರಂಪರೆಯಿಂದ ಕೂಡಿ ಓದುಗರಿಗೆ ಬೇಸರ ತರುವುದಿಲ್ಲ. ಕಮಲಾ ಹಂಪನಾ ಅವರು ಸೂಕ್ಷ್ಮ

ವಾಗಿ ಬೇಸರವಾಗದಂತೆ ಕಾ. ಸ. ಧ. ರವರ ತ್ಯಾಗಮಯ ಜೀವನವನ್ನು ಕುಶಲತೆಯಿಂದ ಒಡಮೂಡಿಸಿದ್ದಾರೆ.

ಕನ್ನಡವನ್ನು ಬೆಳಗಿದ ಅನೇಕ ಮಹನೀಯರಲ್ಲಿ 'ನಿಸರ್ಗ' ಕಾದಂಬರಿಯ ಮಿರ್ಜಿ ಅಣ್ಣಾರಾಯರು ಒಬ್ಬರು. ಒಬ್ಬ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಮನೆಯನ್ನೇ ಶಾಲೆಯನ್ನಾಗಿ ಮಾಡಿಕೊಂಡು ಜೀವನದುದ್ದಕ್ಕೂ ವಿದ್ಯಾರ್ಥಿಯಂತೆ ಅಭ್ಯಾಸ ನಿರತರಾಗಿ, ಸಾಹಿತ್ಯ ಚಿಂತಕರಾಗಿ ತಮ್ಮ ಪಾಂಡಿತ್ಯವನ್ನು ರೂಪಿಸಿಕೊಂಡವರು ಮತ್ತು ಸಾಹಿತ್ಯವನ್ನು ಶ್ರೀಮಂತಗೊಳಿಸಿದವರು. ದಿನ ಕಳೆದಂತೆಲ್ಲ ತಮ್ಮ ಲೇಖನಿಯನ್ನು ಚುರುಕುಗೊಳಿಸಿದವರು. ಕಮಲಾ ಹಂಪನಾ ಅವರು ಮಿರ್ಜಿಯವರನ್ನು ಒಬ್ಬ ಲೇಖಕರಾಗಿ, ಒಬ್ಬ ಶಿಕ್ಷಕರಾಗಿ, ಒಬ್ಬ ಸಾರ್ವಜನಿಕ ವ್ಯಕ್ತಿಯಾಗಿ ನೋಡಿರುವ ಪರಿ ಬೆರಗುಗೊಳಿಸುವಂತಹುದು. ಮಿರ್ಜಿಯವರ ವ್ಯಕ್ತಿಚಿತ್ರದುದ್ದಕ್ಕೂ ಕಾಣುವ ಅಂಶವೆಂದರೆ ಅವರ ಸಾಹಿತ್ಯಿಕ ಸಾಧನೆ. ಎಂಟು ಪುಟಗಳಷ್ಟು ವಿಸ್ತಾರವಾಗಿ ಹಬ್ಬಿರುವ ಮಿರ್ಜಿಯವರ ವ್ಯಕ್ತಿಚಿತ್ರ ಒಂದೊಂದು ಪುಟದಲ್ಲೂ ಒಂದೊಂದು ಸಾಧನೆಯ ಮುಖವನ್ನು ಓದುಗರ ಮುಂದೆ ನಿಲ್ಲಿಸುತ್ತೆ. ಲೇಖಕರು ಮಿರ್ಜಿಯವರ ದೈತ್ಯ ಶಕ್ತಿಯನ್ನು, ದೈತ್ಯ ಕೆಲಸವನ್ನು ಆದ್ಯಂತವಾಗಿ ಗುರುತಿಸುವುದರ ಮೂಲಕ ಮಿರ್ಜಿಯವರ ವ್ಯಕ್ತಿತ್ವ ಓದುಗರಲ್ಲಿ ಅಳಿಸಿಹೋಗದಂತೆ ನೋಡಿಕೊಂಡಿದ್ದಾರೆ.

'ಮಾತೃಶ್ರೀ ರತ್ನಮ್ಮನವರು' ಸಾಧ್ವಿಮಣಿ, ಸದ್ಗುಣಶೀಲ ಸಂಪನ್ನೆ. ಕರ್ನಾಟಕದ ಪ್ರಸಿದ್ಧ ಪುಣ್ಯಕ್ಷೇತ್ರವಾದ ಧರ್ಮಸ್ಥಳ ಸರ್ವತೋಮುಖವಾಗಿ ಅಭಿವೃದ್ಧಿಯಾಗುವಲ್ಲಿ ಮಾತೃಶ್ರೀ ರತ್ನಮ್ಮನವರದು ಹಿರಿಯ ಪಾತ್ರ. ಯಾವ ವಿಶ್ವವಿದ್ಯಾನಿಲಯದಲ್ಲಿ ಕಲಿಯದಿದ್ದರೂ ಜೀವನವನ್ನೇ ಪಾಠಶಾಲೆಯಾಗಿ ಮಾಡಿಕೊಂಡು ಕಲಿತವರು. ಸಮಾಜ ಸೇವೆಯಲ್ಲಿ, ದಾನ ಧರ್ಮಗಳಲ್ಲಿ ರತ್ನಮ್ಮನವರದು ಎತ್ತಿದ ಕೈ. ಸಾಮೂಹಿಕ ವಿವಾಹಗಳನ್ನು ನಡೆಸುವುದರಲ್ಲಿ, ದೀನ ದಲಿತರಿಗೆ ಕೈಯೆತ್ತಿ ಕೊಡುವುದರಲ್ಲಿ, ಉಳುವವನಿಗೆ ಭೂಮಿಯನ್ನು ಬಿಟ್ಟು ಅವನನ್ನು ಒಡೆಯನನ್ನಾಗಿ ಮಾಡುವುದರಲ್ಲಿ ರತ್ನಮ್ಮನವರು ಹಾಕಿದ ಮಾದರಿ ಅನುಕರಣೀಯ ಹಾಗೂ ಶ್ಲಾಘನೀಯ. ಸ್ತ್ರೀ ಶಕ್ತಿಯ ಶ್ರೇಷ್ಠತೆ ಎಂತಹ ಮಹತ್ತಾದುದು ಹಾಗೂ ಉದಾರವಾದುದು ಎಂಬುದನ್ನು ಲೇಖಕರು ಅತ್ಯಂತ ಸರಳ ಮತ್ತು ಸುಂದರ ಮಾತುಗಳಲ್ಲಿ ಬಿತ್ತರಿಸಿದ್ದಾರೆ. ರತ್ನಮ್ಮನವರು ಪ್ರತ್ಯಕ್ಷವಾಗಿ ಒಂದು ಅಭಿವೃದ್ಧಿಗೊಳಿಸಿದಂತೆ ಮೇಲುನೋಟಕ್ಕೆ ಕಾಣಬಹುದು. ಆದರೆ ಆ ಕ್ಷೇತ್ರದಿಂದ

ನಡೆಯುವ ರಚನಾತ್ಮಕ ಕೆಲಸಗಳು ನಾಡಿಗೆ ಬೆಳಕು ನೀಡುವಂತವುಗಳಾಗಿರುವುದರಿಂದ ಮಾತೃಶ್ರೀ ರತ್ನಮ್ಮನವರ ಸೇವೆ ಪರೋಕ್ಷವಾಗಿ ನಾಡಿಗಾಗುತ್ತದೆ. ಅದನ್ನು ಲೇಖಕರು ಸ್ಪಷ್ಟವಾಗಿ ಗುರುತಿಸಿದ್ದಾರೆ.

'ಡಾ॥ ಪು. ತಿ. ನ. ನಾನು ಕಂಡಂತೆ' ಪ್ರಬಂಧದಲ್ಲಿ ಕನ್ನಡ ನವೋದಯ ಮಾರ್ಗಪ್ರವರ್ತಕರಲ್ಲಿ ಒಬ್ಬರಾದ ಪು. ತಿ. ನರಸಿಂಹಾಚಾರ್ ಅವರ ವ್ಯಕ್ತಿಚಿತ್ರವಿದೆ. ಪು. ತಿ. ನ. ಅವರ ಸಹಜ ಸ್ವಭಾವ, ಕವಿತಾ ಶಕ್ತಿ, ಅನುಪಮವಾದ ಪಾಂಡಿತ್ಯಗಳೆಲ್ಲ ಇಲ್ಲಿ ಒಂದರ ಹಿಂದೊಂದರಂತೆ ಮೇಳವಿಸಿ ಕವಿ ಪು. ತಿ. ನ. ಅವರ ಚಿತ್ರವನ್ನು ಕಣ್ಣಿಗೆ ಕಟ್ಟುವಂತೆ ಮಾಡುತ್ತವೆ. ಲೇಖಕಿಯೇ ಹೇಳುವಂತೆ ಪು. ತಿ. ನ. ಅವರನ್ನು ಕುರಿತ ಬರವಣಿಗೆಗೆ ಬಿ. ಎಂ. ಶ್ರೀ ಯವರು ತರಗತಿಗಳಲ್ಲಿ ಪು. ತಿ. ನ. ಬಗ್ಗೆ ಹೇಳುತ್ತಿದ್ದ ಮಾತುಗಳು. ಈ ಮಾತುಗಳು ಕಮಲಾ ಹಂಪನಾ ಅವರನ್ನು ಪು. ತಿ. ನ. ಅವರ ಬಗ್ಗೆ ಬರೆಯುವಂತೆ ಪ್ರೇರೇಪಿಸಿ ಲೇಖಣಿ ಹಿಡಿಸಿದರೂ ಪು. ತಿ. ನ. ಅವರ ಬಗ್ಗೆ ಸಮಗ್ರವೆನ್ನಿಸುವ ಹಾಗೆ ಬರೆಸದೇ ಇರುವುದು ವಿಷಾದದ ಸಂಗತಿ. ಪು. ತಿ. ನ. ನಮ್ಮ ಸಾಹಿತ್ಯದಲ್ಲಿ ವಿಶೇಷವಾಗಿ ಉಳಿದಿರುವುದು ಅವರ ಗೀತರೂಪಕಗಳಿಂದ. ಆದರೂ ಗೀತರೂಪಕಗಳ ಮೂಲಕ ಪು.ತಿ.ನ. ಅವರನ್ನು ಚಿತ್ರಿಸುವಲ್ಲಿ ಸ್ವಲ್ಪಮಟ್ಟಿಗೆ ಹಿಂದೆ ಸರಿದಿದ್ದಾರೆ ಎಂದು ಹೇಳಬಹುದು. ಆದರೆ ಪು. ತಿ. ನ. ಅವರನ್ನು ಒಬ್ಬ ಕವಿಯಾಗಿ ನೋಡಿದಾಗ ಕಮಲಾ ಹಂಪನಾ ಅವರು ಪು. ತಿ. ನ. ಅವರ ವ್ಯಕ್ತಿಚಿತ್ರದಲ್ಲಿ ಒಂದು ಸುಸಂಬದ್ಧತೆಯನ್ನು ಕಾಪಾಡಿಕೊಂಡು ಬಂದು ಪು. ತಿ. ನ. ಅವರ ಸಾತ್ವಿಕ ಮೂರ್ತಿಯನ್ನು ನಮ್ಮ ಮನದಲ್ಲಿ ಅಚ್ಚೊತ್ತಿದಂತೆ ನಿಲ್ಲಿಸುವುದರಲ್ಲಿ ಯಶಸ್ವಿಯಾಗಿದ್ದಾರೆ.

ಇಲ್ಲಿ ಕಂಡುಬರುವ ಹತ್ತು ವ್ಯಕ್ತಿಗಳು ಒಬ್ಬೊಬ್ಬರು ಒಂದೊಂದು ಕ್ಷೇತ್ರದಲ್ಲಿ ಎತ್ತರಕ್ಕೆ ಏರಿದವರು. ಡಾ॥ ಇಡಾ ಸ್ಕಡ್ಡರ್, ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ, ದಿಟ್ಟ ಹೆಣ್ಣು ಕಸ್ತೂರಿ ಬಾ, ಮಾತೃಶ್ರೀ ರತ್ನಮ್ಮನವರು. ಈ ನಾಲ್ವರನ್ನು ಬಿಟ್ಟರೆ ಉಳಿದೆಲ್ಲ ವ್ಯಕ್ತಿಗಳು ಕನ್ನಡ ನಾಡು ನುಡಿಗಳ ಪುರೋಭಿವೃದ್ಧಿಗೆ ಶ್ರಮಿಸಿದವರೆ. ನಾಡು, ನುಡಿಗಳ ಸೇವೆಯ ಸಾಣೆಕಲ್ಲಿನಲ್ಲಿ ತಮ್ಮನ್ನು ಗಂಧದ ಕೊರಡಿನಂತೆ ತಿಕ್ಕಿಕೊಂಡು ನಾಡಿನುದ್ದಗಲಕ್ಕೂ ತಮ್ಮ ಪರಿಶ್ರಮದ ಪರಿಮಳವನ್ನು ಬೀರಿದ್ದಾರೆ. ಇಂತಹ ತ್ಯಾಗಮಯ ಜೀವಿಗಳ ವ್ಯಕ್ತಿತ್ವದ ಚಿತ್ರಣವಿರುವ ಈ ಕೃತಿಗೆ ಕಮಲಾ ಹಂಪನಾ ಅವರು ಇಟ್ಟಿರುವ 'ಮುಡಿಮಲ್ಲಿಗೆ' ಹೆಸರು ಸಾರ್ಥಕವಾಗಿದೆ. ಇವರೆಲ್ಲ ನಾಡನ್ನು ಕಟ್ಟುವ, ಬೆಳೆಸುವ ಕೆಲಸದಲ್ಲಿ ನಿಷ್ಕಾಮ ಕರ್ಮಯೋಗಿ

ಗಳಂತೆ ದುಡಿದು ದಣಿದಿದ್ದಾರೆ. ಇವರ ಎತ್ತರದ ವ್ಯಕ್ತಿತ್ವ ಗರಿಗೆದರುವ ಗದ್ಯದಲ್ಲಿ ದಾಖಲಾಗಿದೆ. ಕೃತಿಯ ಅಂತಸ್ಸತ್ವವೆನಿಸುವ ಈ ಎಲ್ಲರ ಅವ್ಯಾಹತ ಜೀವನಕ್ರಮ ವೈವಿಧ್ಯಮಯವಾದುದು. ಕನ್ನಡಿಗರ ಹೃದಯದಲ್ಲಿ ಅಚಲ ವಾಗಿ ನೆಲಸುವಂತಹುದು. ಇವರೆಲ್ಲರೂ ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿಗಳ ಬಗ್ಗೆ ಕನ್ನಡಿಗರಲ್ಲಿ ಆಸಕ್ತಿ, ಅಭಿಮಾನಗಳನ್ನು ಉಕ್ಕಿಸಿದವರು. ಜನತೆಯಲ್ಲಿ ಸ್ವಾಭಿಮಾನ ಕೆರಳಿಸಿ ದೇಶಪ್ರೇಮವನ್ನು ಅರಳಿಸಿದ ಮಹಾನಾಯಕರು. ಜನಸಾಮಾನ್ಯರ ಮಧ್ಯೆ ಸೌಹಾರ್ದದ ಬೆಸುಗೆಯಾದವರು. ಕಮಲಾ ಹಂಪನಾ ಅವರು ಇವರುಗಳ ಬದುಕು, ಬರಹಗಳನ್ನು, ಸಂಸ್ಕೃತಿ ಸಾಹಿತ್ಯ ಪರಂಪರೆ ಗಳನ್ನು ಗುರುತಿಸುವುದರ ಮೂಲಕ ಈ ವ್ಯಕ್ತಿಗಳ ಬಗೆಗೆ ಇನ್ನೂ ಹೆಚ್ಚಿನ ಮಟ್ಟದಲ್ಲಿ ತಿಳಿದುಕೊಳ್ಳುವ ಕುತೂಹಲವನ್ನು ಮೂಡಿಸಿದ್ದಾರೆ. ಗಣ್ಯರ ವೈವಿಧ್ಯಮಯವಾದ ಬದುಕಿನ ಹಿನ್ನೆಲೆಯಲ್ಲಿ ಅವರ ಹಿರಿಮೆ ಗರಿಮೆಗಳನ್ನು ದಾಖಲಿಸುವ ರೀತಿ ವಿಶಿಷ್ಟವಾಗಿದೆ. ಕನ್ನಡ ಸಾಹಿತ್ಯದಲ್ಲಿ ಇಂತಹ ವ್ಯಕ್ತಿ ಚಿತ್ರಗಳ ಸಂಕಲನಗಳು ವಿರಳ. ನಮ್ಮಲ್ಲಿ ರಾಷ್ಟ್ರಪ್ರೇಮವನ್ನು ಸಂಸ್ಕೃತಿಯ ಬಗೆಗಿನ ಪ್ರೀತಿಯನ್ನು ಹೆಚ್ಚಿಸುವ ಇಂತಹ ಮಹಾನುಭಾವರ ವ್ಯಕ್ತಿಚಿತ್ರಗಳು ಹೆಚ್ಚು ಪ್ರಕಟವಾಗಿಲ್ಲದ ಸಂದರ್ಭದಲ್ಲಿ ಅಂಥದ್ದರ ಅಗತ್ಯವನ್ನು ಈ ಕೃತಿ ಎತ್ತಿಹಿಡಿಯುತ್ತದೆ. ಇಂತಹ ಸಾಹಿತ್ಯ ಪ್ರಕಾರಕ್ಕೆ ಕೈಹಾಕಿ ಅಂತಹ ಸಾಹಿತ್ಯದ ಅಗತ್ಯವನ್ನು ಪೂರೈಸುತ್ತಿರುವ ಕಮಲಾ ಹಂಪನಾ ಕನ್ನಡದಲ್ಲಿ ಬಹುಕಾಲ ಉಳಿಯುವಂತಹ ಯಶಸ್ವೀ ಲೇಖಕಿಯಾಗುತ್ತಾರೆ.

ಅನೇಕಾಂತವಾದ

ಕೆ. ಪುಟ್ಟಯ್ಯ

ಕಮಲಾ ಹಂಪನಾ ಅವರ 'ಅನೇಕಾಂತ ವಾದ' ಕೃತಿಯು ಒಂದು ಕವನ ಮತ್ತು ಜೈನಧರ್ಮಕ್ಕೆ ಸಂಬಂಧಿಸಿದ ಹದಿ ಮೂರು ಲೇಖನಗಳ ಹೊತ್ತಿಗೆ (ಇದ ರಲ್ಲಿ ಒಂದು ಇಂಗ್ಲಿಷ್ ಲೇಖನವೂ ಸೇರಿದೆ). ಈ ಸಂಕಲನ ಗ್ರಂಥದಲ್ಲಿ ಮುಖ್ಯವಾಗಿ ಮೂರು ಬಗೆಯ ಬರಹ ಗಳಿವೆ. ಒಂದು: ಜೈನಧರ್ಮದ ಇತಿಹಾಸದಲ್ಲಿ ಆಗಿಹೋದ ಮಹಾನ್ ಚೇತನಗಳ ಜೀವನ ಚಿತ್ರಗಳು. ಎರಡು: ಜೈನ ಆಚಾರಾಂಗ-ವಿಚಾ ರಾಂಗಗಳಿಗೆ ಸಂಬಂಧಿಸಿದ ತತ್ವಜಿಜ್ಞಾ ಸೆಗೆ ಸಂಬಂಧಿಸಿದವು. ಮೂರನೆಯ ಗುಂಪಿನವು ಜೈನಧರ್ಮದ ಪೂರ್ವ ವೈಭವಗಳಿಗೆ ಸಂಬಂಧಿಸಿದ ಸಂಶೋಧ ನಾತ್ಮಕ ಬರಹಗಳು. ಇಲ್ಲಿಯ ಬರಹ ಗಳಲ್ಲಿ ಮೇಲುನೋಟಕ್ಕೆ ವೈವಿಧ್ಯತೆ ಕಾಣಿಸಿಕೊಂಡರೂ ಜೈನಧರ್ಮದ ಸಾಮಾನ್ಯ ಭೂಮಿಕೆಯಲ್ಲಿ ಎಲ್ಲಾ ಲೇಖನಗಳೂ ನೆಲೆಗಾಣುವುದರಿಂದ

ಇವುಗಳನ್ನು ಒಂದು ಸಂಕಲನ ಗ್ರಂಥವಾಗಿ ಪ್ರಕಟಗೊಳಿಸಿರುವುದು ಔಚಿತ್ಯ ಪೂರ್ಣವಾಗಿದೆ.

ಕೃತಿಯ ಮೊದಲ ಲೇಖನ 'ಅತ್ತಿಮಬ್ಬೆ'. ಇದು ಜಿ. ಬ್ರಹ್ಮಪ್ಪನವರ 'ದಾನಚಿಂತಾಮಣಿ ಅತ್ತಿಮಬ್ಬೆ' ಎಂಬ ಕಾದಂಬರಿಗೆ ಬರೆದ ಮುನ್ನುಡಿ. ಅತ್ತಿಮಬ್ಬೆಯ ಬದುಕಿನ ಸಮಗ್ರ ಚಿತ್ರ ರನ್ನನ 'ಅಜಿತಪುರಾಣ'ದಲ್ಲಿ ದೊರೆಯುತ್ತದೆ. ಕಾದಂಬರಿಯ ನಿರ್ವಹಣೆಗೆ ಆಧಾರ ರನ್ನನ ಕೃತಿಯೇ. ಕಮಲಾ ಹಂಪನಾ ಅವರ ಈ ಮುನ್ನುಡಿ ಲೇಖನ ಅತ್ತಿಮಬ್ಬೆಯ ಬದುಕನ್ನು ಸಂಶೋಧನೆಯ ಒರೆಯಿಂದ ಪರೀಕ್ಷಿಸಿದ ಪರಿಯಲ್ಲ, ಆ ಸಾಧ್ವಿಯ ಬದುಕಿನ ಹಿರಿತನವನ್ನು ಪರಿವೀಕ್ಷಿಸಿದ ರೀತಿ ಇಲ್ಲಿದೆ. ಹೀಗೆಂದ ಮಾತಿಗೆ ಬರಹ ಕೇವಲ ಹೊಗಳಿಕೆಯ ಹಂತದಲ್ಲಿದೆ ಎಂದು ಅರ್ಥವಲ್ಲ. ಅತ್ತಿಮಬ್ಬೆ ಜೈನ ಪುರಾಣಗಳನ್ನು ಪ್ರತಿಮಾಡಿಸಿ ಹಂಚಿದ್ದು, ರನ್ನನಿಗೆ ಆಶ್ರಯನೀಡಿ ಪ್ರೋತ್ಸಾಹಿಸಿದ್ದು ಮುಂತಾದ ಸಂಗತಿಗಳನ್ನು ಪ್ರಸ್ತಾಪಿಸಿರುವುದರಿಂದ ಆಕೆಯ ಬದುಕಿನ ಹಿರಿಮೆಯ ಸಾಮಾನ್ಯ ಚಿತ್ರ ಒಂದು ಅವಗಾಹನೆಗೆ ಬರುವಂತಿದೆ. "ಅತ್ತಿಮಬ್ಬೆಯ ಬದುಕೇ ಒಂದು ಬೃಹತ್ ಕಾವ್ಯ! ಸ್ತ್ರೀರತ್ನಗಳಲ್ಲಿ ಆಕೆ ನಾಯಕರತ್ನ...ರಾಗದ ಸೆಳೆತವನ್ನೂ ಭೋಗದ ಎಳೆತವನ್ನೂ ಮೆಟ್ಟಿನಿಂತು ಯೋಗ ತ್ಯಾಗಗಳ ಋಜುಮಾರ್ಗದಲ್ಲಿ ಅನನುಕರಣೀಯವಾಗಿ ಬಾಳಿ ಬೆಳಗಿದ ಕರ್ನಾಟಕದ ವೀರ ವಿರಾಗಿಣಿ ಅತ್ತಿಮಬ್ಬೆ..." ಇಂತಹ ರಂಜಕ ನಿರೂಪಣಾ ವಿಧಾನ ಅತ್ತಿಮಬ್ಬೆಯ ಬದುಕಿನ ಸೂಕ್ಷ್ಮ ವಿವರಗಳನ್ನು ತಿಳಿಯುವ ಕುತೂಹಲವನ್ನು ಓದುಗನಲ್ಲಿ ಉದ್ದೀಪನಗೊಳಿಸಬಲ್ಲದು—ಮುನ್ನುಡಿಯ ಉದ್ದೇಶವೂ ಇದೇ, ಈ ರೀತಿಯ ಶೈಲಿ ಕಾದಂಬರಿ ಓದುಗನಿಗೊಂದು ಸೂಕ್ತ ಪ್ರವೇಶವನ್ನು ಒದಗಿಸಬಲ್ಲುದು. ಸಂಶೋಧನೆಯ ಭಾಷೆಯ ದೃಷ್ಟಿಯಿಂದ ಸೂಕ್ತವಲ್ಲದುದು ಮುನ್ನುಡಿಯ ದೃಷ್ಟಿಯಿಂದ ಔಚಿತ್ಯಪೂರ್ಣವಾಗಬಲ್ಲದೆಂಬುದಕ್ಕೆ ಈ ಪ್ರಬಂಧ ಉತ್ತಮ ನಿದರ್ಶನವಾಗಿದೆ. "ಕರ್ನಾಟಕದ ಜೈನ ಇತಿಹಾಸವನ್ನು ಯಾರಾದರೂ ಒಬ್ಬರು ಐತಿಹಾಸಿಕ ಆಧಾರಗಳಿಂದ ಅಗತ್ಯ ಬರೆಯಬೇಕು" ಎಂಬ ಲೇಖಕಿಯ ಸೂಚನೆ 'ಕಾದಂಬರಿ' ಪ್ರಕಾರದ ಮಿತಿಯನ್ನು ಸೂಚಿಸುವುದರ ಜೊತೆಗೆ ಸಂಶೋಧನೆಯ ಅಗತ್ಯವನ್ನು ಮನಗಾಣಿಸುವ ಪ್ರಯತ್ನ ಮಾಡಿದೆ.

'ಚಾವುಂಡರಾಯನ ಗುರುಗಳು' ಲೇಖನದಲ್ಲಿ ಅಜಿತಸೇನಾಚಾರ್ಯ ಮತ್ತು ನೇಮಿಚಂದ್ರಾಚಾರ್ಯರುಗಳ ಬದುಕಿನ ಹಿರಿಮೆಯನ್ನು ಗುರುತಿಸುವ ಪ್ರಯತ್ನವಿದೆ. ಈ ಆಚಾರ್ಯದ್ವಯರು ಹತ್ತನೆಯ ಶತಮಾನದಲ್ಲಿ ಕರ್ನಾಟಕದ ಇತಿಹಾಸ ಮತ್ತು ಸಾಹಿತ್ಯ ಕ್ಷೇತ್ರಗಳಿಗೆ ನೀಡಿದ ಸ್ಫೂರ್ತಿ-ಕಾಣಿಕೆ

ಗಳನ್ನು ಗುರುತಿಸಲಾಗಿದೆ. ಗಂಗರಾಜ ವಂಶದ ಮಾರಸಿಂಹ, ರಾಚಮಲ್ಲ ಮತ್ತು ಗಂಗರ ಮಹಾಮಂತ್ರಿ ಚಾವುಂಡರಾಯ–ಇವರುಗಳು ಬದುಕನ್ನು ತಿದ್ದಿ ಸಾರ್ಥಕವಾದ ಬಾಳನ್ನು ಬಾಳುವಂತೆ ಮಾಡಿದ ಈ ಗುರುದ್ವಯರ ಹಿರಿಮೆ ಅಪ್ರತಿಮವಾದುದು. ಕೂಗೆ ಬ್ರಹ್ಮದೇವರ ಕಂಬದ ಶಾಸನ, ರನ್ನನ ಅಜಿತಪುರಾಣ, ನಾಗವರ್ಮನ 'ಛಂದೋಂಬುಧಿ'ಗಳ ಆಧಾರದಿಂದ ಅಜಿತ ಸೇನಾಚಾರ್ಯರ ನಿರ್ಮಲ ಬದುಕಿನ ಪುನಾರಚನೆಯ ಪ್ರಯತ್ನವನ್ನು ಮಾಡ ಲಾಗಿದೆ. "ಆರ್ಯಸೇನರೆಂಬ (ಆರ್ಯನಂದಿ) ಮುನಿಗಳ ಶಿಷ್ಯರಾದ ಅಜಿತ ಸೇನರು ಹತ್ತನೆಯ ಶತಮಾನದ ಉನ್ನತ ಧರ್ಮಗುರುಗಳು, ಕಾವ್ಯಗುರು ಗಳು" ಎಂಬ ನಿಲುವಿಗೆ ಬರಲು ಸಾಕಷ್ಟು ಆಧಾರಗಳನ್ನು ಲೇಖಕಿ ನೀಡಿದ್ದಾರೆ.

ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳ ಬಗ್ಗೆಯೂ ಇದೇ ಬಗೆಯ ಪ್ರಯತ್ನವಿದೆ. ನೇಮಿಚಂದ್ರರು ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳಲ್ಲಿ ಘನ ಪಂಡಿತರಾಗಿದ್ದರೆಂಬ ವಿಚಾರವನ್ನು ಮುಖ್ಯವಾಗಿ ಅವರ ಕೃತಿಗಳಿಂದಲೇ ಗುರುತಿಸಬಹುದಾಗಿದೆ. ಅವರ ಐದು ಕೃತಿಗಳಲ್ಲಿ 'ಗೊಮ್ಮಟ ಸಾರ' ಅತ್ಯಂತ ಜನಪ್ರಿಯವಾದ ಕೃತಿ. ಜೈನ ಧರ್ಮದ ತಾತ್ವಿಕ ಸಂಗತಿಗಳು ತಾರ್ಕಿಕವಾಗಿ ಅವರ 'ಗೊಮ್ಮಟ ಸಾರ'ದಲ್ಲಿ ನಿರೂಪಿತವಾಗಿವೆ.

ಈ ಆಚಾರ್ಯದ್ವಯರ ಬಗ್ಗೆ ಸಂಶೋಧಕರಿಗೆ ಕೆಲವೊಂದು ಸಮಸ್ಯೆ ಗಳನ್ನು ಲೇಖನದಲ್ಲಿ ಬಿಟ್ಟಂತೆ ತೋರುತ್ತದೆ. ಅಜಿತಸೇನರ ಗುರು ಆರ್ಯ ಸೇನರೇ ಆರ್ಯನಂದಿ ಎಂಬ ನಿಲುವಿಗೆ ಪುರಾವೆಗಳನ್ನು ಉಲ್ಲೇಖಿಸಬೇಕಿತ್ತು. ಹಾಗೆಯೇ "ಅಲಂಕಾರ ಶಾಸ್ತ್ರವನ್ನು ಕುರಿತು ವಿವೇಚಿಸುವ 'ಅಲಂಕಾರ ಚಿಂತಾಮಣಿ' ಎಂಬ ಶಾಸ್ತ್ರಗ್ರಂಥವನ್ನು ಜಿನಸೇನರಿಗೆ ಕೆಲವರು ಆರೋಪಿ ಸಿದ್ದಾರೆ. ಆದರೆ ಅದು ಅಜಿತಸೇನರ ಕೃತಿಯೆಂದು ತೋರುತ್ತದೆ ಅಥವಾ ಜಿನಸೇನ ಅಜಿತಸೇನರಿಬ್ಬರೂ ಸೇರಿ ಅದನ್ನು ಸಿದ್ಧಪಡಿಸಿರಬಹುದು" (ಪು. 9) ಎಂಬ ನಿರ್ಣಯಕ್ಕೆ ಆಧಾರಗಳನ್ನು ಒದಗಿಸದಿದ್ದುದು ಲೇಖನಕ್ಕೆ ಸ್ವಲ್ಪ ಮಟ್ಟಿನ ಮಿತಿಯನ್ನು ತಂದೊಡ್ಡಿದೆ. ಆದರೆ ಈ ಆಚಾರ್ಯರ ಹಿರಿಮೆಯನ್ನು ಮನಗಾಣಿಸುವಲ್ಲಿ ಸಾರ್ಥಕ್ಯವನ್ನು ಈ ಲೇಖನ ಪಡೆದುಕೊಂಡಿದೆ.

ಶ್ರೇಣಿಕ–ಚೇಟಕ ರಾಜದ್ವಯರು ಕ್ರಿಸ್ತಪೂರ್ವದಲ್ಲಿ ಜೈನಧರ್ಮ ಪ್ರಸಾರಕ್ಕೆ, ಅದು ಭರತವರ್ಷದಲ್ಲಿ ಸ್ಥಾಯಿಯಾಗಿ ನಿಲ್ಲುವುದಕ್ಕೆ ಕಾರಣರಾದ ರೆಂಬ ವಿವರಗಳು ಮೂರನೆಯ ಪ್ರಬಂಧದಲ್ಲಿವೆ. ಮಹಾವೀರನ ಕಾಲದ ರಾಜಕೀಯ ಇತಿಹಾಸದ ಸಾಮಾನ್ಯ ಹಿನ್ನೆಲೆಯನ್ನೂ ಇಲ್ಲಿ ಕಾಣಬಹುದು.

ಚೇಟಕನ ಹಿರಿಯ ಮಗಳಾದ ಪ್ರಿಯಕಾರಿಣಿ (ತ್ರಿಶಲೆ)ಯ ಮಗ ಮಹಾವೀರ. ಅವನ ಆರನೆಯ ಮಗಳಾದ ಚೇಲನಾದೇವಿಯ ಪತಿ ಶ್ರೇಣಿಕ. ಇವರಿಬ್ಬರೂ ಮಹಾವೀರನ ಸಂಬಂಧಿಗಳೇ. ಇಲ್ಲಿ ಗಮನಿಸಬಹುದಾದ ಇನ್ನೊಂದು ಸಂಗತಿಯೆಂದರೆ ರಾಜಾಶ್ರಯ ಮತ್ತು ರಾಜರುಗಳ ಪ್ರೋತ್ಸಾಹಗಳು ಒಂದು ಧರ್ಮದ ಉನ್ನತಿಗೂ ಕಾರಣವಾಗಬಹುದೆಂಬುದು. ಕ್ರಿಸ್ತಪೂರ್ವ ಆರನೆಯ ಶತಮಾನದಲ್ಲಿ ಆಗಿಹೋದ ಮಹಾನ್ ಆಚಾರ್ಯರುಗಳಲ್ಲಿ ಬುದ್ಧ ಮತ್ತು ಮಹಾವೀರರು ಮಾತ್ರ ಚಿರವಾಗಿ ನಿಲ್ಲಲು ಕಾರಣವೂ ಕೂಡ ಈ ರಾಜಕೀಯ ಪರಿಸ್ಥಿತಿಯೇ ಆಗಿದೆ.

'ಜೈನಧರ್ಮದಲ್ಲಿ ಕರ್ಮಸಿದ್ಧಾಂತ' ಎಂಬ ಲೇಖನದಲ್ಲಿ ಕರ್ಮಸ್ವರೂಪದ ಸ್ಥೂಲ ವಿವರಣೆಯಿದೆ. ಏಕೆಂದರೆ ದ್ರವ್ಯಪರಿಕಲ್ಪನೆ, ಸಪ್ತತತ್ವ ಇತ್ಯಾದಿಗಳ ಸಮಗ್ರ ಪರಿಶೀಲನೆಯಿಂದ ಕರ್ಮಸಿದ್ಧಾಂತದ ಸ್ಪಷ್ಟ ಪರಿಕಲ್ಪನೆ ಸಾಧ್ಯ. 'ಕರ್ಮ'ವನ್ನು ಅಜೀವದ್ರವ್ಯದಲ್ಲಿ ಜೈನ ಸಿದ್ಧಾಂತ ಸೇರಿಸುತ್ತದೆ. ಅದನ್ನು ಪುದ್ಗಲ ಎಂದು ಕರೆದಿರುವುದು ವಿಶಿಷ್ಟವಾದ ಅರ್ಥವ್ಯಾಪ್ತಿಯಲ್ಲಿ. ಪುದ್ಗಲದ್ರವ್ಯಕ್ಕೆ ರೂಪರಸಗಂಧಾದಿ ಗುಣಗಳನ್ನು ಹೇಳಿರುವುದನ್ನು ಲೇಖಕಿ ಸರಿಯಾಗಿ ಗ್ರಹಿಸಿದ್ದಾರೆ. ಅಂತೆಯೆ ಜೀವವನ್ನು ಜೈನಧರ್ಮ ದ್ರವ್ಯವೆಂದಿದೆ. ಜೀವದ್ರವ್ಯಕ್ಕೆ ಜ್ಞಾನ, ಸುಖದುಃಖಾನುಭವ ಇತ್ಯಾದಿ ಚೈತನ್ಯ ಗುಣಗಳಿರುವುದಾಗಿ ಕುಂದ ಕುಂದಾಚಾರ್ಯರ ಪಂಚಾಸ್ತಿಕಾಯದಲ್ಲಿಯೇ ಹೇಳಿದೆ. ವೈದಿಕ ಪರಿಕಲ್ಪನೆಯ ನಿರ್ಗುಣ ಬ್ರಹ್ಮ (ಆತ್ಮ)ದ ಕಲ್ಪನೆಯಲ್ಲಿ ಕರ್ಮಸಿದ್ಧಾಂತದ ಪ್ರತಿಪಾದನೆ ಜೈನ ಪರಿಕಲ್ಪನೆಯಂತೆ ಅಸಂಧಿಗ್ಧವಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಬದ್ಧಜೀವದ ರಾಗ–ದ್ವೇಷಾದಿ ಪ್ರವೃತ್ತಿಯಿಂದ ಕರ್ಮಬಂಧ, ಅಹಿಂಸಾದಿ ಸದ್ಗುಣಗಳಿಂದ ಕರ್ಮ ಮೋಕ್ಷದ ವಿವರಣೆ ತರ್ಕಬದ್ಧವಾಗುತ್ತದೆ. "ಕರ್ಮದಲ್ಲಿ ಎರಡು ವಿಧ. ಒಂದು ದ್ರವ್ಯಕರ್ಮ; ಇನ್ನೊಂದು ಭಾವಕರ್ಮ. ಜೀವನೊಡನೆ ಬದ್ಧವಾದ ಕರ್ಮಕಣಗಳಿಗೆ ದ್ರವ್ಯಕರ್ಮವೆಂದೂ ದ್ರವ್ಯಕರ್ಮಗಳ ಪ್ರಭಾವದಿಂದ ಜೀವನಲ್ಲಿ ಉಂಟಾಗುವ ರಾಗ ದ್ವೇಷ ಮೊದಲಾದ ಪರಿಣಾಮಗಳಿಗೆ ಭಾವಕರ್ಮವೆಂದೂ ಹೆಸರು. ಭಾವಕರ್ಮ ದ್ರವ್ಯಕರ್ಮಕ್ಕೆ ಹಾಗೂ ದ್ರವ್ಯಕರ್ಮ ಭಾವಕರ್ಮಕ್ಕೆ ಕಾರಣವಾಗಿದೆ" (ಪುಟ 19). ಈ ವಿವರಣೆ ಬದ್ಧಜೀವದ ಸ್ವರೂಪವನ್ನು ಸರಿಯಾಗಿ ಗ್ರಹಿಸುವುದರಿಂದ ಮಾತ್ರ ಸಾಧ್ಯ. ಈ ಪ್ರಬಂಧದಲ್ಲಿ ಬರುವ ಕರ್ಮಬಂಧದ ನಾಲ್ಕು ವಿಧಗಳು, ಕರಣ, ಎಂಟು ಕರ್ಮಗಳು, ಭವ, ಅಭವ್ಯ, ಕಾಲಲಬ್ಧಿ ಇತ್ಯಾದಿ ಪಾರಿಭಾಷಿಕ ಪದಗಳಿಗೆ ಇರುವ ಅರ್ಥವ್ಯಾಪ್ತಿ ಜೈನ ದರ್ಶನದ ಅನುಸಂಧಾನ ಇಲ್ಲದವರಿಗೆ ಸುಲಭಗ್ರಾಹ್ಯವಾಗುವಂತಿಲ್ಲ. ಆದರೂ ಜೈನ

ಸಿದ್ಧಾಂತದ ಚೌಕಟ್ಟಿನಲ್ಲಿ ಕರ್ಮಸಿದ್ಧಾಂತದ ಸಾಮಾನ್ಯ ನಿರೂಪಣೆ ಸಂಕ್ಷಿಪ್ತವಾಗಿ ಇಲ್ಲಿ ಮೂಡಿಬಂದಿದೆ.

'ಜೈನಧರ್ಮ ಮತ್ತು ಮಹಿಳೆ' ಹಾಗೂ 'ಕಂತಿಯರು' ಪ್ರಬಂಧಗಳಲ್ಲಿ ಜೈನಧರ್ಮ ಸ್ತ್ರೀಯರನ್ನು ನಡೆಸಿಕೊಂಡ ಬಗೆ ಮತ್ತು ಜೈನಧರ್ಮಕ್ಕೆ ಸ್ತ್ರೀಯರ ಕೊಡುಗೆ–ಈ ಎರಡೂ ಸಂಗತಿಗಳ ನಿರೂಪಣೆ ಇದೆ. ಕ್ರಿಸ್ತಪೂರ್ವದಲ್ಲಿ ಜಗತ್ತಿನ ಇತಿಹಾಸದಲ್ಲೆಲ್ಲಿಯೂ ಸ್ತ್ರೀಯರಿಗೆ ಇಷ್ಟೊಂದು ಸ್ವಾತಂತ್ರ್ಯ ಮತ್ತು ಧಾರ್ಮಿಕ ವಿಧಿಗಳಲ್ಲಿ ಸಮಾನವಾಗಿ ಭಾಗವಹಿಸುವ ಹಕ್ಕುಗಳನ್ನು ಕೊಟ್ಟ ಉದಾಹರಣೆಗಳು ಅತಿ ವಿರಳ (ಮಾನವ ಶಾಸ್ತ್ರದ ದೃಷ್ಟಿಯಲ್ಲಿ ಮೂಲ ಜನಾಂಗ ಮಾತೃಪ್ರಧಾನ ವ್ಯವಸ್ಥೆಗೆ ಒಳಪಟ್ಟಿತ್ತು ಎಂಬ ವಾದವನ್ನು ಹೊರತುಪಡಿಸಿ ಮೇಲಿನ ಮಾತನ್ನು ಹೇಳಿದ್ದೇನೆ). ಈ ದೃಷ್ಟಿಯಿಂದ ಇವೆರಡೂ ಲೇಖನಗಳು ಮಹತ್ವವಾದುವು. ಸ್ತ್ರೀಯರನ್ನು ಅಪಾಯದಿಂದ ರಕ್ಷಿಸಬೇಕೆಂಬ ಜೈನಶಾಸನ, ತೀರ್ಥಂಕರರ ತಾಯಂದಿರಿಗೆ ಸಂದ ಗೌರವ, ಸ್ತ್ರೀಯರಿಗೆ ಎಲ್ಲ ಬಗೆಯ ವಿದ್ಯೆಯ ಸೌಲಭ್ಯವನ್ನು ಪ್ರಥಮಾನುಯೋಗ ಗ್ರಂಥದ ಆಧಾರದಿಂದ ಪ್ರತಿಪಾದಿಸಿರುವುದು–ಇವೆಲ್ಲ ಕಮಲಾ ಹಂಪನಾ ಅವರ ವಿಸ್ತೃತವಾದ ಅಧ್ಯಯನಕ್ಕೆ ಸಾಕ್ಷಿಯಾಗಿವೆ. ತೀರ್ಥಂಕರರ 'ಸಮವಸರಣ'ದಲ್ಲಿಯೂ ಮುಕ್ತಿಪಥವನ್ನು ಯಾವ ಜೀವವೂ ಅನುಸರಿಸಬಹುದೆಂಬ ಧಾರ್ಮಿಕ ಬೋಧೆಯನ್ನು ಕೇಳುವ ಅವಕಾಶ ಸ್ತ್ರೀಯರಿಗೂ ಇತ್ತು.

ಜೈನ ಶ್ವೇತಾಂಬರ ಪಂಥದಲ್ಲಿ ಸ್ತ್ರೀಯರೂ (ಪುರುಷಜನ್ಮವನ್ನು ಎತ್ತದೇ) ಮುಕ್ತಿಯನ್ನು ಪಡೆಯಬಹುದೆಂಬುದನ್ನು ಲೇಖಕಿ ಪ್ರತಿಪಾದಿಸಿದ್ದಾರೆ. ದಿಗಂಬರ ಜೈನ ಸಂಪ್ರದಾಯದಲ್ಲಿ ಜಾತರೂಪಧರರಾಗಿ ತಪಸ್ಸನ್ನಾಚರಿಸುವ ಸಾಧ್ಯತೆ ಸ್ತ್ರೀಯರಿಗಿಲ್ಲದಕಾರಣ ಮುಕ್ತಿಯನ್ನು (ಕೇವಲತ್ವವನ್ನು) ಸ್ತ್ರೀಯರು ಪಡೆಯಬಹುದೇ ಎಂಬ ವಿಷಯದಲ್ಲಿ ಸಂದಿಗ್ಧತೆ ಇದೆ. ಮಾಘಣಂದಿ ಆಚಾರ್ಯರ 'ಶಾಸ್ತ್ರ ಸಾರಸಮುಚ್ಚಯ'ದಲ್ಲಿ ಸ್ತ್ರೀಯರಿಗೆ ಮೋಕ್ಷ ಸಾಧ್ಯವಾಗದೆಂದು ಪ್ರತಿಪಾದಿಸಿರುವುದು ಸನ್ಯಾಸಧರ್ಮದ ಅತಿ ನಿಷ್ಠೆಯಿಂದಲೇ ಹೊರತು ಜೈನಧರ್ಮದ ಮೂಲ ಸ್ವರೂಪದಲ್ಲಿಯೇ ಈ ಅಭಿಪ್ರಾಯ ಇತ್ತೆಂದು ಹೇಳಲು ಬರುವುದಿಲ್ಲ. ನೇಮಿನಾಥಸ್ವಾಮಿಯ ವಧುವಾಗಬೇಕಿದ್ದ ರಾಜೀಮತಿ ಮೋಕ್ಷಕ್ಕೆ ಹೋದ ವಿವರ ಮಾಘಣಂದಿಯ ಅಭಿಪ್ರಾಯಕ್ಕೆ ವಿರುದ್ಧವಾಗಿದೆ. ಸ್ತ್ರೀಯರು ಮೋಕ್ಷಕ್ಕೆ ಹೋದ ಸೂಚನೆಗಳಿಗೆ ದಿಗಂಬರ ಸಂಪ್ರದಾಯದಲ್ಲಿಯೂ ಸಾಕ್ಷ್ಯಾಧಾರಗಳು ಸಾಕಷ್ಟಿವೆ.

ಶ್ರವಣ ಬೆಳಗೊಳದ ಸನಿಮತಿಗಂತಿ, ಶ್ರೀಮತಿ ಗಂತಿಯರು ಸನ್ಯಾಸನ ವಿಧಿಯಿಂದ ಮುಡುಪಿದ ಉಲ್ಲೇಖ, ಯಾಕಿನಿ ಮಹತ್ತರಾ ಸನ್ಯಾಸಿನಿ ಹರಿಭದ್ರ ಸೂರಿಯನ್ನು ವಾದದಲ್ಲಿ ಸೋಲಿಸಿದ್ದು ಮುಂತಾದ ಹಲವು ಉಲ್ಲೇಖಗಳನ್ನು ಉದಾಹರಿಸಿ ಜೈನಧರ್ಮದಲ್ಲಿ ಸ್ತ್ರೀಯರಿಗೆ ಪುರುಷಸಮಾನ ಸ್ಥಾನಮಾನಗಳಿದ್ದುದನ್ನೂ ರಾಜಸೂತ್ರವನ್ನು ಹಿಡಿದು ಆಡಳಿತ ನಡೆಸಿದ ವೀರರಮಣೀಯರ ವಿವರಗಳೊಂದಿಗೆ ಈ ಲೇಖನಗಳು ಪ್ರತಿಪಾದಿಸಿವೆ.

ಗುಂಡುಮಬ್ಬೆ ತನ್ನ ಪತಿ ನಾಗದೇವ ಮರಣಹೊಂದಿದಾಗ ಸತಿ ಅಥವಾ ಸಹಗಮನ ಆಚರಿಸಿದಳು. ಇದು ಮಾತ್ರ ಜೈನಧರ್ಮಕ್ಕೆ ಸಂಬಂಧಿಸಿದ ವಿಧಿಯಲ್ಲ. ಯಾವುದೇ ಜೈನ ಸಿದ್ಧಾಂತ ಗ್ರಂಥದಲ್ಲಿ ಸಹಗಮನವನ್ನು ಪ್ರತಿಪಾದಿಸಿಲ್ಲ. ಇದು ವೈದಿಕ ಪರಂಪರೆಯಿಂದ ಜೈನ ಸಮಾಜಕ್ಕೆ ನುಸುಳಿಕೊಂಡು ಬಂದ ಆಚಾರ.

ಪಾರ್ಶ್ವನಾಥ ತೀರ್ಥಂಕರರ ವಿಗ್ರಹಗಳ ಬಗೆಗಿನ ಲೇಖನದಲ್ಲಿ ಕಮಲಾ ಹಂಪನಾ ಅವರು ಕರ್ನಾಟಕದ ಉದ್ದಗಲಕ್ಕೂ ಕಾಣಸಿಗುವ ಪಾರ್ಶ್ವನಾಥ ವಿಗ್ರಹಗಳ ವೈಶಿಷ್ಟ್ಯ, ಪ್ರತಿಷ್ಠಾಪನ, ಕಾಲಾದಿಗಳನ್ನು ಸಂಗ್ರಹಿಸಿ ನಿರೂಪಿಸಿದ್ದಾರೆ. ಶಿಲ್ಪಶಾಸ್ತ್ರಗ್ರಂಥಗಳಲ್ಲಿ ಜಿನಬಿಂಬಗಳ ಸ್ವರೂಪವನ್ನು ವರ್ಣಿಸಿರುವುದನ್ನು ಇದಕ್ಕೆ ಹಿನ್ನೆಲೆಯಾಗಿ ವಿವೇಚಿಸಲಾಗಿದೆ. ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳ 'ತ್ರಿಲೋಕ ಸಾರ'ದಲ್ಲಿ ನಿರೂಪಿತವಾದ ಪ್ರಮಾಣದಲ್ಲಿ ಮಾತ್ರವಲ್ಲದೆ ಕರ್ನಾಟಕದಲ್ಲಿ ದೊರೆತ ಪಾರ್ಶ್ವನಾಥರ ಮೂರ್ತಿಗಳು ಒಂದು ಅಡಿಯಿಂದ ಹದಿನಾರು ಅಡಿಯವರೆಗೆ ವಿವಿಧ ಅಳತೆಗಳಲ್ಲಿವೆ. ಇದಕ್ಕೆ ಕಾರಣಗಳ ಶೋಧದ ಅಗತ್ಯವನ್ನು ಲೇಖನದಲ್ಲಿ ಸೂಚಿಸಲಾಗಿದೆ. ಪ್ರಾಯಶಃ ಕನ್ನಡ ನಾಡಿನ ಶಿಲ್ಪಿಗಳು ಈ ಶಾಸ್ತ್ರಗ್ರಂಥಕ್ಕೆ ಮಾತ್ರ ಋಣಿಯಾಗಿಲ್ಲವೇನೋ? ಶಿಲ್ಪಿಗಳಿಗೆ ತಮ್ಮ ಕಲಾನೈಪುಣ್ಯವನ್ನು ವ್ಯಕ್ತಗೊಳಿಸಲು ಹೆಚ್ಚು ಅವಕಾಶವಿರುವುದು ಪಾರ್ಶ್ವನಾಥ ವಿಗ್ರಹಗಳ ಆಧಿಕ್ಯಕ್ಕೆ ಒಂದು ಕಾರಣವೆಂದು ಊಹಿಸಿರುವುದು ಸಮಂಜಸವಾಗಿದೆ.

'ಮರೆತುಹೋದ ಮಹಾಕ್ಷೇತ್ರಗಳು' ಒಂದು ಸಂಶೋಧನಾತ್ಮಕ ಪ್ರಬಂಧ. ಇದೇ ಪ್ರಬಂಧಕ್ಕೆ ಸಂಬಂಧಿಸಿದ ಕೋಪಣ, ಕೋಗಳಿ, ಬಂಕಾಪುರ ಮುಂತಾದ ಕ್ಷೇತ್ರಗಳ ಕುರಿತು ಸಾಹಿತ್ಯ ಮತ್ತು ಶಾಸನಗಳ ಉಲ್ಲೇಖಗಳನ್ನು ಮಾತ್ರ ಗಮನಿಸಿರುವುದು ಸ್ಪಷ್ಟವಿದೆ. ಆ ಪ್ರದೇಶಗಳ ಕ್ಷೇತ್ರಕಾರ್ಯದೊಂದಿಗೆ ಪರಿಶೀಲನೆಯಿಂದ ಇದೊಂದು ಪಿಎಚ್.ಡಿ. ನಿಬಂಧಕ್ಕೆ ಸಾಕಾಗುವಷ್ಟು ಮಾಹಿತಿ ಈ ಪ್ರಬಂಧದಲ್ಲಿದೆ. ಶ್ರವಣಬೆಳಗೊಳಕ್ಕೆ ದೊರೆತಂತೆ

ರಾಜವಂಶದವರ (ಗಂಗರಾಜರಂತೆ) ನಿರಂತರ ರಕ್ಷಣೆ ಕೋಪಣ (ಕೊಪ್ಪಳ)ಕ್ಕೂ ಇರದಿದ್ದದ್ದು ಅದು ಜೈನ ಸಾಂಸ್ಕೃತಿಕ ಕೇಂದ್ರವಾಗಿ ಉಳಿಯದಿರಲು ಕಾರಣ ವೆಂಬ ಅಭಿಪ್ರಾಯ ನಿಜಕ್ಕೂ ಇತಿಹಾಸದ ವಾಸ್ತವ ಸತ್ಯವಾಗಿದೆ.

'ಕರ್ನಾಟಕದಲ್ಲಿ ಜೈನಧರ್ಮ' ಪ್ರಬಂಧವೂ ಕನ್ನಡ ಸಂಸ್ಕೃತಿ–ಸಾಹಿತ್ಯ ಗಳಿಗೆ ಜೈನಧರ್ಮದ ಕೊಡುಗೆಗಳನ್ನು ನಿರೂಪಿಸುತ್ತದೆ. ಕರ್ನಾಟಕದ ಇತಿಹಾಸದ ವೈಶಿಷ್ಟ್ಯವನ್ನು ಗುರುತಿಸುವಲ್ಲಿ ಹಲವು ಶತಮಾನಗಳವರೆಗೆ ಜೈನ ಧರ್ಮವು ಕರ್ನಾಟಕದ ರಾಷ್ಟ್ರೀಯ ಧರ್ಮವಾಗಿತ್ತೆಂಬುದು ವಸ್ತುನಿಷ್ಠ ಐತಿಹಾಸಿಕ ದೃಷ್ಟಿಯಾಗಿದೆ, ಕನ್ನಡ ಸಾಹಿತ್ಯ ಜೈನಧರ್ಮದಿಂದಲೂ ಜೈನ ಧರ್ಮ ಕನ್ನಡ ಸಾಹಿತ್ಯದಿಂದಲೂ ಶ್ರೀಮಂತವಾಗಿರುವ ವಿವರಗಳನ್ನು ಈ ಪ್ರಬಂಧದಲ್ಲಿ ವಿಸ್ತೃತವಾಗಿ ವಿವರಿಸಲಾಗಿದೆ.

'ಹಳಗನ್ನಡ ಸಾಹಿತ್ಯದಲ್ಲಿ ಬಾಹುಬಲಿ' ಎಂಬ ಪ್ರಬಂಧ ಈ ಸಂಕಲನದ ಉಳಿದ ಬರಹಗಳಿಗಿಂತ ಬೇರೆಯಾದುದು. ಬೇರೆ ಬೇರೆ ಕವಿಗಳು ಬಾಹು ಬಲಿಯ ಉನ್ನತ ವ್ಯಕ್ತಿತ್ವವನ್ನು ಚಿತ್ರಿಸಿದ ಪರಿಯನ್ನು ಇಲ್ಲಿ ಪರಿಶೀಲಿಸಲಾಗಿದೆ. ಬೊಪ್ಪಣ್ಣ ಕವಿ ಬಾಹುಬಲಿಯ ಮೂರ್ತಿಯನ್ನು ಕುರಿತು ಚಿತ್ರಿಸಿದರೆ ಪಂಪ, ರತ್ನಾಕರರಂತಹ ಕವಿಗಳು ಭರತ–ಬಾಹುಬಲಿ ಪ್ರಸಂಗದ ಹಿನ್ನೆಲೆಯಲ್ಲಿ ಬಾಹು ಬಲಿಯ ಧೀಮಂತ ವ್ಯಕ್ತಿತ್ವವನ್ನು ಕಲಾತ್ಮಕವಾಗಿ ಅಭಿವ್ಯಕ್ತಗೊಳಿಸಿದ್ದಾರೆ. ಪಂಪನ ಚಿತ್ರಣ ಉಳಿದೆಲ್ಲ ಕವಿಗಳಿಗೂ ಅನುಸರಣೀಯ ಎಂಬ ವಿಚಾರವನ್ನು ಮನಗಾಣುವಂತಿದೆ.

'ಜೈನಧರ್ಮದಲ್ಲಿ 'ನೋಂಪಿ'ಗಳು' ಜೈನ ಆಚಾರಾಂಗಕ್ಕೆ ಸಂಬಂಧಿಸಿದ ಬರಹ. ನೋಂಪಿ ವೈದಿಕ ಧರ್ಮಪಂಥಗಳಲ್ಲಿ ವ್ರತಗಳಿದ್ದಂತೆ. ಆದರೆ ನೋಂಪಿಯ ಉದ್ದೇಶ ಮತ್ತು ಫಲಗಳು ವೈದಿಕ ಪರಿಕಲ್ಪನೆಯಿಂದ ಬೇರೆ ಯಾದುದು. ಜೈನರ ಪ್ರಕಾರ ವ್ರತ ಪೂಜಾದಿಗಳಿಂದ ದೇವರು ಏನನ್ನೂ ಕೊಡುವುದಿಲ್ಲ. ಆದರೆ ಅಂತಹ ಆಚರಣೆಯ ಕಾಲದಲ್ಲಿ ಶುಭ ಪರಿಣಾಮವು ಉಂಟಾಗಿ ಆತ್ಮಕ್ಕೆ ಕರ್ಮಬಂಧ ನಿಂತು, ಕರ್ಮಕ್ಷಯ ಪ್ರಾಪ್ತವಾಗುತ್ತದೆ. ಹೀಗಾಗಿ ಆತ್ಮೋನ್ನತಿ ತಾನೇತಾನಾಗಿ ಸಂಭವಿಸುತ್ತದೆ. ಈ ಬಗೆಯ ಸೂಕ್ಷ್ಮ ಸಂಗತಿಯನ್ನು ಈ ಪ್ರಬಂಧ ವಿವರವಾಗಿ ನಿರೂಪಿಸುತ್ತದೆ. ನೋಂಪಿಯ ಮಹತ್ವವನ್ನು ಜನರಿಗೆ ಮನದಟ್ಟು ಮಾಡಲು ಹುಟ್ಟಿದ ನೋಂಪಿಯ ಕಥೆಗಳು ಸಾಹಿತ್ಯಕ್ಷೇತ್ರಕ್ಕೂ ಕೊಡುಗೆಯಾಗಿರುವುದನ್ನು ಗುರುತಿಸಲಾಗಿದೆ.

'ಅನೇಕಾಂತವಾದ' ಈ ಸಂಕಲನದಲ್ಲಿ ಮಹತ್ವದ ಬರಹವಾಗಿದೆ. ವಸ್ತುವಿನ ಯಥಾಸ್ಥಿತಿಯನ್ನು ಅರಿಯಲು ಜೈನ ಸಿದ್ಧಾಂತ ಅನುಸರಿಸಿದ

ಮೂಲಭೂತ ತರ್ಕಸ್ವರೂಪವೇ ಅನೇಕಾಂತವಾದ. ಇದರ ಮೂಲ ಹೆಸರು ಸ್ಯಾದ್ವಾದ. ಜೀವಾಜೀವ ದ್ರವ್ಯಗಳ ಸ್ವರೂಪವನ್ನು ಸರಿಯಾಗಿ ಸಮಗ್ರವಾಗಿ ಗ್ರಹಿಸಲು ಸ್ಯಾದ್ವಾದದಂತಹ ತರ್ಕಪದ್ಧತಿ ಮತ್ತೊಂದಿಲ್ಲ. ಸತ್‌ನ ಸ್ವರೂಪ ಪರ್ಯಾಯ ಪ್ರಕ್ರಿಯೆಯಲ್ಲಿಯೂ ಒಂದೇ ಬಗೆಯಾಗಿರುವುದಿಲ್ಲ. ಜೀವಾತ್ಮನು ಸಂಸಾರದಲ್ಲಿ ತೊಳಲುತ್ತಾನೆ. ಇದು ಒಂದು ದೃಷ್ಟಿಯಲ್ಲಿ ಸರಿ : ಕರ್ಮ ಬಂಧನಕ್ಕೆ ಒಳಗಾದ ಜೀವಾತ್ಮನು ಹೀಗೆ ತೊಳಲುತ್ತಾನೆ. ಇನ್ನೊಂದು ದೃಷ್ಟಿಯಿಂದ ಇದು ಸರಿಯಲ್ಲ. ಬಂಧಮುಕ್ತನಾದ ಜೀವಾತ್ಮನು ಸಂಸಾರ ದಲ್ಲಿ ತೊಳಲುವುದಿಲ್ಲ. ಬಾದರಾಯಣ ಶಂಕರಾಚಾರ್ಯರುಗಳು ಇಂತಹ ಸರಿ ತಪ್ಪು ಎಂಬ ವಿರುದ್ಧಾರ್ಥದ ಪದಗಳನ್ನು ಗಮನಿಸಿ ಈ ವಾದದಲ್ಲಿ ಅನಿಶ್ಚಿತತೆ ಇದೆ ಎಂದು ಭ್ರಮಿಸಿರುವುದನ್ನು ಕಮಲಾ ಹಂಪನಾ ಅವರು ಗುರುತಿಸಿರುವುದು ಸರಿಯಾಗಿದೆ. ಸ್ಯಾತ್ ಎಂಬುದಕ್ಕೆ ಕಥಂಚಿತ್ ಎಂದರೆ ಒಂದು ದೃಷ್ಟಿಯಿಂದ ಒಂದು ರೀತಿಯಿಂದ ಎಂಬ ಅರ್ಥವನ್ನು ಅನುಸರಿಸಿರು ವುದು ಕೂಡ ಸೂಕ್ತ. ಸ್ಯಾತ್ ಎಂಬುದಕ್ಕೆ ಕೆಲ ವ್ಯಾಖ್ಯಾನಕಾರರು 'ಇರಬಹುದು' ಎಂದು ವ್ಯಾಖ್ಯಾನಿಸಿದ್ದಾರೆ. ಆದರೆ ವಾಸ್ತವವಾಗಿ ಸ್ಯಾದ್ವಾದವು ಇತ್ಯಾತ್ಮಕವಾದ ಅರ್ಥಕ್ಕೆ ನಿಷ್ಠವಾಗಿದೆ. ನೇತ್ಯಾತ್ಮಕಾರ್ಥವು 'ಇರಬಹುದು' ಎಂಬುದರಲ್ಲಿ ಧ್ವನಿತವಾಗುವುದರಿಂದ ಕಮಲಾ ಹಂಪನಾ ಅವರ 'ಒಂದು ದೃಷ್ಟಿಯಿಂದ' ಎಂಬ ಅರ್ಥ ಸರಿಯಾಗಿದೆ.

ಒಟ್ಟಿನಲ್ಲಿ ಈ ಕೃತಿ ಸತತ ಅಧ್ಯಯನದಿಂದ ವಿಸ್ತೃತವಾದ, ಶಾಸ್ತ್ರಾಭ್ಯಾಸ ಗಾಢವಾದ ಚಿಂತನೆಗಳಿಂದ ಜೈನಧರ್ಮದ ವಿವಿಧ ಅವಯವಗಳ ಪರಿಚಯವನ್ನು ಸೂಕ್ತವಾಗಿ ಮಾಡಿಕೊಟ್ಟಿದೆ.

ಜೈನ ಸಾಹಿತ್ಯ ಪರಿಸರ

ಜಿ. ಎ. ಡಿ.

ಕಮಲಾ ಹಂಪನಾ ಅವರ 'ಜೈನ ಸಾಹಿತ್ಯ ಪರಿಸರ'ದಲ್ಲಿ ಜೈನ ಸಾಹಿತ್ಯ ಸಂಬಂಧವಾದ ಹದಿನಾರು ಲೇಖನಗಳಿವೆ. ಕಮಲಾ ಹಂಪನಾ ಅವರ ಸೂಕ್ಷ್ಮ ಅವಲೋಕನಾಶಕ್ತಿ, ಸಂಶೋಧನಾ ದೃಷ್ಟಿ, ವೈಚಾರಿಕತೆ ಸುವ್ಯಕ್ತವಾಗಿದೆ. ಯಾವ ವಿಷಯವನ್ನೇ ಆಗಲಿ ಸರಳ ಭಾಷೆಯಲ್ಲಿ ಜೈನರಿಗಷ್ಟೇ ಅಲ್ಲ ಅನ್ಯ ಧರ್ಮೀಯರಿಗೂ ಅರ್ಥವಾಗುವಂತೆ ನವುರಾಗಿ ಕಮಲಾ ಹಂಪನಾ ನಿರೂಪಿಸಬಲ್ಲರು. ವಿಷಯವನ್ನು ಪ್ರತಿಪಾದಿಸುವ, ಸಮರ್ಥಿಸುವ ರೀತಿ ಸಹೃದಯರು ಮೆಚ್ಚುವಂತಿದೆ; ಜೈನ ಧರ್ಮ ಮಿಗಿಲಾಗಿ ಜೈನ ಸಾಹಿತ್ಯ ಪರಿಚಯದ ಕೈಗನ್ನಡಿಯಾಗಿದೆ ಈ ಕೃತಿ. ವಸ್ತುನಿಷ್ಠವಾದ ಆಲೋಚನೆ, ನಿಷ್ಪಕ್ಷ-ನಿರ್ಭೀತ ಅಭಿಪ್ರಾಯಗಳ ಅಭಿವ್ಯಕ್ತಿ ವಿರಳವಾಗುತ್ತಿರುವ ಇಂದು ಇಂಥ ಗ್ರಂಥಗಳ ಅವಶ್ಯಕತೆ ಹೆಚ್ಚಾಗಿದೆ ಎನ್ನಿಸುತ್ತದೆ.

'ವಡ್ಡಾರಾಧನೆ: ಒಂದು ಸ್ಥೂಲ ಪರಿಚಯ' ಲೇಖನದಲ್ಲಿ 'ವಡ್ಡಾರಾಧನೆ' ಶಬ್ದದ ವ್ಯುತ್ಪತ್ತಿ, ಗ್ರಂಥದ ಕಾಲ ವಿಚಾರವಾಗಿ ಪ್ರಸಿದ್ಧ ವಿದ್ವಾಂಸರ ಗಮನಾರ್ಹ ಚರ್ಚೆಯ ಸಂಗ್ರಹ, ವಡ್ಡಾರಾಧನೆ ಕಥೆಯ ಮೂಲ ಆಕರ, ಕರ್ತೃವಿನ ಹೆಸರಿನ ಬಗ್ಗೆ ಇರುವ ಭಿನ್ನಾಭಿಪ್ರಾಯ–ಮೊದಲಾದ ವಿಷಯಗಳನ್ನು ಕಮಲಾ ಹಂಪನಾ ಚರ್ಚಿಸಿ 'ವಡ್ಡಾರಾಧನೆಯಲ್ಲಿನ ಕಥಾ ಸಂವಿಧಾನ, ಎರಡನೆಯದಾಗಿ ಧರ್ಮಪ್ರಚಾರ, ಮೂರನೆಯದಾಗಿ ವಡ್ಡಾರಾಧನೆಯ ಗದ್ಯ ಶೈಲಿ' ಎಂದು ಗ್ರಂಥವನ್ನು ವಿಭಜಿಸಿ, ವಡ್ಡಾರಾಧನೆಯ ಕಥೆಗಳ ಪ್ರಾಮುಖ್ಯತೆಯನ್ನು ತಿಳಿಸಿದ್ದಾರೆ. ಪೂರ್ವ ಹಳಗನ್ನಡ, ಹಳಗನ್ನಡ ಮಿಶ್ರಿತವಾದ ವಡ್ಡಾರಾಧನೆ ಭಾಷಾಚರಿತ್ರೆಯ ದೃಷ್ಟಿಯಿಂದ ಗಮನಾರ್ಹವಾದುದು.

'ರನ್ನನ ರಸಘಟ್ಟ' ಲೇಖನವು ಸೊಗಸಾದ ಸಾಹಿತ್ಯವಿಮರ್ಶಕನ ಟಿಪ್ಪಣಿಯಂತಿದೆ. 'ಪ್ರಸ್ತುತ ಲೇಖನದಲ್ಲಿ ಗದಾಯುದ್ಧದಲ್ಲಿನ ಕೆಲ ರಸಘಟ್ಟಗಳನ್ನು ಗುರುತಿಸುವ ಪ್ರಯತ್ನ ನಡೆದಿದೆ' ಎಂದು ಲೇಖಕಿ ಲೇಖನದ ಉದ್ದೇಶವನ್ನು ಸ್ಪಷ್ಟಪಡಿಸಿದ್ದಾರೆ. ರನ್ನನ ಗದಾಯುದ್ಧ ಕಾವ್ಯದ ಹೆಚ್ಚಳವನ್ನು ಸಂಕ್ಷಿಪ್ತವಾಗಿ ತಿಳಿಸಿ, ಕಥಾನಾಯಕ ಭೀಮನಿಗಿಂತ ದುರ್ಯೋಧನನ ಪಾತ್ರ ಹೇಗೆ ಸಹೃದಯರ ಮನದುಂಬಿ ನಿಲ್ಲುತ್ತದೆಂಬುದನ್ನು ನಿದರ್ಶನಗಳ ಮೂಲಕ ತಿಳಿಸಿದ್ದಾರೆ. ತನ್ನವರೆಂಬುವರನ್ನು, ಆತ್ಮೀಯರನ್ನು, ಶೂರರನ್ನು ಯುದ್ಧದಲ್ಲಿ ಕಳೆದುಕೊಂಡ ದುರ್ಯೋಧನ ರಣಾಂಗಣದಲ್ಲಿ ಶವಗಳ ನಡುವೆ ಏಕಾಂಗಿಯಾಗಿ ನಡೆವಾಗ ಆತ್ಮೀಯರ ಶವಗಳನ್ನು ಕಂಡು ದುಃಖಿಸುವ ಚಿತ್ರಮಾಲೆಗಳನ್ನು ಮನಂಬುಗುವಂತೆ ಪರಿಚಯಿಸಿದ್ದಾರೆ. 'ರನ್ನನ ಕಾವ್ಯದ ಮುಖ್ಯರಸಕ್ಕೆ ಪೋಷಕವಾಗುವಂತೆ ಔಚಿತ್ಯವರಿತು ಕರುಣರಸವನ್ನು ಉಪಯೋಗಿಸಿಕೊಂಡ ಅವನ ಜಾಣ್ಮೆ ಸಹೃದಯರ ಮನವನ್ನು ಬಹುವಾಗಿ ಸೂರೆಗೊಳ್ಳುತ್ತದೆ' ಕಮಲಾ ಅವರ ಈ ಮಾತು ಮನನೀಯವಾದುದು.

ರತ್ನಾಕರನ ಸ್ತ್ರೀ ಪಾತ್ರಗಳು—ಜೈನ ಸಾಹಿತ್ಯದಲ್ಲೇ ಸ್ಮರಣೀಯ ಶೃಂಗಾರ ಕಾವ್ಯ. ರತ್ನಾಕರ ಅನುರಾಗದ ತುಂಬು ಹೊನಲಿನ ಪರಿಚಯವನ್ನು ಅದರ ಆಳ–ಅಗಲವನ್ನೂ ಚಿತ್ರಿಸಿ ರಸಿಕರ ಮನವನ್ನು ಸೂರೆಗೊಂಡಿದ್ದಾನೆ; ಭರತನ ಸಾಂಸಾರಿಕ ಜೀವನ ಜೇನಹೊಳೆಯಾಗಿದೆ. ರತ್ನಾಕರನ 'ಭರತೇಶ ವೈಭವ'ವು ಸ್ತ್ರೀಯರ ಬೆಡಗು–ಬಿನ್ನಾಣ, ಮೃದುತ್ವ, ಸೌಂದರ್ಯ, ಅನುರಾಗ, ಹೊಂದಾಣಿಕೆಯ ಪ್ರತೀಕವಾಗಿ ಮೂಡಿದೆ.

ಭರತೇಶ ವೈಭವ—ಗೀತಗೋವಿಂದ ಈ ಕೃತಿಗಳ ಭರತ–ಕೃಷ್ಣರ ಪಾತ್ರವನ್ನು ತುಲನಾತ್ಮಕವಾಗಿ ಲೇಖಕಿ ನೋಡಿದ್ದಾರೆ. ಭರತ–ಆತನ

ಪತ್ನಿಯರ ನಡುವೆ ಶೃಂಗಾರದ ಸೇತುವಾಗಿ ಪಂಡಿತೆ ಇದ್ದಾಳೆ. ಭರತ ಮತ್ತು ಆತನ 96 ಸಾವಿರ ಪತ್ನಿಯರ ಶೃಂಗಾರಭಾವದ ಉದ್ದೀಪನಕಾರ್ಯ ಪಂಡಿತೆಯಿಂದಲೇ ಆಗಾಗ್ಗೆ ನಡೆಯುತ್ತದೆ.

ಭರತನನ್ನು ಕಾಣುವಲ್ಲಿ ಆತನ ಮಡದಿಯರು ವ್ಯಕ್ತಪಡಿಸುವ ಉತ್ಸಾಹ, ಪ್ರೇಮದ ಸೆಳವು ಅನೂಹ್ಯ ಅಸದೃಶ. ಭರತ ತನ್ನ ಮಡದಿಯರನ್ನು ನೋಡುವ ರೀತಿಯನ್ನು ಕಮಲಾ ಹಂಪನಾ ಅವರು ತೌಲನಿಕವಾಗಿ ನೋಡಿ 'ಹರಿಹರನ ಪುಷ್ಪರಗಳೆಯಲ್ಲಿ ಪುಷ್ಪಗಳನ್ನು ದೃಷ್ಟಿಸಿ ನೋಡಿದರೆ ಎಲ್ಲಿ ಬಾಡಿಹೋಗುತ್ತದೆಯೋ ಎಂದು ಯೋಚಿಸುವ ಭಕ್ತನಂತೆ ಇಲ್ಲಿ ಭರತ ಸ್ವಲ್ಪ ಕಠಿಣವಾಗಿ ವರ್ತಿಸಿದರೂ ತನ್ನ ಪತ್ನಿಯರಲ್ಲಿ ಯಾರ ಮನಸ್ಸು ಬಾಡಿ ಹೋಗುತ್ತದೆಯೋ ಎಂದು ಯೋಚಿಸುತ್ತಾನೆ' ನುಡಿದಿದ್ದಾರೆ.

96 ಸಾವಿರ ಸ್ತ್ರೀ ನಕ್ಷತ್ರಗಳ ನಡುವೆ ಕುಸುಮಾಜಿ ಚಂದ್ರನಂತೆ ಶೋಭಿಸುತ್ತಾಳೆ. ತಂಗಿ ಮಕರಂದಾಜಿ ಮತ್ತು ಭರತನ ಸರಸ ಹಿತವಾಗಿ ಚಿತ್ರಿತವಾಗಿದೆ. ಭಾವ ನಾದಿನಿಯರ ಸರಸ ಚಿತ್ರಣ ಕನ್ನಡಕ್ಕೆ ಅಪೂರ್ವ ಕಾಣಿಕೆಯಾಗಿದೆ. "ರತ್ನಾಕರ ಸ್ತ್ರೀಯನ್ನು ಕೇವಲ ಒಂದು ಭೋಗವಸ್ತು ಎಂದು ಭಾವಿಸಿಲ್ಲ. ಆಕೆಗೂ ಆತ್ಮವಿದೆ, ಹೃದಯವಿದೆ, ಆಸೆ–ಆಕಾಂಕ್ಷೆಗಳಿವೆ. ಅವುಗಳನ್ನು ಬೆಳೆಸಿಕೊಳ್ಳುವ, ರೂಪಿಸಿಕೊಳ್ಳುವ, ಈಡೇರಿಸಿಕೊಳ್ಳುವ ಅವಕಾಶ ಸಿಕ್ಕಬೇಕು. ಅಂಥ ಅವಕಾಶವನ್ನು ಪುರುಷ ಸ್ತ್ರೀಗೆ ಕಲ್ಪಿಸಿಕೊಡಬೇಕು. ಪತ್ನಿ ತನ್ನ ಪತಿಯನ್ನು 'ಪುತ' ಎನ್ನುವ ನರಕದಿಂದ ವಿಮುಕ್ತಗೊಳಿಸಲು ಪುತ್ರನನ್ನು ಪಡೆದುಕೊಡುವ ಒಂದು ಜೀವಂತ ಯಂತ್ರವಲ್ಲ. ಆಕೆಗೂ ಪುರುಷನಿಗಿರುವ ಎಲ್ಲಾ ರೀತಿಯ ಸ್ವಾತಂತ್ರ್ಯವಿರಬೇಕು. ಆಕೆಯ ಆತ್ಮವೂ ವಿಕಾಸವಾಗಬೇಕು, ಬದುಕು ಹಸನಾಗಬೇಕು–ಹೀಗೆಂದು ಯೋಚಿಸಿ ರತ್ನಾಕರನು ಭರತನ ಮೂಲಕ ಆತನ ಪತ್ನಿಯರಿಗೆ ಸಕಲ ರೀತಿ ವಿದ್ಯೆಯನ್ನೂ ಹೇಳಿಕೊಡುತ್ತಾನೆ". ರತ್ನಾಕರನ ಸ್ತ್ರೀ ಪಾತ್ರಗಳ ಬಗ್ಗೆ ಕಮಲಾ ಹಂಪನಾ ಅವರ ಮಾತುಗಳು ರತ್ನಾಕರನ ಮೂಲ ಉದ್ದೇಶವನ್ನು ಸಾರಿ ಹೇಳಿದರೊಂದಿಗೆ ಸ್ತ್ರೀಯರ ಸರ್ವತೋಮುಖ ವಿಕಾಸಕ್ಕೆ ಪುರುಷ ಹೇಗೆ ಸಹಕರಿಸಬೇಕೆಂಬ ಸಲಹೆಯೂ ಆಗಿದೆ.

ರತ್ನಾಕರನ ಸ್ತ್ರೀ ಪಾತ್ರಗಳ ಮಹತ್ವವನ್ನೂ ಶೃಂಗಾರ ರಸಧಾರೆಯ ಪರಿಚಯವನ್ನೂ ಕೆಲವು ಪದ್ಯಗಳನ್ನೂ ನಿದರ್ಶನವಾಗಿ ನೀಡಿ ವಿವೇಚಿಸುವಲ್ಲಿ ಕಮಲಾ ಅವರ ವಸ್ತುನಿಷ್ಠ ವಿಮರ್ಶಾಪ್ರಜ್ಞೆ ವ್ಯಕ್ತವಾಗಿದೆ.

ನೇಮಿಚಂದ್ರನ ಕಾಲ ವಿಚಾರವಾಗಿ ವಿದ್ವಾಂಸರ ಅಭಿಪ್ರಾಯಗಳನ್ನು ಸಂಗ್ರಹಿಸಿ, ಕವಿಗಳ ಪ್ರತಿಭೆ, ಶಕ್ತಿ, ಕಲ್ಪನೆ, ಜಾಣ್ಮೆ, ಚತುರತೆ ಬಗೆಗೆ ನೇಮಿಚಂದ್ರನ ಅಭಿಮಾನ ಸುವ್ಯಕ್ತವಾಗುವ ಹಲವಾರು ಪದ್ಯಭಾಗಗಳನ್ನು ಉಲ್ಲೇಖಿಸಿ 'ನೇಮಿಚಂದ್ರ' ಪ್ರಬಂಧದಲ್ಲಿ ವಿವರಿಸಿರುವುದು ಮೆಚ್ಚುವ ಸಂಗತಿ.

ನೇಮಿಚಂದ್ರನ 'ಲೀಲಾವತಿ', 'ನೇಮಿನಾಥ ಪುರಾಣಗಳ'ನ್ನು ಪರಿಚಯಿಸಿದ್ದಾರೆ. ಬಹು ಕವಿಗಳೆಲ್ಲ ಶಾರದೆಯ ಸ್ತುತಿಯಿಂದ ಕಾವ್ಯಾರಂಭಿಸಿದರೆ ಈತ ಮನ್ಮಥ ಪ್ರಾರ್ಥನೆಯಿಂದ ಕಾವ್ಯಾರಂಭಿಸಿದ್ದಾನೆ. 'ಲೀಲಾವತಿ' ಕಾವ್ಯೋದ್ದೇಶವನ್ನು ಕವಿ ಸ್ಪಷ್ಟ ಪಡಿಸಿದ್ದಾನೆ :

ಸ್ತ್ರೀ ರೂಪಮೆ ರೂಪಂ ಶೃಂ
ಗಾರಮೆ ರಸಂ ಅತುಳ ಸುರತ ಗಂಧಮೆ ಗಂಧಂ
ಸಾರಸ್ಪರ್ಶ ಗುರುಕುಚ
ಭಾರ ಸ್ಪರ್ಶಂಗಳ ಪ್ರಶಬ್ದಮೆ ಶಬ್ದಂ.

ನಾಗಚಂದ್ರನ ಲೀಲಾವತಿ ಕಾವ್ಯಕ್ಕೆ ಸುಬಂಧುವಿನ 'ವಾಸವದತ್ತೆ' ಆಕರವಾಗಿರಬಹುದೆಂದು ಕಮಲಾ ಹಂಪನಾ ಊಹಿಸುತ್ತಾರೆ.

'ನೇಮಿನಾಥ ಪುರಾಣವು' ಇಪ್ಪತ್ತ ಎರಡನೆಯ ತೀರ್ಥಂಕರನ ಕಥೆಯಾದ್ದರಿಂದ ಜೈನರು ಪುಣ್ಯಕಥೆ ಎಂದು ಭಕ್ತಿಭಾವದಿಂದ ಕಾಣುತ್ತಾರೆ. ಇದರ ಕಥೆ ಅಪೂರ್ವವಾಗಿ ಅರ್ಧನೇಮಿ ಎಂದು ಕರೆಯಲು ಕಾರಣವಾಗಿದೆ. ನೇಮಿಚಂದ್ರ ತನ್ನ ಪಾಂಡಿತ್ಯ ಮತ್ತು ಪ್ರತಿಭೆಯನ್ನು ಆ ಎರಡು ಕಾವ್ಯಗಳಲ್ಲಿ ವ್ಯಕ್ತಪಡಿಸಿದ್ದಾನೆ. ಸಂಸ್ಕೃತ ಶ್ಲೋಕ ಪ್ರಾಕೃತಗಾದೆಗಳನ್ನು, ಗಾದೆಗಳನ್ನೂ ನೇಮಿನಾಥ ಪುರಾಣದಲ್ಲಿ ಬಳಸಿದ್ದಾನೆ. ಇದರಿಂದ ಕಾವ್ಯದ ಜನಪ್ರಿಯತೆ ಹೆಚ್ಚಿದೆ. 'ಕವಿಯ ಶಬ್ದ ಭಂಡಾರ ಶ್ರೀಮಂತವಾಗಿದೆ, ಕವಿಗೆ ಅಪಾರ ಲೋಕಾನುಭವವಿದೆ, ಸೂಕ್ಷ್ಮಗ್ರಹಣ ಸಾಮರ್ಥ್ಯವಿದೆ. ವಿಶೇಷ ಪಾಂಡಿತ್ಯ ಏದೆ' ಎಂದು ಕಮಲಾ ಹಂಪನಾ ನಿರ್ಣಯಿಸುತ್ತಾರೆ.

ಛಲದಲ್ಲಿ ದುರ್ಯೋಧನ, ಸತ್ಯದಲ್ಲಿ ಕರ್ಣ, ಪೌರುಷದಲ್ಲಿ ಭೀಮ, ಬಲದಲಿ ಮದ್ರೇಶ, ಔನ್ನತದಲ್ಲಿ ಸಿಂಧೂದ್ಭವ, ಧನುರ್ವಿದ್ಯೆಯಲ್ಲಿ ದ್ರೋಣ, ಸಾಹಸದಲ್ಲಿ ಅರ್ಜುನ, ಚಿತ್ತ ಶುದ್ಧಿಯಲ್ಲಿ ಧರ್ಮಜ–ಎಂಬುದಾಗಿ ಪಂಪ ತನ್ನ ಭಾರತದಲ್ಲಿ ಹೇಳಿರುವ ಪದ್ಯ ವಿಮರ್ಶಕರಲ್ಲಿ ಜಿಜ್ಞಾಸೆಯುಂಟು ಮಾಡಿದೆ–ಕೃಷ್ಣನ ಗುಣಗಾನ ಮಾಡಿಲ್ಲವಲ್ಲ–ಎಂದು ಆಕ್ಷೇಪಿಸುವವರೂ ಉಂಟು. ಅದಕ್ಕೆ ಉತ್ತರ ಕಮಲಾ ಹಂಪನಾ ಅವರ 'ಪಂಪನ ದೃಷ್ಟಿಯಲ್ಲಿ ಕೃಷ್ಣ' ಲೇಖನ,

ಪಂಪನು ಕೃಷ್ಣನನ್ನು ಕುರಿತು–ಅಸುರಾಂತಕ, ಮುಕುಂದ, ಗೀರ್ವಾಣಾರಿ, ದನುಜಾಂತಕ, ಮಧುಕೈಟಭಾರಾತಿ, ತ್ರೈಲೋಕ್ಯಗುರು, ನಾರಾಯಣ, ಚಕ್ರಿ, ಹರಿ–ಮೊದಲಾದ ಹೆಸರುಗಳಿಂದ ಸ್ತುತಿಸಿರುವುದು ಸ್ಪಷ್ಟವಾಗಿರುವುದನ್ನು ಲೇಖಕಿ ಗುರ್ತಿಸಿ, "ತೀರ್ಥಂಕರರ ಹೆಸರುಗಳಾದ 'ಅಜಿತ, ಅನಂತ' ಎನ್ನುವ ಹೆಸರುಗಳಿಂದ ಶ್ರೀಕೃಷ್ಣನನ್ನು ಕರೆಯುವುದರ ಮೂಲಕ ಆತನಿಗೆ ತೀರ್ಥಂಕರನ ಪಟ್ಟವನ್ನೂ ಕಟ್ಟಿದ್ದಾನೆ" ಎಂದಿದ್ದಾರೆ. ಕೃಷ್ಣನಿಗೆ ತೀರ್ಥಂಕರನ ಪಟ್ಟಕಟ್ಟಿ ಪಂಪ ತನ್ನ ಜೈನಧರ್ಮದ ನಿಷ್ಠೆಯನ್ನು ಸಹಜವಾಗಿಯೇ ವ್ಯಕ್ತಪಡಿಸಿದ್ದಾನೆ. ಪಂಪನು ಕೃಷ್ಣನ ದೈವತ್ವವನ್ನು ಸ್ಫುಟವಾಗಿ–ಶಿಶುಪಾಲವಧೆ, ಸಂಧಾನಾರ್ಥಿಯಾಗಿ ಆಸ್ಥಾನಕ್ಕೆ ಬಂಧ ಸಂದರ್ಭ, ಅಲ್ಲದೆ ಒಂಬತ್ತನೆಯ ಆಶ್ವಾಸದಲ್ಲಿ ಚಿತ್ರಿಸಿದ್ದಾನೆ. 'ಚಲದೊಳ್ ದುರ್ಯೋಧನಂ' ಎಂದು ಮಾನವರನ್ನೂ ಹೊಗಳುವ ಪದ್ಯದಲ್ಲಿ ಕೃಷ್ಣನನ್ನು ಸೇರಿಸದಿರುವುದು ಔಚಿತ್ಯ ಪೂರ್ಣವಾದುದೇ. 'ಇದರಿಂದ ಕವಿ ಪ್ರಜ್ಞೆ ಹೇಗೆ ಸದಾ ಎಚ್ಚರದಿಂದ ಇರುತ್ತದೆಂಬುದು ವ್ಯಕ್ತವಾಗುತ್ತದೆ', ಕೃಷ್ಣನ ಪಾತ್ರವನ್ನು ಚಿತ್ರಿಸುವಾಗ ಮತದೃಷ್ಟಿ ಪಂಪನ ಕಣ್ಣಿಗೆ ಮಂಜಿನ ಮುಸುಕನ್ನು ಎಸೆದಿಲ್ಲ. ಅದರ ಬದಲು ಕವಿಸಹಜ ನಿರ್ಮಲ ದೃಷ್ಟಿ ಕೃಷ್ಣನ ಪಾತ್ರದ ಕಾಂತಿಯನ್ನು ಮಸೆದು ತೊಳಗಿ ಬೆಳಗುವಂತೆ ಮಾಡಿದೆ' ಎಂಬ ಮಾತುಗಳಲ್ಲಿ ಕಮಲಾ ಹಂಪನಾ ಅವರ ಸಮಚಿತ್ತದ ವಿಮರ್ಶಾ ದೃಷ್ಟಿಯನ್ನು ಕಾಣಬಹುದು.

ನಯಸೇನ ಪಂಡಿತ ಮುನಿ. ಈತನ ಧರ್ಮಾಮೃತಕಾವ್ಯ ಜನತೆಗಾಗಿ ಬರೆದ ಜೈನಪುರಾಣ–ಉತ್ತಮ ಕಥಾಸಂಕಲನ. ಕಥೆಯ ಮೂಲಕ ಜೈನಧರ್ಮದ ತತ್ವ ಪ್ರತಿಪಾದಿಸಿದ್ದಾನೆ. 'ನಯಸೇನ–ಒಂದು ಪರಿಚಯ' ಲೇಖನದಲ್ಲಿ ಲೇಖಕಿ–'ಧರ್ಮ ನಿರೂಪಣೆಯಿಂದಲೇ ಕನ್ನಡ ಸಾಹಿತ್ಯದ ನಯಸೇನನಿಗೆ ಒಂದು ವಿಶಿಷ್ಟ ಸ್ಥಾನವಿದೆ. ಇದಕ್ಕಿಂತ ತಿಳಿಯಾದ ರೀತಿಯಲ್ಲಿ ಧರ್ಮದ ರಹಸ್ಯವನ್ನು ನಿರೂಪಿಸಿದ ಕವಿಗಳು ನನಗೆ ದೊರೆಯುವುದು ಬಹಳ ಕಡಿಮೆ' ಅವರ ಮಾತಿನಲ್ಲಿ ಹುರುಳಿದೆ. 'ಜಾನಪದ ಕಥೆಗಾರನ ಕಥನ ಕೌಶಲ್ಯ, ವಿಡಂಬನೆ ಹಾಸ್ಯ ಮನಸ್ಸನ್ನು ಸೆರೆ ಹಿಡಿಯುವ ನಿತ್ಯಾನುಭವಗಳ ಹೋಲಿಕೆಗಳು ಈ ಕವಿಯಲ್ಲಿ ಮನೆಮಾಡಿವೆ' ಈ ಮಾತಿನ ನೈಜತೆಯು ನಯಸೇನನ ಧರ್ಮಾಮೃತವನ್ನು ಓದಿದವರಿಗೆ ತಿಳಿಯುತ್ತದೆ. ಕಮಲಾ ಅವರು ಬಳಸಿರುವ 'ಜಾನಪದ ಕಥೆಗಾರ' ಪದಪ್ರಯೋಗ ಸರಿಯಲ್ಲ, ಜನಪದ ಕಥೆಗಾರ ಎಂದಿರಬೇಕಿತ್ತು.

ಪಂಪ ಕವಿಯ ಪ್ರಭಾವ–ಲೇಖನದಲ್ಲಿ, ಕನ್ನಡ ಸಾಹಿತ್ಯ ಲೋಕದಲ್ಲಿ ಪಂಪನ ಪ್ರಭಾವ ಹೇಗೆ ಇತರ ಕವಿಗಳ ಮತ್ತು ಶಾಸಕರ ಮೇಲಾಗಿದೆ ಎಂಬು

ದನ್ನು ನಿದರ್ಶನಗಳ ಮೂಲಕ ಕಮಲಾ ಅವರು ತಿಳಿಸಿದ್ದಾರೆ. ರನ್ನ, ಕುಮಾರವ್ಯಾಸ, ರತ್ನಾಕರವರ್ಣಿ, ಹರಿಹರ, ನಾಗಚಂದ್ರ, ಲಕ್ಷ್ಮೀಶ ಮೊದಲಾದ ಕವಿಗಳು ಪಂಪನ ಕಾವ್ಯಗಳಲ್ಲಿ ಅಂತರ್ಗತವಾಗಿದ್ದ ಒಂದೊಂದು ಕಾವ್ಯರಸದಿಂದ ಪ್ರಭಾವಿತರಾಗಿ ತಮ್ಮ ಕಾವ್ಯಗಳಲ್ಲಿ, ರಸವಾಹಿಯನ್ನು ಹರಿಸಿದ್ದಾರೆಂಬುದರ ಕಡೆ ಲೇಖಕಿ ತೋರ್‌ಬೆರಳು ನೀಡಿದ್ದಾರೆ. "ಸುಂದರ ವಾದ ಕಂದ ಪದ್ಯಗಳೂ ಬಿಗಿಯಾದ ವೃತ್ತಗಳೂ ಹೃದ್ಯವಾದ ಗದ್ಯವೂ ಹಿತವಾದ ವರ್ಣನೆಯೂ ಪಂಪನ ಪಡಿಯಚ್ಚಿಂಬಂತೆ ಇವೆ" ಎಂಬುದಾಗಿ ಸಿರಸಿಂಗಿಯ ಶಾಸನದ ಬಗ್ಗೆ ನುಡಿದ ಕಮಲಾ ಹಂಪನಾ ಅವರು ಶಾಸನಪದ್ಯ ಮತ್ತು ಪಂಪನ ಪದ್ಯಗಳನ್ನು ನೀಡಿರುವುದು ಅವರ ತೌಲನಿಕ ವಿಮರ್ಶೆಗೆ ನಿದರ್ಶನವಾಗಿದೆ.

ರತ್ನಾಕರ ವರ್ಣಿಯ ಕಾಲ, ಆತನ ಬಗ್ಗೆ ಇರುವ ಶೃಂಗಾರದ ದಂತಕಥೆ ಗಳನ್ನು ಪರಿಚಯಿಸಿದ್ದಾರೆ. ರತ್ನಾಕರ ವರ್ಣಿಯ 'ಭರತೇಶ ವೈಭವ' ಲೇಖನ ದಲ್ಲಿ ರತ್ನಾಕರ ಭರತನನ್ನು ತನ್ನ ಕಾವ್ಯದ ನಾಯಕನನ್ನಾಗಿ ಆರಿಸಿ ಕಾವ್ಯ ಕಲ್ಪನೆಯ ಹೊಸ ಹಾದಿಯಲ್ಲಿ ನಡೆದು ತನ್ನ ಸ್ವತಂತ್ರ ಮನೋಭಾವವನ್ನು ವ್ಯಕ್ತಪಡಿಸಿ ಸಹೃದಯರ ಮೆಚ್ಚುಗೆಗೆ ಪಾತ್ರನಾದ. ತನ್ನ ಕಾವ್ಯವನ್ನು ಜನಸಾಮಾನ್ಯರೂ ಓದಿ ಕಾವ್ಯಾನಂದ ಪಡೆಯಲಿ ಎಂದು ಆಶಿಸಿದ ಜನಪರಕವಿ. ಅಷ್ಟಾದಶವರ್ಣನೆಗಳನ್ನು ಕೈಬಿಟ್ಟ ಧೀರ.

೯೬ ಸಾವಿರ ಪ್ರಮದೆಯೊರೊಡನೆ ಶೃಂಗಾರಮಯ ಸಂಸಾರ ನಡೆಸಿದ ಮಹಾ ರಸಿಕ ಭರತನ ಭೋಗ-ತ್ಯಾಗ ಸಮನ್ವಯ ದೃಷ್ಟಿಯನ್ನು ಸಮರ್ಪಕ ವಾಗಿ ರತ್ನಾಕರ ಚಿತ್ರಿಸಿದ್ದಾನೆ. ರತ್ನಾಕರ ಭಗವದ್ಗೀತೆಯ ಶ್ರೀ ಕೃಷ್ಣನನ್ನು ಭರತನಲ್ಲಿ ಕಂಡಿರಿಸಿದ್ದಾನೆ. "ಹೆಣ್ಣಿನ ಚಲುವನ್ನು, ಭರತನ ಶೃಂಗಾರವನ್ನು ವರ್ಣಿಸಿದಾಗಲೂ ಆ ಹೆಣ್ಣುಗಳನ್ನು ರತ್ನಾಕರ ಭರತೇಶನ ಅರಮನೆಯ ಅಂತಃ ಪುರದ ಅರಗಿಣಿಗಳನ್ನಾಗಷ್ಟೇ ಚಿತ್ರಿಸಿಲ್ಲ. ಅವರೆಲ್ಲ ಗೌರವಾನ್ವಿತ ಗೃಹಿಣಿಯ ರೆಂಬುದನ್ನು ಸಂಸಾರ ಯೋಗದ ತಪಸ್ವಿನಿಯರೆಂಬುದನ್ನು ತಿಳಿಯ ಪಡಿಸಿ ದ್ದಾನೆ". ಕಮಲಾ ಹಂಪನಾ ಅವರ ಈ ಮಾತುಗಳು ಕವಿ ಮತ್ತು ಹೆಣ್ಣಿನ ಸ್ಥಾನವನ್ನು ತೆಕ್ಕನೆ ಮೇಲೆತ್ತುತ್ತವೆ. ಓರ್ವ ಗೃಹಿಣಿಯ ಮನೋಧರ್ಮದ ಪ್ರತೀಕವಾಗಿಯೂ ನಿಲ್ಲುತ್ತವೆ.

'ರತ್ನಾಕರನ ಸ್ತ್ರೀ ಪಾತ್ರಗಳು' ಲೇಖನದಲ್ಲಿರುವ ಕೆಲವು ಅಭಿಪ್ರಾಯ ಗಳು 'ರತ್ನಾಕರ ವರ್ಣಿಯ ಭರತೇಶ ವೈಭವ' ಲೇಖನದಲ್ಲಿ ಪುನರಾವರ್ತನೆ

ಗೊಂಡಿದೆ ಎಂಬುದಕ್ಕೆ ನಿದರ್ಶನ–ಭರತನ ಪತ್ನಿಯರ ನಡುವೆ ಇದ್ದ ಒಬ್ಬಳು ತಂದ ಒಂದು ಪಾದರಿ ಹೂವಿನ ಸನ್ನಿವೇಶ, ಪಂಡಿತೆಯ ನುಡಿ ಭರತ ಆತನ ಪತ್ನಿಯರ ನಡುವೆ ರಸಸೇತುವೆಯಾಗುವ ಪ್ರಸಂಗ ವದನ ವದನ ಸೇರಿ... ಮೂಗಿನ ಮೇಲೆ ಬೆರಳನಿಟ್ಟು...ಈ ಪದ್ಯಗಳ ಮಹತ್ವ ನಿರೂಪಣೆ-ಇತ್ಯಾದಿ. 'ಮಹಾವೀರ ಕಥಾಸಾಹಿತ್ಯ'ದಲ್ಲಿ 'ಜೈನ ವಾಙ್ಮಯಕ್ಕೆ ಮಹಾವೀರರ ಮತ್ತು ಅವರ ಸುತ್ತ ಹೆಣೆದ ಕಥಾ ಸಾಹಿತ್ಯವೇ ತಲಕಾವೇರಿ' ಎಂಬುದನ್ನು ಸಾದರ ಪಡಿಸಿದ್ದಾರೆ. ಮಹಾವೀರರ ಕಥೆ ಕನ್ನಡದಲ್ಲಿ ಮೊದಲು ದೊರೆಯು ವುದು ಚಾವುಂಡರಾಯ ಪುರಾಣದಲ್ಲಿ. ಅನಂತರ ೨ನೇ ನಾಗವರ್ಮನ 'ವೀರ ವರ್ಧಮಾನ ಪುರಾಣ', ಆಚಣ್ಣ ಕವಿಯ ವರ್ಧಮಾನ ಪುರಾಣ ಪದ್ಮ ಕವಿಯ ವರ್ಧಮಾನ ಚರಿತೆ, ಯದು ಜಿನಸೇನ ಪ್ರತಿಯ ವರ್ಧಮಾನ ಪುರಾಣಗಳಲ್ಲಿ ಮಹಾವೀರರ ಕಥೆ ದೊರೆಯುವುದಾಗಿ ಲೇಖಕಿ ತಿಳಿಸಿದ್ದಾರೆ. ಅಹಿಂಸೆಯ ಧರ್ಮವಾದ ಜೈನಧರ್ಮ ಸ್ತ್ರೀವರ್ಗಕ್ಕೆ ಗೌರವದೊಡನೆ ಸಮಾನತೆಯನ್ನು ದೊರಕಿಸಿ ಕೊಟ್ಟದ್ದು, ಭಿಕ್ಷುಣಿಯರ ಸಂಘ ಸ್ಥಾಪನೆಯಾದದ್ದು, ಮಹಾವಿಜಯನ ಶಿಷ್ಯನಾದ ಇಂದ್ರಭೂತಿ ಕಾಲದಲ್ಲಿ ಎನ್ನುತ್ತಾರೆ ಲೇಖಕಿ.

'ಕನ್ನಡದ ಕವಯತ್ರಿ ಕಂತಿ' ಲೇಖನದಲ್ಲಿ ಕನ್ನಡದ ಮೊದಲ ಕವಯತ್ರಿ ಯಾರು ? ಕಂತಿ ಹೆಸರಿನ ಬಗ್ಗೆ ಇರುವ ವಿವಾದ ಕಂತಿ ಅಭಿನವ ಪಂಪನ ಸಮಸ್ಯೆಗಳು–ಇವುಗಳ ಬಗ್ಗೆ ಚರ್ಚಿಸಿದ್ದಾರೆ. 11ನೇ ಶತಮಾನದಲ್ಲಿ ದೋರ ಸಮುದ್ರದ ರಾಜ ಬಲ್ಲಾಳನ ಆಸ್ಥಾನ ಕವಿಯಾದ ನಾಗಚಂದ್ರ ಕೊಟ್ಟ ಸಮಸ್ಯೆಗಳನ್ನು ಕಂತಿ ಹೇಗೆ ಪೂರ್ಣಗೊಳಿಸಿ, ನಾಗಚಂದ್ರನ ಮತ್ತು ವಿದ್ವಾಂಸರ ಮೆಚ್ಚುಗೆಗೆ ಪಾತ್ರಳಾದಳೆಂಬುದನ್ನು, ಕೆಲವು ಜನಪ್ರಿಯ ಸಮಸ್ಯೆಗಳನ್ನು ಬಿಡಿಸಿದ್ದನ್ನು ನಿದರ್ಶಿಸಿದ್ದಾರೆ. 9ನೇ ಶತಮಾನದ ದೇವಚಂದ್ರನ ರಾಜಾವಳೀ ಕಥೆಯಲ್ಲಿ ಕಂತಿಯ ಬಗ್ಗೆ ಹೆಚ್ಚು ವಿವರವಿರುವುದನ್ನು ಗುರ್ತಿಸಿದ್ದಾರೆ. 'ಜ್ಯೋತಿಷ್ಮತಿ ತೈಲ ಸೇವನೆಯಿಂದ ಕಂತಿಗೆ ಕವಿತ್ವ ಶಕ್ತಿದೊರೆಯಿತು. ಎಂದು ಹೇಳುವ ಘಟನೆ ಕಂತಿಗೆ ಮಾತ್ರವಲ್ಲ ಯಾವ ಮಹಿಳಾ ಸಾಹಿತಿಗೂ ಶೋಭೆ ತರುವಂಥದ್ದಲ್ಲ'. ಕಮಲಾಹಂಪನಾ ಅವರು ದಂತ ಕಥೆಯ ಒಡಲಿನಲ್ಲಿ ಅಡಗಿರುವ ವಿಡಂಬನೆಯನ್ನು ಗುರ್ತಿಸಿ, ಕಥೆಗೆ ಆದ್ಯತೆ ನೀಡದಿರುವುದು ಮೆಚ್ಚುವಂಥದ್ದು.

'ಪುರಾಣಗಳನ್ನು ಸಾಮಾನ್ಯ ಧಾರ್ಮಿಕ ಸ್ತರದಿಂದ ಕಾವ್ಯದ ಎತ್ತರಕ್ಕೆ ಕೊಂಡೊಯ್ಯುವ ಸಾಧನವಾಗಿ ಭವಾವಳಿ ಸಲ್ಲಿಸಿದಕಾಣಿಕೆ ಅತ್ಯಮೂಲ್ಯ ವಾದುದು' ಎಂಬುದನ್ನು ನಂದಿಮಿತ್ರ ಕಥೆಯಿಂದ ಸಮರ್ಥಿಸಿದ್ದಾರೆ! ಕಥೆಯ ಸೊಗಸನ್ನು ಗ್ರಹಿಸಿದ್ದಾರೆ; 'ಜೈನವಾಙ್ಮಯದಲ್ಲಿ ಭವಾವಳಿ' ಲೇಖನದಲ್ಲಿ.

ವಡ್ಡಾರಾಧನೆಯ ಎಲ್ಲ ಕಥೆಗಳೂ ಹೀಗೆ ಸುಗಮ ಸೊಗಸು ಎನ್ನಲಾಗದು. ಭವಾವಳಿಯ ತೊಡಕಿಲ್ಲದಿದ್ದರೆ ವಡ್ಡಾರಾಧನೆಯ ಕಥೆಗಳು ಸಹೃದಯರಿಗೆ ಮತ್ತಷ್ಟು ಆಪ್ಯಾಯವಾಗುತ್ತಿತ್ತೆಂಬುದರಲ್ಲಿ ಸಂದೇಹವಿಲ್ಲವೆನಿಸುತ್ತದೆ.

'ಸಾಹಿತ್ಯ ಪರಿಸರದಲ್ಲಿ ರನ್ನ' ಪ್ರಬಂಧದಲ್ಲಿ ರನ್ನನಿಗೆ ಪಂಪ ಪೊನ್ನರ ಸಾಹಿತ್ಯರಕ್ಷೆ ಇತ್ತು. ಅತ್ತಿಮಬ್ಬೆ. ಮಲ್ಲಪ, ದಲ್ಲಪ, ಚಾವುಂಡರಾಯ ಮೊದಲಾದವರ ವಾತ್ಸಲ್ಯ ದೊರಕಿತ್ತು. ತೈಲಪ, ಸತ್ಯಾಶ್ರಯನ ರಾಜಾಶ್ರಯ ವಿತ್ತು, ಅಜಿತಸೇನಾಚಾರ್ಯ. ನೇಮಿಚಂದ್ರರ ಧರ್ಮರಕ್ಷೆ ಇತ್ತು ಎಂಬುದನ್ನೂ 'ಅತ್ತಿಮಬ್ಬೆಯ ತಂಗಿ ಗುಂಡು ಮಬ್ಬೆ ತನ್ನ ಪತಿಯೊಡನೆ ಸಹಗಮನಮಾಡಿದ ದಾಖಲೆಯನ್ನು ರನ್ನ' ನೀಡಿದ್ದಾನೆ ಎಂಬುದನ್ನೂ ತಿಳಿಸಿದ್ದಾರೆ. ಅತ್ತಿಮಬ್ಬೆ, ಚಾವುಂಡರಾಯನಿಗೆ ಕೃತಜ್ಞತೆ ಸೂಚಿಸುವ ದೃಷ್ಟಿಯಿಂದ ರನ್ನ ತನ್ನ ಮಗಳಿಗೆ ಅತ್ತಿಮಬ್ಬೆಯ ಹೆಸರನ್ನು ತನ್ನ ಮಗನಿಗೆ ಚಾವುಂಡರಾಯನ ಹೆಸರನ್ನಿರಿಸಿರುವುದು ಸಹೃದಯರ ಮನಸ್ಸನ್ನು ಅರಳಿಸುತ್ತದೆ. ಅತ್ತಿಮಬ್ಬೆಯ ಗುಣಗಾನ ಕನ್ನಡ ಸಾಹಿತ್ಯದಲ್ಲಿಯೇ ಮಹತ್ವವಾದುದು.

ರನ್ನ ತನ್ನ ಕಾವ್ಯಕ್ಕೆ ವಸ್ತುವನ್ನು ಆರಿಸುವಲ್ಲಿ ತೋರುವ ಜಾಣ್ಮೆ, ಪಾತ್ರಗಳನ್ನು ಸವುರಾಗಿ ಧ್ವನಿ ಪೂರ್ಣವಾಗಿ ಚಿತ್ರಿಸುವ ರೀತಿಗೆ ಭೀಮನು ದುರ್ಯೋಧನನ ಕಿರೀಟವನ್ನು ಒದ್ದ ಪ್ರಸಂಗವನ್ನೂ ಅಶ್ವತ್ಥಾಮನು ಲಕ್ಷ್ಮಿಗೆ ಛೀಮಾರಿ ಹಾಕುವ ಪ್ರಸಂಗವನ್ನೂ ನಿದರ್ಶಿಸುತ್ತಾ 'ಇದರ ಉಜ್ವಲತೆಯೆಲ್ಲ ರನ್ನನ ಪ್ರತಿಭೆಯ ಸ್ವಂತ ಆಸ್ತಿ' ಎನ್ನುತ್ತಾರೆ ಲೇಖಕಿ. 'ಕಾವ್ಯದ ದೃಷ್ಟಿಯಲ್ಲಿ ರನ್ನ, ಪಂಪನಿಗೆ ಹೆಗಲು ತಾಗುವಷ್ಟು ತೀರ ಹತ್ತಿರದವನು, ಕಾವ್ಯ ಸಿದ್ಧಿಯ ದೃಷ್ಟಿಯಿಂದಲೂ ಅಷ್ಟೆ. ಪಂಪನನ್ನು ಓದಿ ರನ್ನನನ್ನು ಓದಿದವರಿಗೆ ಪಂಪ ಅದ್ವಿತೀಯ, ರನ್ನ ದ್ವಿತೀಯ' ಎಂಬ ಸಾರ್ವತ್ರಿಕ ಹೇಳಿಕೆಯನ್ನು ಕಮಲಾ ಹಂಪನಾ ನೀಡಿದ್ದಾರೆ.

ಬಾಹುಬಲಿ ಕಥೆ, ಚಾರಿತ್ರಿಕ ಹಿನ್ನೆಲೆ, ಮೂರ್ತಿ ಸ್ಥಾಪನೆ, ಮೂಡಿರುವ ಗ್ರಂಥಗಳು ಇವೆಲ್ಲದರ ಮಹತ್ವಪೂರ್ಣ ಮಾಹಿತಿ--'ಕನ್ನಡ ಸಾಹಿತ್ಯದಲ್ಲಿ ಬಾಹುಬಲಿಯ ಕಲ್ಪನೆ' ಲೇಖನ. ಕನ್ನಡ ಸಾಹಿತ್ಯದಲ್ಲಿ ಮೊದಲಬಾರಿಗೆ ಪಂಪನ ಆದಿಪುರಾಣದಲ್ಲಿ ಬಾಹುಬಲಿ ಪ್ರಸಂಗವನ್ನು ಕಾಣುತ್ತೇವೆ. ಮಾನವ ಬದುಕಿಗೆ ನೀಡಿದ ಒಂದು ಅಪೂರ್ವ ಅಮರ ಸಂದೇಶವಾಗಿದೆ. ಇದಕ್ಕೆ ಜಿನಸೇನಾಚಾರ್ಯರ ಪೂರ್ವಪುರಾಣ ಆಕರ. ಬೃಹತ್ ಗಾತ್ರ ಎತ್ತರ ಚಾರಿತ್ರ್ಯದಿಂದ ಅಮರನಾದ ಬಾಹುಬಲಿಯನ್ನು ಕುರಿತು ಬೊಪ್ಪಣ ಪಂಡಿತ 'ಗೊಮ್ಮಟೇಶ್ವರ ಜಿನ ಶ್ರೀ ರೂಪಮಾತ್ಮೋಪಮಂ' ಎಂದು ಸ್ತುತಿಸಿದ್ದಾನೆ.

ಶ್ವೇತಾಂಬರ ಮತ್ತು ದಿಗಂಬರ ಎರಡು ಪಂಥಗಳಲ್ಲಿಯೂ ಬಾಹುಬಲಿಯ ಕಲ್ಪನೆ ಹೇಗಿದೆ ಎಂಬುದನ್ನೂ ಭರತನ ಹುಟ್ಟನ್ನೂ ಕುರಿತು ಸಂಕ್ಷಿಪ್ತವಾಗಿ ಲೇಖಿಸಿದ್ದಾರೆ ಲೇಖಕಿ.

ಶ್ವೇತಾಂಬರ ಸಂಪ್ರದಾಯದ ಪ್ರಕಾರ ಅಲ್ಪ ಸ್ವಲ್ಪ ವ್ಯತ್ಯಾಸದೊಂದಿಗೆ ರತ್ನಾಕರವರ್ಣಿ ಬಾಹುಬಲಿಯನ್ನು ಚಿತ್ರಿಸಿದ್ದಾನೆ. 'ತ್ರಿಷಷ್ಟಿಲಕ್ಷಣ ಮಹಾಪುರಾಣಂ' ರಚಿಸಿದ ಚಾವುಂಡರಾಯ ಶ್ರವಣಬೆಳುಗೊಳದ ಬಾಹುಬಲಿ ವಿಗ್ರಹ ಸ್ಥಾಪಿಸಿ ಕೀರ್ತಿಪಡೆದ. ಬಾಹುಬಲಿಯನ್ನು ಮೊದಲು ಗೊಮ್ಮಟನೆಂದು ಕರೆದ ಬೊಪ್ಪಣ ಬಾಹುಬಲಿಯ ವ್ಯಕ್ತಿತ್ವವನ್ನು 32 ಪದ್ಯಗಳಲ್ಲಿ ಚಿತ್ರಿಸಿದ್ದಾನೆ. ಹಸ್ತಿ ಮಲ್ಲಿಷೇಣನ ಪೂರ್ವಪುರಾಣ ಋಷಭನಾಥನ ಜೀವನ ನಿರೂಪಿಸಿದರೂ ಭರತ–ಬಾಹುಬಲಿಯ ಪ್ರಸಂಗವೂ ಬರುತ್ತದೆ. ಮಧುರ ಕವಿ ಗೊಮ್ಮಟಾಷ್ಟಕವನ್ನು, ಪೆರಿಯಾಪಟ್ಟಣದ ದೊಡ್ಡಯ್ಯ ಸಂಸ್ಕೃತದಲ್ಲಿ ಭುಜಬಲಿಶತಕವನ್ನು, 1614ರಲ್ಲಿ ಪಂಚಬಾಣ 'ಭುಜಬಲಿ ಚರಿತೆ' ಯನ್ನು 'ತುಳುನಾಡಿನ ಚದುರಚಂದ್ರ' 'ಕಾರ್ಕಳದ ಗೊಮ್ಮಟೇಶ್ವರ ಚರಿತೆ' ಯನ್ನು, 1780ರಲ್ಲಿ ಅನಂತಕವಿ 'ಗೊಮ್ಮಟೇಶ್ವರ ಚರಿತೆ'ಯನ್ನು 1962ರಲ್ಲಿ ಷಟ್ಪದಿ'ಯಲ್ಲಿ ಚಿಕ್ಕಣ ಪಂಡಿತ ಬಾಹುಬಲಿ ಚರಿತೆಯನ್ನು ರಚಿಸಿದ್ದಾರೆ.

ಈ ಶತಮಾನದ ಕವಿಗಳೂ ಬಾಹುಬಲಿಯನ್ನು ಕುರಿತು ಬರೆದಿರುವುದನ್ನು ಕಮಲಾ ಹಂಪನಾ ಉಲ್ಲೇಖಿಸಿ, "ರಾಷ್ಟ್ರಕವಿ ಕುವೆಂಪು ರಚಿಸಿರುವ ಬಾಹುಬಲಿಯನ್ನು ಕುರಿತಾದ ಮೂರು ಕವನಗಳೂ ಆಧುನಿಕ ಕನ್ನಡ ಸಾಹಿತ್ಯದ ಅಪೂರ್ವ ಕೊಡಿಗೆಗಳು" ಎಂದಿದ್ದಾರೆ. ಬಾಹುಬಲಿಯನ್ನು ಕುರಿತು ಬರೆದಿರುವ ಆಧುನಿಕ ಬರಹಗಾರರ ಹೆಸರನ್ನೂ ಹೆಸರಿಸಿದ್ದಾರೆ. ಧರ್ಮಸ್ಥಳದ ಬಾಹುಬಲಿ ವಿಗ್ರಹ ನಿರ್ಮಾಣಕ್ಕೆ ಕಾರಣರಾದವರು, ಅದನ್ನು ಮುಂದುವರಿಸಿ ಪ್ರತಿಷ್ಠಾಪಿಸಿದವರ ಬಗ್ಗೆಯೂ ವಿಗ್ರಹ ನಿರ್ಮಾಣ ಮತ್ತು ಪ್ರತಿಷ್ಠಾಪನಾ ಮಹೋತ್ಸವದ ವರದಿಯನ್ನೂ ಲೇಖಕಿ ನೀಡಿದ್ದಾರೆ.

'ಜೈನ ಸಾಹಿತ್ಯಕ್ಕೆ ರಾಜರತ್ನಂ ಕೊಡುಗೆ' ಲೇಖನದ ಆರಂಭ ಆಕರ್ಷಕವಾಗಿದೆ. ಜೈನಧರ್ಮವನ್ನು ಶ್ರದ್ಧೆ ನಿಷ್ಠೆಯಿಂದ ಅಧ್ಯಯನ ಮಾಡಿದ ಕುರುಹು ರಾಜರತ್ನಂ ಅವರ ಭಾಷಣಗಳು–ಗ್ರಂಥಗಳು. ಇವರ ಭಾಷಣವನ್ನು ಕೇಳಿದ ಜೈನರೊಬ್ಬರು ರಾಜರತ್ನಂ ಜೈನನೆಂಬುದನ್ನು ಲೇಖಕಿ ಉಲ್ಲೇಖಿಸಿದ್ದಾರೆ. ಮಹಮದ್ ಪೈಗಂಬರ್ ಬಗ್ಗೆ ಉಪನ್ಯಾಸ ಕೇಳಿದ ಮುಸ್ಲಿಮರೊಬ್ಬರು 'ನಮ್ಮವರೇ ಯಾರಾದರೂ ಮಾತನಾಡಿದ್ದರೂ ಇಷ್ಟು ಚೆನ್ನಾಗಿ ಹೇಳುತ್ತಿದ್ದರೋ ಇಲ್ಲವೊ ?' ಎಂದರಂತೆ. ರಾಜರತ್ನಂ ಅವರ

ವಿಷಯದ ವ್ಯವಸ್ಥಿತ ನಿರೂಪಣೆ, ಕಂಠಶ್ರೀಯೂ ಕೇಳುಗರ ಮನಸ್ಸನ್ನು ಸೆರೆಹಿಡಿಯುತ್ತಿದ್ದು ಅವರ ಭಾಷಣಗಳ ಯಶಸ್ಸಿಗೆ ಕಾರಣವಾಯಿತು. ಶ್ವೇತಾಂಬರ, ದಿಗಂಬರ ಎರಡು ಪಂಥಗಳ ಕೃತಿಗಳನ್ನೂ ಅಭ್ಯಸಿಸಿದ ರಾಜರತ್ನಂ ಅವರಿಂದ ಜೈನ ಧರ್ಮದ ತತ್ವಗಳ 'ಕಗ್ಗ ಕಥೆಗಳಾಗಿ ರಂಜನೆ ಪಡೆದವು', 'ಜೈನ ಭವಾವಳಿಗಳ ಕಥೆಗಳು...ಬಿಡಿಸಿಟ್ಟ ಕಲಸಿನ ತೊಳೆಗಳು' ಆದುದು ರಾಜರತ್ನಂ ಅವರಿಂದ.

ರಾಜರತ್ನಂ ಅವರ Sayings of Mahaveera ಗ್ರಂಥವು ಶ್ವೇತಾಂಬರ ಸಿದ್ಧಾಂತದಿಂದ ಆರಿಸಿದ ವಿಷಯಗಳ ಗುರುಶಿಷ್ಯರ ಸಂಭಾಷಣೆ ಯಿಂದ ಆರಂಭವಾಗುವ ಶಬ್ದ ಚಿತ್ರ. 'ವೀರ ಮಾರ್ತಾಂಡ ಚಾವುಂಡರಾಯ' ಗ್ರಂಥವು ಜೈನ ಶಾಸನ ಹಾಗೂ ಕಾವ್ಯಗಳ ಆಧಾರದಿಂದ ರಚಿತವಾದುದು.

ಮಕ್ಕಳಿಗಾಗಿ ರಚಿಸಿದ 'ಸೂರ್ಯ ಮಿತ್ರ' ಗ್ರಂಥವು ಜೈನ ಸಾಹಿತ್ಯದ ಕಥಾ ಸಂಕಲನ. ಭರತೇಶ ವೈಭವವನ್ನು ಆಧರಿಸಿ ಶೃಂಗಾರವಲ್ಲರಿ, ಶ್ರೀ ಬಾಹುಬಲಿ ವಿಜಯಂ ಮತ್ತು ಗೊಮ್ಮಟ ಶಿಲ್ಪ ಎನ್ನುವ ಗೀತ ರೂಪಕ, ರನ್ನನ ಶ್ರೀ ಕವಿರತ್ನ ಪಾರ್ಶ್ವನಾಥ ಪಂಡಿತನ ಶ್ರೀ ಪಾರ್ಶ್ವನಾಥ ಚಂಪೂ- ರಾಜರತ್ನಂ ಅವರ ಈ ಜೈನ ಸಾಹಿತ್ಯ ಸೇವೆಯನ್ನು ಕಮಲಾ ಹಂಪನಾ ಅವರು ಚೊಕ್ಕವಾಗಿ ಪರಿಚಯಿಸಿದ್ದಾರೆ.

ಕವಿಪರಮೇಷ್ಠಿ ಪ್ರಾಚೀನ ಜೈನಾಚಾರ್ಯರಲ್ಲಿ ಒಬ್ಬರು, ಕವಿ ಪರಮೇಶ್ವರ ಎಂಬ ರೂಪವನ್ನು ಕನ್ನಡದಲ್ಲಿ ಮೊದಲು ಬಳಸಿದ ಚಾವುಂಡ ರಾಯ ಇವರನ್ನು ಕುರಿತಿದೆ 'ಕವಿಪರಮೇಷ್ಠಿ ಮತ್ತು ಚಾವುಂಡರಾಯ' ಲೇಖನ. ಆದಿಕವಿಪಂಪ, ನಾಗಚಂದ್ರ, ನೇಮಿಚಂದ್ರ, ಶಾಂತಿನಾಥ, ಇಮ್ಮಡಿ ನಾಗವರ್ಮ, ಮಧುರ ಕವಿ, ಮಂಗರಸ-ಇವರೆಲ್ಲ ಕವಿಪರಮೇಷ್ಠಿಯನ್ನು ಸ್ತುತಿಸಿರುವುದರಿಂದ ಆತನ ಉನ್ನತ ವ್ಯಕ್ತಿತ್ವದ ಅರಿವಾಗುತ್ತದೆ. ಕವಿ ಪರಮೇಷ್ಠಿ ಎಂಬ ಹೆಸರಿನ ಬಗ್ಗೆಯೂ ಆತನ ವಾಗರ್ಥಸಂಗ್ರಹ ಗ್ರಂಥದ ಬಗ್ಗೆಯೂ ಕಮಲಾ ವಿವೇಚಿಸಿದ್ದಾರೆ. ಇಲ್ಲೆಲ್ಲಾ ಅವರ ಸಂಶೋಧನಾ ದೃಷ್ಟಿ, ತಿಳಿದ ವಿಷಯುವನ್ನು ಮಂಡಿಸುವ ವಿಧಾನ ಸಹೃದಯರು ಮೆಚ್ಚುವಂತಿದೆ. ಕವಿ ಪರಮೇಷ್ಠಿಯು 'ಜಿನಧರ್ಮ ದೀಪಿಕಾ' ಎಂಬ ಅಷ್ಟಕ ಗ್ರಂಥ ರಚಿಸಿರು ವುದಾಗಿ ಚಾವುಂಡರಾಯ ತಿಳಿಸಿದ್ದಾನಲ್ಲದೆ 'ಅವರು ಬೇರೆಯವರಂತೆ ಒಂದೊಂದೇ ಚರಿತೆ ಬರೆಯದೆ ಎಲ್ಲ ಮಹಾಪುರುಷರ ಚರಿತೆಯನ್ನೊಳಗೊಂಡ ಪುರಾಣವನ್ನು ಒಬ್ಬರೇ ಬರೆದಿದ್ದಾರೆ' ಎಂದು ಹೊಗಳಿರುವುದನ್ನು ಲೇಖಕಿ ತಿಳಿಸಿದ್ದಾರೆ.

'ಉಮಾಸ್ವಾತಿಯವರ ಹೆಸರನ್ನು ಅಥವಾ ಅವರ ಕೃತಿಯನ್ನು ಹೇಳುವ ಕನ್ನಡ ಉಲ್ಲೇಖಗಳನ್ನು ಕೂಡಿಸಿಕೊಡುವುದು', ಕನ್ನಡ ಕಾವ್ಯಗಳಲ್ಲಿ ಕಂಡು ಬರುವ ತತ್ವಾರ್ಥ ಸೂತ್ರದ ಉಲ್ಲೇಖಗಳು' ಲೇಖನದ ಉದ್ದೇಶ. ಸುಮಂತ ಭದ್ರರು ತತ್ವಾರ್ಥ ಸೂತ್ರಕ್ಕೆ ಗಂಧ ಹಸ್ತಿ ಮಹಾಭಾಷ್ಯವನ್ನು ರಚಿಸಿರುವು ದಾಗಿ ಚಾವುಂಡರಾಯ ಮೊದಲಿಗೆ ತಿಳಿಸಿದ್ದಾನೆ. ದೊಡ್ಡಯ್ಯ ಕವಿ ಸುಮಂತ್ರ ಭದ್ರರನ್ನು ಸ್ತುತಿಸಿದ್ದಾನೆ. ಗೃಧ್ರ ಪಿಂಛಾಚಾರ್ಯ ಎಂಬುದು ಉಮಾಸ್ವಾತಿ ಯವರ ಮತ್ತೊಂದು ಹೆಸರು. ಉಮಾಸ್ವಾತಿಯವರ ತತ್ವಾರ್ಥ ಸೂತ್ರಕ್ಕೆ ದಿವಾಕರಣನಂದಿ ಬರೆದ ಕನ್ನಡ ವೃತ್ತಿಕೆಗೆ 'ತತ್ವಾರ್ಥ ಸೂತ್ರಾನುಗತ ಕರ್ನಾಟ ಲಘುವೃತ್ತಿ' ಎಂದು ಹೆಸರು. ಉಮಾ ಸ್ವಾತಿಯವರ ತತ್ವಾರ್ಥ ಸೂತ್ರಕ್ಕೆ ಬಾಲಚಂದ್ರನು ತಾತ್ಪರ್ಯ ಬರೆದಿದ್ದಾನೆ.

ಪಂಪ ಆದಿಪುರಾಣದಲ್ಲಿ, ಶಾಂತಿನಾಥ ಸುಕುಮಾರ ಚರಿತೆಯಲ್ಲಿ ಬ್ರಹ್ಮಶಿವ ಸಮಯ ಪರೀಕ್ಷೆಯಲ್ಲಿ, ನೇಮಿಚಂದ್ರ ನೇಮಿನಾಥ ಪುರಾಣದಲ್ಲಿ, ಅಗ್ಗಳ ಚಂದ್ರಪ್ರಭ ಪುರಾಣದಲ್ಲಿ, ಆಚಣ್ಣ ವರ್ಧಮಾನ ಪುರಾಣದಲ್ಲಿ, ಪಾರ್ಶ್ವಪಂಡಿತ ಪಾರ್ಶ್ವನಾಥ ಪುರಾಣದಲ್ಲಿ, ಕಮಲಭವ ಶಾಂತೀಶ್ವರ ಪುರಾಣದಲ್ಲಿ, ಕುಮುದೇಂದು ರಾಮಾಯಣದಲ್ಲಿ, ನಾಗರಾಜ ಕವಿ, 3ನೆಯ ಮಂಗರಸ, ಪಾಯಣವರ್ಣಿ–ಇವರೆಲ್ಲಾ ಗೃಧ್ರ ಪಿಂಛಾಚಾರ್ಯನನ್ನು ಸ್ತುತಿ ಸಿರುವುದನ್ನು ನಿದರ್ಶನಗಳಿಂದ ತಿಳಿಸಿ, ಅವರ ವಿಷಯ ಶಾಸನಗಳಲ್ಲೂ ಬರುವು ದಾಗಿ ತಿಳಿಸಿದ್ದಾರೆ.

ಗೃಧ್ರ ಪಿಂಛಾಚಾರ್ಯರನ್ನು ಜೈನ ಕವಿಗಳು ಸ್ತುತಿಸಿರುವುದರಿಂದ ಆಚಾರ್ಯರ ಬಗ್ಗೆ ಅವರಿಗೆಲ್ಲಾ ಅಪಾರಗೌರವವಿತ್ತೆಂಬುದು ಸ್ಪಷ್ಟವಾಗುತ್ತದೆ. ಕಮಲಾ ಹಂಪನಾ ಅವರ ಧಾರ್ಮಿಕ ಶ್ರದ್ಧೆ ಈ ಗ್ರಂಥವಲ್ಲಿ ಎದ್ದು ಕಾಣುತ್ತದೆ. ಧರ್ಮ ಮತ್ತು ಕಾವ್ಯಧರ್ಮ ಎರಡರ ಬಗ್ಗೆಯೂ ಸಮಭಿರುಚಿಯುಳ್ಳ ಇವರು ಕಾವ್ಯದಹೆಚ್ಚಳವನ್ನೂ ಧರ್ಮದ ಆವಶ್ಯಕತೆಯನ್ನೂ ಅರಿತು, ಆಕಾವ್ಯ ಧರ್ಮವನ್ನು ಇತರರಿಗೂ ತಿಳಿಯ ಪಡಿಸಲು ಕೈಗೊಂಡಿರುವ ಸಾಹಿತ್ಯೋಪಾಸನೆಯ ಪ್ರತೀಕ ಗಳಾಗಿ ಬಹುಪಾಲು ಲೇಖನಗಳೆಲ್ಲಾ ಮೈದಾಳಿವೆ. 'ಜೈನ ಸಾಹಿತ್ಯ ಪರಿಸರ' ಗ್ರಂಥವನ್ನು ಸಹೃದಯರಿಗೆ ನೀಡುವುದರ ಮೂಲಕ ಕಮಲಾ ಹಂಪನಾ ಅವರು ತಮ್ಮ ಧರ್ಮದ ಋಣವನ್ನೂ ತೀರಿಸಿದಂತಾಗಿದೆ. ಯಾವುದೇ ಒಂದು ಧರ್ಮವನ್ನು ಸಕ್ರಮವಾಗಿ ಅಭ್ಯಸಿಸಿದ ವ್ಯಕ್ತಿ, ಆಧರ್ಮದ ಬಗ್ಗೆ ತಾನು ತಿಳಿದುದ ನ್ನು ಇತರರಿಗೂ ತಿಳಿಸುವುದು ಒಂದು ಕರ್ತವ್ಯವೇ. ಆ ಕರ್ತವ್ಯವನ್ನು ಕಮಲಾ ಹಂಪನಾ ಅವರು ನಿಷ್ಠೆಯಿಂದ ಕೈಗೊಂಡು ಸಾಕಷ್ಟು ಯಶಸ್ವಿಯಾಗಿದ್ದಾ ರೆಂಬುದರಲ್ಲಿ ಸಂದೇಹವಿಲ್ಲ.

ಸಹಸ್ರಾಭಿಷೇಕ

ಎಂ. ಎ. ಜಯಚಂದ್ರ

22 ಫೆಬ್ರವರಿ 1981, ಭಾರತದ ಶಿಲ್ಪ ಕಲಾ ಜಗತ್ತಿನಲ್ಲೇ ಅವಿಸ್ಮರಣೀಯ ದಿನ. ಅಂದಿಗೆ ಜಗತ್‌ಪ್ರಸಿದ್ಧ ಶ್ರವಣ ಬೆಳ್ಗೊಳದ ಶ್ರೀ ಗೊಮ್ಮಟೇಶ್ವರ ಮೂರ್ತಿಗೆ ಒಂದು ಸಾವಿರ ವರ್ಷ ತುಂಬಿತು. ವಿಶ್ವಧರ್ಮ ಪ್ರವರ್ತಕರಾದ ಏಲಾಚಾರ್ಯ ಮುನಿಶ್ರೀ ವಿದ್ಯಾನಂದರ ನೇತೃತ್ವದಲ್ಲಿ ಐತಿಹಾಸಿಕ ಮಹಾಮಸ್ತಕಾಭಿಷೇಕ ಜರುಗಿತು. ಇಂಥ ಶುಭ ಸಂದರ್ಭದಲ್ಲಿ ಅನೇಕ ಸ್ಮರಣ ಸಂಚಿಕೆಗಳೂ ಸ್ಮರಣ ಸಂಪುಟಗಳೂ ಪ್ರಕಟಗೊಂಡವು. ಬೆಂಗಳೂರಿನ ಬಾಹುಬಲಿ ಸಹಸ್ರಾಭಿಷೇಕ ಸಮಿತಿಯ ವತಿಯಿಂದ ಕಮಲಾ ಹಂಪನಾ ಸಂಪಾದಕತ್ವದಲ್ಲಿ ಹೊರಬಂದ ಸ್ಮರಣ ಸಂಚಿಕೆಯೇ "ಸಹಸ್ರಾಭಿಷೇಕ".

ಇದರಲ್ಲಿ, ಶ್ರೀ ಗೊಮ್ಮಟ ಸಹಸ್ರ ವರ್ಷ ಮಹಾಮಸ್ತಕಾಭಿಷೇಕ (ಲೇ : ವಿಶ್ವಸೇನ), ಚಾವುಂಡರಾಯ ಮತ್ತು

ಗೊಮ್ಮಟ (ಲೇ : ಡಾ॥ ಎಂ. ವಿ. ಶ್ರೀನಿವಾಸ್), ಗೊಮ್ಮಟಮೂರ್ತಿ : ಶಿಲ್ಪ ಪರಂಪರೆ (ಲೇ : ಹಂಪನಾ) - ಎಂಬ ಮೂರು ಕನ್ನಡ ಲೇಖನಗಳೂ ಗೊಮ್ಮಟೇಶ್ವರ : ಇಂಪಾರ್ಟೆನ್ಸ್ (ಲೇ : ಹಂಪ ನಾಗರಾಜಯ್ಯ), ಒನ್ ಥೌಸಂಡ್ ಇಯರ್ಸ್ ಆಫ್ ಗೊಮ್ಮಟ (ಲೇ : ಡಾ॥ ಆರ್. ಎಸ್. ಸುರೇಂದ್ರ), ಎನ್ ಎಕ್ಸ್‌ಪ್ರೆಷನ್ ಆಫ್ ಎಸೆಟಿಕ್ ಐಡಲ್ (ಲೇ : ಎಸ್. ಶ್ರೀಪಾಲ್), ಬಾಹುಬಲಿ (ಲೇ : ಟಿ. ಕೆ. ತುಕೋಲ್)—ಎಂಬ ನಾಲ್ಕು ಆಂಗ್ಲ ಲೇಖನಗಳೂ ಇವೆ. ಅಲ್ಲದೆ ನಾಲ್ಕು ಪುಟಗಳಲ್ಲಿ ಸುಂದರ ಚಿತ್ರಗಳಿವೆ.

ಸಾಮಾನ್ಯವಾಗಿ ಸ್ಮರಣ ಸಂಚಿಕೆಗಳಲ್ಲಿ ಆಯಾಯ ಸಂದರ್ಭದ ಮಹತ್ವವನ್ನು ಪರಿಚಯಿಸುವ ಲೇಖನಗಳಿರುತ್ತವೆ. ಇಲ್ಲಿಯು ಸಹ ಶ್ರವಣಬೆಳ್ಗೊಳ, ಗೊಮ್ಮಟ ಶಿಲ್ಪ, ಅದನ್ನು ನಿರ್ಮಿಸಿದ ಚಾವುಂಡರಾಯ, ಹಿಂದೆ ಜರುಗಿದ ಮಹಾಮಸ್ತಕಾಭಿಷೇಕಗಳು, ಈಗಿನ ಸಮಾರಂಭದ ಮಾರ್ಗದರ್ಶಿಗಳಾದ ಏಲಾಚಾರ್ಯ ಮುನಿಶ್ರೀ ವಿದ್ಯಾನಂದರು, ಜೈನ ಮಠಾಧೀಶರಾದ ಶ್ರೀ ಚಾರುಕೀರ್ತಿ ಸ್ವಾಮೀಜಿ, ಭರತ–ಬಾಹುಬಲಿಯರ ಕಥೆ ಮೊದಲಾದುವು ಸಂಕ್ಷಿಪ್ತವಾಗಿ ಬಂದಿವೆ.

ಹಂಪನಾ ಅವರ ಎರಡು ಲೇಖನಗಳು ಹೆಚ್ಚು ಮೌಲಿಕವಾಗಿ ಉಪಯುಕ್ತವಾಗಿವೆ. ಅವರು ಒಂದು ಬರೆಹದಲ್ಲಿ ಶಿಲ್ಪ ಪರಂಪರೆಯಲ್ಲಿ ಗೊಮ್ಮಟ ಮೂರ್ತಿ ಹೇಗೆ ಬೆಳೆದುಬಂದಿದೆ ಹಾಗೂ ಬೆಳೆಯುತ್ತಿದೆ ಎಂಬುದನ್ನು ತಿಳಿಸಿದರೆ, ಮತ್ತೊಂದರಲ್ಲಿ ವಿಶ್ವವಿಖ್ಯಾತ ವಿದ್ವಾಂಸರು ಅನುಪಮ ಗೊಮ್ಮಟ ಮೂರ್ತಿಯ ಬಗ್ಗೆ ವ್ಯಕ್ತಪಡಿಸಿರುವ ಮಹತ್ವದ ಅಭಿಪ್ರಾಯಗಳನ್ನು ಸಾದರಪಡಿಸಿ, ಹೇಗೆ ಗೊಮ್ಮಟ ವಿಗ್ರಹ ವಿಶ್ವದಲ್ಲಿ ಒಂದು ಹಿರಿಮೆಯ ಸ್ಥಾನವನ್ನು ಗಳಿಸಿದೆ ಎಂಬುದನ್ನು ತಿಳಿಸಿದ್ದಾರೆ.

ಡಾ॥ ಎಂ. ವಿ. ಶ್ರೀನಿವಾಸ್ ಅವರು ತಮ್ಮ ಲೇಖನದಲ್ಲಿ ಚಾವುಂಡರಾಯನ ಸೈನಿಕ ಸಾಧನೆ ಹಾಗೂ ಸಾಂಸ್ಕೃತಿಕ ಸಾಧನೆಯನ್ನು ಪರಿಚಯಿಸಿದ್ದಾರೆ. ಉಳಿದ ಲೇಖನಗಳು ಮೇಲೆ ತಿಳಿಸಿದ ವಿಷಯಗಳನ್ನೇ ವಿವಿಧ ರೀತಿಯಲ್ಲಿ ಸಂದರ್ಭೋಚಿತವಾಗಿ ತಿಳಿಸುತ್ತವೆ.

ಈ 'ಸಹಸ್ರಾಭಿಷೇಕ' ಸ್ಮರಣ ಸಂಚಿಕೆಯು ಮೂಲಕ ಕನ್ನಡಿಗರಿಗೂ ಆಂಗ್ಲ ಭಾಷೆಯ ಮೂಲಕ ಕನ್ನಡೇತರರಿಗೂ ಶ್ರೀ ಗೊಮ್ಮಟೇಶ್ವರ ಸಹಸ್ರಾಬ್ಧಿ ಮಹೋತ್ಸವದ ವೈಶಿಷ್ಟ್ಯವನ್ನು ತಿಳಿಸುವಲ್ಲಿ ಕಮಲಾ ಹಂಪನಾ ಅವರು ಪಟ್ಟಿರುವ ಶ್ರಮ ಸಾರ್ಥಕವಾಗಿದೆ.

ಶ್ರೀಪಚ್ಚೆ

ಶಾಂತಾ ಸನ್ಮತಿ ಕುಮಾರ್

ಕರ್ನಾಟಕದ 19 ಜಿಲ್ಲೆಗಳಲ್ಲಿ "ಚಿನ್ನದ ನಾಡಿದು ಮೈಸೂರು" ಎಂಬ ಕೀರ್ತಿಯನ್ನು ಪಡೆದಿರುವ ಜಿಲ್ಲೆ ಕೋಲಾರ. ಇದು ತೆಲುಗು ನಾಡಿನ ಅಂಚಿನಲ್ಲಿದೆ. ಗಡಿಯ ಜಿಲ್ಲೆಯಾದ ಕೋಲಾರ ಜಿಲ್ಲೆಗೆ ಸೇರಿದ್ದು ಗೌರಿಬಿದನೂರು. ತಾಲ್ಲೂಕು ಕೇಂದ್ರವೂ ಆದ ಗೌರಿಬಿದನೂರಿನಲ್ಲಿ 1976 ರ ನವೆಂಬರ್ ತಿಂಗಳು 12ನೇ ತಾರೀಖಿನಂದು ನೂತನ ವಿದ್ಯಾರ್ಥಿ ನಿಲಯವೊಂದು ಉದ್ಘಾಟನೆಯಾಯಿತು. ಈ ಪೆನಗೊಂಡೆ ಶ್ರೀ ಪಚ್ಚೆ ಪಾರ್ಶ್ವನಾಥಸ್ವಾಮಿ ವಿದ್ಯಾರ್ಥಿ ನಿಲಯ ಉದ್ಘಾಟನೆ ಸಮಾರಂಭಕ್ಕೆ ಹೊಂದಿಸಿಕೊಂಡು ಎರಡು ದಿನಗಳ ಕಾಲ ಅಖಿಲ ಕರ್ನಾಟಕ ಜೈನ ಸಮ್ಮೇಳನವನ್ನು ನಡೆಸಲಾಯಿತು. ಇವೆರಡೂ ಜನೋಪಯೋಗಿ ಉಪಯುಕ್ತ ಕಾರ್ಯಕ್ರಮಗಳ ಸವಿನೆನಪಿಗಾಗಿ ಹೊರತಂದ ಸ್ಮರಣ ಸಂಚಿಕೆಯೇ 'ಶ್ರೀಪಚ್ಚೆ'. ನವರತ್ನಗಳಲ್ಲಿ ಪ್ರಶಸ್ತ

ವಾದದ್ದು ಪಚ್ಚೆ ರತ್ನ. ಅದರಂತೆ 'ಶ್ರೀಪಚ್ಚೆ'ಯೂ ಒಂದು ಮರೆಯಲಾಗದ ಸುಯೋಜಿತವಾದ ಅವಿಸ್ಮರಣೀಯ ಮಾದರಿ ಸ್ಮರಣ ಸಂಚಿಕೆಯಾಗಿದೆ. ಸಾಮಾನ್ಯವಾಗಿ ದೊಡ್ಡ ಸಮ್ಮೇಳನಗಳಲ್ಲಿ, ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಅವುಗಳ ನೆನಪು ಹಸಿರಾಗಿ ಇರಬೇಕೆಂದು ವಿಶೇಷ ಸಾಂದರ್ಭಿಕ ಸಂಚಿಕೆಗಳನ್ನು ಹೊರತರುತ್ತಾರೆ. ಕೆಲವೊಮ್ಮೆ ಹಮ್ಮಿ ಕೊಂಡ ಬೃಹತ್ ಪ್ರಮಾಣದ ಏರ್ಪಾಟಿನ ವೆಚ್ಚದ ಒಂದು ಭಾಗವನ್ನು ಸರಿತೂಗಿಸುವ ಸಲುವಾಗಿ ಜಾಹಿರಾತುಗಳನ್ನು ಸಂಗ್ರಹಿಸಲು ಸ್ಮರಣ ಸಂಚಿಕೆ ಮುದ್ರಿಸುತ್ತಾರೆ. ಅಂತಹ ಸಂಚಿಕೆಗಳಲ್ಲಿ ಮೌಲಿಕವಾದ, ಸಾರ್ವಕಾಲಿಕ ಸಂಗ್ರಹಯೋಗ್ಯ ಲೇಖನಗಳು ಇರುವುದಿಲ್ಲ; ಕಾಟಾಚಾರದ ಕೆಲಸವಾಗಿರು ತ್ತದೆ. ಕೆಲವು ಸಲ ಬಿಡುಗಡೆಯಾದ ಸಂಚಿಕೆಗಳ ವಿತರಣೆಯೂ ಆಗುವುದಿಲ್ಲ.

ಆದರೆ ಪ್ರಸಿದ್ಧ ಲೇಖಕಿಯೂ ವಿಚಾರ ವಾಗ್ಮಿಯೂ ವಿಚಾರವಾದಿಯೂ ಆದ ಕಮಲಾ ಹಂಪನಾ ಅವರ ಸಂಪಾದಕತ್ವದಲ್ಲಿ ಮುದ್ರಣವಾಗಿರುವ 'ಶ್ರೀಪಚ್ಚೆ' ಒಂದು ವಿಶಿಷ್ಟ ಸ್ಮರಣ ಸಂಚಿಕೆಯಾಗಿದೆ. ಇದು ಅಚ್ಚಾಗಿ ಹತ್ತು ವರ್ಷಗಳಾದರೂ ಇಂದಿಗೂ ಇದರ ಸಹಾಯವನ್ನು ವಿದ್ವಾಂಸರು ಪಡೆಯು ತ್ತಿದ್ದಾರೆ. ಕ್ರೌನ್ ¼ ಆಕಾರದಲ್ಲಿ ಮ್ಯಾಪ್‌ಲಿಥೋ ಕಾಗದವನ್ನು ಬಳಸಿ, ಎರಡು ಕಾಲಂನ 24 ಪುಟಗಳು ಇರುವ 'ಶ್ರೀಪಚ್ಚೆ' ಕಾಲನ ಚಲನೆಯಿಂದ ಅಳಿಸಿಹೋಗದ ಅಥವಾ ಮಾಸದ ಸಂಶೋಧನ ಲೇಖನಗಳ ಆಕರ ಗ್ರಂಥವೂ ಆಗಿದೆ. ಕಮಲಾ ಹಂಪನಾ ಅವರು ಇದಕ್ಕೆ ಬರೆದಿರುವ ಸಂಪಾದಕೀಯ ಎಲ್ಲ ಕಾಲಕ್ಕೂ ಸಲ್ಲುವ ಮನನೀಯ ಮಾತುಗಳನ್ನೊಳಗೊಂಡಿದೆ. "ಪೆನಗೊಂಡೆ ಶ್ರೀಪಚ್ಚೆ ಪಾರ್ಶ್ವನಾಥಸ್ವಾಮಿ ಧರ್ಮಸಂಸ್ಥೆ ಕೇವಲ ಹದಿನಾಲ್ಕು ತಿಂಗಳ ಶಿಶು. ಕಳೆದ ಒಂದು ವರ್ಷ ನಿಷ್ಕಾಮ ಬುದ್ಧಿಯಿಂದ ಕರ್ಮಯೋಗಿಗಳಂತೆ ಅವಿರಳವಾಗಿ, ಅವಿಶ್ರಾಂತವಾಗಿ ದುಡಿದುದರ ಫಲವಾಗಿ ಇಂದು ಗೌರಿಬಿದನೂರಿನಲ್ಲಿ ವಿದ್ಯಾರ್ಥಿ ನಿಲಯದ ಬೃಹತ್ತಾದ ಕಟ್ಟಡ ಮೆರೆಯುತ್ತಿದೆ. ಮೂಡಲ ಸೀಮೆಯ ಶ್ವಾಸಕೋಶವಾಗಿ, ಕೇಂದ್ರ ಬಿಂದು ವಾಗಿ ಗೌರಿಬಿದನೂರು ಮತ್ತೆ ತಲೆ ಎತ್ತಿ ಗೌರವ ವಿಶ್ವಾಸ ಆತ್ಮಾಭಿಮಾನ ಗಳಿಂದ ನೇರವಾಗಿ ನಿಲ್ಲುವ ದಿನಗಳು ಈಗ ಬಂದಿವೆ. ಈ ಭಾಗದ ಬಹು ದಿನಗಳ, ಬಹುಜನರ ಕನಸು ನನಸಾದ ಸುದಿನ ನವೆಂಬರ್ 12, 1976. ವಿದ್ಯಾರ್ಥಿ ನಿಲಯದ ಕಟ್ಟಡದ ಉದ್ಘಾಟನೆ ಮತ್ತು ಅಖಿಲ ಕರ್ನಾಟಕ ಜೈನ ಸಮ್ಮೇಳನ ನಡೆಯುತ್ತಿರುವ ಈ ಶುಭ ದಿವಸದ ಸ್ಮರಣೆಗಾಗಿ ಈ ನೆನಪಿನ 'ಶ್ರೀಪಚ್ಚೆ' ಹೊತ್ತಗೆಯನ್ನು ಹೊರತರುತ್ತಿದ್ದೇವೆ.

"ಮೂರು ಲಕ್ಷ ರೂಪಾಯಿ ವೆಚ್ಚದ ವಿದ್ಯಾರ್ಥಿ ನಿಲಯವನ್ನು ಕೇವಲ ಒಂದು ವರ್ಷದಲ್ಲಿ ಕಟ್ಟಿ ಮುಗಿಸಿದ್ದು ಹೇಗೆ? ಇಷ್ಟೊಂದು ಹಣ ಕೂಡಿಸಿದ್ದು ಹೇಗೆ? ಇದೇನು ಪವಾಡವೇ? ಈ ಧರ್ಮಸಂಸ್ಥೆಯಲ್ಲಿ ಭಾರೀ ನಿಧಿ ಕೂಡಿಸಿಟ್ಟಿದ್ದಾರೆಯೇ?—ಇವೇ ಮೊದಲಾದ ಪ್ರಶ್ನೆಗಳು ಸಹಜವಾಗಿಯೇ ಕೇಳಿಬರುತ್ತವೆ. ಆದರೆ ಈ ಧರ್ಮಸಂಸ್ಥೆ ಪ್ರಾರಂಭವಾದದ್ದು ಬಿಡಿಗಾಸು ಇಲ್ಲದೆ. ಈಗ ಅದರ ಬಂಡವಾಳವೆಲ್ಲ ಪ್ರಾಮಾಣಿಕತೆಯೊಂದೇ. ಶ್ರದ್ಧೆಯೇ ಅದರ ಆಸ್ತಿ, ಶಿಸ್ತೇ ಅದರ ವ್ಯವಸ್ಥೆ. ಸಂಘಟನೆಯೇ ಅದರ ವ್ಯವಸ್ಥೆ. ಸಂಘಟನೆಯೇ ಅದರ ಉಸಿರು. ಪ್ರೀತಿಯೇ ಅದರ ಮಂತ್ರ. ಸೇವೆಯೇ ಅದರ ಪರಮಗುರಿ. ಈ ಆದರ್ಶ ಆಶಯಗಳಿಂದ ಕಾರ್ಯೋನ್ಮುಖವಾಗಿ ಹೊರಟಿದ್ದರಿಂದ ಹಿಂದೆ ಬಟ್ಟ ಬಯಲಾಗಿದ್ದ ಈ ಬೋಡು ಭೂಮಿ ಇಂದು ಭವ್ಯ ಸಂಸ್ಕೃತಿಯ ಧಾರ್ಮಿಕ ಕೇಂದ್ರವಾಗಿದೆ. ನೂರಾರು ವಿದ್ಯಾರ್ಥಿಗಳಿಗೆ ಅಶನ ವಸನ ನೀರು ನೆರಳು ನೀಡುವ ಮಹಾವೃಕ್ಷವಾಗಿ ಈ ವಿದ್ಯಾರ್ಥಿ ನಿಲಯ ಬೆಳೆಯಲಿ. ಈ ಧರ್ಮಸಂಸ್ಥೆ ನಂದಾದೀವಿಗೆಯಾಗಿ ಬೆಳಗಲಿ ಎಂದು ಹಾರೈಸುತ್ತೇವೆ."

ಲೇಖಕಿ ಕಮಲಾ ಹಂಪನಾ ಅವರ ಶೈಲಿಯ ಸೊಗಸನ್ನು ಕಲ್ಪನಾ ವಿಲಾಸವನ್ನು ಸಾಮಾಜಿಕ ಕಳಕಳಿಯನ್ನು ಈ ವಾಕ್ಯಗಳಲ್ಲಿ ಕಾಣುತ್ತೇವೆ. ಬಹುಶ್ರುತರೂ ಉನ್ನತ ವ್ಯಾಸಂಗ ಮಾಡಿರುವವರೂ ಕನ್ನಡ ಭಾಷಾವಿಶಾರದರೂ ಆದ ಕಮಲಾ ಹಂಪನಾ ಅವರು ಸಹಜವಾಗಿಯೇ ವಿದ್ಯಾರ್ಥಿಗಳ ಕ್ಷೇಮಚಿಂತನೆಗೆ ಪ್ರಾಶಸ್ತ್ಯ ಕೊಟ್ಟಿದ್ದಾರೆ.

ಇಂತಹ ಸ್ಮರಣ ಸಂಚಿಕೆಗಳಿಗೆ ಹಿರಿಯರಿಂದ, ಗಣ್ಯರಿಂದ ಸಂದೇಶಗಳನ್ನು ತರಿಸಿ ಸಾಮಾನ್ಯವಾಗಿ ಪುಟಕ್ಕೊಂದರಂತೆ ಮುದ್ರಿಸಿ ಕಾಗದ ವ್ಯಯ ಮಾಡುವುದುಂಟು. ಆದರೆ ಇವರು ಹಾಗೆ ಮಾಡದೆ ಬಂದಿದ್ದ ಸಂದೇಶಗಳಲ್ಲಿ ಮಾಮೂಲೀ ಮಾತುಗಳನ್ನು ಕಿತ್ತುಹಾಕಿ, ಉದ್ಧರಿಸಬೇಕಾದ ಮುಖ್ಯ ಸಂದೇಶ ರೂಪದ ವಾಕ್ಯಗಳನ್ನು ಕ್ರಮವಾಗಿ ಅಳವಡಿಸಿದ್ದಾರೆ. ಭಾವಚಿತ್ರಗಳನ್ನೂ ಅಷ್ಟೆ. ಸ್ಥಳಾವಕಾಶವನ್ನೂ ಪೋಲು ಮಾಡಿಲ್ಲ. ಅಷ್ಟೇ ಅಲ್ಲದೆ, ಚಿತ್ರಗಳನ್ನು ಅಚ್ಚುಕಟ್ಟಾಗಿ ಸಂಯೋಜಿಸಿದ್ದಾರೆ. ಸಂಪಾದಕರ ವಿಚಕ್ಷಣ ಬುದ್ಧಿಯನ್ನು, ಒಪ್ಪವಾಗಿ ಜೋಡಿಸಿರುವ ಕಲೆಯನ್ನು ಪ್ರತಿಯೊಂದು ಪುಟದಲ್ಲೂ ಕಾಣುತ್ತೇವೆ. ಜಾಹಿರಾತುಗಳನ್ನು ಲೇಖನಗಳ ನಡುವೆ ಮೊಸರಿನಲ್ಲಿ ಕಲ್ಲು ಸಿಕ್ಕಹಾಗೆ ಕೊಡದೆ ಪುಸ್ತಕದ ಕಡೆಯಲ್ಲಿ ಸೇರಿಸಿದ್ದಾರೆ. ಅದರಲ್ಲೂ ಒಂದು ಅಂದ ಕಾಣುವ ಹಾಗೆ ಅಣಿಗೊಳಿಸಿದ್ದಾರೆ.

'ಶ್ರೀಪಚ್ಚೆ'ಯಲ್ಲಿ ಒಟ್ಟು ಹದಿನಾರು ಲೇಖನಗಳಿವೆ. ಇವುಗಳಲ್ಲಿ ಡಾ॥ ಟಿ. ಜಿ. ಕಲಘಟಗಿಯವರು ಬರೆದಿರುವ 'ಪ್ರಭಾಚಂದ್ರ' ಮಾತ್ರ ಇಂಗ್ಲೀಷಿನಲ್ಲಿದೆ. ಉಳಿದ 15 ಲೇಖನಗಳು ಕನ್ನಡದಲ್ಲಿವೆ :

ಮೂಡಲ ಸೀಮೆಯ ಜಿನಮಂದಿರಗಳು : ಗುಡಿಬಂಡೆ ಸುರೇಶ್.
ಡಾ॥ ಆದಿನಾಥ ನೇಮಿನಾಥ ಉಪಾಧ್ಯೆ : ನ್ಯಾ॥ ಟಿ. ಕೆ. ತುಕೋಳ್
ಆಚಾರ್ಯ ಮಾಘಣಂದಿಗಳು : ಎಂ. ಸಿ. ಪದ್ಮನಾಭ ಶರ್ಮ
ಸಮ್ಯಕ್ತ್ವ ಸಂಸ್ಕಾರ ಸಾರ್ವಭೌಮರು : ಪ್ರೊ॥ ಜಿ. ಬ್ರಹ್ಮಪ್ಪ
ಕನ್ನಡದ ಮೇಲೆ ಪ್ರಾಕೃತ ಪ್ರಭಾವ : ಪ್ರೊ॥ ಎಸ್. ಎ. ಶಿರಗುಪ್ಪಿ
ವೈದ್ಯಕೀಯಕ್ಕೆ ಜೈನರ ಕೊಡುಗೆ : ಡಾ॥ ಧನ್ಯಕುಮಾರ ಇಜಾರಿ
ಕರ್ನಾಟಕದ ಆಧುನಿಕ ಜೈನ ಸಂಘಟನೆಯಲ್ಲಿ
ಕೆಲವು ಸಾಂಸ್ಕೃತಿಕ ಪ್ರಯತ್ನಗಳು : ಪ್ರೊ॥ ಬಿ. ಬಿ. ಮಹೀಷವಾಡಿ
ಕರ್ನಾಟಕದ ಜೈನ ಮಂತ್ರಿಗಳು ಸೇನಾಪತಿಗಳು : ಎಸ್. ಪಿ. ಪಾಟೀಲ್
ಪಾರ್ಶ್ವನಾಥ ತೀರ್ಥಂಕರರ ವಿಗ್ರಹಗಳು : ಕಮಲಾ ಹಂಪನಾ
ಜೈನರಲ್ಲಾಗಬೇಕಾದ ಸುಧಾರಣೆಗಳು–ಇಂದಿನ ಅಗತ್ಯ :
ಡಾ॥ ಬಿ. ಎಸ್. ಕೆ.
ಪ. ಪೂ. 108 ಸಮಂತಭದ್ರ ಮುನಿಮಹಾರಾಜರು : ಪದ್ಮರಾಜಶಾಸ್ತ್ರಿ
ಸಾದರು ಹಾಗೂ ಅದರ ಮೂಲ : ಎಸ್. ಆರ್. ಪುಟ್ಟರಾಮಯ್ಯ
19–20ನೇ ಶತಮಾನದ ಪ್ರಮುಖ ಜೈನಾಚಾರ್ಯರು :
ಎಸ್. ಬಿ. ವಸಂತರಾಜಯ್ಯ
ಕರ್ನಾಟಕ ಮತ್ತು ಜೈನಧರ್ಮ : ಡಾ॥ ಎಂ. ವಿ. ಶ್ರೀನಿವಾಸ್
ಬಿದರೆ–ಅಂದು ಇಂದು : ಸಿ. ರಾಮಚಂದ್ರ ಸ್ಯಾದ್ವಾದಿ

ಮೇಲಿನ ಒಂದೊಂದು ಲೇಖನವೂ ಜೈನಧರ್ಮ ಸಾಹಿತ್ಯ ಇತಿಹಾಸ ಮತ್ತು ಸಾಂಸ್ಕೃತಿಕ ಅಧ್ಯಯನ ಮಾಡುವವರಿಗೆ ಸಹಾಯಕ ಸಾಹಿತ್ಯವನ್ನು ಒದಗಿಸುತ್ತದೆ. ಇಂದಿಗೂ ತನ್ನ ಪ್ರಸ್ತುತತೆಯನ್ನು ಪಡೆದಿರುವ ಇಂತಹ ಅಭ್ಯಾಸಪೂರ್ಣ ಲೇಖನಗಳನ್ನು ಬರೆಯಿಸಿ, ಸಂಯೋಜಿಸಿದ ಶ್ರೇಯಸ್ಸು ಸಂಪಾದಕಿ ಕಮಲಾ ಹಂಪನಾ ಅವರಿಗೆ ಸೇರಿದ್ದು. ಇದರಲ್ಲಿ ಸ್ವತಃ ಅವರೇ ಬರೆದ ಒಂದು ಲೇಖನವನ್ನು ಸೇರಿಸಿದ್ದಾರೆ. ಅದೇ 'ಪಾರ್ಶ್ವನಾಥ ತೀರ್ಥಂಕರರ ವಿಗ್ರಹಗಳು' ಎಂಬುದು. ಇದು ಬಹಳ ಒಳ್ಳೆಯ ಶೋಧನ ಲೇಖನವಾಗಿದೆ, ವಿಶೇಷವಾಗಿ ಕರ್ನಾಟಕದೊಳಗೆ ಎಲ್ಲೆಲ್ಲಿ 'ಪಾರ್ಶ್ವನಾಥ ತೀರ್ಥಂಕರರ ವಿಗ್ರಹಗಳಿವೆ, ಅವುಗಳ ಶಿಲ್ಪ ಚಾತುರ್ಯ ಮತ್ತು ಮಹತ್ವ ವೇನು, ಶಿಲ್ಪಿಗಳು ಈ ಮೂರ್ತಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಕಡೆಯಲಿರುವ

ಶಿಲ್ಪದ ಕಾರಣಗಳು ಯಾವುವು–ಮೊದಲಾದ ಸೂಕ್ಷ್ಮಗಳಿವೆ. ಇದೊಂದು ಸಂಶೋಧನ ಮೌಲ್ಯದ ಲೇಖನ, ಇದು ಕಮಲಾ ಹಂಪನಾ ಅವರ 'ಅನೇಕಾಂತವಾದ' ಎಂಬ ಸಂಕಲನ ಗ್ರಂಥದಲ್ಲಿ ಸೇರ್ಪಡೆಯಾಗಿದೆ.

ಕಮಲಾ ಹಂಪನಾ ಅವರಿಗೆ ಕನ್ನಡ ನಾಡಿನ ಎಲ್ಲ ಹಿರಿಯ ಕಿರಿಯ ಲೇಖಕ ಲೇಖಕಿಯರ ನಿಕಟ ಪರಿಚಯವಿದೆ. ಆದರಿಂದ ಈ ಸ್ಮರಣ ಸಂಚಿಕೆಗೆ ಕಡಮೆ ಅವಧಿಯಲ್ಲಿಯೂ ಹಿರಿಯ ಲೇಖಕರಿಂದ ಲೇಖನಗಳನ್ನು ತರಿಸಿ ಮುದ್ರಿಸಿ ಮುದ್ದಾಗಿ ಹೊರತರಲು ಸಾಧ್ಯವಾಗಿದೆ. ಮುದ್ರಣ ದೋಷಗಳು ಹೆಚ್ಚಾಗಿ ಇಲ್ಲದಿರುವುದು ಇದರ ಒಂದು ಹೆಚ್ಚಳ. ಕರಡನ್ನು ಸರಿಯಾಗಿ ಕಣ್ಣಿಟ್ಟು ನೋಡಿ ತಿದ್ದಿ ಪ್ರಯಾಸಪಟ್ಟಿದ್ದರೆ ಮಾತ್ರ ತಪ್ಪುಗಳಿಲ್ಲದೆ ಗ್ರಂಥ ಗಳನ್ನು ಹೊರತರಲು ಸಾಧ್ಯ. ಸಂಪಾದಕರು ಆ ಶ್ರಮ ಪಟ್ಟಿದ್ದಾರೆ. ರಕ್ಷಾಪುಟದ ವಿನ್ಯಾಸವೂ ಮುದ್ದಾಗಿದೆ, ಹೊಸತನದಿಂದ ಕೂಡಿದೆ.

ಒಟ್ಟಿನಲ್ಲಿ ಹೇಳುವುದಾದರೆ ಕಮಲಾ ಹಂಪನಾ ರವರ ಸಂಪಾದಕತ್ವದಲ್ಲಿ ಬಂದಿರುವ 'ಶ್ರೀಪಚ್ಚೆ' ಎಂಬ ನೆನಪಿನ ಸಂಪುಟ ಬಹುಕಾಲದ ತನಕ ನೆನಪಿನಲ್ಲಿರುತ್ತದೆ.

ಜನ್ನ

ಬೆನಕನಹಳ್ಳಿ ಜಿ ನಾಯಕ

ರಾಷ್ಟ್ರೋತ್ಥಾನದವರು 'ಭಾರತ ಭಾರತಿ' ಮಾಲೆಯಲ್ಲಿ ಪ್ರಕಟಪಡಿಸಿರುವ ಜನ್ನ ಕೃತಿಯನ್ನು ಸಿದ್ಧಪಡಿಸಿ ಕೊಟ್ಟವರು ಕಮಲಾ ಹಂಪನಾ ಅವರು. ಪ್ರಾಚೀನ ಕವಿಗಳ ಸಂದರ್ಭದಲ್ಲಿ ಗಮನಾರ್ಹವಾದ ಕೃತಿಗಳನ್ನು ನೀಡಿದ ಜನ್ನ ಜೈನ ಕವಿಯಾದರೂ ಸಾರ್ವತ್ರಿಕ ಸಂದರ್ಭದಲ್ಲಿ, ಸರ್ವಕಾಲಕ್ಕೂ ಚರ್ಚೆಗೊಳಗಾಗುವ ಕವಿ. ಕವಿ ಹಾಗೂ ಕವಿಯ ಕೃತಿಗಳನ್ನು ಕುರಿತು ಸರಳವಾಗಿ ಕಥನಾತ್ಮಕವಾಗಿ ಎಳೆಯರಿಗೆ ಪರಿಚಯಿಸಿ ಕೊಟ್ಟಿರುವ ಕಮಲಾ ಹಂಪನಾ ಅವರು ಅಭಿನಂದನಾರ್ಹರು, ಕೃತಿಯ ಕುರಿತು ವಿಚಾರ ಮಾಡುವುದಕ್ಕಿಂತ ಮುನ್ನ ಜನ್ನ ಕವಿಯ ಕುರಿತು ವಿಚಾರ ಮಾಡುವುದು ಸರಿಯಾದ ಕ್ರಮ ಎಂದೆನಿಸುತ್ತದೆ.

ಜನ್ನ ಎಂಬುದು ಜನಾರ್ದನ ಎಂಬ ಹೆಸರಿನ ಸಂಕ್ಷಿಪ್ತರೂಪ. ಜನ್ನ ತನ್ನನ್ನು

ಜನ್ನಿಗ, ಜನ್ನಯ್ಯ, ಜಾನಕಿ, ಜನ್ನಮರಸ ಮುಂತಾದ ಹೆಸರುಗಳಿಂದ ಕರೆದುಕೊಂಡಿದ್ದಾನೆ. ಜೈನನಾದ ಇವನ ತಂದೆ ಶಂಕರ. ಸುಮನೋಬಾಣನೆಂಬ ಬಿರುದಿನಿಂದಲೂ ಗುರುತಿಸಲ್ಪಡುತ್ತಿದ್ದ. ಕವಿಯದು ಕಮ್ಮೆವಂಶ. ಕಾಶ್ಯಪಗೋತ್ರ. ಜನ್ನನ ತಾಯಿ ಗಂಗಾದೇವಿ. ಹೆಂಡತಿಯ ಹೆಸರು ಲಕುಮಾದೇವಿ. ಜಗದೇಕ ಮಲ್ಲನಲ್ಲಿ ಕಟಕೋಪಾಧ್ಯಾಯನಾಗಿದ್ದ ಅಭಿನವ ಶರ್ವವರ್ಮನೆಂಬ ಬಿರುದಿನ ಎರಡನೆಯ ನಾಗವರ್ಮ ಇವನಿಗೆ ಉಪಾಧ್ಯಾಯ. 'ಸೂಕ್ತಿ ಸುಧಾರ್ಣವ'ದ ಕರ್ತೃ ಮಲ್ಲಿಕಾರ್ಜುನ ಜನ್ನನ ಸೋದರಿಯ ಗಂಡ. ಕೇಶಿರಾಜ ಜನ್ನನ ಸೋದರಳಿಯ–ಹೀಗೆ ಶ್ರೇಷ್ಠ ಪರಂಪರೆಯಲ್ಲಿ ಬಂದಂಥ ಜನ್ನ ವಾದಿರಾಜನ ಕೃತಿಯನ್ನು ಕನ್ನಡಕ್ಕೆ ತಂದುಕೊಟ್ಟವನು. ಕನ್ನಡಕ್ಕೆ ತಂದು ಕೊಡುವಾಗ, ಜನ್ನ ತನ್ನ ಸ್ವಂತಿಕೆಯನ್ನು ತೋರಿದ್ದಾನೆ.

'ಅನುಭವಮುಕುರ'ವೆಂಬ ಕಾಮಶಾಸ್ತ್ರ ಸಂಬಂಧವಾದ ಒಂದು ಕೃತಿಯೂ ನಾಲ್ಕು ಶಾಸನಗಳೂ 'ಯಶೋಧರ ಚರಿತೆ' ಅನಂಥನಾಥಪುರಾಣ' ಎಂಬ ಎರಡು ಕಾವ್ಯಗಳೂ ಜನ್ನನಿಂದ ರಚಿತವಾಗಿ ಉಪಲಬ್ಧವಾಗಿವೆ. ಜನ್ನನ ಶಾಸನಗಳು ರಾಜಭಕ್ತಿಪರವಾದ, ಸಾಂಪ್ರದಾಯಿಕ ಚಂಪೂಶೈಲಿಯ ರಚನೆಗಳು ದೇವಾಲಯಗಳಿಗೆ ದತ್ತಿಬಿಟ್ಟದ್ದು ಅವು ಹೇಳುವ ವಿಷಯ.

ಪಂಪ, ರನ್ನರಂತೆ ಜನ್ನ ಎರಡು ಕೃತಿಗಳನ್ನು ಬರೆದಿದ್ದರೂ ತನ್ನ ಎರಡು ಕೃತಿಗಳಲ್ಲಿ ಧಾರ್ಮಿಕವಸ್ತುವನ್ನು ನಿರೂಪಿಸಿದ್ದಾನೆ. ಯಶೋಧರ ಚರಿತೆಯಲ್ಲಿ ಲೌಕಿಕದ ಅಂಶಗಳನ್ನು ಮನಗಾಣಬಹುದಾಗಿದೆ. ಜನ್ನನಿಗೆ ತನ್ನ ಕವಿತೆಯ ಬಗ್ಗೆ ಹೆಮ್ಮೆಯಿದೆ: ಕವಿಚಕ್ರವರ್ತಿ ಎಂದು ಅಭಿಮಾನದಿಂದ ಕರೆದುಕೊಂಡಿದ್ದಾನೆ. "ಈ ಜನಾರ್ದನನ ವಕ್ತ್ರಾಂಭೋಜಮನ್ ಸಾರ್ದು ಸುಸ್ಥಿತೆಯಾಗಿರ್ದುದಱಿಂದೆ ತಾನ್ ಸೊಬಗೆಯಾದಳ್ ಜಾಣೆಯಾದಳ್ ಸರಸ್ವತಿ ವಿಶ್ವಪೂಜಕರೊಳ್" ಎಂಬುದು ಅವನ ಪ್ರತಿಷ್ಠೆ. "ರನ್ನನ್ ವೈಯಾಕರಣನ್, ಜನ್ನನ್ ಮೇಣ್ ಕವಿಗಳೊಳಗೆ ವೈಯಾಕರಣನ್, ಹೊನ್ನನ್ ಅಸಹಾಯಕವಿ. ಮೇಣ್ ಜನ್ನಿಗನ್ ಅಸಹಾಯಸುಕವಿ ಕವಿಚಕ್ರಿಗಳೊಳ್" ಎಂದುಕೊಂಡಿರುವ ಜನ್ನ, ವಿವಿಧ ಬಿರುದುಗಳಿಗೆ ಪಾತ್ರನಾದವನು. ಹಿಂದಿನ ಕವಿಯಂತೆ ಜನ್ನನೂ ಪೂರ್ವಕವಿಗಳನ್ನು ನೆನಪುಮಾಡಿಕೊಂಡಿದ್ದಾನೆ. ಕಾವ್ಯಮೀಮಾಂಸೆಗೆ ಸಂಬಂಧಿಸಿದ ಹಾಗೆ ಜನ್ನ ಕೆಲ ಮಾತುಗಳನ್ನು ತನ್ನ ಕಾವ್ಯದ ರಚನೆಯ ಸಂದರ್ಭದಲ್ಲಿ ಹೇಳಿಕೊಂಡಿದ್ದಾನೆ. ಕವಿ ಕಾವ್ಯ ಕುರಿತು ಚರ್ಚಿಸಿದ್ದಾನೆ. ಕವಿಯಾದವನು 'ರಸ ಸಂವ್ಯುತ್ಪನ್ನನೂ ವಿವಿಧ ಕಳಾಭಿಜ್ಞನೂ ಆಗಮಜ್ಞನೂ ಆಗಿರಬೇಕು. ಕಾವ್ಯ ಒಂದು ಶ್ರೇಷ್ಠ ಕಲಾಕೃತಿಯಾಗಬೇಕಾದರೆ 'ಅಖಿಳಶ್ರಾವ್ಯ' 'ಪದವ್ಯುತ್ಪತ್ತಿ, ಬಹುಕಾವ್ಯಾನುಭವ, ಕಳಾಪ್ರತಿಭೆ, ಲೋಕಜ್ಞತ್ವ' ಇವು

ಕವಿತಾ ಪರಿಕರಗಳು. ಕವಿತಾಶಕ್ತಿ ಕಾಮಧೇನುವಿಗೆ ಸಮಾನ ಎಂದು ಭಾವಿಸಿರುವ ಜನ್ನ, ಅಂಥ ಶಕ್ತಿಯಿಂದ 'ಬಾಳಬಟ್ಟೆ ಪರಮಾಗಮಂ' ಎನಿಸುವಂತಹ ಕೃತಿಗಳು ಅರಳಬೇಕು ಎಂದು ಅಭಿಪ್ರಾಯ ಪಟ್ಟಿದ್ದಾನೆ.

ಪಂಪ, ತನ್ನನ್ನು 'ಕಲಿ' ಎಂದುಕೊಂಡಿರುವ ಹಾಗೆ ಜನ್ನನೂ ತಾನು 'ಕವಿ' ಎಂದು ಭಾವಿಸಿರುವಂತಿದೆ. 'ನಾಟ್ಯಭು ಜನಾರ್ದನದೇವ' ನರಸಿಂಹ ಚೋಳ ಕುಲೋದ್ಧರಣನ ಸರ್ವಜ್ಞಭೂಪನ ಓಲಗದೊಳ್ ನಿಂದಿರೆ ದಂಡಾಧೀಶಂ, ಕುಳ್ಳಿರೆ ಮಂತ್ರಿ, ತೊಡಂಕೆ ಕವಿ ಜನಾರ್ದನದೇವಂ' ಎಂದು ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ.

ಈ ಮೊದಲಲ್ಲಿ ಹೇಳಿರುವಂತೆ ಜನ್ನ 'ಯಶೋಧರಚರಿತೆಯಲ್ಲಿ' ಅಮೃತಮತಿಯ ಮೋಹ ಕುರಿತು ವರ್ಣಿಸುವಾಗ ಮೂಲ ಕವಿಯನ್ನು ಮರೆತಿಲ್ಲವೆಂದು ತನ್ನ ಬಗ್ಗೆ, ಕಾವ್ಯದ ಆಶಯ ಕುರಿತು ಜನ್ನನ ಹೆಗ್ಗಳಿಕೆ ಕೇವಲ ಸ್ವಪ್ರತಿಷ್ಠೆಯ ಹೆಗ್ಗಳಿಕೆಯಾಗಿರದೆ ಪ್ರತಿಭೆಯ ಅಭಿಮಾನವಾಗಿದೆ.

ಪ್ರಸ್ತುತ ಕಾವ್ಯದ ಕಥೆಯನ್ನು, ಜೈನರು ಜೀವದಯಾಷ್ಟಮಿ ನೋಂಪಿಯ ಆಚರಣೆಯ ಕಾಲದಲ್ಲಿ ಈ ಕಥೆಯನ್ನು ಪಾರಾಯಣ ಮಾಡುತ್ತಾರೆ. "ಜನ್ನನಿಗಿಂತ ಮುನ್ನ ಕನ್ನಡದಲ್ಲೂ ಯಶೋಧರ ವಿಷಯಕವಾದ ಕೃತಿರಚನೆಯಾಗಿರಬೇಕೆಂದು" ಅವನ ಮಾತಿನಿಂದಲೆ ಸೂಚಿತವಾಗುತ್ತದೆ. ಆದರೆ ಕೃತಿಯು ಇದುವರೆಗೂ ಲಭ್ಯವಾಗಿಲ್ಲ. 'ಮೂಲಸ್ವರೂಪದಲ್ಲಿ ಯಶೋಧರನ ಕಥೆ ಹೆಣ್ಣಿನ ದ್ರೋಹವನ್ನು ಚಿತ್ರಿಸುವ ಒಂದು ಜನಪದ ಕಥೆಯಾಗಿದ್ದಿರಬೇಕು. ಅನಂತರ ಅದು ಕವಿಗಳ ಕೈಯಲ್ಲಿ ಧಾರ್ಮಿಕ, ನೈತಿಕ ಉದ್ದೇಶಗಳಿಗಾಗಿ ಬಳಕೆಗೊಂಡಿರಬೇಕು. ಈ ದೃಷ್ಟಿಯಿಂದ ಯಶೋಧರನ ಕಥೆಯ ಮೂಲವನ್ನು ಕ್ರಿಸ್ತಶಕದ ಪ್ರಾರಂಭಕ್ಕೆ ಕೊಂಡೊಯ್ಯಬಹುದು ಎಂಬ ಅಭಿಪ್ರಾಯವಿದೆ. ಈ ಅಭಿಪ್ರಾಯದ ಹಿನ್ನೆಲೆಯಲ್ಲಿ ಸಿ. ಪಿ. ಕೆ. ಅವರು ಹೇಳಿರುವ ಮಾತನ್ನು ಅಗತ್ಯ ಗಮನಿಸಬಹುದಾಗಿದೆ. ಯಶೋಧರನಕಥೆ, ಮೂಲದಲ್ಲಿ ಜನಪದ ಕಥೆಯಾಗಿದ್ದಿರಬೇಕು. ಜಾನಪದಕ್ಕೆ ಇತಿಹಾಸ ಇಲ್ಲ ನಿಜ. ಆದರೆ ಪರಂಪರೆಯಿದೆ. ಪರಂಪರೆಯಿಂದ ಪರಂಪರೆಗೆ ಬೆಳೆದುಕೊಂಡು ಬಂದಂಥ ಸಂದರ್ಭದಲ್ಲಿ ಎಷ್ಟೋ ನೀತಿಕಥೆಗಳು ಬೆಳಕು ಕಂಡಿವೆ. ಇಂಥ ನೀತಿ ಕಥೆಗಳಲ್ಲಿ ಇದೂ ಒಂದಾಗಿರಬಹುದು. ಈ ಕಥೆಗಳು ದ್ರಾವಿಡ ಮೂಲವನ್ನುಳ್ಳವೆಂದೂ ಹೇಳಬಹುದು. ಗುಣಾಢ್ಯ, ದಂಡಿ ಮುಂತಾದ ದಾಕ್ಷಿಣಾತ್ಯ ಲೇಖಕರಲ್ಲಿ ಈ ಬಗೆಯ ಪರಿಕಲ್ಪನೆಯಿರುವುದು. ಯಶೋಧರ ಚರಿತೆಯ

ಭವಾವಳಿಯಲ್ಲಿ ಪಶುಪಕ್ಷಿಗಳು ವಿಶೇಷವಾಗಿ ಕಾಣಿಸಿಕೊಳ್ಳುವುದನ್ನೂ ಗಮನಕ್ಕೆ ತಂದುಕೊಳ್ಳಬಹುದು.

ಪ್ರಭಂಜನ ಮತ್ತು ಹರಿಭದ್ರರಲ್ಲಿ ಕಾಣಸಿಗುವ ಈ ಕಥೆ ಸರಿಯಾದ ರೂಪ ಪಡೆದುಕೊಂಡಿದ್ದು ವಾದಿರಾಜನ ಕೃತಿಯ ಮೂಲಕ. ವಾದಿರಾಜನಲ್ಲಿ ನಾಲ್ಕು ಸರ್ಗಗಳು, 994 ಪದ್ಯಗಳಿದ್ದರೆ ಜನ್ನನಲ್ಲಿ ನಾಲ್ಕು ಅವತಾರಗಳು, 310 ಪದ್ಯಗಳು. ಜನ್ನ, ವಾದಿರಾಜನನ್ನು ಅನುಸರಿಸಿದ್ದರೂ ಅಂಧಾನುಕರಣೆ ಅವನದಲ್ಲ. ಅವನಲ್ಲಿ ಒಳ್ಳೆಯ ಭಾಷಾಂತರ ಗುಣವಿದೆ, ಕವಿ ಮನಸ್ಸಿದೆ, ಪ್ರತಿಭೆಯಿದೆ, ಸಂಗ್ರಹಕ ಗುಣವೂ ಅವನಲ್ಲಿದೆ. ಕೃತಿಯ ಸಂದರ್ಭದಲ್ಲಿ ವಸ್ತುವಿಗೆ ಚ್ಯುತಿಬಾರದಂತೆ ಅಗತ್ಯ ಎನ್ನಿಸಿದ ಕಡೆ ಹಿಗ್ಗಿಸಿದ್ದಾನೆ. ಮೂಲದಲ್ಲಿರುವ ಕೆಲ ಭಾಗಗಳನ್ನೂ ಔಚಿತ್ಯವಲ್ಲ ಎನಿಸಿದ್ದರಿಂದ ಬಿಟ್ಟಿದ್ದಾನೆ. ಜನ್ನ ಆಡುಮಾತಿನ ಜನಪದ ಗಾದೆಗಳನ್ನೂ ಬಹುಸೊಗಸಾಗಿ ಬಳಸಿಕೊಂಡಿದ್ದಾನೆ "ಜನ್ನನು ತನ್ನ ಕಾವ್ಯದ ಪ್ರತಿಯೊಂದು ಪದ್ಯವನ್ನೂ ವಾದಿರಾಜನ ಕಾವ್ಯದ ಪದ್ಯಗಳನ್ನೇ ಮನಸ್ಸಿನಲ್ಲಿಟ್ಟುಕೊಂಡು ಬರೆದಿದ್ದರೂ ತಾನು ಮುಟ್ಟಿದುದೆಲ್ಲವನ್ನು ಚಿನ್ನವನ್ನಾಗಿ ಮಾಡಿರುವನು."

ಮಾರಿದತ್ತನಲ್ಲಿಗೆ ಅಭಯರುಚಿ ಅಭಯಮತಿಯರನ್ನು ಕರೆತರುವಾಗ ಅಭಯರುಚಿ ತಂಗಿಗೆ "ಅಭೀತೆಯಾಗು ಎಲಗೆ ತಾಯೆ ಮರಣದ ದೆಸೆಯೊಳ್" ಎಂದು ಧೈರ್ಯ ತುಂಬುತ್ತಾನೆ. "ನಿಯತಿಯನಾರ್ ಮಿಾಱಿದಪರ್" ಎನ್ನುವಲ್ಲಿ ವಿಧಿ ತತ್ವವನ್ನು ಕಾವ್ಯದ ಮೊದಲಲ್ಲಿಯೇ ಪ್ರಸ್ತಾಪಿಸಲಾಗಿದ್ದು ಈ ಕಾವ್ಯದ ಒಟ್ಟಾರೆ ಆಗು ಹೋಗುಗಳು ಭವಾವಳಿಯ ಮೇಲೆ ನಿಂತಿರುವುದಾದರೂ 'ವಿಧಿ'ಯ ಸೂತ್ರದಂತೆ ನಡೆದುಕೊಂಡು ಹೋಗುತ್ತವೆ. ಅಭಯಮತಿ ಹೇಳಿರುವ ಮಾತಿನಲ್ಲಿ ಗ್ರಾಮೀಣ ಸೊಗಡಿದೆ. 'ಮಾಡಿದ್ದುಣ್ಣೊ ಮಹರಾಯ' ಎನ್ನುವ ಹಾಗೆ "ಮಾಡಿದುದುಂ ನಾವುಣ್ಣದೆ ಪೋಕುಮೆ ? ಭಯಮೇಕಣ್ಣ" ಎನ್ನುತ್ತಾಳೆ. ಹೀಗೆ ಒಬ್ಬರನ್ನೊಬ್ಬರು ಸಮಾಧಾನ ಪಡಿಸಿಕೊಳ್ಳುತ್ತ 'ಜವನಮಾರಿಯು ಮಾರಿಯವೋಲ್' ಇದ್ದ ಮಾರಿದತ್ತನ ಅರಮನೆಯನ್ನು ಪ್ರವೇಶಿಸುವರು. 'ಧೀರರೆಕಟಕುಮಾರರ್' ಎನ್ನುವಲ್ಲಿ ಇವರ ಬರುವಿಕೆಯಲ್ಲಿ ಹೊಸತನವನ್ನು ಗುರುತಿಸಿದ ಮಾರಿದತ್ತ ತನಗರಿವಿಲ್ಲದಂತೇ ಪರಿವರ್ತನೆಯತ್ತ ಹೆಜ್ಜೆಯಿರಿಸಿದ್ದಾನೆ. ಅದಕ್ಕೆ ಅವನ ಬಾಯಲ್ಲಿ ಇಂಥ ಮಾತು. ಮಕ್ಕಳ ಸೋಜಿಗವನ್ನು ತಿಳಿಯಲು ಹೊರಟು ಅವನೊಬ್ಬ ಪ್ರೇಕ್ಷಕನಾಗುತ್ತಾನೆ. ಕೇವಲ ಪ್ರೇಕ್ಷಕನಾಗಿ ಕೇಳುಗನಾಗಿದ್ದರೆ ಬೇರೆಯ ಮಾತು ಆದರೆ ಸ್ಪಂದಿಸುವ ಗುಣ ಅವನಲ್ಲಿ ಇದ್ದಿದುದರಿಂದ ಪ್ರತಿಭಟನೆ

ಯುತ್ತವೂ ಮನಗೊಡುತ್ತಾನೆ. ಪ್ರತಿಭಟನೆ ಪರಿವರ್ತನೆಗೆ ದಾರಿಮಾಡಿ ಕೊಟ್ಟಿದೆ.

ಯಶೌಘ ಉಜ್ಜಯಿನಿಯ ರಾಜ. ಹೆಂಡತಿ ಚಂದ್ರಮತಿ, ಅಂತೆಸೆವ ದಂಪತಿಗಳಿಗೆ ಯಶೋಧರ ಮಗನಾಗಿ ಹುಟ್ಟುತ್ತಾನೆ.

ನೋಡುವ ಕಣ್ಗಳಸಿರಿ ಮಾ
ತಾಡುವ ಬಾಯ್ಗಳ ರಸಾಯನಂ, ಸಂತಸದಿಂ
ಕೂಡುವ ತೋಳ್ಗಳ ಪುಣ್ಯಂ
ನಾಡಾಡಿಯೆ ರೂಪುಕುವರ ವಿದ್ಯಾಧರನಾ ?

ಹೀಗೆ ಮನ್ಮಥನಂತಿದ್ದ ರಾಜನಿಗೆ ರೂಪವತಿಯಾದ ಹೆಂಡತಿ ಅಮೃತಮತಿ. 'ಅಂಬರತರಂಗಿಣೀಪುಳಿನ ಮನೇಱುವ ಹಂಸನಂತೆ' ಪ್ರಾಸಾದವನ್ನೇರಿ, ಅಮೃತ ಮತಿಯ ಶಯ್ಯಾಗೃಹವನ್ನು ಪ್ರವೇಶಿಸಿದ. ಸುಖನಿದ್ರೆಯಲ್ಲಿರುವಾಗಿ ಅರಮನೆಯ ಪಕ್ಕದಲ್ಲಿ ವಾಸಿಸುತ್ತಿದ್ದ ಮಾವಟಿಗ "ಬಿನದಕೆ ಪಾಡುತ್ತಿರೆ" ಅವನ ನುಣಿದನಿ ಕತಕಬೀಜವಾಗುತ್ತದೆ. ತಿಳಿದಾಲಿಸಿ, ಮುಟ್ಟಿದ ಮನಮಂ ತೊಟ್ಟನೆ ಪಸಾಯದಾನಂ ಗೊಟ್ಟಳು. ಕೂಡುವ-ಮಾತಾಡುವ ಚಿಂತೆಗೆ ಒಳಗಾದ ಅಮೃತಮತಿ ತನ್ನ ನೆಚ್ಚಿನ ದೂದವಿಗೆ ಮನಬಿಚ್ಚಿ ಹೇಳುತ್ತಾಳೆ. ಮಾವಟಿಗನನ್ನು ನೋಡಿಬಂದ ದೂದವಿ ರಾಣಿಯೆತ್ತ ಕುರೂಪಿ ಅಷ್ಟಾವಂಕನೆತ್ತ 'ಚಿತ್ರಮ ಪಾತ್ರೇ ರಮತೇ ನಾರೀ' ಎಂಬುದು ಸತ್ಯ. ಈ ವಿಧಿಗೆ ಕಣ್ಣಿಲ್ಲ ಎಂದು ಉದ್ಗರಿಸುತ್ತಾಳೆ. ನೀನೆ ಇಂತಪ್ಪ ಕಾಮದೇವಂಗೆ ಎಂತೆಂತು ಆಯ್ದು ಅಱಸಿಕೂರ್ತೆ ಎಂದಾನಱಿಯೆಂ" ಎಂದು ವ್ಯಂಗ್ಯವಾಡುತ್ತಾಳೆ.

ಕವಿ, ಅಷ್ಟಾವಂಕನ ಸಾಮಾನ್ಯರೂಪನ್ನು ಹೇಳಿದರೆ ಸಾಕಾಗಿತ್ತು. ಆದರೆ ಅಷ್ಟಾವಂಕ ಅತಿಕುರೂಪಿಯೆಂದು ವರ್ಣಿಸುವುದು, ಆ ರೂಪನ್ನು ಅಮೃತಮತಿ ಸಮರ್ಥಿಸಿ ಕೊಳ್ಳುವುದು ಎಷ್ಟರ ಮಟ್ಟಿಗೆ ಔಚಿತ್ಯ ಎನ್ನುವ ಪ್ರಶ್ನೆ ಏಳುತ್ತದೆ. 'ಕಳಹಂಸೆಗೆ ಗಿಡಗನೆರಗಿದಂತೆ ಒದೆದ' ಎನ್ನುವಲ್ಲಿ 'ಬೆಳ್ನೊಳೆಪೋದಂ ದೋಷದ ಬೆನ್ನೊಳೆ ಸಂದಿಸುವ ದಂಡದಂತರಸಂ' ಎನ್ನುವ ಮಾತುಗಳಲ್ಲಿ ಕವಿಗೆ ಪ್ರಜ್ಞಾಪೂರ್ವಕ ಎಚ್ಚರ ಇತ್ತೆಂದು ಭಾವಿಸಬಹುದು. ಇಲ್ಲಿ ಅರಸ ದೋಷವನ್ನು ಕಂಡರೂ ದಂಡಿಸುವುದಿಲ್ಲ. ಬದಲಿಗೆ ಅವನ ಜಾಗೃತ ಪ್ರಜ್ಞೆ ಎಚ್ಚರಗೊಳ್ಳುತ್ತದೆ. ಮುಕ್ತಿಯೆ ಪರಮಸುಖ ಎಂದು ಭಾವಿಸುವ ರಾಜ ಕನಸಿನ ಮೂಲಕ ತನ್ನ ಮನದ ತುಮುಲವನ್ನು ತೋಡಿ ಕೊಂಡಾಗ ಇನ್ನೊಂದರತ್ತ ಹೆಜ್ಜೆಯಿಡಬೇಕಾಗುತ್ತದೆ. ಹಿಟ್ಟಿನ ಕೋಳಿ ಯನ್ನು ಬಲಿಕೊಡುವುದರ ಮೂಲಕ ಪಾಪಭೀತಿಗೆ ಗುರಿಯಾಗುತ್ತಾನೆ. ಹಿಂಸೆ

ಗಾಗಿ ಮರಗುತ್ತಾನೆ ಮಾತ್ರವಲ್ಲ, ಈ ತಾಯಿ, ಈ ಕನಸು, ಈ ಬೆಂತರ ಹೀಗೆ ಘಟಿಸಿದ್ದು ವಿಧಿಯ ಮೇರೆಗೆ. "ಆರಱಿವರಯ್ಯ ವಿಧಿವಿಳಸನಮಂ" ಎಂದು ಬೆರಗೊಳ್ಳುತ್ತಾನೆ.

> ಅಮೃತಮತಿಯೆಂಬ ಪಾತಕಿ
> ಯ ಮಾಯೆ ಬನಮಾಯ್ತು ಚಂದ್ರಮತಿಮಾತೆಯ ಮಾ
> ತೆ ಎಮಗೆ ಬಲೆಯಾಯ್ತು ಹಿಂಸನಂ,
> ಅಮೋಘಶರಮಾಯ್ತು ಕೆಡೆದುದು ಆತ್ಮಕುರಂಗಂ

ಎಂದು ಭಾವಿಸಿದ ರಾಜ ಮಗನಾದ ಯಶೋಮತಿಗೆ ರಾಜ್ಯವನ್ನು ಕೊಟ್ಟು ಕಾಡಿಗೆ ಹೊರಡುವ ಸಂದರ್ಭದಲ್ಲಿ ಅತ್ತೆಯಾದ ಚಂದ್ರಮತಿಗೂ ರಾಜನಿಗೂ ವಿಷದ ಲಡ್ಡುಗೆಯನ್ನು ಬಡಿಸಿ ಸುಯಿಸುತ್ತಾಳೆ.

ಭವಾವಳಿಯ ಸಂದರ್ಭದಲ್ಲಿ

(1) ಯಶೋಧರ-ಚಂದ್ರಮತಿಯರು ನವಿಲು, ನಾಯಿಗಳಾಗಿ ಹುಟ್ಟಿ ಅಮೃತಮತಿಯಿಂದ ನವಿಲು ಸತ್ತರೆ, ನಾಯಿ ನವಿಲನ್ನು ತಿನ್ನುತ್ತದೆ. ಕೋಪ ಗೊಂಡ ಯಶೋಮತಿ ಆ ನಾಯಿಯನ್ನು ಕೊಲ್ಲಿಸುತ್ತಾನೆ. ಹೀಗೆ ಮಾಡಿದ್ದರಿಂದ ಯಶೋಮತಿಗೆ ದುಃಖವಾಗುತ್ತದೆ. ಕಣ್ಣಱಿಯದೊಡಂ ಕರುಳಱಿಯದೆ.

(2) ಹಾವು ಮತ್ತು ಮುಳ್ಳುಹಂದಿಯಾಗಿ ಹುಟ್ಟಿದವು. ಹಾವನ್ನು ಮುಳ್ಳುಹಂದಿ ಕೊಂದಿತು. ಹಂದಿಯನ್ನು ಹುಲಿ ತಿನ್ನುತ್ತದೆ.

(3) ಮುಳ್ಳುಹಂದಿ ಸಿಂಪಾನದಿಯಲ್ಲಿ ಮೀನಾಗಿ ಹುಟ್ಟಿದರೆ ಹಾವು ಅಲ್ಲಿಯೇ ಮೊಸಳೆಯಾಯಿತು. ದೊರೆಯ ವಿನೋದದ ಕುಬ್ಜನನ್ನು ಮೊಸಳೆ ಹಿಡಿದುದರಿಂದ ಕುಪಿತನಾದ ದೊರೆ ಅದನ್ನು ಕೊಲ್ಲಿಸಿದ. ಮೀನನ್ನು ಯಶೋಧರನ ಶ್ರಾದ್ಧಕ್ಕೆ ಅತ್ಯುತ್ತಮವೆಂದು ಸಜೀವವಾಗಿ ಅಡಿಗೆ ಮಾಡಿಸಿದ.

(4) ಮೊಸಳೆ ಆಡಾಗಿ ಹುಟ್ಟಿತು, ಮೀನು ಹೋತವಾಗಿ ಅದರ ಹೊಟ್ಟೆ ಯಲ್ಲಿ ಜನಿಸಿತು. ಸೊಕ್ಕಿದ ಗೂಳಿಯಂತೆ ಹೋತ ತಾಯನ್ನೇರಿತು. ಮತ್ತೊಂದು ಹೋತ ಅದನ್ನು ಕೊಲ್ಲುತ್ತದೆ. ಅದರ ಜೀವ ತಾಯಗರ್ಭದಲ್ಲಿ ಸೇರಿಕೊಂಡಿತು. ಬೇಟೆಗೆ ಬಂದಿದ್ದ ಯಶೋಮತಿ ಅಜಗರ್ಭಿಣಿಯನ್ನು ಬಾಣದಿಂದ ಹೊಡೆದ. ಬಸಿರಿನಲ್ಲಿದ್ದ ಮರಿ ಹುಣ್ಣಿನ ಬಾಯಿಂದ ಹೊರ ಬಂದಿತು. ದೊರೆಗೆ ಕರುಣೆ ಮೂಡಿ ಅದನ್ನು ಪಳಗಿಸಲು, ಬೆಳೆಸಲು ಮಾದರನಿಗೆ ಒಪ್ಪಿಸಿದ. ಕಾಗೆ–ನಾಯಿಗಳು ಕೆಡಿಸಿದ ಹೋರಿಯ ಮಾಂಸ

ವನ್ನು ಶುದ್ಧಗೊಳಿಸಲು ಆಡಿನ ರಜಸ್ಸು ಬೇಕೆಂದು ಪುರೋಹಿತರು ಕೇಳುತ್ತಾರೆ. ಹೋತದಿಂದ ಶುದ್ಧಮಾಡಿದ ಅಡಗನ್ನು ತಿಂದು ತಣಿದ ಬ್ರಾಹ್ಮಣರು 'ಯಶೋಧರ ಚಂದ್ರಮತಿಯರು ಸಗ್ಗದ ಸುಖವನ್ನುಣ್ಣುತ್ತಿದ್ದಾರೆ' ಎಂದು ಹೇಳಿದರು. ಇದರಿಂದ ಹೋತಕ್ಕೆ ಜಾತಿ ಸ್ಮರಣೆಯುಂಟಾಯಿತು. ದೊರೆಯ ಬಾಣದಿಂದ ಸತ್ತು ಆಡು ಕಳಿಂಗದಲ್ಲಿ ಕೋಣನಾಗಿ ಹುಟ್ಟಿತು. ಸಿಂಪಾನದಿಯಲ್ಲಿ ನೀರು ಕುಡಿಯಲು ಬಂದು ರಾಜನ ಕುದುರೆಯನ್ನು ಕೊಂದಿದ್ದರಿಂದ ರಾಜನ ಕೈಯಲ್ಲಿ ವಿಚಿತ್ರ ಕೊಲೆಗೆ ಗುರಿಯಾಗುತ್ತದೆ. ಅದರ ಮಾಂಸವನ್ನು ಅಮೃತಮತಿ ತಿಂದು ಸವಿಗಂಡು ಬಾಣಸದ ಮನೆಯಲ್ಲಿ ಕಟ್ಟಿದ್ದ ಹೋತವನ್ನೂ ಕೊಲ್ಲಿಸಿ ತಿಂದಳು.

ಸತ್ತ ಕೋಣ, ಹೋತ ಹೊಲಗೇರಿಯಲ್ಲಿ ಕೋಳಿ ಪಿಳ್ಳೆಗಳಾಗಿ ಹುಟ್ಟುವವು. ಚಂಡಕರ್ಮ ಅದನ್ನು ಸಾಕುವ ಹೊಣೆಹೊತ್ತ. ಅಕಂಪನಮುನಿಯಿಂದ ಜ್ಞಾನದ ಮಹತ್ವವನ್ನು ತಿಳಿದುಕೊಂಡಿದ್ದು ಮಾತ್ರವಲ್ಲ, ತನ್ನಲ್ಲಿರುವ ಕೋಳಿಪಿಳ್ಳೆಗಳು ಯಶೋಧರ ಚಂದ್ರಮತಿ ಎಂದು ತಿಳಿಯುತ್ತದೆ. ನಿಜ ಸ್ಮರಣೆಯಿಂದ ಅವು ಕೂಗಲು ಪತ್ನಿಯೊಡನೆ ವನವಿಹಾರಕ್ಕೆ ಬಂದಿದ್ದ ಯಶೋಮತಿ ಅವುಗಳನ್ನು ಕೊಲ್ಲುತ್ತಾನೆ. ಅವು ಸಮಾಧಿ ಮರಣದಿಂದ ಸತ್ತು ಯಶೋಮತಿಯ ಮಕ್ಕಳಾಗಿ ಕುಸುಮಾವಳಿಯ ಬಸಿರಿನಲ್ಲಿ ಹುಟ್ಟಿದವು. ಅವರೇ ಅಭಯರುಚಿ ಮತ್ತು ಅಭಯಮತಿ.

ಸುದತ್ತಾಚಾರ್ಯರಿಂದ ತನ್ನ ತಂದೆ ಹಾಗೂ ಮಗಳಾದ ಅಭಯಮತಿ ಅಜ್ಜಿ ಚಂದ್ರಮತಿ ಎಂದು ಗೊತ್ತಾದ ತಕ್ಷಣ, ಕೇವಲ ಸಂಕಲ್ಪ ವಧೆಯಿಂದ ಇಂಥ ಜನ್ಮಗಳು ಬರುವುದಾದರೆ ಎಂದು ಭಾವಿಸಿ ಜೈನದೀಕ್ಷೆಯನ್ನು ಸ್ವೀಕರಿಸುವನು. ಅನಂತರ ಅಭಯರುಚಿ ಅಭಯಮತಿಯರು ಸುದತ್ತಾಚಾರ್ಯರಲ್ಲಿ ಶಿಷ್ಯವೃತ್ತಿಯನ್ನೂ ವಹಿಸಿದರು.

ಈ ಕಥೆಯನ್ನು ಕೇಳಿದ ನಂತರ ಮಾರಿದತ್ತ ವಿಧಿಯ ಕುರಿತು ಹೇಳಿದ ಮಾತು ಸ್ವಾರಸ್ಯಕರವಾಗಿದೆ.

ಆ ಗಂಡನನಪ್ಪಿದ ತೋಳ್
ಪೋಗಂಡನನಪ್ಪುವಂತೆ ಮಾಡಿದ ಬಿದಿಯ
ಮೂಗಂ ಕೊಯ್ದಿಟ್ಟಿಗೆಯೊಳ್
ಪೋಗೊರಸದೆ ಕಂಡೆನಾದೊಡೇಂ ಬಿಟ್ಟಪೆನೇ

ಕೇವಲ ಸಂಕಲ್ಪವಧೆಗೆ ಇಂಥ ಭವಾವಳಿಯಲ್ಲಿ ಹುಟ್ಟುವುದಾದರೆ ಎಂದು ಭಾವಿಸಿದ ರಾಜ ಜೈನದೀಕ್ಷೆಯನ್ನು ಪಡೆಯುತ್ತಾನೆ ನಿಜ. ಜನ್ಮ

'ಜೀವದಯೆ ಜೈನಧರ್ಮಂ' ಎನ್ನುವುದನ್ನು ಪ್ರತಿಪಾದಿಸಲು ಹೊರಟವನು, ಅಮೃತಮತಿಯ ಪ್ರಸಂಗವನ್ನು ಗಂಭೀರವಾಗಿ ಪರಿಗಣಿಸಲು ಕಾರಣವೇನು ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಅಮೃತಮತಿಯ ಪ್ರಸಂಗ ಕಾವ್ಯದ ದೃಷ್ಟಿಯಿಂದ ತೆಳು ಎನಿಸಿದರೂ ವಾಸ್ತವದ ಸಂದರ್ಭದಲ್ಲಿ ಅದೇ ಪ್ರಮುಖವಾಗಿಬಿಡುತ್ತದೆ. ನಿಜ ಜೀವನದಲ್ಲಿ ಯಾವುದನ್ನು ಪಾಪ ಭೀತಿಯಿಂದ ನೋಡುತ್ತೇವೆಯೋ ಪ್ರಾಣಿ ಜನ್ಮದಲ್ಲಿ ಅಥವಾ ಪ್ರಪಂಚದಲ್ಲಿ ಅದು ಘಟಿಸಿ ಹೋಗುತ್ತದೆ. ನವಿಲಾಗಿ ಹುಟ್ಟುವುದು, ತಾಯಿ ಆಡನ್ನೆ ರಮಿಸುವುದು, ತರ್ಪಣಕ್ಕೆ ತಂದೆ ಮೀನನ್ನೆ ಕುದಿಸುವುದು-ಹೀಗೆ ಇಲ್ಲಿ ಒಂದು ಸಂಸಾರದ ಚೌಕಟ್ಟಿನಲ್ಲಿ ಇಡೀ ಕಾವ್ಯದ ಘಟನೆಗಳು ನಡೆಯುವುದರಿಂದ, ಪುನರ್‌ಜನ್ಮದ ಕಲ್ಪನೆಗೆ ಮತ್ತಷ್ಟು ಬಿಗಿಸಿಕ್ಕಿಹಾಗಾಗಿದೆ. ವೈದಿಕರ ಸಂಸಾರ ಪದ್ಧತಿಯಲ್ಲೂ ಇದೇ ರೀತಿಯ ವಿಧಾನವನ್ನು ಕಾಣಬಹುದಾಗಿದೆ.

ಒಟ್ಟಾರೆ ಈ ಕೃತಿಯು ಜೈನಧರ್ಮಕ್ಕೆ ಮೀಸಲಾದ್ದರಿಂದ ಅಹಿಂಸೆಯೇ ಪ್ರಧಾನವಾಗಿ 'ಜೀವದಯೆ ಜೈನಧರ್ಮಂ' ಎನ್ನುವ ತತ್ವದತ್ತ ಮುಖ ಮಾಡಿಸುತ್ತದೆ.

ಎರಡನೆಯ ಕೃತಿ 'ಅನಂತ ನಾಥಪುರಾಣ'. ಹದಿನಾಲ್ಕನೆಯ ಜಿನನಾದ ಅನಂತನಾಥನ ಕಥೆಯನ್ನು ವಸ್ತುವಾಗಿ ಉಳ್ಳ ಹದಿನಾಲ್ಕು ಆಶ್ವಾಸಗಳ ಪ್ರೌಢ ಚಂಪೂಕಾವ್ಯ. ಸಂಪ್ರದಾಯದಂತೆ ಅದರಲ್ಲಿ ಬಲದೇವ ವಾಸುದೇವರ ಕಥೆಯೂ ಸೇರಿಕೊಂಡಿದೆ. ಗುಣ ಭದ್ರಾಚಾರ್ಯರ 'ಉತ್ತರ ಪುರಾಣ' ಹಾಗೂ ಸ್ವಲ್ಪಮಟ್ಟಿಗೆ ಚಾವುಂಡರಾಯನ 'ತ್ರಿಷಷ್ಟಿಶಲಾಕಾಪುರಾಣ' ಇವು ಈ ಕೃತಿಗೆ ಆಧಾರ ಗ್ರಂಥಗಳು.

ಈ ಕೃತಿಯ ಸಂದರ್ಭದಲ್ಲಿ ಜನ್ನ ಸಂಪ್ರದಾಯದ ಕಟ್ಟಿಗೆ ಸಿಲುಕಿದ್ದಾನೆ. ಮಹಾಕಾವ್ಯದ ಶಾಸ್ತ್ರೋಕ್ತ ಲಕ್ಷಣಗಳನ್ನೆಲ್ಲ ನಿಷ್ಠೆಯಿಂದ ಅನುಸರಿಸಿದ್ದಾನೆ. ಮೊದಲ ಕೃತಿಯಲ್ಲಿ ಜನ್ನನ ಪ್ರತಿಭೆಗೆ ತಲೆದೂಗುವ ಓದುಗರು ಎರಡನೆಯ ಕೃತಿಗೆ ಬಂದಾಗ ಆಶ್ಚರ್ಯಚಕಿತರಾಗುತ್ತಾರೆ. ಕವಿಯ ಚಮತ್ಕೃತಿ, ವಾಗಾಡಂಬರ, ಅಲಂಕರಣಗಳಜಾಲ, ಕವಿಸಮಯಗಳ ಕೋಲಾಹಲ ಇಲ್ಲಿ ಕಾಣುತ್ತೇವೆ. 'ಚಂಡಶಾಸನದ' ಕಥೆಬಿಟ್ಟರೆ ಈ ಕೃತಿಯಲ್ಲಿ ಬೇರೇನನ್ನೂ ಕಾಣೆವು.

ಈ ಎರಡೂ ಕೃತಿಗಳನ್ನು ಸರಳವಾಗಿ ಪರಿಚಯಿಸಿಕೊಡುವುದು ಅಷ್ಟೇನೂ ಸುಲಭದ ಕೆಲಸವಲ್ಲ. ಕಾವ್ಯಗಳನ್ನು ಗದ್ಯ ರೂಪದಲ್ಲಿ ಇಳಿಸಿದಾಗ ನೀರಸ ಎನಿಸುತ್ತದೆ. ಕಥೆಗಾಗಿ ಕಥೆ ಹೇಳುವುದಾದರೆ ಅದರ ರೀತಿ ಬೇರೆ,

ಮೂಲಕೃತಿಗಳಿಗೆ ಕವಿಯ ಮನೋಭಾವಕ್ಕೆ ಧಕ್ಕೆಯಾಗದಂಥ ಕಥೆಯ ರೂಪದಲ್ಲಿ ಹೇಳುವುದು ಕಷ್ಟ ಸಾಧ್ಯ. ಇಂಥ ಕಷ್ಟಸಾಧ್ಯದ ಕೆಲಸದಲ್ಲಿ ಸಾಧ್ಯವಾಗಿಸಿದ್ದಾರೆ ಕಮಲಾ ಹಂಪನಾ ಅವರು. ಲೇಖಕಿಯದು ಬಹುಮುಖ ಪ್ರತಿಭೆ, ಕಥನಕಲೆ ಅವರಿಗೆ ಸಿದ್ಧವಾಗಿದೆ. ಎಂಥ ಸಂಕೀರ್ಣ ಸಂದರ್ಭದಲ್ಲೂ ಸರಳವಾಗಿ ಹೇಳಬಲ್ಲವರಾಗಿದ್ದಾರೆ. ಅದಕ್ಕೆಂದೇ ಈ ಕೃತಿ ಮೈತಳೆದು ನಿಂತಿದೆ. ನಲವತ್ತೇಳು ಚಿಕ್ಕ ಪುಟಗಳಲ್ಲಿ ಜನ್ನನ ಕೃತಿಗಳ ಸಾರಾಂಶವನ್ನು ಬಿಚ್ಚಿಟ್ಟಿದ್ದಾರೆ. ಜನ್ನನ ಕೃತಿಗಳನ್ನು ಕುರಿತು ಮಕ್ಕಳಲ್ಲಿ ಒಲವು ಮೂಡಿಸಲು ಪ್ರಯತ್ನಿಸಿ ಯಶಸ್ವಿಯಾಗಿದ್ದಾರೆ.

ಇಬ್ಬರು ಎಳೆಯರು ಅಣ್ಣ ತಂಗಿ. ಭಿಕ್ಷೆಗೆಂದು ಊರಲ್ಲಿ ಹೊರಟಿದ್ದಾರೆ ಎಂದು ಪ್ರಾರಂಭವಾಗುವ ಚಿಕ್ಕ ಚಿಕ್ಕ ವಾಕ್ಯಗಳು ಮಕ್ಕಳಿಗೆ ಬೇಗ ಬೇಗ ಗ್ರಾಹ್ಯವಾಗಬಲ್ಲವು. 'ಸುಮಾರು ಏಳು ನೂರು ವರ್ಷಗಳ ಹಿಂದೆ' 'ಪುಣ್ಯಪುರುಷ' ಉದಾ: ಕವಿ-ಕಲಿ-ವಿದ್ವಾಂಸ ಇಂಥ ಆಕರ್ಷಕ ಶೀರ್ಷಿಕೆಯಿಂದ ಕುತೂಹಲ ಕೆರಳಬಲ್ಲದು. ಸರಾಗವಾಗಿ ಓದಿಸಿಕೊಂಡು ಹೋಗಬಲ್ಲದು. ಸಂದರ್ಭಕ್ಕೆ ತಕ್ಕಂತೆ, ಅಲ್ಲಲ್ಲಿಯೇ ಬಳಸಿರುವ 'ಚಿತ್ರಗಳು' ಮಕ್ಕಳಿಗೆ ಖುಷಿ ಕೊಡುವ ಸಂಗತಿ.ಅಂದವಾದ ಮುಖಪುಟ, ಸರಳ ಹಾಗೂ ಕಥಾನಕ ಬರವಣಿಗೆಯಿಂದ ಕೃತಿಯ ಮಹತ್ವ ಹೆಚ್ಚಿದೆ. ಕನ್ನಡ ಸಾಹಿತ್ಯ-ಪ್ರಾಚೀನ ಕವಿಗಳ ಕೃತಿಗಳ ಕುರಿತು ಎಳೆಯರಲ್ಲಿ ಮಾತ್ರವಲ್ಲ ಸಾಮಾನ್ಯ ಓದುಗರಲ್ಲೂ ಅರಿವು ಮೂಡಿಸಲು ಈ ಕೃತಿ ಸಹಾಯಕವಾಗಬಲ್ಲುದು, ಕೈಪಿಡಿಯಾಗಬಲ್ಲದು.

ಶಾಂತಿನಾಥ ಕವಿ

ಡಾ॥ ಪದ್ಮಾಶೇಖರ್

ಗಾಢ ಅನುಭವದಿಂದ ಸೃಜನಾತ್ಮಕ ಸಾಹಿತ್ಯ ಸೃಷ್ಟಿಗೊಂಡರೆ ಆಳವಾದ ಅಧ್ಯಯನ ಹಾಗೂ ಶ್ರದ್ಧೆಯಿಂದ ಮಾತ್ರ ಶಾಸ್ತ್ರೀಯ ಬರವಣಿಗೆ ಮೈದಳೆಯಲು ಸಾಧ್ಯ. ಇಂದಿನ ಮಹಿಳೆಯ ಕೌಟುಂಬಿಕ ಹೊಣೆಗಾರಿಕೆಯ ವಿಸ್ತಾರತೆ ಮತ್ತು ಕಾರ್ಯತತ್ಪರತೆಯ ನಡುವೆ ಆಕೆಯಿಂದ ಇಂಥ ಬರವಣಿಗೆಯನ್ನು ನಿರೀಕ್ಷಿಸುವುದು ಅಪರೂಪ. ಅಂಥ ಅಪರೂಪ ಪಂಕ್ತಿಗೆ ಕಮಲಾ ಹಂಪನಾ ಅವರು ಸೇರಿರುವುದು ಮೊದಲು ಪ್ರಶಂಸಿಸಬೇಕಾದ ಸಂಗತಿ. 'ಶಾಂತಿನಾಥಕವಿ' ಅಂಥದೊಂದು ಕಿರು ಪ್ರಯತ್ನ.

'ಶಾಂತಿನಾಥಕವಿ' ಚಿಕ್ಕ ಹೊತ್ತಿಗೆ. ಕವಿಪರಿಚಯ–ಕಥಾಸಾರ, ವಿಮರ್ಶೆ ಭಾಗಗಳನ್ನು ಹೊಂದಿದೆ. ಇದು ಪ್ರಚಾರ ಉಪನ್ಯಾಸ ಮಾಲೆಯಿಂದ ಬೆಳಕು ಕಂಡ ಕೃತಿಯೆಂಬುದನ್ನು ಗಮನಿಸಿದರೆ ಅದರ ಇತಿ ಮಿತಿಯ

ಉದ್ದೇಶ ವ್ಯಾಪ್ತಿಯ ಅರಿವು ನಮಗಾಗುತ್ತದೆ. ಈ ನೆಲೆಯಲ್ಲಿಯೇ ಅವಲೋಕಿಸಿದರೆ ಕೃತಿಗೆ ಸತ್ಯತ್ವವನ್ನು ನೀಡಿದಂತಾಗುತ್ತದೆ ಎಂಬುದು ನನ್ನ ಅನಿಸಿಕೆ.

ಶಾಂತಿನಾಥ ಕವಿಯ ತಂದೆ ಗೋವಿಂದರಾಜು, ಅಣ್ಣ ಕರ್ಣಪಾರ್ಯ, ತಮ್ಮ ವಾಗ್ಭೂಷಣ ರೇವಣ ಎಂಬ ಸಂಗತಿಗೆ ಕೃತಿಯೇ ಆಧಾರವಾಗಿರುವಂತೆ ಆತನ ಕಾಲವನ್ನು ಕುರಿತ ನೇರ ದಾಖಲೆಯು ಕೃತಿಯೊಡಲಿನಿಂದ ದೊರಕಿಲ್ಲ. ಕವಿಯ ಕೃತಿ 'ಸುಕುಮಾರ ಚರಿತೆ'ಯನ್ನು ಸಂಪಾದಿಸಿದ ಡಿ. ಎಲ್. ಎನ್. ಅವರು ಶಿಕಾರಿಪುರದ ಶಾಸನಾಧಾರದ ಮೇಲೆ ಕವಿಕೃತಿಯ ಕಾಲ ಸು. 1060 ಎಂದು ತೀರ್ಮಾನಿಸಿದ್ದಾರೆ. ಇದಕ್ಕೆ ಪೂರಕವಾಗಿ ಲಕ್ಷ್ಮನೃಪನ ಪ್ರಸ್ತಾಪ ವನ್ನು ಲಕ್ಷ್ಯವಾಗಿಟ್ಟುಕೊಂಡಿದ್ದಾರೆ. ಇದನ್ನೇ ಗಮನಿಸಿರುವ ಲೇಖಕರು ಕವಿಕೃತಿಯ ಕಾಲವನ್ನು ಖಚಿತವಾಗಿ 1062 ಎಂದು ನಿರ್ಧರಿಸಿದ್ದಾರೆ. ಇದು ವಾಸ್ತವತೆಗೆ ದೂರವಾದ ಮಾತು. ಸೂಕ್ತ ಆಧಾರವಿಲ್ಲದೆ ಈ ತೀರ್ಮಾನಕ್ಕೆ ಬರುವುದು ಆಭಾಸಕರ. ಜೊತೆಗೆ ಇವರು ಡಿ. ಎಲ್. ಎನ್. ಅವರಿಗಿಂತ ಮುಂದುವರಿದು ಯಾವ ಹೊಸ ವಿಚಾರವನ್ನು ಪ್ರಸ್ತಾಪಿಸಿಲ್ಲ. ಹಾಗಾಗಿ ಸದ್ಯಕ್ಕೆ ಸಂಪಾದಕರ ಮಾತನ್ನು ಅನುಮೋದಿಸುವಲ್ಲಿ ಹೆಚ್ಚು ಔಚಿತ್ಯವಿದೆ ಮುಂದುವರಿದು ಕವಿ ಉಲ್ಲೇಖಿಸಿರುವ ಗುರುಪರಂಪರೆಯನ್ನು ಶಾಸನಗಳಲ್ಲೂ ಕಾಣಬಹುದೆಂದಷ್ಟೇ ನಿರ್ದೇಶಿಸಿ ಮುಕ್ತಾಯ ಹಾಡಿರುವುದು ಶಾಂತಿನಾಥಕವಿ ಯನ್ನು ಓದುಗರಿಗೆ ಇಡಿಯಾಗಿ ನೀಡುವಲ್ಲಿ ಕೊರೆಯಾಗುತ್ತದೆ. ಬಹುಶಃ ಇಲ್ಲಿ ಲೇಖಕರು ಸಂಪಾದಕರು ಗುರುಪರಂಪರೆಯ ಪಟ್ಟಿಯನ್ನು ದಾಖಲಾತಿ ಯೊಡನೆ ನಿರ್ದಿಷ್ಟಪಡಿಸಿದ್ದಾರೆಂಬ ಭಾವನೆಯಲ್ಲಿಯೇ ಕೈಬಿಟ್ಟಿರುವಂತೆ ತೋರುತ್ತದೆ. ಆದರೆ ಕೆಲವೊಮ್ಮೆ ಇಂಥ ಪುನರುಕ್ತಿ ಅನಿವಾರ್ಯವಾಗುತ್ತದೆ. ಏಕೆಂದರೆ ಐತಿಹಾಸಿಕ ಸತ್ಯವನ್ನು ಯಾವ ಪಂಡಿತರಾಗಲೀ ಸಂಶೋಧಕರಾಗಲೀ ಸುಳ್ಳು ಮಾಡುವಂತಿಲ್ಲ ನೋಡಿ. ಆದರೂ ಇಲ್ಲಿ ಮೆಚ್ಚುವ ಸಂಗತಿ ಮೇಲಿ ನಂಶಕ್ಕೆ ಸಂವಾದಿಯಾಗಿ ಶಾಸನಗಳನ್ನು ಸೂಚಿಸಿ, ಸಂಶೋಧಕರಿಗೆ ಮಾರ್ಗ ದರ್ಶಿ ನೀಡಿರುವುದು.

ಸುಕುಮಾರಸ್ವಾಮಿಯ ಕಥೆಯ ಕೇಂದ್ರಬಿಂದುವಿನಲ್ಲಿ ಜೇಡರಬಲೆಯಂತೆ ಕಥೆಯೊಳಗಣ ಕಥೆಯಾಗಿ ಬೆಸೆದುಕೊಂಡಿರುವ ಕಥನಕ್ರಿಯೆ, ಕಥಾ ಹಂದರ ವಾಗಿರುವ 'ಸುಕುಮಾರಚರಿತೆ' ಅಖಂಡ ಕಥಾಕೋಶ. ಇದನ್ನು ಯಥಾರೀತಿ ಯಾಗಿ ಕಥಾಗತಿಗೆ, ಕಥಾ ಓಟಕ್ಕೆ ಭಂಗಬಾರದಂತೆ ಸಂಗ್ರಹಿಸುವುದು ಹುಡು ಗಾಟವಲ್ಲ. ಮೂಲಭಾವಕ್ಕೆ ಕಿಂಚಿತ್ತು ಧಕ್ಕೆಯಾಗದಂತೆ ಇಡೀ ಕಥೆಯನ್ನು

ಬಹು ಸುಂದರವಾಗಿ, ಸರಳವಾಗಿ ಓದಿಸಿಕೊಂಡು ಹೋಗುವಂತೆ ನಿಯೋಜಿಸಿರುವ "ಕಥಾಸಾರ" ಭಾಗ ಮಾದರಿಯಾಗಿದೆ.

ಲೇಖಕರ ಸೂಕ್ಷ್ಮಮತಿತ್ವವನ್ನು ವಿಮರ್ಶನಪ್ರಜ್ಞೆಯನ್ನು ತಿಣುಕುವ, ಒರೆಗೆ ಹಚ್ಚುವ ಪ್ರಧಾನ ಭಾಗವೇ ವಿಮರ್ಶೆ. ಇದಕ್ಕೆ ಪೂರ್ವಭಾವಿಯಾಗಿ ಆ ಕಥೆಯನ್ನು ಪರಿಚಯಿಸುವ ಹಿನ್ನೆಲೆಯಲ್ಲಿನ ಕವಿಯಾಶಯವನ್ನು ಗಮನಿಸಬೇಕಾದ್ದು ಅನಿವಾರ್ಯ ಹಾಗೂ ಅಗತ್ಯ.

'ಸುಕುಮಾರ ಚರಿತೆ' ಭಾರತೀಯ ಕಥಾಸಾಹಿತ್ಯದಲ್ಲೇ ತನ್ನದೇ ಆದ ವಿಶಿಷ್ಟತೆಯನ್ನು, ವಿಶಿಷ್ಟ ಪರಂಪರೆಯನ್ನು ಕಾಯ್ದುಕೊಂಡಿರುವಂಥದ್ದು. ಪಂಪ ರನ್ನರಿಗೆ ದೊರೆತಂತೆ ಶಾಂತಿನಾಥನು ಆಯ್ಕೆಮಾಡಿಕೊಂಡದ್ದು ಸಿದ್ಧ ವಸ್ತುವನ್ನೇ. ಆದರೆ ಅವರು ಭವ್ಯ ಜೀವಿಗಳಾದ ತೀರ್ಥಂಕರರನ್ನೇ ಕಾವ್ಯ ನಾಯಕರಾಗಿಸಿಕೊಂಡವರು. ಹಾಗಾಗಿ ಮತೀಯ ಚೌಕಟ್ಟಿನಲ್ಲೇ ತಮ್ಮ ಸ್ವತಂತ್ರತೆಯನ್ನು ಮೆರೆಯಬೇಕಾಯ್ತು. ಆದರೆ ಶಾಂತಿನಾಥ, ಆಯ್ಕೆಯಲ್ಲೇ ತನ್ನ ಜಾಣ್ಮೆಯನ್ನು, "ಬುದ್ಧಿವಂತಿಕೆಗಿಂತಲೂ ಮಿಗಿಲಾದ ಕಲಾವಂತಿಕೆ"ಯನ್ನು "ಕಲಾವಂತಿಕೆಗಿಂತಲೂ ಹೆಚ್ಚಿನ ಹೃದಯವಂತಿಕೆ"ಯನ್ನು ತೋರಿದವನು. ಕೈಕಟ್ಟಿಹೋಗಬಹುದಾದ ಸಂದರ್ಭದೊತ್ತಡದಿಂದ ತಪ್ಪಿಸಿಕೊಂಡು ಅಭವ್ಯ ಜೀವಿ–ಶ್ರಾವಕ–ಯೊಬ್ಬನ ಬದುಕಿನ ಭೂತ ವರ್ತಮಾನ ಭವಿಷ್ಯತ್ತನ್ನು ಕಾವ್ಯ ವಸ್ತುವಾಗಿಸಿಕೊಂಡ. ಹೀಗಾಗಿ ಪುಣ್ಯಚೇತನವೊಂದರ ಸಾಹಸಗಳನ್ನು, ಕರ್ಮಪರಿಪಾಕದಿಂದಾಗಬಹುದಾದ ಅನಾಹುತಗಳೆರಡನ್ನು ತೂಗಿ ನೋಡುವಲ್ಲಿ ಕವಿಯ ಸ್ವತಂತ್ರತೆಗೆ ಹೆಚ್ಚು ಆಸ್ಪದವುಂಟಾಯಿತು, ಇದು ಕವಿಗೆ ಗೊತ್ತಿತ್ತು ಎಂದು ತೋರುತ್ತದೆ. ಕಾವ್ಯದಾರಂಭದಲ್ಲಿಯೇ "ಸುಕುಮಾರಚರಿತದೊಳ್ ನೋಟ[3]ಕ್ಕ ಕಾವ್ಯಧರ್ಮಮುಮನಮಳ ಜಿನಧರ್ಮಮುಮಂ" ಎಂದಿರುವುದನ್ನಿಲ್ಲಿ ಗಮನಿಸಬೇಕು. ಕವಿತ್ವರುಚಿ, ಜಿನತತ್ವರುಚಿಗಳ ಸಮನ್ವಯತೆ ಮತ್ತು ಸಾಧಾರಣೀಕರತ್ವವನ್ನು ಪಂಪ ರನ್ನರಿಗಿಂತಲೂ ಬಹು ಅಚ್ಚುಕಟ್ಟಾಗಿ ನಿರ್ವಹಿಸಲು ಕವಿಗೆ ಸಾಧ್ಯವಾದದ್ದು ಈ ನಿಟ್ಟಿನಿಂದಲೇ. ಇಲ್ಲಿ ಎಲ್ಲಿಯೂ ಮತೀಯತೆ ಪ್ರತ್ಯೇಕವಾಗಿ ಉಳಿಯದೆ, ಪಾತ್ರಗಳ ಬೆಳವಣಿಗೆಯಲ್ಲಿ ಕರಗಿ ಹೊರಬರುತ್ತದೆ. ಹೆಸರಿಗೆ ಸುಕುಮಾರನ ಕಥೆಯೇ ಆಗಿದ್ದರೂ ಭವಾವಳಿಯೆಲ್ಲವು ಮಾನವನ ಆಸೆ ಆಕಾಂಕ್ಷೆಗಳ, ಬದುಕಿನ ಏರು ಪೇರುಗಳನ್ನು ಬಯಲಿಗಿಡುವುದೇ ಆಗಿದೆ. ಆದ್ದರಿಂದಲೇ ಸಂಪಾದಕರು "ಸುಕುಮಾರನ ಕಥೆ ಒಂದು ವ್ಯಕ್ತಿಯ ಕಥೆಯಲ್ಲ; ಒಂದು ಜೀವದ ಕಥೆ, ಒಂದು ಜನ್ಮದ ಕಥೆಯಲ್ಲ, ಜನ್ಮಾಂತರಗಳ ಕಥೆ. ಜನ್ಮಗಳಿಗ ಕಾರಣ ಪುಣ್ಯ ಪಾಪರೂಪವಾದ ಕರ್ಮಪರಂಪರೆ. ಪ್ರಣಾಧಿಕ್ಯದಿಂದ ಮರ್ತ್ಯ ನಾಕಗಳ ಭೋಗ ಬಾಗ್ಯಗಳ

ಲಾಭ, ಪಾಪಾದಿಕ್ಯದಿಂದ ತಿರ್ಯಕ್ ನರಕಗತಿಗಳ ದುಃಖಾನುಭವ. ಎರಡರ ಪೂರ್ಣ ವಿನಾಶವಾಗಿ ಜನ್ಮ ಜನ್ಮಗಳ ಸಂಸಾರದಿಂದ ಜೀವನಿಗೆ ಬಿಡುಗಡೆ. ಇದೇ ಮೋಕ್ಷ, ಪರಮೋತ್ಕೃಷ್ಟ ದೆಶೆ" ಎಂದಿರುವುದು. ಬಹು ಸರಳವಾಗಿ ಹೇಳಬೇಕೆಂದರೆ ಪರಮಪದವಿಯತ್ತ ಕ್ರಮಿಸುವ ಯಾತ್ರಿಕನೊಬ್ಬನ ಜೀವನ ಕಥೆ ಇದು.

ಈ ಕಥೆಯ ಮೂಲವನ್ನು ಕುರಿತಂತೆ ಲೇಖಕರು ನಿಚ್ಚಳವಾಗಿ 'ವಡ್ಡಾರಾಧನೆ'ಯ ಮೂಲವನ್ನು ಗುರುತಿಸಿದ್ದು, ಆ ಮೂಲಕಥೆ "ಸಂಸ್ಕೃತವೋ ಪ್ರಾಕೃತವೋ ಕನ್ನಡವೋ ಎಲ್ಲದರ ರಸಪಾಕವೋ" (ಪು. 27) ಎಂದಿರುವುದು ಅಡ್ಡಗೋಡೆಯ ಮೇಲೆ ದೀಪವಿಟ್ಟಂತಾಗಿದೆ. ಕೃತಿಯ ಸಂಪಾದಕರೇ ವಡ್ಡಾರಾಧನೆಯೇ ಮೂಲ ಎಂಬ ಬಗ್ಗೆ ತೂಕವಾದ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಜೊತೆಗೆ ಸೂಕ್ಷ್ಮವಾದ ಅಧ್ಯಯನಕ್ಕೆ ಒಳಪಡಿಸಿ ನೋಡಿದಾಗ ಹಂತ ಹಂತದಲ್ಲೂ ವಡ್ಡಾರಾಧನೆಯನ್ನು ಅನುಸರಿಸಿರುವುದು ಸ್ಪಷ್ಟವಾಗುತ್ತದೆ. ಕೇವಲ ಕಥೆ ಮಾತ್ರವಲ್ಲ, ಅಲ್ಲಿನ ಭಾವ ಭಾಷೆ ಪದಕೋಶಗಳನ್ನು ಯಥಾಪಥಿಯಾಗಿ ಭಟ್ಟಿ ಇಳಿಸಿಬಿಡುತ್ತಾನೆ ಕವಿ. ಇಷ್ಟೊಂದು ಆಂತರಿಕ ಸಾಮ್ಯಕ್ಕೆ ಬೇರೊಂದು ಕಥೆಯೇ ಮೂಲವೆಂದು ಗ್ರಹಿಸಬೇಕಾದ ಅಗತ್ಯವಿಲ್ಲ. ಕೃತಿಯೂ ಸಶಕ್ತವಾಗಿ ಮೂಡಿಬಂದಿರುವುದು ಇದೇ ಕಾರಣಕ್ಕಾಗಿ. ಕೆಲ ಉದಾಹರಣೆಗಳನ್ನಿಲ್ಲಿ ನೋಡಬಹುದು :

ವಡ್ಡಾರಾಧನೆ	ಸುಕುಮಾರಚರಿತೆ
1. ಇಷ್ಟವಿಷಯ ಕಾಮಭೋಗಗಳ ನನುಭವಿಸುತ್ತಿರೆ (ಪು. 2)	1. ಇಷ್ಟವಿಷಯ ಕಾಮಭೋಗಗಳ ನನವರತಮನುಭವಿಸುತ್ತುಂ (ಪು. 17).
2. ನಿಮ್ಮ ಪ್ರಸಾದದಿಂದೆಲ್ಲಾ ಶಾಸ್ತ್ರ ಮಂ ಕಲ್ತು ಪಂಡಿತರೆಮಾದೆಂ (ಪು. 4)	2. ನಿಮ್ಮ ದಯೆಯಿಂದಂ...ಅಖಿಳ ಶಾಸ್ತ್ರಾಗಮಮಂ....ಅಜಿದೆವು (ಪು, 33).
3. ಮಹಾಪ್ರಸಾದಮೆಂದಱಗಿ ಪೊಡೆವಟ್ಟು ಕೈಕೊಂಡು...ಪಲಬರ್ ಪಂಡಿತಕ್ಕಳ್ಗೋದುಗಳಂ ವಖ್ಯಾಣಿಸುತ್ತಂ ಲೋಕದೊಳರಮನೆಯೊಳಂ ಪೂಜ್ಯರಾಗಿ (ಪು. 4)	3. ಮಹಾ ಪ್ರಸಾದಮೆಂದು ಕೈಕೊಂಡು ಬೀಡಿಂಗೆ ವಂದು ಸಕಲಶಾಸ್ತ್ರಂಗಳಂ ಪಲರ್ಗಂ ವಕ್ಖಾಣಿಸುತ್ತುಂ ಭುವನದೊಳಂ ರಾಜ ಭವನದೊಳಂ ಮಾನ್ಯರುಂ ಧನ್ಯರುಮಾಗಿ (ಪು. 38).

4. ನಿಮ್ಮ ಕಿಱಿಯ ಗುಡ್ಡನಂ ಸರಸಿ ಪೋಗಲ್ವೇೞ್ಕುಂ (ಪು. 7)	4. ನಿಮ್ಮ ಕಿಱಿಯಗುಡ್ಡಂ ವಾಯು ಭೂತಿಯಾಯಿರ್ದನೆ ಪರಿಸಿ ಪೋಪಿಲ್ (ಪು. 60).
5. ಗಾದೆ॥ ಣಿಂದಂತಂ ಸಿಳಹಂತಂ ಸತ್ತುಂ ಮಿತ್ತುಂ ತ ಹೇವ ಸುಖ ದುಖ್ಖಂ। ಜೋ ಸಮಭಾವಣ ಪೆಚ್ಚಇ ಸೋ ಸಮಣೋ ಸೋಂಮ ಪವ್ವಯಿಇ (ಪು. 7)	5. ಯಥಾವತ್ತಾದ, ಯಥಾಸನ್ನಿ ವೇಶದಲ್ಲಿ ಗಾದೆಯು ಬಳಕೆ ಯಾಗಿದೆ (ಪು. 63).

ಕಾವ್ಯದುದ್ದಕ್ಕೂ ಇಂಥ ಸಾಮಿಪ್ಯ ಅನುಸರಣೆಯನ್ನು ಗುರುತಿಸ ಬಹುದು. ಆದ್ದರಿಂದ ಶಾಂತಿನಾಥಕವಿಯ ಮೂಲ ಆಕರ ವಡ್ಡಾರಾಧನೆ ಯೆಂದೂ ಕಾವ್ಯನಿರ್ವಹಣೆಯಲ್ಲಿ, ವಿವರಣೆಯಲ್ಲಿ, ಕಲ್ಪನೆಯಲ್ಲಿ, ಕಥಾ ಸಂವಿಧಾನದಲ್ಲಿ ತನ್ನದೇ ಆದ ಸ್ವಂತಿಕೆಯನ್ನು ಮೈಗೂಡಿಸಿದ್ದಾನೆಂದೇ ಹೇಳ ಬೇಕಾಗುತ್ತದೆ. ಸಂಪಾದಕರೇ ಹೇಳುವಂತೆ "ಯಾವುದಾದರೂ ಕಥೆ ಬೆಳೆಯುವುದು ಸಂಕ್ಷಿಪ್ತತೆಯಿಂದ ವಿಸ್ತಾರದ ಕಡೆಗೆ: ಈ ದೃಷ್ಟಿಯಿಂದ ನೋಡಿದರೆ ಸುಕುಮಾರಚರಿತೆಯು 'ವಡ್ಡಾರಾಧನೆ'ಯ ಪುಸ್ತಕ ಕಥೆಯ ವಿಸ್ತರೀಕರಣವೆಂಬುದು ಸ್ಪಷ್ಟವಾಗಿದೆ" (ಮುನ್ನುಡಿ xlii).

ಈ ನಿಟ್ಟನಲ್ಲಿ ಕವಿ ಕೆಲ ಮಾರ್ಪಾಡುಗಳನ್ನು, ನೂತನ ಸನ್ನಿವೇಶ ಗಳನ್ನು ಸೃಷ್ಟಿಸಿಕೊಳ್ಳುತ್ತಾನೆ. ಏಕೆಂದರೆ "ಜಿನಮುನಿಗಳ ಪಾರಲೌಕಿಕ ಶ್ರದ್ಧೆ, ಆಳವಾಗಿ ಬೇರುಬಿಟ್ಟ ಅವರ ಭೇದ ವಿಜ್ಞಾನ, ಎಂಥ ಉಪಸರ್ಗ ಬಂದಾಗ್ಯೂ ಅನಿತ್ಯವಾದ ದೇಹಕ್ಕೆ ಮೋಹಗೊಳ್ಳದೆ ಆಧ್ಯಾತ್ಮಿಕ ಸಿದ್ಧಿಯತ್ತ ಕಣ್ಣಿಟ್ಟು ಅದನ್ನು ಸಾಧಿಸುವ ಸಾಹಸ–ಇವನ್ನು ಕಥೆಯಲ್ಲಿ ಸಹಜ ಸುಂದರವಾಗಿ ನಿರೂಪಿಸಿದೆ. ರಾಗ ದ್ವೇಷಗಳ ಹಂದರದ ಮೇಲೆ ಕಥಾವಲ್ಲರಿ ಹಬ್ಬಿದೆ. ಅಲ್ಲಲ್ಲೇ ಜನ್ಮಾಂತರ ಕುಡಿಯಿಟ್ಟು, ಜಾತಿಸ್ಮರಣೆ ಪಲ್ಲವಿಸಿ, ಜೀವದಯೆ ಅರಳಿ, ಜಿನಧರ್ಮ ಪ್ರಭಾವನೆ" ತಾವು ಪಡೆಯುತ್ತದೆ (ಜಿ. ಬ್ರಹ್ಮಪ್ಪ, ಶಾಂತಿನಾಥನದ ಸುಕುಮಾರ ಚರಿತೆ, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಬೆಂಗಳೂರು ವಿ. ವಿ. ನಿಲಯ ಪ್ರಕಟಣೆ, ಸಂ. 2, ಪು. 216). ಅದಕ್ಕೆ ಸಂಗತವಾಗಿ ಪಂಚಾಣುವ್ರತಗಳು, ಶ್ರಾವಕರು, ಮಹಾವ್ರತಗಳು, ಮುನಿಗಳು, ಘಟನೆಗಳು ಬಿತ್ತರಗೊಳ್ಳುವುದರಿಂದ ಕವಿ ನೂತನವಾಗಿ ವ್ಯವಹರಿಸಬೇಕಾದ್ದು ಅನಿವಾರ್ಯವಾಗುತ್ತದೆ.

ವಾಯುಭೂತಿಯ ಜೀವದ ಪಾಪಸಂಚಯನ ಭವಾವಳಿಯ ಮೂಲಕ ಕ್ಷಯಿಸುತ್ತಾ ಕತ್ತೆ–ನಾಯಿ–ಹಂದಿ–ಕುರುಡಿ–ಹೋಗಿ ನಂತರ ಸುಕುಮಾರ ಸ್ವಾಮಿಯಾಗಿ ಹುಟ್ಟುವುದು. ಹೀಗೆ ಹುಟ್ಟಿದ ಮಗನಿಗೆ ತಂದೆ ಸೂರದತ್ತ "ಸೆಟ್ಟಿವಟ್ಟಂಗಟ್ಟಿ ತಪಂಬಟ್ಟಂ" (ವಡ್ಡಾರಾಧನೆ ಪು. 25). ನಂತರ ಪರಿಣಾಮದ ಬಗೆಗೆ ಮೂಲದಲ್ಲಿ ಯಾವ ವಿವೇಚನೆ, ವಿವರಣೆ ಕಾಣಸಿಗದು. ಸುಕುಮಾರಚರಿತೆಯಲ್ಲಿ ಇದರ ಹಿನ್ನೆಲೆಯಲ್ಲಿ ತನ್ನ ಬಂಜೆತನಕ್ಕಾಗಿ ಪ್ರಲಾಪಿಸುವ ಯಶೋಭದ್ರೆಯ ತಾಯ್ತನದ ಒಳತೋಟಿಯಿದೆ. ಇದು ಆಕೆಯ ಪಾತ್ರಕ್ಕೆ ಪ್ರಾರಂಭದಿಂದಲೇ ಗಟ್ಟಿತನವನ್ನು, ಸತ್ವವನ್ನು ತುಂಬಿಕೊಡು ವಂಥದ್ದು. ಈ ಬಗೆಯ ಪಾತ್ರಸಿದ್ಧತೆಯಿಂದಲೇ ಮುಂದೆ ಸುಕುಮಾರ ನಿರ್ಗಮಿಸಿದಾಗಲೂ ಕುಟುಂಬದ ಹೊಣೆಗಾರಿಕೆಯನ್ನು ಹೊತ್ತುಕೊಂಡಿದ್ದು ಸಾಧ್ಯವಾದದ್ದು. ಇಲ್ಲಿ ಲೇಖಕರು ಶಾಂತಿನಾಥನ ಈ ಬದಲಾವಣೆಗೆ ವಡ್ಡಾರಾಧನೆಯಲ್ಲಿಯೇ ಮುಂದೆ ಬರುವ ಸುಕೌಶಲಸ್ವಾಮಿಯ ಕಥೆಯ ಜನನಪ್ರಸಂಗವನ್ನು ಸಾಮ್ಯವಾಗಿ ಕೊಟ್ಟು, ಅಲ್ಲಿನ ಅನುಸರಣೆಯನ್ನು ಖಚಿತಪಡಿಸುತ್ತಾರೆ. ಇದು ಅವರ ಸಂಶೋಧನೆಯ ತೀಕ್ಷ್ಣತೆಗೆ ಸಾಕ್ಷಿ.

ಅವಿದ್ಯಾವಿಹೀನರಾದ ವಾಯುಭೂತಿ ಅಗ್ನಿಭೂತಿಯರು ತಮ್ಮ ತಂದೆಯ ಮಂತ್ರಿ ಪದವಿಯನ್ನು ಪಡೆಯದೆ ಸಿಗ್ಗಾದ ಪ್ರಸಂಗ ವಡ್ಡಾರಾಧನೆ ಯಲ್ಲಿದೆ. ಇದು ಸುಕುಮಾರಚರಿತೆಯಲ್ಲಿ ವಾಸ್ತವ ನೆಲಗಟ್ಟನ್ನು ಪಡೆದು ಸಹಜತೆಯಿಂದ ಶೋಭಿಸುತ್ತದೆ. ಬಾಲ್ಯದಿಂದಲೇ ಇವರು ಗೋಳಾಂಗೂಳ ರಂತೆ ಬೆಳೆದವರು, ಸಹಜಚಾಪಲ್ಯರು, ದೋಷಗ್ರಾಹಿಗಳು, ಜಡಸ್ವಭಾವ ದವರು, ವಿಷಯಾಸಕ್ತರು ಎಂದೆಲ್ಲಾ ತಳಪಾಯವನ್ನು ಹಾಕಿ, ಈ ಕಾರಣ ದಿಂದಲೇ ತಮ್ಮ ದುಃಸ್ಥಿತಿಯನ್ನು ತಾವೇ ಆಹ್ವಾನಿಸಿಕೊಂಡರೆಂಬುದು ಕವಿಯ ಭಾವ. ಜೊತೆಗೆ ಇವರು ಅವಮಾನವಾದದ್ದು ವಿಜಯಜಿಹ್ವನೆಂಬ ವಾದಿ ಯೊಬ್ಬನ ಆಗಮನದಿಂದ, ಅದೂ ತುಂಬಿದ ಸಭೆಯಲ್ಲಿ. ಇದಕ್ಕಾಗಿ ಸಾಕಷ್ಟು ಪಶ್ಚಾತ್ತಾಪವನ್ನು ಪಟ್ಟೇ ಅವರು ವಿದ್ಯೆಯನ್ನು ಆರ್ಜಿಸಹೊರಟರು ಎಂಬಲ್ಲಿ, ಮೂಲಕ್ಕಿಂತಲೂ ಹೆಚ್ಚಿನ ಪರಿಣಾಮಕಾರಿ ವಾಸ್ತವಿಕತೆಯನ್ನು ಗ್ರಹಿಸಬಹು ದಾಗಿದೆ. ಹಾಗೆಯೇ ರಕ್ತಸಂಬಂಧಿಯಾಗಿದ್ದು ತಮ್ಮನ್ನು ಕ್ರೂರವಾಗಿ ನಡೆಸಿಕೊಂಡ, ದುಡಿಸಿಕೊಂಡ ಮಾವನ ಬಗ್ಗೆ ಮುಂದೆ ಮಂತ್ರಿಯಾದ ವಾಯುಭೂತಿ ತುಚ್ಛವಾಗಿ ಕಂಡದ್ದೂ ಅರಿಷಡ್ವರ್ಗಯುಕ್ತ ಮಾನವನ ಸಹಜ ಪ್ರತಿಕ್ರಿಯೆಯಾಗಿ ಮೂಡಿಬಂದಿದೆ. ದೊರೆ ಕೊಟ್ಟ ಉಂಗುರವನ್ನು ಕಳೆದು ಕೊಂಡ ವ್ಯಸನಿ ಸೂರ್ಯಮಿತ್ರ ಸುಧರ್ಮಾಚಾರ್ಯರನ್ನು ಕಾಣುವ ಪೂರ್ವಭಾವಿ ಯಾಗಿ ಪರಮಹಂಸಸ್ವಾಮಿಯೆಂಬ ಜೋಯಿಸನನ್ನು ಕರೆಸಿದ್ದು. ಆತನ ಅಂತಃ

ಸತ್ವದಲ್ಲಿದ್ದ ಪೊಳ್ಳುತನ ಮನನೀಯವಾಗಿದ್ದು, ತರುವಾಯ ಸುಧರ್ಮಾಚಾರ್ಯರನ್ನು ಅಗತ್ಯ ಹಾಗೂ ಅನಿವಾರ್ಯವಾಗಿ ಮರೆಹೋದುದರಲ್ಲಿ ಮೂಲಕ್ಕಿಂತ ಭಿನ್ನವಾದ ಔಚಿತ್ಯಜ್ಞತೆಯಿದೆ.

ಕವಿ ಮೂಲ ಕಥಾಸರಣಿಯನ್ನು ಅನುಸರಿಸಿಯೂ ಕೆಲ ಪ್ರಸಂಗಗಳನ್ನು ಕೈಬಿಟ್ಟಿದ್ದಾನೆ. ಇದಕ್ಕೆ ಅನ್ವಯಿಸಿದಂತೆ ಅಸತ್ಯಕ್ಕೆ ನಿದರ್ಶನವಾಗಿ ಬರುವ ವೈನಯಕನ ಕಥೆ, ಅಸ್ತೇಯಕ್ಕೆ ನಿದರ್ಶನವಾಗಿ ಬರುವ ಅಜ್ಜಿ ಗಂಭೀರೆಯ ಕಥೆಗಳನ್ನು ನೋಡಬಹುದು. ಮೊದಲನೆಯದರಲ್ಲಿ ಕಥೆ ಪೂರ್ಣ ಚೌಕಟ್ಟಿನಲ್ಲಿ ಇಲ್ಲ, ಎರಡನೆಯದರಲ್ಲಿ ಪಾತ್ರಕ್ಕೆ ತಕ್ಕಂಥ ಸಹಜತೆಯಿಲ್ಲ. ಹಾಗಾಗಿ ಮೂಲದಲ್ಲಿ ಇವೆರಡೂ ಪ್ರತ್ಯೇಕ ಎನ್ನುವಷ್ಟರಮಟ್ಟಿಗೆ, ಸನ್ನಿವೇಶಕ್ಕೆ ಹೊರತಾಗಿ ನಿಂತುಬಿಡುತ್ತವೆ. ಇವಿರದಿದ್ದರೂ ಕಾವ್ಯಸತ್ವಕ್ಕೆ, ಕಥಾಗತಿಗೆ ಕುಂದುಂಟೇನು ಆಗುತ್ತಿರಲಿಲ್ಲ. ಈ ಅಭಾಸತೆಯನ್ನು ಗ್ರಹಿಸಿದ ಶಾಂತಿನಾಥ ಅವೆರಡನ್ನು ಕೈಬಿಡುವ ಮೂಲಕ ಕಾವ್ಯನಿರ್ವಹಣೆಯ ಶಕ್ತಿಯಲ್ಲಿ ಕೌಶಲ್ಯವನ್ನು, ಔಚಿತ್ಯಪ್ರಜ್ಞೆಯನ್ನು ಪ್ರದರ್ಶಿಸುತ್ತಾನೆ. ಈ ಸಂಬಂಧ ಲೇಖಕರು ತಮ್ಮ ತೃಪ್ತಿಕರ ವಿಮರ್ಶೆಯನ್ನು ಮುಂದಿಟ್ಟಿದ್ದಾರೆ.

ಇನ್ನು ಮೂಲದ ಭಾವವನ್ನು ಗ್ರಹಿಸದೆ ಕವಿ ಎಡವಿರುವುದಕ್ಕೆ ಸ್ನಾನದ ತೊಟ್ಟಿಯ ಪ್ರಸಂಗವನ್ನು ನೋಡಬೇಕು. ಸ್ನಾನ ಮಾಡುವಾಗ ಕಳಚಿದ ಉಂಗುರಕ್ಕಾಗಿ ದೊರೆ ಬರಿದು ಮಾಡಿದ ಸ್ನಾನದ ತೊಟ್ಟಿಯನ್ನು ನೋಡಿ ಅಚ್ಚರಿಗೊಂಡ ಸನ್ನಿವೇಶ. ಇದು ಸುಕುಮಾರಸ್ವಾಮಿಯ ಕೋಮಲತೆ, ವೈಭವದ ಪ್ರಮಾಣ, ಭೋಗ ಬದುಕಿನ ಉತ್ತುಂಗತೆಯ ಪ್ರತೀಕ. ಇಂಥ ಸುಖಿಯೊಬ್ಬ ಇದ್ದಕ್ಕಿದ್ದಂತೆ ವೈರಾಗ್ಯದೆಡೆ ಮೊಗ ಮಾಡುವುದೇ ಅದ್ಭುತ. ಆತನ ನಿರ್ಲಿಪ್ತ, ಊರ್ಧ್ವಗಾಮಿ, ದೃಢ ವ್ಯಕ್ತಿತ್ವದ ದ್ಯೋತಕ. ಇಂಥ ಕಾವ್ಯಸೊಗಸನ್ನು, ಕವಿಸಾಮರ್ಥ್ಯವನ್ನು ಪ್ರತಿಬಿಂಬಿಸುವ ಈ ಪ್ರಸಂಗವನ್ನು ಶಾಂತಿನಾಥ ಬಿಟ್ಟಿದ್ದು ಸಮಾಧಾನ ಎನಿಸದು. ಇದನ್ನು ಲೇಖಕರು ಅಗತ್ಯವಾಗಿ ತಮ್ಮ ಅವಗಾಹನೆಯಲ್ಲಿ ಗಮನಿಸಲೇಬೇಕಿತ್ತು.

ಇನ್ನು ಪಾತ್ರಸೃಷ್ಟಿಯಲ್ಲಿನ ಕವಿನೈಪುಣ್ಯವನ್ನು ಕುರಿತಂತೆ ಲೇಖಕರು ಇದ್ದ ಮಿತಿಯಲ್ಲಿ ಸರಳ ಸುಂದರವಾಗಿ ಯಶೋಭದ್ರೆ, ವೃಷಭಾಂಕ, ಸುಕುಮಾರ ಪಾತ್ರವನ್ನು ಪರಿಚಯಿಸಿದ್ದಾರೆ. ಇದು ಮೆಚ್ಚಬೇಕಾದ್ದೆ. ಹೀಗಿದ್ದೂ ಸುಕುಮಾರನ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಮಾನವ ಧರ್ಮ, ಮಾನವೀಯ ಭಾವನೆಗಳಿಂದಲೇ ಮೂರ್ತಗೊಂಡ ಅಗ್ನಿಭೂತಿಯ ಪತ್ನಿಯಾಗಿ ಸೋಮದತ್ತೆಯ ನೋವು, ಸ್ತ್ರೀಸಹಜ ಆವೇಗ ಆವೇಶಗಳು,

ವಾತ್ಸಲ್ಯ, ಹೊಣೆಗಾರಿಕೆಯರಿತ ಪ್ರಾಮಾಣಿಕತೆಯಾದ ಸಿಟ್ಟಿನಲ್ಲಿ ಯಶೋಭದ್ರೆ, ಇಂದಿನ ಸಮಾಜಕ್ಕೆ ಬೇಕಾದ ನಿತ್ಯಗುಣಗಳನ್ನು ಪರಿಚಯಿಸುವ ನಾಗಶ್ರೀಯ ಚೆಲುವು, ಒಲವು–ನಿಲವು, ಸತ್‌ಚಾರಿತ್ರ್ಯ ಇತ್ಯಾದಿಗಳನ್ನು ಮೇಲಿನ ಮಿತಿಯಲ್ಲಿಯೇ ಸೆರೆಹಿಡಿಯಬಹುದಿತ್ತು. ಏಕೆಂದರೆ ಇಲ್ಲೆಲ್ಲಾ ಕವಿಯ ಇಂಗಿತಜ್ಞತೆ, ಕಲ್ಪನಾ ಸಾಮರ್ಥ್ಯ, ಸಹೃದಯತೆ, ಪಾತ್ರಗಳಲ್ಲಿನ ಪರಿಪುಷ್ಟತೆ, ಸ್ವಧರ್ಮ ಪರಿಪಾಲನೆಯಲ್ಲಿನ ಆತನ ತಾದಾತ್ಮ್ಯಭಾವನೆಗಳು ಪ್ರತಿಬಿಂಬಿತವಾಗಿವೆ.

ನಿಜವಾಗಿ ಒಬ್ಬ ಕವಿ-ಕೃತಿಯ ಅಧ್ಯಯನ ಪೂರ್ಣವಾಗುವುದು ಆತನ ಪ್ರತಿಭೆಯನ್ನು ಕಂಡರಿಸಿದ್ದಂತೇ. ಆತನ ಮೇಲಿರುವ ಅನ್ಯಕವಿ ಪ್ರಭಾವವನ್ನು ಗುರುತಿಸುವುದರಲ್ಲಿ. ಇಲ್ಲಿ ಲೇಖಕರು ಪಂಪಕವಿಯ ಆದಿಪುರಾಣದ ಪ್ರಭಾವವನ್ನು ಮಹತ್ವಪೂರ್ಣವಾಗಿ ಚರ್ಚಿಸಿದ್ದಾರೆ. ಆದರೆ ಕವಿಯೇ ಪಂಪನನ್ನು ಸ್ಮರಿಸಿದಂತೆ ರನ್ನ ಪೊನ್ನರನ್ನು ಸ್ಮರಿಸಿದ್ದಾನೆಂದಮೇಲೆ ಅವರಿಂದಲೂ ಉಪಕೃತನಾಗಿರುವ ಸಂಭವ ಹೆಚ್ಚಿದೆ. ಇದಕ್ಕೆ ಪ್ರಮಾಣವಾಗಿ ರನ್ನನ 'ಗದಾಯುದ್ಧ'ದ 7-33, 3-4, 3-45 (ಸಂಗ್ರಹ) ಪದ್ಯಭಾಗಗಳನ್ನು ಕ್ರಮವಾಗಿ 'ಸುಕುಮಾರಚರಿತೆ'ಯ 4-26, 2-64, 4-28 ಪದ್ಯಭಾಗಗಳೊಂದಿಗೆ ಹೋಲಿಸಿ ನೋಡಬಹುದು (ಸಮಗ್ರ ಸಾಹಿತ್ಯಚರಿತ್ರೆ, ಬೆಂ. ವಿ. ವಿ. ನಿಲಯ, ಭಾಗ 2, ಪು. 221).

ಛಂದಸ್ಸನ್ನು ಕುರಿತಂತೆ ಕೇವಲ ಸೂಚನೆಯನ್ನು ಕೊಟ್ಟು ಕೈಬಿಟ್ಟಿದ್ದಾರೆ ಲೇಖಕರು. ಆದರೆ 'ಸುಕುಮಾರಚರಿತೆ'ಯಲ್ಲಿ ಪ್ರಯೋಗಗೊಂಡಿರುವ ತ್ರಿಪದಿ, ಪಿರಿಯಕ್ಕರ ರಗಳೆಗಳು ದೇಶೀಯ ಛಂದಸ್ಸಿನ ದೃಷ್ಟಿಯಿಂದ ಮುಖ್ಯವಾದವು. ಅಕ್ಷರವೃತ್ತಗಳು ಶಾಸ್ತ್ರೀಯವಾಗಿ ಬಳಕೆಗೊಂಡಿರುವಂತೆ ತ್ರಿಪದಿಗಳಲ್ಲಿ ನಾಗವರ್ಮ ಜಯಕೀರ್ತಿಯವರು ಹೇಳಿರುವ ಲಕ್ಷಣಯುಕ್ತವಾದುವು : ಅಂಶಗಣಘಟಿತವಾದುವು. ಹಾಗೆಯೇ ಷಟ್ಪದಿಯೂ ಕೂಡ. ರಗಳೆಯಲ್ಲಿ ವೈವಿಧ್ಯಮಯ ಸ್ವತಂತ್ರ ವಿನ್ಯಾಸ ವಿವೇಚನೆಯಿದೆ. ಅಲ್ಲಲ್ಲಿ ಗಣಪರಿವೃತ್ತಿಯೂ ಕಂಡುಬರುತ್ತದೆ.

ಕೊನೆಯದಾಗಿ ಶೈಲಿಯನ್ನು ಕುರಿತ ಲೇಖಕರ ಈ ಮಾತುಗಳನ್ನು ನೇರವಾಗಿ ಪುರಸ್ಕರಿಸಬೇಕು "ಶಾಂತಿನಾಥ ಕವಿಯ ಶೈಲಿ, ಪದಬಂಧ, ಪದಪವಣಿಕೆಯ ಪ್ರೌಢಿಮೆ ಕನ್ನಡದ ಹಿರಿಯ ಕವಿಗಳ ಶೈಲಿಗೆ ಯಾವುದರಲ್ಲೂ ಕಡಿಮೆಯಿಲ್ಲ. ಪಂಪನ ಹಿತ ಮಿತವಚನ, ರನ್ನಕವಿಯ ವಾಗ್ಧೋರಣೆಯ

ಶಕ್ತಿ, ಜನ್ನನ ಕಥಾನಿರೂಪಣಾ ಕೌಶಲ, ಕುಮಾರವ್ಯಾಸ–ಹರಿಹರಭಕ್ತಿ ಎಲ್ಲವೂ ಶಾಂತಿನಾಥನಲ್ಲಿ ಇವೆ" (ಪು. 46). ಇದಕ್ಕೆ ಪೂರಕ ದಾಖಲೆಯನ್ನು ಕೊಟ್ಟಿದ್ದಾರೆ. ಜೊತೆಗೆ ಕವಿಯ ನಾಟಕೀಯ ನಿರ್ಮಾಣಕಲೆಯ ಬಗ್ಗೆ ಹೇಳಬಹುದಿತ್ತು.

ಇಷ್ಟಾದರೂ ಕಮಲಾ ಹಂಪನಾ ಅವರ ಪ್ರಯತ್ನ ಮತ್ತು ಶ್ರಮ ಸ್ತುತ್ಯವಾದುದು. ಈ ದಿಶೆಯಲ್ಲಿನ ಅವರ ಶ್ರದ್ಧೆ ಮತ್ತು ಪ್ರಾಮಾಣಿಕ ಅಧ್ಯಯನ ಮೆಚ್ಚುವಂಥದ್ದು. ತಮ್ಮ ಸಾಮರ್ಥ್ಯವನ್ನು ಪಣಕ್ಕಿಡುವಂಥ ಇಂಥ ಕಾರ್ಯವನ್ನು ಮಾಡಬಲ್ಲಂಥ ಶಕ್ತಿಯನ್ನು, ಆರೋಗ್ಯಕರ ಬೆಳವಣಿಗೆಯನ್ನು 'ಶಾಂತಿನಾಥಕವಿ' ಕೃತಿ ಹೊರಹಾಕಿದೆ ಎಂಬುದೊಂದು ನನ್ನಮಟ್ಟಿಗೆ ಸತ್ಯ.

ಚಾವುಂಡರಾಯಪುರಾಣಂ

ಡಾ॥ ಎಸ್. ಪಿ ಪಾಟೀಲ

ಚಾವುಂಡರಾಯನು ಹತ್ತನೆಯ ಶತಮಾನದ ಕರ್ನಾಟಕದ ಸಾಂಸ್ಕೃತಿಕ ಮೌಲ್ಯಗಳ ಪ್ರತಿನಿಧಿ. ಶೌರ್ಯ, ಸಾಹಸ, ಔದಾರ್ಯ, ಶೀಲ ಸಂಯಮ, ಚಾರಿತ್ರ್ಯಾದಿಗಳಿಗೆ ತನ್ನ ಬದುಕಿನಿಂದ ಹಿರಿಮೆಯನ್ನು ತಂದು ಕೊಟ್ಟವ. ಶ್ರೇಷ್ಠ ಆಚಾರ್ಯರ ಮಾರ್ಗದರ್ಶನದಲ್ಲಿ ಸಾಹಿತ್ಯ-ಸಿದ್ಧಾಂತವನ್ನು ಓದಿ, ಮನನಮಾಡಿಕೊಂಡು ಆಚರಣೆಯಲ್ಲಿ ತಂದು ತೋರಿದ ಧೀಮಂತ ಯೋಧನಾಗಿ ರಣರಂಗ, ಮಂತ್ರಿ–ಸಂಧಿವಿಗ್ರಹಿಯಾಗಿ ರಾಜಾಸ್ಥಾನ, ಆದರ್ಶ ಶಿಷ್ಯನಾಗಿ ಗುರುಸನ್ನಿಧಿ, ಶ್ರಾವಕ ಶಿರೋಮಣಿಯಾಗಿ ಧಾರ್ಮಿಕರಂಗ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ತನ್ನ ಕಾರ್ಯ–ಸಾಧನೆಯನ್ನು ಚಿರಂತನಗೊಳಿಸಿದವ ಚಾವುಂಡರಾಯ.

ಚಾವುಂಡರಾಯನ ವ್ಯಕ್ತಿತ್ವದ ವಿವಿಧ ಅಂಗಗಳ ಬೆಳವಣಿಗೆಗೆ ಧಾರೆಯೆರೆದು ಪೋಷಿಸಿದವರು ತಾಯಿ ಕಾಳಲಾದೇವಿ, ಗುರುಗಳಾದ ಅಜಿತಸೇನ ಮತ್ತು ಸಿದ್ಧಾಂತ ಚಕ್ರವರ್ತಿ ನೇಮಿಚಂದ್ರ ಆಚಾರ್ಯರು. ಭುವನಗುರು ಅಜಿತಸೇನಾಚಾರ್ಯರಂತೆಯೇ ನೇಮಿಚಂದ್ರಾಚಾರ್ಯರ ಸಾನಿಧ್ಯ ಚಾವುಂಡರಾಯನ ಆಧ್ಯಾತ್ಮಿಕ ಹಸಿವೆಯನ್ನು ಹಿಂಗಿಸುವಲ್ಲಿ ಸಫಲವಾದಂತೆ 'ಗೊಮ್ಮಟಸಾರ'ದಂಥ ಆಚಾರ್ಯ ಕೃತಿ ರಚನೆಯ ಮೂಲಕ ಸಿದ್ಧಾಂತದ ಸಿರಿವಂತಿಕೆಯನ್ನು ಮೆರೆಯಲು ಸಾಧ್ಯವಾಯಿತು. ಚಾವುಂಡರಾಯನಿಗಾಗಿಯೇ ಅವರು 'ಷಟ್‌ಖಂಡಾಗಮ'ವನ್ನು ಸಂಗ್ರಹಿಸಿ ಕೊಟ್ಟುದು ಶಿಷ್ಯನ ಮೇಲಿನ ಅವರ ವಾತ್ಸಲ್ಯಕ್ಕೆ ನಿದರ್ಶನವಾಗಿರುವಂತೆ ಚಾವುಂಡರಾಯನ ಆಧ್ಯಾತ್ಮಿಕ ವಿಷಯದಲ್ಲಿನ ಆಸಕ್ತಿಗೆ ನಿದರ್ಶನವೂ ಆಗಿದೆ. ಚಾವುಂಡರಾಯನ ಸಾಹಿತ್ಯಾಭಿರುಚಿ ಸಜೀವವಾಗಿ ಉಳಿದುಬಂದುದಕ್ಕೆ ಅಜಿತಸೇನರ ಮಾರ್ಗದರ್ಶನ, ಕವಿ ರನ್ನ, ನಾಗವರ್ಮರ ಸಹವಾಸ ಕಾರಣವಾಗಿದೆ. ಅದರ ಫಲವಾಗಿ ತಾನು ಅಭ್ಯಸಿಸಿದ ವಿವಿಧ ಶಾಸ್ತ್ರಗ್ರಂಥಗಳ ವಿಚಾರವನ್ನು ಸಾಮಾನ್ಯರಿಗೂ ತಲುಪಿಸಬೇಕೆಂಬ ಏಕಮಾತ್ರ ಉದ್ದೇಶದಿಂದ ಚಾವುಂಡರಾಯನು ಕೃತಿರಚನೆಗೆ ತೊಡಗಿದಂತಿದೆ. ಅದರ ಫಲವಾಗಿ ಚಾವುಂಡರಾಯಪುರಾಣ (ತ್ರಿಷಷ್ಠಿ ಲಕ್ಷಣ ಮಹಾಪುರಾಣ), ಚರಿತ್ರಸಾರ (ಸಂಸ್ಕೃತ ಗದ್ಯ) ಹಾಗೂ 'ವೀರ ಮಾರ್ತಂಡಿ' (ಅನುಪಲಬ್ಧ) ಕೃತಿಗಳು ರೂಪತಾಳಿದವು.

'ಚಾವುಂಡರಾಯಪುರಾಣ'ವು ಕನ್ನಡ ಜೈನಪುರಾಣ ಪರಂಪರೆಯಲ್ಲಿ ಏಕೈಕ ಮಹಾಪುರಾಣವಾಗಿದೆ. ಇದರ ಪ್ರಕಟನೆಯ ಇತಿಹಾಸವೂ ಗಮನಾರ್ಹವಾಗಿದ್ದು ಅದರ ಹಿನ್ನೆಲೆಯಲ್ಲಿ ಕಮಲಾ ಹಂಪನಾ, ಕೆ. ಆರ್. ಶೇಷಗಿರಿ ಅವರು ಸಂಪಾದಿಸಿದ ಕೃತಿಯ ವೈಶಿಷ್ಟ್ಯವೇನೆಂಬುದು ಸ್ಪಷ್ಟವಾಗುತ್ತಿದೆ:

1. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯ ಸಂಪುಟ ೨, ಸಂಚಿಕೆ ೪, ಜನವರಿ ೧೯೧೮, ಪುಟಗಳು ೨೯೫–೩೯೭ ಹಾಗೂ ಸಂಪುಟ ೩ ಕಾಳಯುಕ್ತ ಸಂವತ್ಸರ, ೧೯೧೮–೧೯೧೯, ಪುಟಗಳು ೩–೪೫, ಆದಿಪುರಾಣದ ಭಾಗ ಮಾತ್ರ ಬೆಳಕಿಗೆ ಬಂದಿತು. ಅದರೊಂದಿಗೆ ಚಾವುಂಡರಾಯಪುರಾಣದ ಹಸ್ತಪ್ರತಿಯ ಸೆರೆಯಿಂದ ಬಿಡುಗಡೆ ಪಡೆದಂತಾಯಿತು.

2. ಪರಿಷತ್ಪತ್ರಿಕೆಯಲ್ಲಿ ಪ್ರಕಟವಾದ ಆದಿಪುರಾಣದ ಭಾಗವೇ ಚಾವುಂಡರಾಯಪುರಾಣಂ (ಆದಿಪುರಾಣಂ) ಎಂದು ಪ್ರತ್ಯೇಕವಾಗಿ ಕರ್ನಾಟಕ ಸಾಹಿತ್ಯ ಪರಿಷತ್ತಿನಿಂದ ೧೯೧೮ ರಲ್ಲಿ ಪ್ರಕಟವಾಯಿತು.

3. ಮೇಲಿನದರ ಪರಿಷ್ಕೃತ ಎರಡನೆಯ ಆವೃತ್ತಿಯ ಮುದ್ರಣ ೧೯೨೮ ರಲ್ಲಿ ಆಯಿತು.

ಆದರೂ ಈವರೆಗೆ ಕೇವಲ ಆದಿಪುರಾಣದ ಭಾಗ ಮಾತ್ರ ಬೆಳಕಿಗೆ ಬಂದಂತಾಯಿತು.

4. ಚಾವುಂಡರಾಯಪುರಾಣಂ (ಶಾಂತಿಪುರಾಣಂ) ಸಾಹಿತ್ಯ ಪರಿಷತ್ಪತ್ರಿಕೆಯ ಸಂಪುಟ ೨೯ರ ೧, ೨ ಸಂಯುಕ್ತ ಸಂಚಿಕೆ, ಮಾರ್ಚ್–ಜೂನ್, ೧೯೪೪ ರಲ್ಲಿ ಪು. ೫೦–೬೫ ಪ್ರಕಟವಾಯಿತು.

ಹೀಗೆ ಚಾವುಂಡರಾಯಪುರಾಣದ ಕೇವಲ ಆದಿಪುರಾಣ ಮತ್ತು ಶಾಂತಿ ಪುರಾಣಗಳು ಮಾತ್ರ ಮುದ್ರಣ ರೂಪದಲ್ಲಿ ಲಭ್ಯವಾಗಿದ್ದವು. ಆದರಿಂದಾಗಿ ಚಾವುಂಡರಾಯಪುರಾಣದ ವಾಚಕ ಅಧ್ಯಯನ ಆದರ ಕುರಿತು ಖಚಿತ ನಿಲುಮೆ ಸಾಧ್ಯವಾಗಿರಲಿಲ್ಲ.

5. ೧೯೭೫ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯ ನಿರ್ದೇಶಕರಾದ ಡಾ॥ ಬಿ. ಎಸ್. ಕುಲಕರ್ಣಿ ಅವರು ಚಾವುಂಡ ರಾಯವಿರಚಿತ 'ತ್ರಿಷಷ್ಟಿ ಲಕ್ಷಣ ಮಹಾಪುರಾಣಂ' (ಚಾವುಂಡರಾಯಪುರಾಣ) ವನ್ನು ಪ್ರಕಟಿಸಿ ಮೊದಲಬಾರಿಗೆ ಅದು ಇಡಿಯಾಗಿ ಓದುಗರ ಕೈಗೆ ನಿಲುಕು ವಂತೆ ಮಾಡಿದರು. ಈ ದೃಷ್ಟಿಯಿಂದ ಈ ಆವೃತ್ತಿ ಚಾವುಂಡರಾಯ ಪುರಾಣಗಳ ಪ್ರಕಟನೆಯ ಇತಿಹಾಸದಲ್ಲಿ ಎರಡನೆಯ ಮಹತ್ವದ ಘಟ್ಟವಾಗಿದೆ.

6. ಮುಂದೆ ನಾಲ್ಕೇ ವರ್ಷಗಳಲ್ಲಿ ಮೈಸೂರಿನ ವಿದ್ವಾಂಸ, ಎಂ. ಸಿ. ಪದ್ಮನಾಭಶರ್ಮ ಅವರು 'ಚಾರಿತ್ರ ಚಕ್ರವರ್ತಿ ಚಾವುಂಡರಾಯ ವಿರಚಿತ 'ತ್ರಿಷಷ್ಟಿ ಶಲಾಕಾ ಮಹಾಪುರಾಣಂ' (ಚಾವುಂಡರಾಯಪುರಾಣಂ) ವನ್ನು ಪ್ರಕಟಿಸಿದರು.

7. ೧೯೮೩ ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕಮಲಾ ಹಂಪನಾ, ಕೆ. ಆರ್. ಶೇಷಗಿರಿ ಅವರಿಂದ ಸಂಪಾದಿತ ಕೃತಿಯನ್ನು ಪ್ರಕಟಿಸಿ ೧೯೧೮ ರಷ್ಟು ಹಿಂದೆಯೇ ಅದು ಆರಂಭಿಸಿದ ಕಾರ್ಯವನ್ನು ಪೂರ್ಣ ಪ್ರಮಾಣದಲ್ಲಿ ಪೂರೈಸಿತು ; ಈಗಾಗಲೇ ಎರಡು ಬೇರೆ ಆವೃತ್ತಿಗಳು ಬಂದಿದ್ದರೂ ಇನ್ನೂ ಒಂದು ಆವೃತ್ತಿಯ ಅಗತ್ಯತೆಯನ್ನು ಮನಗಂಡು ಅದನ್ನು ನಿವಾರಿಸುವಲ್ಲಿ ಸಫಲವಾಯಿತು.

ಈವರೆಗೆ ಸಾಗಿಬಂದ ಚಾವುಂಡರಾಯಪುರಾಣದ ಪ್ರಕಟನೆಯ ಚರಿತ್ರೆ ಆಯಾ ಆವೃತ್ತಿಗಳ ವೈವಿಧ್ಯತೆಯತ್ತ ಬೆರಳುಮಾಡಿ ತೋರಿಸುವಂತಿದೆ.

೧೯೭೪ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಡಾ॥ ಬಿ. ಎಸ್. ಕುಲಕರ್ಣಿ ಅವರು ಪ್ರಕಟಿಸಿದ 'ಚಾವುಂಡರಾಯಪುರಾಣ'ವು ಸಮಗ್ರವಾಗಿ ಪ್ರಕಟವಾದ ಪ್ರಥಮ ಆವೃತ್ತಿಯಾಗಿದೆ. ಆ ದೃಷ್ಟಿಯಿಂದ ತುಂಬ ಮಹತ್ವದ ಕೃತಿಯಾದರೂ ಬೇರೆ ಬೇರೆ ಹಸ್ತಪ್ರತಿಗಳ ಪಾಠಾಂತರಗಳನ್ನು ಅದು ನೀಡುವುದಿಲ್ಲವೆಂಬುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಅದರಿಂದಾಗಿ ಗ್ರಂಥಸಂಪಾದನೆಯ ಪರಿಚಯವುಳ್ಳವರಿಗೆ ನಿರಾಶೆ ಎಂದು ಹೇಳಲಾಗಿದೆ. ೧. ಗ್ರಂಥಸಂಪಾದನೆಯ ಪರಿಚಯವಿದ್ದೂ ಈಗಾಗಲೇ ಅನೇಕ ಕೃತಿಗಳನ್ನು ಸಂಪಾದಿಸಿದ ಡಾ॥ ಬಿ. ಎಸ್. ಕುಲಕರ್ಣಿ ಅವರು ಈ ಕೃತಿಯನ್ನು ಪರಿಷ್ಕರಿಸುವ ಸಂದರ್ಭದಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂದು ಉಪಲಬ್ಧ ಅವಕಾಶಗಳ ಹಿನ್ನೆಲೆಯಲ್ಲಿ ಅದನ್ನು ಪೂರ್ಣಗೊಳಿಸಬೇಕಾಯಿತು. ಅದರಲ್ಲಿ ಪದಗಳನ್ನು ವಿಂಗಡಿಸಿದ ರೀತಿ, ಅಲ್ಪವಿರಾಮ ಚಿಹ್ನೆಗಳ ಬಳಕೆಯ ಬಗ್ಗೆ ಗೊಂದಲವುಂಟಾಗಿದ್ದರೂ ಸಂದೇಹ ಬಂದೆಡೆಗಳಲ್ಲಿ ಮಹಾಪುರಾಣವನ್ನಾಧರಿಸಿ ವಿಷಯನಿರೂಪಣೆಯಲ್ಲಿ ತೋರಿದ ಪರಿಶ್ರಮ ಮೆಚ್ಚುವಂತಹದು. ಆ ತರುವಾಯದ ಕೃತಿಗಳನ್ನು ಗಮನದಲ್ಲಿರಿಸಿಕೊಂಡು ಈ ಆವೃತ್ತಿಯನ್ನು ಪರಿಶೀಲಿಸಿದಾಗ ಈ ಅಂಶ ಸ್ಪಷ್ಟವಾಗದಿರದು.

ಎಂ. ಸಿ. ಪದ್ಮನಾಭಶರ್ಮ ಅವರು ಹಸ್ತಪ್ರತಿಗಳ ಬಗ್ಗೆ ಯಾವ ವಿವರವನ್ನೂ ನೀಡದೆ ಚಾವುಂಡರಾಯಪುರಾಣವನ್ನು 'ಸಂಶೋಧಿಸಿ' ಪ್ರಕಟಿಸಲಾಗಿದೆ ಎಂದಿದ್ದಾರೆ. ಅದರಲ್ಲಿ ಪ್ರಾಕೃತ ಗಾಹೆ, ಸಂಸ್ಕೃತ ವೃತ್ತಗಳನ್ನು ಶುದ್ಧರೂಪದಲ್ಲಿ ಕೊಡುವ ಪ್ರಯತ್ನ–ಆಶಯವೂ ವ್ಯಕ್ತವಾಗಿದೆ. ಆದರೆ ಗ್ರಂಥದ ತುಂಬ ಹರಡಿರುವ ಸ್ಖಾಲಿತ್ಯಗಳು ಆಸ್ವಾದನೆಯಲ್ಲಿ ಅಡ್ಡಿಯನ್ನುಂಟು ಮಾಡುತ್ತವೆ.

ಈ ಹಿನ್ನೆಲೆಯಲ್ಲಿ ಗ್ರಂಥಸಂಪಾದನಾ ಶಾಸ್ತ್ರವನ್ನಾಧರಿಸಿ ಪರಿಷ್ಕರಿಸಲ್ಪಟ್ಟ ಚಾವುಂಡರಾಯಪುರಾಣದ ಅಧಿಕೃತ ಆವೃತ್ತಿಯೊಂದು ಅಗತ್ಯವಾಗಿದ್ದಿತು. ಅದನ್ನು ಈಡೇರಿಸುವ ಕಾರ್ಯ ಸುಲಭವೂ ಆಗಿರಲಿಲ್ಲ. ಈಗಾಗಲೇ ಪ್ರಕಟವಾದ ಆವೃತ್ತಿಗಳನ್ನು ಗಮನದಲ್ಲಿರಿಸಿಕೊಂಡು ಸಂಶೋಧಕರಿಗೆ ಉಪಯುಕ್ತವಾಗಬಲ್ಲ, ಓದುಗರಿಗೆ ಸರಾಗವಾಗಿ ಓದಲು ಬರುವಂಥ ರೀತಿಯಲ್ಲಿ ಅದನ್ನು ಎಚ್ಚರಿಕೆಯಿಂದ ಸಿದ್ಧಪಡಿಸುವ ಗುರುತರ ಜವಾಬುದಾರಿ ಮುಂದಿನ ಸಂಪಾದಕರ ಮೇಲಿದ್ದೀತು. ಈವರೆಗಿನ ಸಂಪಾದಕರು ಆಯಾ ಕಾಲ–ಪರಿಸರ–ಪರಿಸ್ಥಿತಿಯ ಹಿನ್ನೆಲೆಯಲ್ಲಿ ಮಾಡಿದ ಕಾರ್ಯವನ್ನು ಮನ್ನಿಸಿ

---

೧. ಕಮಲಾ ಹಂಪನಾ : ಪ್ರಸ್ತಾವನೆ, ಪುಟ Li.

ಮುನ್ನಡೆಯುವ ಅಗತ್ಯತೆ ಇತ್ತು. ಈ ಹಿನ್ನೆಲೆಯಲ್ಲಿ ಕಮಲಾ ಹಂಪನಾ, ಕೆ. ಆರ್. ಶೇಷಗಿರಿ ಅವರ ಚಾವುಂಡರಾಯಪುರಾಣದ ಪರಿಷ್ಕರಣವನ್ನು ಗಮನಿಸುವುದು ಅಗತ್ಯದ್ದಾಗುತ್ತದೆ ಹಾಗೂ ಅದರಿಂದಾಗಿ ಅವರ ಸಾಧನೆ ಸಿದ್ಧಿಯನ್ನು ತಿಳಿಯಲು ಸಾಧ್ಯವಾಗುತ್ತದೆ.

ಪ್ರಾಚೀನ ಗ್ರಂಥವೊಂದನ್ನು ಸಂಪಾದನೆ-ಪರಿಷ್ಕರಣೆಗೆ ಆಯ್ದುಕೊಳ್ಳುವ ವ್ಯಕ್ತಿಗೆ ಆವರೆಗೆ ಅದರ ಪ್ರಕಟನೆ, ಹಸ್ತಪ್ರತಿಗಳ ವಿವರ ಅವುಗಳ ಚರಿತ್ರೆ ತಿಳಿದಿರುವುದು ಅಗತ್ಯ. ಇದು ಖಚಿತವಾದಾಗಲೇ ತಾವು ಕೈಗೊಳ್ಳಲಿರುವ ಕಾರ್ಯದ ಸ್ವರೂಪ ಸ್ಪಷ್ಟವಾಗುತ್ತದೆ. ಕಮಲಾ ಹಂಪನಾ ಅವರು ತಮ್ಮ ಪ್ರಸ್ತಾವನೆಯಲ್ಲಿ ಸುಮಾರು ೯ ಪುಟಗಳಲ್ಲಿ ಈ ವಿಷಯವನ್ನು ವಿವರವಾಗಿ ಪ್ರಸ್ತಾಪಿಸಿದ್ದು ಚಾವುಂಡರಾಯಪುರಾಣದ ಪ್ರಕಟನೆಯ ಎಲ್ಲ ಪ್ರಯತ್ನಗಳನ್ನು ಗಮನಿಸಿದ್ದಾರೆಂಬುದಕ್ಕೆ ನಿದರ್ಶನ. ಈ ಹಿನ್ನೆಲೆಯಿದ್ದುದರಿಂದಲೇ ಅವರಿಗೆ ತಮ್ಮ ಆವೃತ್ತಿ ಹೇಗಿರಬೇಕು ಎಂಬ ಸ್ಪಷ್ಟ ನಿಲುಮೆಯನ್ನು ಸ್ವೀಕರಿಸಲು ಸಾಧ್ಯವಾಗಿದೆ ಹಾಗೂ ಅದನ್ನು ನಿರ್ವಹಿಸುವಲ್ಲಿ ಜಾಗರೂಕತೆಯಿಂದ ಯಶಸ್ವಿಯಾಗಲು ಸಾಧ್ಯವಾಗಿದೆ. ಸಂಪಾದನೆಗೆ ತಾವು ಬಳಸಿಕೊಂಡ ಹಸ್ತಪ್ರತಿಗಳ ವಿವರ, ಪಾಠಾಂತರಗಳನ್ನು ಕೊಡುವಲ್ಲಿ ತೋರಿದ ಔಚಿತ್ಯ, ಮೂಲದ ಪದಪ್ರಯೋಗಗಳ ಖಚಿತ ರೂಪಗಳು, 'ಱ' 'ೞ' ಗಳ ಉಚಿತ ಬಳಕೆ ಇವೆಲ್ಲ ವಿಷಯಗಳಲ್ಲಿ ಈ ಆವೃತ್ತಿಯು ಮೂಲಕ್ಕೆ ಸಮೀಪವಾದ ಆವೃತ್ತಿಯಾಗಿದೆ ಎಂಬುದರಲ್ಲಿ ಸಂದೇಹವಿಲ್ಲ.

ಕಮಲಾ ಹಂಪನಾ ಅವರ ಪರಿಷ್ಕರಣ ಹಸ್ತಪ್ರತಿಗಳನ್ನಾಧರಿಸಿ ಮೂಲಾನುಸಾರಿಯಾಗಿದೆ ಎಂಬುದರಲ್ಲಿ ಸಂದೇಹವಿಲ್ಲ. ಇದನ್ನು ನೀಡುವಲ್ಲಿನ ಸಂಪಾದಕರ ಪ್ರಾಮಾಣಿಕತೆ, ಶ್ರದ್ಧೆ, ಪರಿಶ್ರಮಗಳನ್ನು ಮೆಚ್ಚಿಕೊಳ್ಳಲೇಬೇಕು. ಆದರೆ ವಿಷಯ ನಿರೂಪಣೆಯ ದೃಷ್ಟಿಯಿಂದ ಗಮನಿಸಿದಾಗ ಕೆಲವೊಂದು ಮಾರ್ಪಾಡುಗಳಿಗೆ, ಸಂದೇಹ ನಿವಾರಣೆಗಾಗಿ ಅವಕಾಶವಿದ್ದುದಾಗಿ ತೋರಿಬರದಿರಲಾರದು. ಮಹಾಪುರಾಣ-ಚಾವುಂಡರಾಯಪುರಾಣಗಳ ತೌಲನಿಕ ಅಧ್ಯಯನದ ಮೂಲಕ ಕಮಲಾ ಹಂಪನಾ ಹಾಗೂ ಡಾ|| ಬಿ. ಎಸ್. ಕುಲಕರ್ಣಿ ಅವರ ಪರಿಷ್ಕರಣೆಗಳಲ್ಲಿ ಕೆಲ ಮಾರ್ಪಾಡುಗಳನ್ನು ಕಾಣಬಹುದಾಗಿದೆ :

1. ಆದಿಪುರಾಣದ ಭಾಗದಲ್ಲಿ ಮೇಘೇಶ್ವರನು ವೃಷಭದೇವನಿಗೆ... ಗಣಧರನಾದನು — ಮ. ಪು. ದಲ್ಲಿ — ಎಪ್ಪತ್ತೊಂದನೆಯ, ಡಾ. ಬಿ. ಎಸ್.

ಕುಲಕರ್ಣಿ ಆವೃತ್ತಿಯಲ್ಲಿ–ಎಪ್ಪತ್ತೆಂಟನೆಯ[1] ಕಮಲಾ ಹಂಪನಾ ಆವೃತ್ತಿಯಲ್ಲಿ ಎಪ್ಪೊತ್ತಂದನೆಯ[2] ಎಂಬುದಾಗಿಯೇ ಇದೆ. ಇದರಲ್ಲಿ ಕಮಲಾ ಹಂಪನಾ ಅವರ ಪರಿಷ್ಕರಣೆ ಮಹಾಪುರಾಣದ ಅಂಶವನ್ನೇ ಪುಷ್ಟೀಕರಿಸುವುದಾಗಿದೆ.

2. ವಿಮಲನಾಥರ ಸಂಘದಲ್ಲಿದ್ದ ಆರ್ಯಿಕೆಯರ ಸಂಖ್ಯೆ ೧೦,೩೦೦ ಎಂದು ಮತ್ತು ಮ. ಪು., ೧೦,೩೦೦೦ ಎಂದು ಡಾ. ಬಿ. ಎಸ್. ಕುಲಕರ್ಣಿ ಪರಿಷ್ಕರಣೆ (ಹಾಗೂ ಕಂಸಿನಲ್ಲಿ ೧೩೦೦೦೦, ೧೩೬೦೦೦)[3] ಎಂದೂ ಇದ್ದರೆ ಕಮಲಾ ಹಂಪನಾ ಪರಿಷ್ಕರಣೆಯಲ್ಲಿ ೧೩೬೦೦೦ ಎಂದಿದೆ.[4]

3. ಅದರಂತೆ ಸುಕೇತುವಿನ ಆಯುಷ್ಯ ಹದಿನಾಲ್ಕು ಸಾಗರ ವರ್ಷವೆಂದು ಮ.ಪು. (೫೯-೮೫) ಎಂದು ಹೇಳಿದರೆ, ಡಾ. ಕುಲಕರ್ಣಿ ಅವರಲ್ಲಿ ಹದಿನಾಲ್ಕು (ಕಂಸಿನಲ್ಲಿ 'ಪದಿನಾರು'), ಪು. ೧೫೩ ಕಮಲಾ ಹಂಪನಾ ಅವರಲ್ಲಿ ಪದಿನಾರು (ಪು. ೧೪೦) ಎಂದೂ ಅಡಿ ಟಿಪ್ಪಣಿಯಲ್ಲಿ 'ಪದಿನಾಲ್ಕು' ಎಂದೂ ಇದೆ.

4. ಶಾಂತಿನಾಥ ಪುರಾಣದಲ್ಲಿ ವಿದ್ಯಾಧರನ ಹೆಂಡತಿಯ ಹೆಸರು ಆಸೂರಿ ಎಂದು ಮಹಾಪುರಾಣದಲ್ಲಿದೆ (೬೨-೨೭೭), ಡಾ. ಕುಲಕರ್ಣಿ ಅವರಲ್ಲಿ ಆಸೂರಿ (ಪು. ೧೨೮) ; ಕಮಲಾ ಹಂಪನಾ ಅವರಲ್ಲಿ ಸೂರಿದೇವಿ (ಪು. ೧೭೧) ಎಂದಿದೆ.

ಮೇಲಿನ ೨, ೩, ೪ ರಲ್ಲಿನ ಪಾಠಾಂತರಗಳನ್ನು ನಿರ್ಧರಿಸುವಲ್ಲಿ ಮಹಾಪುರಾಣವನ್ನು ಅಥವಾ ಮಹಾಪುರಾಣವನ್ನು ಬಳಸಿಕೊಂಡ ಡಾ. ಬಿ. ಎಸ್. ಕುಲಕರ್ಣಿ ಅವರ ಪರಿಷ್ಕರಣೆಯನ್ನು ಗಮನಿಸಿದ್ದಾಗಿದ್ದರೆ ಕಮಲಾ ಹಂಪನಾ ಅವರ ಪಾಠಾಂತರ ನಿರ್ಣಯ ಇನ್ನಿಷ್ಟು ಖಚಿತವೂ ಪ್ರಮಾಣ ಭೂತವೂ ಆಗುತ್ತಿದ್ದುದರಲ್ಲಿ ಸಂದೇಹವಿಲ್ಲ. ಆದರೆ ವಿಸ್ತಾರವಾದ, ಅನೇಕ ವ್ಯಕ್ತಿವಿವರ ಘಟನೆಗಳಿಂದ ಕೂಡಿದ ಕೃತಿಯನ್ನು ಪರಿಷ್ಕರಿಸುವಾಗ ಎಲ್ಲವನ್ನೂ ಗಮನಿಸುವುದು ಸಾಧ್ಯವಾಗುವದಿಲ್ಲವೆಂಬುದನ್ನು ನೆನೆಯಬೇಕಾಗುತ್ತದೆ.

---

1. ಚಾ.ಪು., ಪು. 82
2. ಚಾ.ಪು., ಪು. 80
3. ಚಾ.ಪು., ಪು. 152
4. ಚಾ.ಪು.. ಪು. 138

ಆದರೂ ಹತ್ತನೆಯ ಶತಮಾನದ ಗದ್ಯ ಶೈಲಿಯನ್ನು ಸೆರೆಹಿಡಿಯು ವಲ್ಲಿ, ವಾಕ್ಯಗಳನ್ನು ಸರಿಯಾದ ರೀತಿಯಲ್ಲಿ ಓದಲು ಬರುವಂತೆ, ಘಟನೆ ಗಳಿಗನುಸಾರವಾಗಿ ನಿರೂಪಣೆಯಲ್ಲಿ ಪರಿಚ್ಛೇದನೆಗಳನ್ನು ವ್ಯವಸ್ಥೆಗೊಳಿಸು ವಲ್ಲಿ, ಱ-ಏಗಳ ಬಳಕೆ ಹಾಗೂ ಪಾಠಾಂತರಗಳ ನಿರ್ಣಯಿಸುವಲ್ಲಿ ತೋರಿದ ತೂಕ ಇವೆಲ್ಲವುಗಳಿಂದಾಗಿ ಕಮಲಾ ಹಂಪನಾ ಅವರ ಚಾವುಂಡರಾಯಪುರಾ ಣವು ಅಧಿಕೃತ ಆವೃತ್ತಿಯೆಂಬ ಮನ್ನಣೆಗೆ ಅರ್ಹವಾಗಿದೆ. ಇದರೊಂದಿಗೆ ಆರಂಭದಲ್ಲಿ ಚಾವುಂಡರಾಯನ ಸಮಗ್ರ ವ್ಯಕ್ತಿತ್ವವನ್ನು ಕುರಿತು ಬರೆದ ಪ್ರಾಸ್ತಾವಿಕ ಮಾತುಗಳು ತೂಕಬದ್ಧವೂ ನಿರ್ಣಯಾತ್ಮಕವೂ ಆಗಿವೆ. ಚಾವುಂಡರಾಯಪುರಾಣದೊಂದಿಗೆ ಅವರು ಕೈಕೊಂಡ ಮಹತ್ಕಾರ್ಯಗಳು ಅವನ ವ್ಯಕ್ತಿತ್ವವನ್ನು ಅರಿಯುವಲ್ಲಿ ಅನಿವಾರ್ಯವಾದ ಅಂಶಗಳು. ಅವು ಗಳಿಂದಾಗಿ ಅವನ ವ್ಯಕ್ತಿತ್ವದ ಹಿರಿಮೆ–ವ್ಯಕ್ತವಾಗಿದೆ. ಮೇಲಾಗಿ ಕ.ಸಾ.ಪ. ಅಧ್ಯಕ್ಷರಾದ ಪ್ರೊ. ಹಂಪ. ನಾಗರಾಜಯ್ಯ ಅವರು ಮುನ್ನುಡಿಯ ರೂಪದಲ್ಲಿ ಚಾವುಂಡರಾಯಪುರಾಣದ ವೈಶಿಷ್ಟ್ಯದ ಮೇಲೆ ಬೆಳಕು ಬೀರಿರುವುದಲ್ಲದೆ, ಈ ದಿಶೆಯಲ್ಲಿ ಮುಂದೆ ಆಗಬೇಕಾದ ಕಾರ್ಯಸ್ವರೂಪವನ್ನು ನಿರ್ದೇಶಿಸಿರು ವುದು ತುಂಬ ಔಚಿತ್ಯಪೂರ್ಣವಾಗಿದೆ. ಒಟ್ಟಿನಲ್ಲಿ ಕಮಲಾ ಹಂಪನಾ ಅವರ ಚಾವುಂಡರಾಯ ಪುರಾಣ, (ಸಂಪಾದಿತ)ಪ್ರಾಚೀನ ಕೃತಿಗಳ ಮಾಲೆಯಲ್ಲಿ ಅವರಿಂದ ಸಂದ ಮಹತ್ವಪೂರ್ಣ ಕಾಣಿಕೆಯೆಂದು ಭಾವಿಸಬೇಕಾಗುತ್ತದೆ.

ಡಿ. ಎಲ್. ಎನ್. ಅವರ ಆಯ್ದ ಲೇಖನಗಳು

ಡಾ॥ ಶ್ರೀಕಂಠ ಕೂಡಿಗೆ

"ದೊಲನರವರ ಒಟ್ಟು ಲೇಖನ ರಾಶಿಯಲ್ಲಿ ಕೆಲವನ್ನು ಆರಿಸಿ ಸಂಗ್ರಹ ಸಿದ್ಧಪಡಿಸುವುದು ಸುಲಭವೂ ಹೌದು, ಕಷ್ಟವೂ ಹೌದು. ಸುಲಭ ಹೇಗೆಂದರೆ, ಎತ್ತಿಕೊಂಡರೂ ಅದು ಉತ್ಕೃಷ್ಟವೇ ಆಗಿರುತ್ತದೆ. ಕಷ್ಟ ಯಾವುದೆಂದರೆ ಯಾವುದನ್ನು ಬಿಡುವುದು ಎಂದು ತೀರ್ಮಾನಿಸುವುದು" ಇದು ಕೃತಿ ಸಂಪಾದಕರಾದ ಕಮಲಾ ಹಂಪನಾರವರ ಮಾತು. ಅವರು ತಮ್ಮ ಈ ಮಾತುಗಳಲ್ಲಿ ಡಿ. ಎಲ್. ಎನ್ ಬರಹಗಳ ಮೌಲಿಕತೆಯನ್ನು ಸರಿಯಾಗಿಯೇ ಗುರುತಿಸಿದ್ದಾರೆ. ಘನ ವಿದ್ವಾಂಸರೊಬ್ಬರ ಜೀವನ ಸಾಧನೆಯ ಫಲವಾಗಿ ಮೂಡಿಬಂದ ಸರ್ವೋತ್ಕೃಷ್ಟ ಬರಹಗಳನ್ನು ಸಂಕಲಿಸಿಕೊಡುವ ಯಾರಿಗೇ ಆಗಲಿ ಇದು ಎದುರಾಗಬಹುದಾದ ಸಮಸ್ಯೆ.

ಸುಮಾರು ೨೩೭ ಪುಟಗಳ ವ್ಯಾಪ್ತಿಯಲ್ಲಿ ಅತ್ಯುಪಯುಕ್ತ ಒಂಭತ್ತು ಲೇಖನಗಳನ್ನು ಸಂಪಾದಕರು ಆಯ್ದುಕೊಟ್ಟಿದ್ದಾರೆ. ಪೀಠಿಕೆ, ಕವಿ ಕಾವ್ಯ ವಿಚಾರ, ವಿಮರ್ಶೆ, ಛಂದಸ್ಸು, ಗ್ರಂಥಸಂಪಾದನೆ, ಕನ್ನಡ ಸಿರುಕ್ತ, ಸಂಕೀರ್ಣ ಇತ್ಯಾದಿ ಶೀರ್ಷಿಕೆಗಳಲ್ಲಿ ತೊಂಭತ್ತಕ್ಕೂ ಹೆಚ್ಚು ಲೇಖನಗಳನ್ನು ಡಿ. ಎಲ್. ಎನ್. ಅವರು ಬರೆದಿದ್ದಾರೆ. ಅವುಗಳಲ್ಲಿ ಪ್ರಾತಿನಿಧಿಕವೆನ್ನಿಸುವ ಬರಹಗಳನ್ನು ಆಯ್ದುಕೊಂಡಿರುವುದು ಸಂಪಾದಕರ ಔಚಿತ್ಯ ಪ್ರಜ್ಞೆಗೆ ಸಾಕ್ಷಿ. ವಿಶ್ವಸಾಹಿತ್ಯ ಮಾಲೆಯಲ್ಲಿ ಪ್ರಕಟವಾಗಿರುವ ಈ ಕೃತಿ ವಿದ್ವಜ್ಜನರಿಗೂ ಮತ್ತು ಸಾಮಾನ್ಯ ವಾಚನಾಸಕ್ತರಿಗೂ ಉಪಯುಕ್ತವಾಗಿದೆ.

'ದೊಡ್ಡಬೆಲೆ ಆಚಾರ್ಯರು' ಎಂಬ ಅರ್ಥಪೂರ್ಣ ಶೀರ್ಷಿಕೆಯಲ್ಲಿ ಡಿ. ಎಲ್. ಎನ್ ಅವರ ವ್ಯಕ್ತಿತ್ವದ ಅನುಕರಣಯೋಗ್ಯ ಗುಣಗಳನ್ನು ವಸ್ತುನಿಷ್ಠವಾಗಿ ಕೆಲವೊಮ್ಮೆ ಉದಾರ ಮೆಚ್ಚಿಗೆಯಲ್ಲಿ-ಬಿಚ್ಚಿಟ್ಟಿರುವುದು ಸಂಕಲಿತ ಬರಹಗಳ ಅಧ್ಯಯನಕ್ಕೆ ಒಂದು ಉಪಯುಕ್ತ ಹಿನ್ನೆಲೆ ಒದಗಿಸಿದಂತಾಗಿದೆ. ಶಾಲಾಧ್ಯಾಪಕರು ಡಿ. ಎಲ್. ನರಸಿಂಹಾಚಾರ್ ಎಂದು ಕರೆದ ಹಿನ್ನೆಲೆಯಿಂದ ಹಿಡಿದು ವಿದ್ಯಾಭ್ಯಾಸ, ಪಡೆದ ಮಾರ್ಗದರ್ಶನ, ಅಧ್ಯಯನಾಸಕ್ತಿ, ಏರಿದ ಪದವಿ, ಗಳಿಸಿದ ಕೀರ್ತಿ, ಸಮರ್ಪಣಾ ಮನೋಭಾವ, ಅಸೀಮ ಪಾಂಡಿತ್ಯ ಇತ್ಯಾದಿಯವರೆಗೆ ಉಪಯುಕ್ತ ಮಾಹಿತಿಗಳಿವೆ. ಡಿ. ಎಲ್. ಎನ್. ಅವರ ವ್ಯಕ್ತಿತ್ವದ ಸಮಗ್ರ ನೋಟವೊಂದು ಇದರಿಂದ ದೊರೆಯುತ್ತದೆ.

"ದೊಲನ ವಿಜ್ಞಾನದ ವಿದ್ಯಾರ್ಥಿಯಾಗಿ ಕನ್ನಡಕ್ಕೆ ಬಂದವರು ; ಇಲ್ಲಿನ ಗೊಡ್ಡುತನವನ್ನು ಗುಡಿಸಿಹಾಕಿದರು. ಜಡ್ಡುಗಟ್ಟಿದ ಪದ್ಧತಿಗೆ ಚುರುಕು ಮುಟ್ಟಿಸಿದರು. ಹೊಸ ಹೊಸ ಕ್ಷಿತಿಜ ತೆರೆದರು. ಹಳಗನ್ನಡ ಗ್ರಂಥ ಸಂಪಾದನೆಗೆ ಕೊರತೆಗಳನ್ನು ನಿವಾರಿಸಿ ಒಂದು ಹೆದ್ದಾರಿ ನಿರ್ಮಿಸಿದರು. ಅದಕ್ಕೊಂದು ಲಕ್ಷಣ ಹೇಳಿ ಲಕ್ಷ್ಯಗಳನ್ನು ಕೊಟ್ಟು ವಿದ್ವಾಂಸರ ಲಕ್ಷ್ಯಸೆಳೆದರು. ಸಂಶೋಧಕರಿಗೆ ಮರ್ಯಾದೆ ತಂದುಕೊಟ್ಟರು. ಸಂಶೋಧನೆ ಎನ್ನುವುದು ಬೀದಿವರಿಯ ಗೊರವರ ಡುಂಡುಚಿಯಲ್ಲ, ಕಪೋಲ ಕಲ್ಪಿತ ಕಗ್ಗವಲ್ಲ. ವಿಶೇಷ ಅರ್ಹತೆ, ಆದ್ಯತೆ ಇರುವ, ಬಲ್ಲಿದರ-ಮೇಧಾವಿಗಳ ಕಾರ್ಯಕ್ಷೇತ್ರವೆಂಬ ಗೌರವ ಗಳಿಸಿಕೊಟ್ಟರು" ಎನ್ನುವ ಅಭಿಪ್ರಾಯ ಡಿ. ಎಲ್. ಎನ್. ಅವರ ಒಟ್ಟು ಬರಹಗಳನ್ನು ಓದಿದ ಯಾರಿಗೂ ಮೂಡದಿರದು.

ಅನೇಕ ಹಸ್ತಪ್ರತಿಗಳ, ಪಾಠಾಂತರಗಳ ಗೊಂದಲದಲ್ಲಿ ಅಸ್ಪಷ್ಟವಾದ ಪ್ರಾಚೀನ ಕೃತಿಗಳ ಕಾಲನಿರ್ಣಯ ಮತ್ತು ಪಾಠ ನಿರ್ಣಯಗಳಲ್ಲಿ ಡಿ. ಎಲ್. ಎನ್. ವಹಿಸಿದ ಶ್ರಮ, ತಾಳಿದ ನಿಲುವುಗಳು ಹಳಗನ್ನಡ ಅಭ್ಯಾಸಿಗರಿಗೆ

ಅಪೂರ್ವ ಮಾರ್ಗದರ್ಶನಗಳಾಗಿವೆ. ಅವರ ಬಹುಭಾಷಾ ಪರಿಚಯ, ಸ್ಪಷ್ಟವಿಚಾರ, ಹಿಂದಿನವರ ಅಭಿಪ್ರಾಯುಗಳನ್ನು ಸಕಾರಣವಾಗಿ ತಿರಸ್ಕರಿಸು ವಲ್ಲಿನ ವಿನಯವಂತಿಕೆ ನಿಬ್ಬೆರಗು ಹುಟ್ಟಿಸುತ್ತದೆ. ಕವಿಯ ಹೆಸರಿನ ಚರ್ಚೆ, ಪದನಿಷ್ಪತ್ತಿ, ಹಸ್ತಪ್ರತಿಯ ಸ್ವರೂಪ ನಿರ್ಣಯ ಇತ್ಯಾದಿ ಯಾವುದೇ ವಿಷಯ ವಿರಲಿ ಇಂಥ ನಿಬ್ಬೆರಗು ಸದಾ ಕಾಯ್ದಿಟ್ಟದ್ದೆ ಆಗಿರುತ್ತದೆ. ವಿದ್ವಾಂಸರೊಬ್ಬರ ಸತ್ಯಶೋಧನೆಯ ಕಾತರ–ಕಾಳಜಿಯ ದ್ಯೋತಕ ಇಲ್ಲಿನ ಬರಹಗಳು. 'ವಡ್ಡಾ ರಾಧನೆ ಕುರಿತ ಪೀಠಿಕೆ', 'ಶಬ್ದಮಣಿ ದರ್ಪಣದ ಪ್ರಸ್ತಾವನೆ', 'ಕಣ್ಮರೆಯಾದ ಕನ್ನಡ, ಮಹಾರಾಷ್ಟ್ರದ ಮೂಲ' ಈ ಗುಂಪಿಗೆ ಸೇರುವ ಲೇಖನಗಳಲ್ಲಿ ಅಗ್ರಗಣ್ಯವಾದುವು.

ಮೈಸೂರು ಪ್ರಾಚ್ಯಪುಸ್ತಕ ಭಂಡಾರದ (ಸಂಖ್ಯೆ 415) ಓಲೆಪುಸ್ತಕ 'ವೊಡ್ಡಾರಾಧಣ'ದಲ್ಲಿ ಬರುವ"ಈ ಪೇಳ್ದ ಹತ್ತೊಂಭತ್ತುಕಥೆಗ...ಟ್ಯಾಚಾರ್ಯರು ಪೇಳ್ದಾ ವೊಡ್ಡಾರಾಧಣಂ ಸಂಪೂರ್ಣಂ ಶುಭಮಸ್ತು. ಆನಂದ ಸಂವತ್ಸರದ ಕಾರ್ತೀಕ ಬಹುಳ ಪಾಡ್ಯ ಸೋಮವಾರದಲು ಮಲ್ಲರಸನು ಬರೆದ ವೊಡ್ಡಾ ರಾಧನೆ ಸಮಾಪ್ತಂ"ಎಂಬ ವಿವಾದಾಸ್ಪದ ಭಾಗವನ್ನೆತ್ತಿಕೊಂಡು ಈ ಗ್ರಂಥವನ್ನು ಸಂಪ್ರತಿಸಿದ ಕಾಲ ಕ್ರಿ.ಶ. 1434ನೆಯ ವರ್ಷವೇ ಆಗಿರಬೇಕೆಂದು ಸಾಧಿಸಿರುವ ಕ್ರಮ ತಾರ್ಕಿಕವಾಗಿದೆ, 'ವಡ್ಡಾರಾಧನೆ ಎಂಬ ಹೆಸರೇ ಕೃತಿಯ ಮೂಲ ರೂಪವೆಂದೂ ಇದನ್ನು ರಚಿಸಿದವನು ರೇವಾಕೋಟಾಚಾರ್ಯನಲ್ಲ ಶಿವಕೋಟಾ ಚಾರ್ಯನೆಂದೂ ಕೃತಿಯನ್ನು ಉಪಸರ್ಗ ಕೇವಲಿಗಳ ಕಥೆಯೆಂದೂ ಕರೆದಿರುವು ದರ ಔಚಿತ್ಯವನ್ನು ಬಹುಮೂಲಗಳ ಆಧಾರದಿಂದ ಸಮರ್ಥಿಸಿದ್ದಾರೆ. "ನನಗಾದರೊ ಕನ್ನಡ ವೊಡ್ಡಾರಾಧಣವು ಕ್ರಿ. ಶ. 6 ನೆಯ ಶತಮಾನಕ್ಕಿಂತ ಈಚೆಯದಲ್ಲವೆಂದು ತೋರುತ್ತದೆ" ಎಂದು ದಿ॥ ಗೋವಿಂದ ಪೈ ತಮ್ಮ 'ಮೂರು ಉಪನ್ಯಾಸಗಳು' (1940) ಗ್ರಂಥದಲ್ಲಿ ಅದರ ಕಾಲದ ಬಗ್ಗೆ ವ್ಯಕ್ತ ಪಡಿಸಿರುವ ಅಭಿಪ್ರಾಯದ ಸತ್ಯಾಸತ್ಯತೆಯನ್ನು ಒರೆಗೆ ಹಚ್ಚಿದ್ದಾರೆ. ಆಂತರಿಕ ಪ್ರಮಾಣವನ್ನೇ ವಿಶೇಷವಾಗಿ ಅವಲಂಬಿಸಿರುವ ಈ ಅಭಿಪ್ರಾಯಕ್ಕೆ ಬಾಹ್ಯ ಪ್ರಮಾಣಗಳ ನೆರವಿನ ಕೊರತೆ ಇರುವುದನ್ನು ಗುರುತಿಸಿದ್ದಾರೆ. 'ಸೋರ್ಸಸ್ ಆಫ್ ಕರ್ನಾಟಕ ಹಿಸ್ಟರಿ'ಯಲ್ಲಿ ಡಾ॥ ಎಸ್. ಶ್ರೀಕಂಠಶಾಸ್ತ್ರಿ ಅವರು ವಡ್ಡಾ ರಾಧನೆ ಏಳನೆಯಶತಮಾನಕ್ಕೆ ಸೇರಿದ ರಚನೆಯೆಂದು ಹೇಳಿದ ಸಂಗತಿ ನಿರಾಧಾರ ವೆಂದು ಭಾವಿಸಿದ್ದಾರೆ. ವಡ್ಡಾರಾಧನೆಯ ರಚನಾ ಕಾಲವನ್ನು ಕಂಡು ಹಿಡಿಯುವುದರಲ್ಲಿ ಡಾ॥ ಆ. ನೇ. ಉಪಾಧ್ಯೆ ಅವರು ಮಾಡಿರುವ ಸಂಶೋಧನೆ ಗಳು ಬಹುಸಾರವತ್ತಾಗಿವೆಯೆಂದು ಸೂಚಿಸಿ ವಡ್ಡಾರಾಧನೆಯ ಪ್ರಾಕೃತ,

ಸಂಸ್ಕೃತ ಆಕರಗಳ ಪಟ್ಟಿಯನ್ನು ಇನ್ನಷ್ಟು ಮುಂದೆ ತೆಗೆದುಕೊಂಡು ಹೋಗಿದ್ದಾರೆ. 'ಪ'ಕಾರ ಕ್ರಮೇಣ 'ಹ'ಕಾರಕ್ಕೆ ಮಾರ್ಪಾಡಾದದ್ದು ಕ್ರಿ. ಶ. 11ನೆಯ ಶತಮಾನದ ಮೇಲೆ ಎಂಬ ಶಾಸನಾಧಾರಿತ ಸಂಗತಿಯನ್ನು ಡಾ॥ ಉಪಾಧ್ಯೆಯವರ ಅಭಿಪ್ರಾಯವನ್ನನುಸರಿಸಿ ಆ ಮುಂಚೆ ಈ ಪ್ರಕ್ರಿಯೆ ನಡೆದಿರುವುದಕ್ಕೆ ಇನ್ನಷ್ಟು ಆಧಾರ ಒದಗಿಸಿದ್ದಾರೆ. ಈ ವಾದದ ಹಿನ್ನೆಲೆಯಲ್ಲಿ ಫಲಿತವಾಗಿರುವ ಸಂಗತಿಗಳನ್ನು ಅವರ ಮಾತುಗಳಲ್ಲೆ ಸಂಗ್ರಹಿಸಿಕೊಳ್ಳಬಹುದು. "ಪಹ ಮಾರ್ಪಾಡು 9-10 ನೆಯ ಶತಮಾನಗಳಲ್ಲಿಯೇ ಅಲ್ಲಲ್ಲಿ ಇದ್ದಿತೆಂದು ಹೇಳಬೇಕಾಗಿದೆ. ಇದು ಜನರ ಬಾಯಿಮಾತಿನಲ್ಲಿ ತಲೆದೋರಿ ಅಲ್ಲಿಂದ ಈ ಶಾಸನಗಳೊಳಕ್ಕೆ ಪ್ರವೇಶಿಸಿರಬಹುದು. ಪ್ರಕೃತ ಪ>ಹ ಮಾರ್ಪಾಡಿಗೆ ಒಂದು ನಿದರ್ಶವಾದರೂ ವಡ್ಡಾರಾಧನೆಯಲ್ಲಿ ದೊರೆಯುತ್ತಿಲ್ಲ. ಹತ್ತನೆಯ ಶತಮಾನದ ಯಾರ ಕನ್ನಡ ಗ್ರಂಥದಲ್ಲೂ ಇರುವಂತೆ ತಿಳಿದಿಲ್ಲ. ಹಳೆಯ ನುಡಿಗಟ್ಟಿನಲ್ಲಿ ಪಂಡಿತನಾಗಿದ್ದ ಒಬ್ಬ ಈಚಿನ ಕವಿ ಪಟ್ಟು ಹಿಡಿದು 'ಪ'ಕಾರ ಪ್ರಯೋಗವನ್ನೇ ಮಾಡಿ ಬರೆದಿದ್ದಾನೆ ಎಂಬ ಸಂಭವತೆಯನ್ನು ಬಿಟ್ಟರೆ 'ವಡ್ಡಾರಾಧನೆ' 10ನೆಯ ಶತಮಾನಕ್ಕಿಂತ ಈಚಿನದಾದ ರಚನೆಯಲ್ಲವೆಂದು ನಿರ್ಣಯಿಸಲೇಕಾಗಿದೆ" ಎಂದಿದ್ದಾರೆ. 'ವಡ್ಡಾರಾಧನೆ' ಪಂಪಭಾರತಕ್ಕಿಂತ ಹಿಂದಿನರಚನೆ, ಕವಿರಾಜಮಾರ್ಗಕ್ಕೆ ಸಮಕಾಲೀನವಾದ ಕೃತಿಯೆಂದು ಸಾಧಿಸಿರುವುದು ಮೆಚ್ಚತಕ್ಕ ಅಂಶವಾಗಿದೆ.

ಮೇಲಿನ ಸಂಗತಿಗಳಲ್ಲದೆ ಶಿವಕೋಟಾಚಾರ್ಯನ ಗುರು, ಊರು ಕುರಿತು ಸಾಧಾರ ಊಹೆ, ಗದ್ಯಕಥೆ ಕುರಿತ ಸ್ವರೂಪ ಲಕ್ಷಣ, ವಡ್ಡಾರಾಧನೆಯ ಕಥೆಗಳಿಗೂ ಹರಿಷೇಣನ ಕಥೆಗಳಿಗೂ ಇರುವ ಸಾಮ್ಯಗಳು ಕವಚ ಸಾಹಿತ್ಯ ಪ್ರಕಾರದ ಚರ್ಚೆ, ಬಾದುಬ್ಬೆ ಪರ್ವ ಇತ್ಯಾದಿ ಪ್ರಾಚೀನ ಉಲ್ಲೇಖಗಳು ಸುಮಾರು 95 ಪುಟಗಳಲ್ಲಿ ವಿವರವಾಗಿ ಚರ್ಚಿಸಲ್ಪಟ್ಟಿದೆ. ದೀರ್ಘಕಾಲ ಇತ್ಯರ್ಥವಾಗದೆ ನಿಗೂಢವಾಗಿ ಬಿದ್ದಿದ್ದ ಸಂಗತಿಗಳಿಗೆ ಸರ್ವಸಮ್ಮತ ಅಭಿಪ್ರಾಯ ನೀಡಿರುವುದು, ವಾದ ದುರ್ಬಲವೆನಿಸಿದ ಕಡೆ ಹೆಚ್ಚಿನ ಸಂಶೋಧನೆ ಸಾಮಗ್ರಿಯೊಂದಿಗೆ ಚರ್ಚೆಯನ್ನು ಮುನ್ನಡೆಸಿರುವುದು ಈ ಬರಹದ ವಿಶೇಷ. ನಿರ್ದಿಷ್ಟ ಕಾಲಮಾನದ ಜನಜೀವನ, ಭಾಷಾಸ್ವರೂಪ, ಭೌಗೋಳಿಕ ಎಲ್ಲೆ ಕಟ್ಟುಗಳ ಕಲ್ಪನೆ ಲೇಖನದಿಂದುಂಟಾಗುವ ಅಧ್ಯಯನ ಲಾಭವಾಗಿದೆ.

'ಶಬ್ದಮಣಿ ದರ್ಪಣಂ : ಪ್ರಸ್ತಾವನೆ' ಇದೇ ಬಗೆಯ ಸಂಶೋಧನಾ ಶಿಸ್ತಿಗೆ ಒಳಪಡುವ ಲೇಖನವಾಗಿದ್ದು ಇದುವರೆಗೆ ಅಮಾನತ್ತಿನಲ್ಲಿದ್ದ ಹಲವು

ಹತ್ತು ಸಮಸ್ಯೆಗಳನ್ನು ಬಿಡಿಸುವ ಪ್ರಯತ್ನಮಾಡಿದೆ. ಕೃತಿಗೆ ಹಿನ್ನೆಲೆಯಾಗಿರುವ ಮಾತೃಕೆಗಳು, ಪಾಠಸಮಸ್ಯೆಗಳು, ಪರಿಷ್ಕರಣ ಇತ್ಯಾದಿ ಸಂಭವನೀಯ ಸಮಸ್ಯೆಗಳ ವಿವರವಾದ ಚರ್ಚೆ ನಡೆದಿದೆ. 'ಪ್ರಯೋಗಗಳ ಆಕರ' ಎನ್ನುವ ಲೇಖನ ಭಾಗದಲ್ಲಿ ಕೇಶಿರಾಜನಿಗೆ ದೊರೆತಿದ್ದ 'ಸಾರಸ್ವತ ಸಂಪತ್ತ'ನ್ನು, ಆತನ ಕಾವ್ಯಾಭಿರುಚಿಯನ್ನು ಸಮರ್ಥವಾಗಿ ನಿರೂಪಿಸಲಾಗಿದೆ. ಇದು ಎಲ್ಲ ಕಾಲಕ್ಕೂ ಗುಣಾತ್ಮಕ ಬರಹವೆಂಬುದರಲ್ಲಿ ಸಂಶಯವಿಲ್ಲ.

ನೃಪತುಂಗನಿಗಿಂತ ಹಿಂದೆ ಕನ್ನಡನಾಡಿನ ವಿಸ್ತಾರವೆಷ್ಟಿದ್ದಿತು ? ಭಾಷೆಯ ಪ್ರಭಾವವೇನಿದ್ದಿತು ? ಇತ್ಯಾದಿ ಚರ್ಚೆಯನ್ನೊಳಗೊಂಡ ವಿಸ್ತಾರ ಲೇಖನ 'ಕಣ್ಮರೆಯಾದ ಕನ್ನಡ, ಮಹಾರಾಷ್ಟ್ರದ ಮೂಲ'. ಡಾ॥ ಶಂ. ಬಾ. ಜೋಶಿಯವರು ಕನ್ನಡ ಅಭಿಮಾನಕ್ಕೆ ಮೇಲ್ಮೆಕೊಟ್ಟು ಕನ್ನಡಿಗರ ಹೆಚ್ಚಳಿಕೆಯನ್ನು ತೋರಿಸಿಕೊಳ್ಳುವ ಪ್ರಯತ್ನಮಾಡಿದ್ದಾರೆಂದು ಹೇಳಿ 'ಅಚ್ಚ ಸತ್ಯಾನ್ವೇಷಣ' ದೃಷ್ಟಿಯನ್ನು ತಳೆದಿದ್ದೇನೆಂದು ಹೇಳಿಕೊಂಡಿದ್ದಾರೆ. ಕನ್ನಡದ ಮೂಲಸ್ಥಾನ ಪ್ರಾಚೀನಕಾಲದಲ್ಲಿ ನರ್ಮದಾನದಿಯ ತೀರಪ್ರಾಂತವಿರಬೇಕೆಂದೂ ಹೇಳಿಕೊಂಡಿದ್ದಾರೆ. ಕನ್ನಡದಂತೆ ತೆಲುಗು ಭಾಷೆಯು ಪ್ರಾಚೀನವೆಂದೂ ನೃಪತುಂಗನ ಕಾಲಕ್ಕೆ ಕೃಷ್ಣ ಗೋದಾವರಿಗಳ ಪೂರ್ವಾರ್ಧದ ನಡುವಣ ನಾಡು ತೆಲುಗೆಂಬುದಾಗಿ ದೃಢ ನಿಲುವು ತಳೆದಿದ್ದಾರೆ. ಮರಾಠಿ ಭಾಷೆಯ ಪ್ರಾಚೀನತೆ ಕುರಿತ ಚರ್ಚೆ, ಮರಾಠಿ ಕನ್ನಡತಾಯ ತೋಳ ತೊಟ್ಟಿಲಿನಲ್ಲಿಯೆ ಬೆಳೆದು ಬಂತು ಎಂಬ ವಾದದ ನಿರಾಕರಣೆ, ಮಹಾರಾಷ್ಟ್ರ ಎಂಬ ಶಬ್ದ ಮರ+ಹಟ್ಟದಿಂದ ಬಂದಿತೆಂಬ ಜೋಶಿಯವರ ವಾದದ ಸತ್ಯಾಸತ್ಯತೆಗಳ ಪರಾಮರ್ಶೆ ಈ ದೀರ್ಘ ಬರಹವನ್ನು ಇನ್ನಷ್ಟು ಮೌಲಿಕಗೊಳಿಸಿದೆ.

ಯಾವುದೆ ಭಾಷೆಯಲ್ಲಾಗಲಿ ಮೂಲಪದವೊಂದು ಬಳಕೆಯಲ್ಲಿ ತಪ್ಪಿಹೋದಾಗ ಅದಕ್ಕಿದ್ದ ಅರ್ಥವನ್ನು ಹುಡುಕ ಹೊರಡುವುದು ಅಪೇಕ್ಷಣೀಯ ಹಾಗೂ ಲಾಭದಾಯಕ. ಅದು ಕವಿಬಳಕೆಯಲ್ಲಿ ವಿರೂಪಗೊಂಡಾಗಲಂತೂ ಮೂಲದ ಅನ್ವೇಷಣೆ ಶ್ರಮದಾಯಕವಾದದ್ದಾಗುತ್ತದೆ. ಕನ್ನಡ ಕಾವ್ಯಗಳ ಹೊತ್ತಿನಲ್ಲಂತೂ ಕಾವ್ಯಾಭ್ಯಾಸಿಗಳನ್ನು ಭಾದಿಸುತ್ತಿರುವ ಇಂಥ ಹಲವಾರು ಪದಗಳ ಅನ್ವೇಷಣೆ ಆಗಬೇಕಿದೆ. ಈ ಕೊರಳೆಯ ನಿವಾರಣೆಗಾಗಿ ಡಿ. ಎಲ್. ಎನ್. ಹಲವಾರು ಕ್ಲಿಷ್ಟಪದಗಳ ಬೆನ್ನುಹತ್ತಿ ಮೂಲ ಹುಡುಕುವ ಶ್ರಮಸಾಧ್ಯ ಕೆಲಸ ಮಾಡಿದ್ದಾರೆ, 'ರಪಣ' ಅಥವಾ 'ರವಣ', 'ಒಲ್ಲಣಿಗೆ' ಅಂಥ ಪದಗಳಲ್ಲಿ ಕೆಲವು.

'ರಪಣ>ರವಣಎಂಬುದರ ಅರ್ಥ ಮತ್ತು ನಿಷ್ಪತ್ತಿ'ಎಂದು ಕಿರುಲೇಖನ ದಲ್ಲಿ ಪಂಪಭಾರತದ 'ರಪಣಮುಂ ತೋಱುಯು ವೊತ್ತೆಯ ನುಗ್ಗಡಿಸಿಯು ಮಾಡಿಂ' ಎಂಬ ಪ್ರಯೋಗದಲ್ಲಿನ 'ರಪಣ' ಶಬ್ದದ ಚರ್ಚೆ ನಡೆಸಿದ್ದಾರೆ. ಧರ್ಮರಾಯನು ಜೂಜಿನಲ್ಲಿ ಎಲ್ಲವನ್ನು ಸೋತು ಕೊನೆಯದಾಗಿ ತನ್ನ ರಾಜ್ಯ ಒತ್ತೆ ಇಡಬೇಕಾಗಿ ಬಂದಿತೆಂಬ ಸಂದರ್ಭದಲ್ಲಿ ಇದು ಬಂದಿದೆ. ಕುಮಾರ ವ್ಯಾಸನ ಪ್ರಯೋಗಗಳನ್ನನುಸರಿಸಿ ಕಿಟೆಲ್ ಅವರು ತಮ್ಮ ಅರ್ಥಕೋಶದಲ್ಲಿ 'A kind of weapon' ಎಂಬ ಅರ್ಥ ಕೊಟ್ಟಿರುವುದು ಡಿ. ಎಲ್. ಎನ್. ಅವರಿಗೆ ಸಮಂಜಸವಾಗಿ ತೋರಿಲ್ಲ.

೧. 'ಮಹಾಸುರನ ಬಾಣಸದ ಬೀಯಕೆ ರಪಣವುಂಟೆಮಗೆ'

೨. 'ಭಟರ ತಲೆಗಳು ಬೀಯವಾದುವು ಮತ್ತು ರಪಣನ ತೋಱು ಸಾರಣಕೆ'

೩. 'ಹಿಡಿದ ಮುಷ್ಟಿಯ ನಿನ್ನ ರಪಣವ ಕೊಡಹಿ ನಿನ್ನದೆವೆಳರಕೊಳ್ಳದೆ ಬಿಡುವೆನೇ' (ಪಾಠಾಂತರ) 'ಮುಷ್ಟಿಗೆ ಸರ್ವ ರಪಣವ ಕೊಡಹಿ ನಿನ್ನೆದೆದಿರುಳಕೊಳ್ಳದೆ ಬಿಡುವೆನೆ'

ಮೊದಲನೆಯ ವಾಕ್ಯ ಬಕವಧೆಯ ಪ್ರಸಂಗ, ವ್ಯಾಕುಲಿತ ವಿಪ್ರನಿಗೆ ಕುಂತಿ ಆಡುವ ಮಾತಾದರೆ ಎರಡನೆಯದು ಜಯದ್ರಥ ದ್ರೌಪದಿಯನ್ನು ಅಪಹರಿಸಿಕೊಂಡು ಹೋಗುತ್ತಿದ್ದಾಗ ಎದುರಾದ ಭಟರನ್ನೆಲ್ಲಾ ಭೀಮ ಸದೆಬಡಿದು ಕೂಗಿ ಹೇಳುವ ಮಾತು. ಮೂರನೆಯದು ಅರ್ಜುನನ ಬಾಣ ಕರ್ಣನ ಎದೆಗೆ ನಾಟಿ ಮೂರ್ಛೆಹೋಗಿ ಎಚ್ಚೆತ್ತನಂತರ ಆಡುವ ಮೂದಲಿಕೆ ಯಾಗಿದೆ. ಡಿ. ಎಲ್. ಎನ್. ಅವರು ಕ್ರಮವಾಗಿ ಈ ಪದಗಳಿಗೆ 'ಸಾಧನ ಸಾಮಗ್ರಿ', 'ಸಾಧನ', 'ಸಾರ/ತಿರುಳು' ಎಂಬ ಅರ್ಥವನ್ನು ಹಚ್ಚಿದ್ದಾರೆ. ಘಟನೆಗಳ ಹಿನ್ನೆಲೆಯಲ್ಲಿ ಅವರ ವಿವೇಚನೆ ಸಯುಕ್ತಿಕವಾಗಿದೆ. "ಕಿಟೆಲ್ ಅವರು ಸೂಚಿಸಿರುವ ಈ ಅರ್ಥ ತಪ್ಪೆಂದು ಈ ಪ್ರಯೋಗಗಳ ಬಲದಿಂದಲೇ ನಿರ್ಣಾಯಕವಾಗಿ ತೀರ್ಮಾನಿಸುವುದು ಸಾಧ್ಯವಿಲ್ಲದಿದ್ದರೂ ಅದರ ಸಮೀಚೀನ ತೆಯ ವಿಷಯದಲ್ಲಿ ಸಂದೇಹಕ್ಕೆಡೆಯಿದೆಯೆಂಬುದಂತೂ ಖಚಿತವಾಗುತ್ತದೆ" ಎಂಬುದಾಗಿ ತಮ್ಮ ಸಂಶೋಧನಾ ಕುತೂಹಲ ಹಾಗೂ ಸಂಶಯವನ್ನು ವಿನಯದಿಂದ ವ್ಯಕ್ತಪಡಿಸಿದ್ದಾರೆ. ಅವರು ಮುಂದುವರಿದು 'ಕಾವ್ಯಾಲೋಕನ', 'ಧರ್ಮಾಮೃತ', 'ಸೂಕ್ತಿ ಸುಧಾರ್ಣವ', 'ಪಂಪಭಾರತ' ಮುಂತಾದ ಗ್ರಂಥ ಗಳಲ್ಲಿ ತಮ್ಮ ಗಮನಕ್ಕೆ ಬಂದ ಪ್ರಯೋಗಗಳ ಹಿನ್ನೆಲೆಯಲ್ಲಿ 'ಬೆಲೆಬಾಳುವ ವಸ್ತು ಸಮೂಹ', 'ಸಾರಧನ', 'ವಿತ್ತ' ಎಂಬುದು ಅದರ ಮುಖ್ಯಾರ್ಥ.

ಸಾರ, ಸಾಮರ್ಥ್ಯ, ತಿರುಳು ಆದರ ಗೌಣಾರ್ಥವೆಂದು ಪ್ರತಿಪಾದಿಸಿದ್ದಾರೆ. 'ರಪಣ'ಒಂದರ ಅರ್ಥವನ್ನು ಇನ್ನೊಂದು ಸ್ಥಿರಗೊಳಿಸುವ ಪೃಥಕ್ಪದಗಳನ್ನೊಳಗೊಂಡ ಯಮಳ ಶಬ್ದ. ಆದ್ದರಿಂದ ರೈ ಮತ್ತು ಪಣ ಎಂಬೆರಡು ಶಬ್ದಗಳ ಸಮಾಹಾರದಿಂದ 'ರೈವಣ'ವಾಗಿ ಅನಂತರ ರಪಣವೆಂದು ಪರಿಣಮಿಸಿರುವುದರಲ್ಲಿ ಅಸಹಜತೆಯೇನೂ ಇಲ್ಲ. ಸಂಸ್ಕೃತ, ಪ್ರಾಕೃತ ಹಾಗೂ ಇತರ ಭಾರತೀಯ ಭಾಷೆಗಳಲ್ಲಿರದ, ಕನ್ನಡಕ್ಕೆ ವಿಶಿಷ್ಟವಾದ ಶಬ್ದವೆಂಬ ತೀರ್ಮಾನ ತಳೆದಿದ್ದಾರೆ.

ಒಲ್ಲಿ+ಅಣಿಗೆ ಎಂಬೆರಡು ಶಬ್ದಗಳ ಸೇರುವಣೆಯಿಂದ 'ಒಲ್ಲಣಿಗೆ' ಬಂದಿದೆ. ಇದು 'ಶುದ್ಧ ಕನ್ನಡ ಪದ' ಎಂಬ ದೇಸಾಯಿ ಪಾಂಡುರಂಗ ರಾಯರ ಅಭಿಪ್ರಾಯ 'ಭಾಷಾವಿಹಾರ' ಎಂಬ ಲೇಖನದಲ್ಲಿ ಪುನರ್‌ವಿಮರ್ಶೆಗೆ ಒಳಗಾಗಿದೆ. ಅನೇಕ ಮೂಲಗಳ ಆಧಾರದ ಮೇಲೆ ಈ ಪದವನ್ನು ದ್ರಾವಿಡೇತರ ಪದವೆಂದು, ಶಬ್ದದ ಮೂಲರೂಪ ಒಲ್ಲಿ, ಅಲ್ಲಿ, ವಲ್ಲೀ ಎಂದು, ಅದು ಸಂಸ್ಕೃತ ಶಬ್ದವೆಂಬ ಅಭಿಪ್ರಾಯ ತಳೆದಿದ್ದಾರೆ. ಸಂಸ್ಕೃತದ ಅದ್ರ್ರ ಶಬ್ದಕ್ಕೆ ಒಲ್ಲ, ಓಲ ಎಂಬ ಎರಡು ರೂಪಾಂತರಗಳಿವೆ ಎಂಬುದನ್ನು ಬಹುಮೂಲಗಳಿಂದ ಸ್ಪಷ್ಟಪಡಿಸಿ "ಪ್ರಕೃತ ಒಲ್ಲಣಿಗೆ ಎಂಬಲ್ಲಿನ 'ಒಲ್ಲ' ಅದ್ರ್ರದ–ಉದ್ರ್ರದ ಪ್ರಾಕೃತ ರೂಪಾಂತರವಾಗಿದ್ದು ಪ್ರಾಕೃತ ಭಾಷೆಗಳ ಮೂಲಕ ಕನ್ನಡಕ್ಕೆ ಬಂದಿದೆ ಎಂಬುದರಲ್ಲಿ ಸಂದೇಹ ಪಡಲು ಕಾರಣವಿಲ್ಲ"ವೆಂಬ ನಿಲುವು ತಳೆದಿದ್ದಾರೆ. 'ಅಣಿಗೆ' ಎಂಬ ಎರಡನೆಯ ಪದವನ್ನು ಚರ್ಚೆಗೆ ಎತ್ತಿಕೊಂಡು ದೇಸಾಯಿ ಪಾಂಡುರಂಗರಾಯರು "'ಅಣಿಗೆ' ಅಣಿ ಎಂಬ ಮೂಲದಿಂದ ಬಂದಿದೆ" ಎಂದು ಹೇಳಿರುವುದರ ಸತ್ಯಾಸತ್ಯತೆಯನ್ನು ವಿವೇಚಿಸಿದ್ದಾರೆ. ಅಣಿಧಾತು ಕನ್ನಡದಲ್ಲಿದ್ದರೂ "ಇಲ್ಲಿ ಕಾಣುವ ಅಣಿಗೆಯೆಂಬ ಶಬ್ದಕ್ಕೂ ಅಣಿಗೆಯೆಂಬ ಕೃನ್ನಾಮಕ್ಕೂ ಸಂಬಂಧವಿಲ್ಲ. ಅದು ಬೇರೆ ಏನೊ ಇರಬೇಕು" ಎಂಬ ತೀರ್ಮಾನ ಅವರದು. ಕನ್ನಡ ಕವಿಗಳು ಉದ್ರ್ರದಿಂದ ಬಂದ ಒಲ್ಲವನ್ನು ಪ್ರಾಕೃತದಿಂದ ತೆಗೆದುಕೊಂಡು ಅದಕ್ಕೆ ಅಣಿಗೆಯೆಂಬ ಶುದ್ಧ ಕನ್ನಡ ಪದವನ್ನು ಸೇರಿಸಿ ಸಮಾಸಮಾಡಿಕೊಂಡರೆಂದು ಭಾವಿಸುವುದಕ್ಕಿಂತ ಸಂಸ್ಕೃತದ ಇಡೀ ಸಮಾಸವೊಂದನ್ನು ಕನ್ನಡಕ್ಕೆ ತದ್ಭವ ಮಾಡಿಕೊಂಡರೆಂದು ತಿಳಿಯುವುದು ಹೆಚ್ಚು ಸಂಗತ ಎಂಬ ತೀರ್ಮಾನ ಅವರದು. ಉದ್ರ್ರಪಟಿಕಾ ಎಂಬ ಸಂಸ್ಕೃತ ಸಮಾಸ ಒಲ್ಲವಡಿಗೆ > ಒಲ್ಲವಟುಗೆ ∧ ಒಲ್ಲಳಿಗೆ > ಒಲ್ಲಣಿಕೆ ಎಂಬ ರೂಪ ಬಂದಿರಬೇಕೆಂದು ಸಾಧಿಸಿ ತೋರಿಸಿದ್ದಾರೆ.

'ಕನ್ನಡಕ್ಕೆ ಹೊಸ ನಿಘಂಟು' ಎಂಬ ಸೊಗಸಾದ ಲೇಖನ ಈ ಸಂಗ್ರಹದಲ್ಲಿದ್ದು ಕಾವ್ಯಾಭ್ಯಾಸಿಗೆ ನಿಘಂಟಿನ ಆಗತ್ಯ ಎಷ್ಟೆಂಬುದನ್ನು ಇದು ಸ್ಪಷ್ಟ

ಪಡಿಸುತ್ತದೆ. ಡಾಕ್ಟರ್ ಕಿಟ್ಟೆಲ್ಲರ ನಿಘಂಟು ಅನನ್ಯವಾಗಿದ್ದರೂ ಕಾವ್ಯದ ಯಾವ ಪದವನ್ನು ಬಿಡದೆ ಅರ್ಥ ತಿಳಿಯಬೇಕೆನ್ನುವವರಿಗೆ ಅದು ಅಪೂರ್ಣ ವೆಂಬ ತಿಳುವಳಿಕೆ ಬಂದರೆ ಆಶ್ಚರ್ಯವಿಲ್ಲವೆಂಬ ಮಾತು ಮಾರ್ಮಿಕ. ಅಂಥ ಕೊರತೆಗೆ ಕಾರಣವಾಗಿರುವ ಸಂಗತಿಗಳನ್ನು ಕೃತಜ್ಞತೆಯಿಂದ ಸ್ಮರಿಸಿದ್ದಾರೆ. ಕಿಟ್ಟೆಲ್ ಕೋಶದ ಗುಣ-ದೌರ್ಬಲ್ಯಗಳೆರಡರ ವಸ್ತುನಿಷ್ಠ ಪ್ರಸ್ತಾಪ ಬಂದಿದೆ. ಕನ್ನಡಕ್ಕೆ ಹೊಸನಿಘಂಟು ಏಕೆ ಬೇಕೆಂಬುದಕ್ಕೆ ಸಮರ್ಥನೆಯಾಗಿ ಇನ್ನು ಅರ್ಥ ಸ್ಪಷ್ಟವಿರದಿದ್ದ 'ಮೇಗಾಳಿ ಕಿಗ್ಗಾಳಿ' 'ಹುಡುಕುನೀರು' 'ಬಡಪ' 'ಒಹರಿ ಸಾಹರಿ', 'ಮೂವಿಟ್ಟ' ಮುಂತಾದ ಪ್ರಾಚೀನಪದಗಳ ಮೂಲಾರ್ಥದ ಕಡೆಗೆ 'ಕ್ಷ'ಕಿರಣ ಬೀರಿದ್ದಾರೆ, ಮೇಗಾಳಿ ಎಂಬುದು ಮೇಲೆ+ಗಾಳಿಯಿಂದಲೂ ಕಿಗ್ಗಾಳಿ ಎಂಬುದು ಕಿಬರ್+ಗಾಳಿಯಿಂದಲೂ ಬಂದಿರಬೇಕು ಸ್ಪಷ್ಟ: ಮೇಲ್ಗಾಳಿ > ಮೇಗಾಳಿ ; ಕಿಲ್ಗಾಳಿ > ಕಿರ್ಗ್ಗಾಳಿ > ಕಿಗ್ಗಾಳಿ ಎಂದಾಗಿದೆ ಯೆಂದು ಅತ್ಯಂತ ಸಮಂಜಸವಾಗಿ ಪ್ರತಿಪಾದಿಸಿದ್ದಾರೆ. 'ಪುಡುಕುನೀರ್' ಪ್ರಯೋಗ ರಾಘವಾಂಕನ ಹರಿಶ್ಚಂದ್ರಕಾವ್ಯ, ನಾಗಚಂದ್ರನ ಮಲ್ಲಿನಾಥ ಪುರಾಣ, ಕಮಲಭವನ ಶಾಂತೀಶ್ವರ ಪುರಾಣಗಳಲ್ಲಿ ಬಂದಿರುವುದನ್ನು ಉಲ್ಲೇಖಿಸಿ 'ಪುಡು' ಎಂಬ ಮೂಲ ಧಾತುವಿಗೆ ಕುದಿ, ಬೇಯು ಎನ್ನುವ ಅರ್ಥವಿದೆ. ಇದರಿಂದಲೇ 'ಪುಡುಕು' ಎಂಬ ಧಾತು ಬಂದು ಕುದಿ, ಬೇಯು ಎಂಬರ್ಥವನ್ನು ಪಡೆದಿರಬೇಕೆಂದು ಅರಿವಾಗುತ್ತದೆ. ಪುಡುಕು ನೀರ್ ಎಂದರೆ ಕುದಿನೀರು, ಬಿಸಿನೀರು, ಸುಡುನೀರು ಎಂದರ್ಥ ಎಂಬುದು ಸಮಂಜಸವಾಗಿ ತೋರುತ್ತದೆ. ವಿವಾದಾಸ್ಪದ ಬಳಕೆಯಾದ ಕಡೆಯಲೆಲ್ಲಾ ಈ ಅರ್ಥ ಅತ್ಯಂತ ಸೊಗಸಾಗಿ ಹೊಂದಾಣಿಕೆಯಾಗುವುದು ವಿಶೇಷ.

ಪಂಪಭಾರತದಲ್ಲಿನ 'ಬಡಪ' ಎಂಬ ಪದಕ್ಕೆ ಕೃತಿಯ ಸಂಪಾದಕರು 'ಪ್ರವಾಹ' ಎಂಬರ್ಥ ನೀಡಿರುವುದು ಸರಿಯಲ್ಲವೆಂದು ಶಂಕಿಸಿ ರುದ್ರಭಟ್ಟನ ಜಗನ್ನಾಥವಿಜಯ, ಅಗ್ಗಳನ ಚಂದ್ರಪ್ರಭಪುರಾಣ, ಕಮಲಭವನ ಶಾಂತೀಶ್ವರ ಪುರಾಣ, ದೇವಕವಿಯ ಕುಸುಮಾವಳೀ ಕಾವ್ಯಂ, ಸುರಂಗಕವಿ ತ್ರಿಷಷ್ಟಿ ಪುರಾತನ ವಿಳಾಸ ಇತ್ಯಾದಿ ಪ್ರಯೋಗ ಬಲದಿಂದ ಈ ಪದಕ್ಕೆ 'ಮಳೆ' ಎಂಬ ಅರ್ಥವನ್ನು ಆರೋಪಿಸಿದ್ದಾರೆ. ಹೀಗೆಯೆ ' ಜಹರಿ ಸಾಹರಿ' ಪದಕ್ಕೆ 'ತಂಡೋಪತಂಡವಾಗಿ' ಎಂಬರ್ಥವಿರುವುದನ್ನು, 'ಮೂವಿಟ್ಟ'ಗೆ ಶೋಧನ ಕರ್ಮ, ವಹನಕರ್ಮ, ಅಪನಯಕರ್ಮ ಎಂಬ ಮೂರು ಬಗೆಯ ವಿಷ್ಟಿಕರ್ಮ ಗಳಿದ್ದುವೆಂದು ಶೋಧಿಸಿದ್ದಾರೆ.

ಇಂಥ ನೂರಾರು ಪದಗಳು ಚರ್ಚೆಗೆ ಕಾದು ಕುಳಿತಿದ್ದರೂ ಮಾದರಿಗಾಗಿ ಕೆಲವನ್ನು ಚರ್ಚಿಸಿ, ಕನ್ನಡ ನಿಘಂಟುಕಾರರ ಹಾಗೂ ಸಾಹಿತ್ಯಾಸಕ್ತರು ತಳೆಯಬೇಕಾದ ನಿಲುವಿಗೆ ಮಾರ್ಗದರ್ಶವಿತ್ತಿದ್ದಾರೆ. ಇದನ್ನು ಸಾಧಿಸ ಬಯಸುವವರಿಗೆ "ಇತರ ದ್ರಾವಿಡ ಭಾಷೆಗಳ ವ್ಯಾಕರಣಕೋಶ ಸಾನಿಧ್ಯವೂ ಆಧುನಿಕ ಭಾಷಾಶಾಸ್ತ್ರದ ತಿರುವುಮುರುವುಗಳ ಗಭೀರ ಜ್ಞಾನವೂ ಬಾಷೆಯ ಒಳ ಭೇದಗಳ ತಿಳುವಳಿಕೆಯೂ ಗ್ರಾಮಜೀವನದ ಅರಿವೂ ಅಲ್ಲದೆ ಶಕ್ತಿಯೂ ತಾಳ್ಮೆಯೂ ಸಹೃದಯತೆಯಿಂದ ಸೇರಬೇಕು" ಎನ್ನುವ ಮಾತಿಗೆ ಸ್ವತಃ ಅವರೇ ನಿದರ್ಶನರಾಗಿದ್ದಾರೆ.

'ಧವಳವೆಂಬ ಹಾಡಿನ ಸ್ವರೂಪ'ವನ್ನು ಸಂಶೋಧಿಸಿದ ಬಗೆಯಂತೂ ಕುತೂಹಲಕರ. ರನ್ನನ ಗದಾಯುದ್ಧದ ಪದ್ಯವೊಂದರಲ್ಲಿ ಪುನರಾವರ್ತಿತವಾಗಿ ಬಂದಿರುವ 'ಧವಳ' ಶಬ್ದವನ್ನು ಕುರಿತು ವಿಚಾರ ವಿಮರ್ಶೆ ನಡೆಸಿದ್ದಾರೆ. ಗದಾಯುದ್ಧ ಸಂಗ್ರಹದಲ್ಲಿ ತೀ. ನಂ. ಶ್ರೀ ಬರೆದಿರುವ ಟಿಪ್ಪಣಿಯನ್ನು ಉಲ್ಲೇಖಿಸಿ ಧವಳವೆಂದರೆ ಮಂಗಳ ಕಾಲದಲ್ಲಿ ಹೇಳುವ ಒಂದು ಬಗೆಯ ಹಾಡು, ಅದು ಒಂದು ರಾಗದ ಹೆಸರೆಂದೂ ಸ್ಪಷ್ಟವಾಗುತ್ತದೆ ಎಂದಿದ್ದಾರೆ. ಕನ್ನಡ ಮತ್ತು ತೆಲುಗು ಸಾಹಿತ್ಯದಲ್ಲಿ ದೊರೆಯುವ ಧವಳದ ಹಾಡುಗಳನ್ನು ಪರಿಶೀಲಿಸಿ ಅವೆರಡಕ್ಕೂ ಸಮಾನವಾದ ಲಕ್ಷಣವಿದೆಯೆಂದು ತೀರ್ಮಾನಿಸಿರುವುದು ಅತ್ಯುಪಯುಕ್ತವಾಗಿದೆ. ಅಪೂರ್ವ ಲಯಸಾಹಚರ್ಯವಿರುವ ಧವಳ ರನ್ನನ ಕಾಲದಿಂದಲೂ ರೂಢಿಯಲ್ಲಿದ್ದು ಮಧ್ಯಂತರದಲ್ಲಿ ಕಣ್ಮರೆಯಾಗಿದ್ದಿತು. ಇದರ ಲಯದ ಬೆಡಗನ್ನು ಆಧುನಿಕ ಕವಿಗಳಾದ ಶ್ರೀ, ಕುವೆಂಪು ಹಾಗೂ ಪು.ತಿ.ನರವರು ಬಳಸಿಕೊಂಡಿರುವ ಬಗೆಯನ್ನು ಸೋದಾಹರಣವಾಗಿ ಮಂಡಿಸಿರುವುದು ಉಪಯುಕ್ತವಾಗಿದೆ.

ಮೇಲಿನ ಬರಹಗಳು ಡಿ.ಎಲ್.ಎನ್. ಅವರ ಅಸೀಮ ಪಾಂಡಿತ್ಯ, ಶ್ರದ್ಧಾಸಕ್ತಿಗೆ ಹಿಡಿದ ಕನ್ನಡಿಗಳಾದರೆ 'ಶಿಲಾಲತೆ' ಮತ್ತು 'ಪೊನ್ನನೂ ಕಾಳಿದಾಸನೂ' ಅವರ ಕಾವ್ಯರಸಿಕತೆ ಮತ್ತು ವಿಮರ್ಶಾಶಕ್ತಿಯ ದ್ಯೋತಕವೆನ್ನಬಹುದು. ಸೃಜನಶೀಲ ಕೃತಿಯೊಂದರ ಪರಿಶೀಲನೆ ಸಹೃದಯತೆಯ ಚೌಕಟ್ಟಿನಲ್ಲಿ ವಿಹರಿಸಿಯೂ ವಸ್ತುನಿಷ್ಠ ವಿಮರ್ಶೆಯ ಗುಣವನ್ನು ರೂಢಿಸಿಕೊಳ್ಳಬಲ್ಲದೆಂಬುದಕ್ಕೆ 'ಶಿಲಾಲತೆ' ಸಾಕ್ಷಿ. ಈ ಮುನ್ನುಡಿಯ ಆರಂಭದಲ್ಲಿ 'ಮೈಸೂರು ಮಲ್ಲಿಗೆ' (ಕೆ. ಎಸ್. ನರಸಿಂಹಸ್ವಾಮಿ)ಯ ಬಗ್ಗೆ ಪ್ರಾಸಂಗಿಕ ಮಾತುಗಳನ್ನು ಆಡಿದ್ದಾರೆ. ನೂರಾರು ಭಾವಾಲಾಪಗಳನ್ನು ತಂದಡಕುವ

ಮೈಸೂರುಮಲ್ಲಿಗೆಯ ಕವನಗಳ ನೈಜಗುಣಗಳನ್ನು ಉತ್ಪ್ರೇಕ್ಷೆಗೊಳಗಾಗದಂತೆ ಗುರುತಿಸಿದ್ದಾರೆ. ಕವಿಪ್ರತಿಭೆ ತನಗೆ ತೃಪ್ತಿ ಸಂತೋಷಕೊಟ್ಟ ಮೈಸೂರುಮಲ್ಲಿಗೆಯ ಕಸ್ತೂರಿನೆಲದಲ್ಲಿಯೆ ವಿರಮಿಸದೆ ಅದು ಹದವಾದ ಸೂಕ್ಷ್ಮವಾದ ಭಾವವಲಯಕ್ಕೆ ಲಗ್ಗೆ ಹಾಕಿರುವುದನ್ನು ಪ್ರಸ್ತಾಪಿಸಿದ್ದಾರೆ. 'ಐರಾವತ,' 'ದೀಪದಮಲ್ಲಿ,' 'ಉಂಗುರ' ಮುಂತಾದ ರಚನೆಗಳು ಈ ಮಾತಿಗೆ ಪುಷ್ಟಿ ಕೊಡುತ್ತವೆ. ಮೈಸೂರು ಮಲ್ಲಿಗೆಯ ಸುಕುಮಾರ ಪ್ರಪಂಚ ಓದುಗರ ಕೈನುಣುಚಿ ಹೋದರೂ ಅದಕ್ಕಿಂತ ಭಿನ್ನವಾದ ಅನುಭವ ದರ್ಶನವನ್ನು 'ಶಿಲಾಲತೆ'ಯ ಮೂಲಕ ಕೆ. ಎಸ್. ನರಸಿಂಹಸ್ವಾಮಿ ನೀಡಿದ್ದಾರೆಂಬುದು ಅವರ ಅನಿಸಿಕೆ. ಶಿಲಾಲತೆಯ 37 ಕವಿತೆಗಳಲ್ಲಿ ತಮಗೆ ಚೆಲುವೆಂದು ಕಂಡುಬಂದ ಕೆಲವು ಕವಿತೆಗಳ ವಿಷಯವಾಗಿ ನಾಲ್ಕುಮಾತು' ಎಂದು ಹೇಳಿಕೊಂಡಿದ್ದರೂ ಕವಿತೆಗಳ ಬೆಲೆಕಟ್ಟುವಿಕೆಯಲ್ಲಿ ವಿಮರ್ಶಕನ ಪ್ರಬುದ್ಧತೆ ಎದ್ದು ತೋರುತ್ತದೆ. ಹಾಗಾಗಿ 'ನಲವತ್ತರ ಚೆಲುವೆ', 'ಶರತ್‌ಶಾರದೆ', 'ಬರಿಗೊಡಗಳಿಗೆ ಸಮಾಧಾನ', 'ಕೇಳುವವರಿಲ್ಲದ ಮಗು', 'ಬೆಳಗಿನ ಮಂಜು', 'ಬುದ್ಧಸ್ಮಿತ', 'ಗಾಂಧಿ ಸ್ತವನ', ಸತ್ಯಮೇವ ಜಯತೆ', 'ಹಿಂದಿನ ಸಾಲಿನ ಹುಡುಗರು', 'ಹೊಸಚಂದಿರ', 'ಇಕ್ಕಳ' ಮುಂತಾದ ಕವನಗಳ ಅಂತರಾರ್ಥವನ್ನು ಸರಿಯಾಗಿಯೆ ಗುರುತಿಸಿದ್ದಾರೆ. ಇವುಗಳಲ್ಲಿ ಕೆಲವು ಕವಿತೆಗಳಿಗೆ ನೀಡಿದ ವಿವರಣೆ ವಿಮರ್ಶೆಯ ಔದಾರ್ಯದಿಂದ ಬಂದಿದೆ ಎನ್ನಿಸಿದರೂ ವಿಮರ್ಶೆಯ ನಿಷ್ಠುರತೆ ತಲೆಹಾಕದೆ ಇಲ್ಲ. "ನವ್ಯಕಾವ್ಯ" ನವ್ಯವೇನೋ ಸರಿ. ಆದರೆ "ಕಾವ್ಯ" ಎಲ್ಲಿ ? ಬೇಸಗೆಯ ಮಧ್ಯಾಹ್ನವೆಂದು ತಿಳಿಸುವುದಕ್ಕೆ ಇಷ್ಟು ಬಳಸಿನ ದಾರಿ ಅವಶ್ಯಕವೆ ? (ಬರಿಗೊಡಗಳಿಗೆ ಸಮಾಧಾನ) "ಮಾತುಗಾರಿಕೆ ಮಿಗಲು ; ಭಾವಪೂರ್ಣತೆ ಸಾಲದು" (ಬುದ್ಧ ಸ್ಮಿತ) ಒಂದೇ ವಸ್ತು-ಭಾವವನ್ನುಳ್ಳ ನಾಡು ನುಡಿ ಕುರಿತ ಕವನಗಳಲ್ಲಿ ವಿಶೇಷವೇನಿಲ್ಲ ಎಂಬುದನ್ನು 'ಹೊಸಗನ್ನಡ ಕಾವ್ಯದಲ್ಲಿ ಚಿರಪರಿಚಿತವಾಗಿರುವ ಅಭಿಮಾನ ಭಾವಕ್ಕೆ ಉಂಟಾಗಿರುವ ರೂಪಾಂತರಗಳು" ಎಂದು ಹೇಳಿರುವುದು ಮೇಲಿನ ಮಾತಿಗೆ ನಿದರ್ಶನ.

'ಪೊನ್ನನೂ ಕಾಳಿದಾಸನೂ' ಎಂಬ ಬರಹ ವಿಮರ್ಶೆಯ ತೌಲನಿಕ ಅಧ್ಯಯನಕ್ಕೆ ಅತ್ಯುತ್ತಮ ಮಾದರಿಯಾಗಿದೆ. ಕನ್ನಡ ಕವಿಗಳು ಬರೆದದ್ದೆಲ್ಲಾ ಸರ್ವೋತ್ಕೃಷ್ಟವೆಂಬ ವಿಜೃಂಭಿತ ಶೈಲಿಗೆ ಇಳಿಯದೆ ವಸ್ತುನಿಷ್ಠವಾಗಿ ಶಾಂತಿಪುರಾಣ ಮತ್ತು ರಘುವಂಶದ ಮುಖ್ಯಪ್ರಸಂಗಗಳನ್ನು ಒರೆಹಚ್ಚಿದ್ದಾರೆ. ಪೊನ್ನನು 'ರಚನೆ'ಯಲ್ಲಿ ಕಾಳಿದಾಸನಿಗಿಂತಲೂ ತಾನು 'ನಾಲ್ಮಡಿ' ಎಂದುಕೊಂಡದ್ದು ಹೇಗೆ ಅಸಮರ್ಥನೀಯ ಎಂಬುದನ್ನು ಸಕಾರಣವಾಗಿಯೆ ಚರ್ಚಿ

ಸಿದ್ದಾರೆ. ಈ ಲೇಖನದಲ್ಲಿ ಕಾಳಿದಾಸನ ಕೃತಿಯ ಋಣಭಾರದಲ್ಲಿ ಪೊನ್ನನ ಸ್ವೋಪಜ್ಞತೆ ಹೇಗೆ ಮಂಕಾಗಿ ಕಾಣಿಸುತ್ತದೆಂಬುದು ನಮ್ಮ ಅರಿವಿಗೆ ಬರುತ್ತದೆ. ವಸ್ತುನಿಷ್ಠ ವಿಮರ್ಶೆ ಮತ್ತು ಆರೋಗ್ಯಕರ ಚಿಂತನೆಗೆ ಈ ಬರಹವೊಂದು ಶ್ರೇಷ್ಠ ಉದಾಹರಣೆಯಾಗಿದೆ.

ಈ ಎಲ್ಲಾ ಬರಹಗಳ ಪರಿವೀಕ್ಷಣೆಯಲ್ಲಿ ಎದ್ದು ತೋರುವ ಲಕ್ಷಣವೆಂದರೆ ಸತ್ಯಾನ್ವೇಷಣೆ, ಬಹುಮೂಲಗಳಿಂದ ತಂದೊಡ್ಡುವ ಸಾಮಗ್ರಿ, ಅಸ್ಖಲಿತ ಪಾರದರ್ಶಕ ಶೈಲಿ. ತಾವು ನಂಬಿದ್ದೆ ಸರಿಯೆಂದು ವಾದಿಸದ ವಿನಯವಂತಿಕೆ, ಭಾವುಕತೆಗೆ ಬೀಳದ ಆರೋಗ್ಯವಂತಿಕೆ. ಇವರ ವಿದ್ವತ್ ಸಂಬಂಧವಾದ ಬರಹಗಳನ್ನು ಓದಲುಪಕ್ರಮಿಸುವವರು ಮೊದಲು ತಲೆನೋವಿನ ಸಿಡುಕಿನಲ್ಲಿ ಪ್ರವೇಶಿಸಿ ಹೊಸ ತಿಳುವಳಿಕೆಯ ಬೆಳಕಿನಲ್ಲಿ ಹಸನ್ಮುಖಿಗಳಾಗಿ ಹಿಂದಿರುಗುತ್ತಾರೆ. ಅವರ ಕೆಲವು ಸಾಹಿತ್ಯ ಬರಹಗಳ ಪ್ರಖರ ವಿಮರ್ಶಾದೃಷ್ಟಿಯನ್ನು ನೋಡಿದರೆ ವಿದ್ವತ್‌ಕ್ಷೇತ್ರದ ಸಮರ್ಪಣೆಯಲ್ಲಿ ಅವರ ವಿಮರ್ಶಾಶಕ್ತಿ ಎಲ್ಲೊ ಹಿಂದೆ ಬಿದ್ದಂತೆ ಅನಿಸುತ್ತದೆ. ಅದರ ಸದುಪಯೋಗ ಇನ್ನಷ್ಟು ಆಗದಿರುವುದು ವಿಷಾದದ ಸಂಗತಿ.

ಡಿ. ಎಲ್. ಎನ್. ಅವರ ಎಲ್ಲಾ ಬರಹಗಳನ್ನು ಒಟ್ಟಾರೆ ಓದಲು ವ್ಯವಧಾನವಿಲ್ಲದವರಿಗೆ ಅವರ ಆಯ್ದ ಲೇಖನಗಳು ಒಂದೆಡೆ ಓದುವ ಅವಕಾಶ ಈ ಕೃತಿಯಿಂದ ಲಭ್ಯವಾಗಿದೆ. ಅವರ ಬರಹಗಳನ್ನು ಹೀಗೆ ಪ್ರಾತಿನಿಧಿಕವಾಗಿ ಆಯುವಲ್ಲಿ ಸಂಪಾದಕರು ಸದಭಿರುಚಿ ತೋರಿದ್ದಾರೆ ಎಂಬುದು ಪ್ರಶಂಸನೀಯ.

ಕಮಲಾ ಹಂಪನಾ ಅವರು ಶಿಷ್ಟ ಸಾಹಿತ್ಯ ಸೃಷ್ಟಿಯಲ್ಲಿ ಪಳಗಿದವರು; ಸೃಜನಶೀಲ ಲೇಖಕಿಯರ ಸಾಲಿನಲ್ಲಿ ವಿಶಿಷ್ಟವಾದ ಸ್ಥಾನ ಗಳಿಸಿಕೊಂಡವರು. ಅವರು ರಚಿಸಿದ ಪ್ರೌಢ ಸಾಹಿತ್ಯ ಕೃತಿಗಳಲ್ಲಿ ಅವರ ನಿತಾಂತ ಚಿಂತನಪರತೆ ಎದ್ದು ಕಾಣುತ್ತದೆ. ವಸ್ತು-ವಿನ್ಯಾಸದ ವೈವಿಧ್ಯದೊಡನೆ ವಿಶ್ಲೇಷಣಾತ್ಮಕ ದೃಷ್ಟಿಯೂ ಬೆರೆತುಕೊಂಡು ಅವರ ಬರವಣಿಗೆಗೆ ಹೊಸ ಮೆರುಗು ಬಂದಂತಿದೆ, ಬರಿಯ ವರ್ಣನಾವೈಖರಿಯನ್ನು ಧಾರಾಳವಾಗಿ ಮೆರೆಯುವ ಬರವಣಿಗೆಗೂ ಅಂದಂದಿನ ಜೀವನಾನುಭವಗಳನ್ನು ಅಂತರಾಳದಲ್ಲಿ ಪುನರನುಭವಿಸಿ ತಮ್ಮ ವೈಚಾರಿಕ ಸತ್ವದೊಡನೆ ಅಭಿವ್ಯಕ್ತಿ ನೀಡುವ ಬರವಣಿಗೆಗೂ ವ್ಯತ್ಯಾಸವಿದ್ದೇ ಇರುತ್ತದೆ. ಈ ಎರಡನೆಯ ಪ್ರಕಾರದ ವಿಶಿಷ್ಟ ಬರವಣಿಗೆಯ ಹದ ಸಾಧಿಸಿಕೊಂಡವರು ಕಮಲಾ ಹಂಪನಾ, ಕೇವಲ ಪ್ರೌಢ

ಅಕ್ಕ ಮಹಾದೇವಿ

ಬಿ. ಎ. ಸನದಿ

ಕೃತಿಗಳಲ್ಲಿ ಮಾತ್ರವಲ್ಲ, ಕಮಲಾ ಹಂಪನಾ ರಚಿಸಿದ ಮಕ್ಕಳ ಸಾಹಿತ್ಯ ಕೃತಿಗಳಲ್ಲೂ ಈ ವೈಶಿಷ್ಟ್ಯ ಅಡಕಗೊಂಡಿರುವುದು ಸೋಜಿಗದ ಸಂಗತಿ.

'ಅಕ್ಕ ಮಹಾದೇವಿ' ಕಮಲಾ ಹಂಪನಾ ಅವರು ಮಕ್ಕಳಿಗಾಗಿ ಬರೆದ ಸಚಿತ್ರ ಪುಸ್ತಕ. ಅಕ್ಕ ಮಹಾದೇವಿಯ ಚರಿತ್ರೆಯನ್ನಾಗಲೀ ಅವಳ ಆಧ್ಯಾತ್ಮಿಕ ವಿಚಾರಸರಣಿಯನ್ನಾಗಲೀ ಎಳೆಯ ಮಕ್ಕಳಿಗೆ ವಿವರಿಸಿ ಹೇಳುವುದು ಬಲು ಮುಜಗರದ ವಿಷಯ. ಆದರೆ ಈ ಮುಜುಗರದ ಎಲ್ಲೆಯನ್ನೂ ಮೀರಿ, ಬಲು ಕಲಾತ್ಮಕವಾದ ರೀತಿಯಲ್ಲಿ ಅಕ್ಕನ ಕಥೆಯನ್ನು ಮಕ್ಕಳ ಪಾತಳಿಯಲ್ಲಿ ನಿಂತು ನಿವೇದಿಸಿದ ಶ್ರೇಯಸ್ಸು ಕಮಲಾ ಹಂಪನಾ ಅವರದು. ಇದೊಂದು ಚರಿತ್ರೆಯಾದರೂ ಕೇವಲ ವರ್ಣನಾತ್ಮಕ ನಿರೂಪಣೆಯ ಹಂತದಲ್ಲಿ ನಿಲ್ಲದೆ, ಅಕ್ಕನ ಅಂತರಂಗದಲ್ಲಿ ನಡೆದ ದುಗುಡ, ದ್ವಂದ್ವಗಳನ್ನು ವಿಶ್ಲೇಷಿಸುತ್ತ ಕಥೆ ಹೇಳಿದ್ದು ಈ ಕೃತಿಯ ವಿಶೇಷ. ಇದೊಂದು ವರ್ಣನೆ ಹಾಗೂ ಚಿಂತನೆಗಳ ಸಮಪಾಕ.

ನಾವೆಲ್ಲ ತಿಳಿದಿರುವಂತೆ ಅಕ್ಕಮಹಾದೇವಿ ಉಡುತಡಿ ಗ್ರಾಮದ ಶಿವಭಕ್ತ ದಂಪತಿಗಳಾದ ನಿರ್ಮಲ-ಸುಮತಿಯರ ಮುದ್ದಿನ ಮಗಳು. ಬಾಲ್ಯದಿಂದಲೂ ಇಳೆ, ನಿಂಬೆ, ಮಾವು, ಮಾದಲಕ್ಕೆ ಹುಳಿನೀರೆರೆದವರಾರೆಂಬಂಥ ಕುತೂಹಲದೊಡನೆಯೇ ಬೆಳೆದು ಬಂದವಳು. ಹದಿನಾರರ ತುಂಬು ಪ್ರಾಯದಲ್ಲಿ ಕೌಶಿಕ ದೊರೆಯ ಕಣ್ಣಿಗೆ ಬಿದ್ದ ತಪ್ಪಿಗೆ ಒಲ್ಲೊಲ್ಲದ ಮನಸ್ಸಿನಿಂದಲೇ ಅವನ ಅರಸಿಯಾಗಿ ಅರಮನೆ ಸೇರಿದವಳು. ಅರಸನೊಡನೆ ಮದುವೆಗೊಪ್ಪುವ ಮುನ್ನ ಅವಳು ಹಾಕಿದ ಮೂರು ಕರಾರುಗಳಂತೆ ನಡೆಯಲು ಆತ ವಿಫಲನಾದಾಗ ಅಕ್ಕ ತನ್ನ ದಿಟ್ಟ ನಿಲುಮೆಯನ್ನು ಪ್ರಕಟಪಡಿಸಿ ಕೌಶಿಕನ ಕಾಮುಕ ಕೈಯಿಂದ ಕೊಸರಿಕೊಂಡು ಅರಮನೆಯಿಂದ ಹೊರಹೊರಟವಳು. ಎಲ್ಲಿ ಇನ್ನೆಲ್ಲಿ-ಎಂಬ ಪ್ರಶ್ನೆಯೇ ಅವಳಿಗಿರಲಿಲ್ಲ, ಹರನೆ ತನಗೆ ಗಂಡನಾಗಬೇಕೆಂದು ಅನಂತ ಕಾಲ ತಪಸಿದ್ದ ಅಕ್ಕ ತನ್ನ ತಂದೆ-ತಾಯಿಯರ, ಬಂಧು-ಬಳಗದ ಮಾತುಗಳನ್ನೂ ಕೇಳದೆ ಚೆನ್ನಮಲ್ಲಿಕಾರ್ಜುನನ ಕೈ ಹಿಡಿಯಲು ಮುಂದಾದವಳು. ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು-ಎಂದು ಅಬ್ಬರಿಸಿ, ದಿಗಂಬರವನ್ನೆ ಹೊದ್ದು ಕಲ್ಯಾಣದ ದಾರಿ ಹಿಡಿದವಳು. ಅದು ಅವಳ ಆತ್ಮ-ಕಲ್ಯಾಣದ ದಾರಿಯೇ ಹೌದು. ಕಲ್ಯಾಣದಲ್ಲಿ ಅಣ್ಣ ಬಸವಣ್ಣನವರು ಸ್ಥಾಪಿಸಿ ಅಲ್ಲಮ ಪ್ರಭುಗಳ ಹಿರಿತನದಲ್ಲಿ ನಡೆಸಿಕೊಂಡು ಹೋಗುತ್ತಿದ್ದ ಅನುಭವ ಮಂಟಪದಲ್ಲಿ ಅಕ್ಕನ ಸತ್ವಪರೀಕ್ಷೆಯೇ ನಡೆದಾಗ ಪ್ರಭುವಿನ ಹಲವೊಂದು ಸೂಕ್ಷ್ಮ ಪ್ರಶ್ನೆಗಳಿಗೆ ಅಷ್ಟೇ ಸೂಕ್ಷ್ಮವಾಗಿ

ಉತ್ತರಿಸಿ 'ಇದು ಲೇಸಾಯ್ತು ಅಕ್ಕಾ !' ಎಂದು ಪ್ರಮಾಣದ ಪತ್ರ ಪಡೆದವಳು. ಆದಾದ ನಂತರ ಪ್ರಭುಗಳು ತೋರಿಸಿದ ಶ್ರೀಶೈಲದ ದಾರಿ ತುಳಿದು, ಅಲ್ಲಿಯ ಕದಳೀವನದೊಳ ಹೊಕ್ಕು ಭವಹರನಲ್ಲಿ ಬೆರೆತು ಅಮರ ಜೀವಿಯೆನಿಸಿದವಳು.

ಬರೆಯುತ್ತ ಹೋದರೆ ನೂರಾರು ಪುಟಗಳಾಗಬಲ್ಲ ಅಕ್ಕನ ಈ ದಿವ್ಯ ಚರಿತ್ರೆಯನ್ನು ಕಮಲಾ ಹಂಪನಾ ಅವರು ಮಕ್ಕಳಿಗಾಗಿ ಬಲು ಸರಳವಾಗಿಯೂ ಸಂಕ್ಷಿಪ್ತವಾಗಿಯೂ ಬರೆದು ಐವತ್ತೇ ಪುಟಗಳಲ್ಲಿ ಅಳವಡಿಸಿದ್ದಾರೆ. ಆದ್ಯರ ಅರವತ್ತು ವಚನಕ್ಕೆ ಸಮನೆನಿಸಿಕೊಂಡ ಅಕ್ಕನ ಒಂದೊಂದು ವಚನವನ್ನು ವಿವರಿಸುತ್ತ, ವಿಶ್ಲೇಷಿಸುತ್ತ ಹೋದರೂ ಐವತ್ತು ಪುಟಗಳಾಗಬಹುದು. ಅವಳ ವಚನರಚನಾಕ್ರಮದಲ್ಲಿ ಅಡಕಗೊಂಡ ಚಿತ್ರಕ ಶಕ್ತಿಯೇ (visualisation) ಒಂದು ಪ್ರತ್ಯೇಕ ಅಧ್ಯಯನದ ವಿಷಯವಾಗಬಹುದು. ಆದರೆ 'ಈ ಕೃತಿ ರಚನೆ ಯಾರಿಗಾಗಿ ?-ಎಂಬುದನ್ನು ಗಮನದಲ್ಲಿರಿಸಿಕೊಂಡ ಈ ಲೇಖಕಿ ಜೀವನ ಹಾಗೂ ವಚನಗಳ ಗಹನ ವಿಚಾರಗಳ ಚರ್ಚೆಗಿಳಿಯದೆ ಸಲೀಸಾಗಿ ಕಥೆ ಹೇಳಿದ್ದಾರೆ.

ಮಕ್ಕಳ ತಿಳುವಳಿಕೆಯ ಮಟ್ಟಕ್ಕಿಳಿದು ಚರಿತ್ರೆಯ ಪದರು-ಪದರು ಬಿಡಿಸುವ ಕೌಶಲ್ಯ ಕಮಲಾ ಹಂಪನಾ ಅವರಿಗೆ ಸಾಧಿಸಿದೆಯೆಂಬುದಕ್ಕೆ ಇದರಲ್ಲಿಯ ಕೆಲವು ವಾಕ್ಯಎಳೆಗಳನ್ನೆತ್ತಿ ತೋರಿಸಬಹುದು. ಉದಾ :

"ಸಹ್ಯಾದ್ರಿಯ ಶ್ರೇಣಿಯಲ್ಲಿ 'ಬಳ್ಳಿಗಾವೆ' ಎನ್ನುವ ಪಟ್ಟಣ. ಆದರ ಸಮೀಪದಲ್ಲಿಯೇ 'ಉಡುತಡಿ' ಎಂಬ ಒಂದು ಸಣ್ಣ ಗ್ರಾಮ. ಆ ಗ್ರಾಮ ಚಿಕ್ಕದಾದರೂ ನೋಡಲು ಅಂದವಾಗಿತ್ತು. ಅದನ್ನು ಕೌಶಿಕ ಎನ್ನುವ ಅರಸನು ಆಳುತ್ತಿದ್ದನು. ಆತನು ತರುಣನೂ ಸುಂದರನೂ ಜೈನಮತದವನೂ ಆಗಿದ್ದನು. ಆ ಊರಿನಲ್ಲಿ ಆ ರಾಜನಿಗೆ ತಕ್ಕಂತೆ ಒಂದು ಕೋಟೆ ಒಂದು ಅರಮನೆ. ಸೈನಿಕರ ಮನೆಗಳು ಕುದುರೆಯ ಲಾಯ, ಆಯುಧಶಾಲೆ ಇವೆಲ್ಲವೂ ಇದ್ದವು..."

ಅಂತೆಯೇ..."ದಿನಗಳು ಉರುಳಿದಂತೆಲ್ಲ ಶುಕ್ಲಪಕ್ಷದ ಚಂದ್ರನಂತೆ ಆ ಮಗು ಬೆಳೆಯಲಾರಂಭಿಸಿತು. ಶಿವನ ಹೆಸರು ಕೇಳಿದರೆ ಸಾಕು, ಏನೂ ಅರಿಯದ ಆ ಮುಗ್ಧ ಶಿಶು ಕಿಲಕಿಲನೆ ನಗುವುದು. ಒಮ್ಮೆ ತಾಯಿಯ ಬಳಿ, ಮತ್ತೊಮ್ಮೆ ತಂದೆ ತಾಯ ಬಳಿ ಇದ್ದು ಆಟವಾಡುವುದು..." ಮುಂದೆ

ಆ ಮಗು ಬೆಳೆದಾಗ..."ತೆಳು ಗುಲಾಬಿಯ ಮೈಬಣ್ಣ, ನೀಳವಾದ ಕಪ್ಪಾದ ಕೇಶರಾಶಿ, ವಿಶಾಲವಾದ ಹಣೆ, ಬೇವಿನ ಎಸಳಿನಂತಹ ಹುಬ್ಬುಗಳು, ಕಮಲದ ದಳದಂತಹ ಕಣ್ಣುಗಳು, ನೀಳವಾದ ಸಂಪಿಗೆಯ ಎಸಳಿನಂತಹ ಮೂಗು, ಮಲ್ಲಿಗೆಯ ಮೊಗ್ಗಿನಂತಹ ಹಲ್ಲುಗಳು, ಮುದ್ದಾದ ಪುಟ್ಟ ಗಲ್ಲಗಳು, ಶುಭ್ರವಾದ ಬಿಳಿಯ ಶಂಖದಂತಹ ಕೊರಳು, ಎಳೆಬಳ್ಳಿಯಂತಹ ತೋಳುಗಳು, ಚಿಗುರಿನಂತೆ ಕೈಬೆರಳುಗಳು..." ಇತ್ಯಾದಿ.

ಹೀಗೆಯೇ ಕಮಲಾ ಹಂಪನಾ ಅವರ ಕಾವ್ಯಮಯ ಸುಭಗಶೈಲಿಗೆ ಅನೇಕ ದೃಷ್ಟಾಂತಗಳನ್ನೆತ್ತಿ ತೋರಿಸಬಹುದು. ಇಲ್ಲಿ ಲೇಖಕಿಯ ಭಾಷಾ ಸೌಂದರ್ಯದೊಡನೆ ಪಾತ್ರಚಿತ್ರಣದ ಕೌಶಲ್ಯವೂ ಮೇಳವಿಸಿ ಈ ಚರಿತ್ರೆಯ ಬರವಣಿಗೆ ಲಲಿತಸಾಹಿತ್ಯದ ಮೈಸಿರಿ ಪಡೆದು ಮೆರೆಯುವಂತಾಗಿದೆ. ಅದೂ ಮುಗ್ಧ ಮನಸ್ಸಿನ ಬಾಲವಾಚಕರನ್ನು ಗಮನದಲ್ಲಿರಿಸಿಕೊಂಡು! ಅಕ್ಕನ ಅಂತರಂಗ-ಬಹಿರಂಗಗಳಲ್ಲಾದ ಪರಿವರ್ತನೆಯ ಬಗ್ಗೆ ಮಕ್ಕಳ ಮುಂದೆ ಹೇಳಬಹುದಾದಷ್ಟನ್ನು ಹಿತಮಿತವಾಗಿ ನಿರೂಪಿಸುತ್ತಾ ಹೋಗಿರುವುದು ಕೌತುಕಪೂರ್ಣವಾಗಿದೆ. ಚಾರಿತ್ರಿಕ ಅಂಶಗಳನ್ನು ಕಲ್ಪನೆಯ ಹಂದರದ ಮೇಲೆ ಹಬ್ಬಿಸಿ, ಹಳೆಯ ಕಥಾವಲ್ಲರಿಗೆ ಹೊಸ ಹೂ ಬಿಡುವಂತೆ ಮಾಡಿದ ಕಮಲಾ ಹಂಪನಾ ಅವರ ಕಲಾಕೌಶಲ್ಯ ಇಲ್ಲಿ ಒಡೆದು ಕಾಣುತ್ತದೆ.

ಅಕ್ಕನ ಚರಿತ್ರೆಯಷ್ಟೇ ಅವಳ ವಚನರಾಶಿಯೂ ಪ್ರಸಿದ್ಧವಾಗಿದೆ. ತನ್ನ ಬದುಕಿನ ಹಂತ ಹಂತದಲ್ಲೂ ಸುಂದರ ಹಾಗೂ ವಿಚಾರಪೂರ್ಣ ವಚನಗಳನ್ನು ರಚಿಸಿ ಹಾಡಿ ತನ್ನ ವೀರ ವೈರಾಗ್ಯದೃಷ್ಟಿ-ಧೋರಣೆಗಳನ್ನು ಮೆರೆದವಳು ಮಹಾದೇವಿ. ತನ್ನ ವಚನಗಳ ಮೂಲಕವೇ ಅಲ್ಲಮಪ್ರಭು ಮತ್ತಿತರ ಶರಣರನ್ನು ದಂಗುಗೊಳಿಸಿದ ಮಹಾ ಶ್ರೇಯಸ್ಸು ಆಕೆಯದು. ಅಂತೆಯೇ ಅಕ್ಕನನ್ನು ಕುರಿತು ಯಾರು, ಏನೇ ಬರೆದರೂ ಹೇರಳವಾದ ವಚನಗಳ ಅವತರಣಿಕೆಗಳನ್ನು, ವಿವರಣೆಗಳನ್ನು ಬಳಸುವುದು ಅನಿವಾರ್ಯವೆನಿಸಿ ಬಿಡುತ್ತದೆ. ಆದರೆ ಈ ಅನಿವಾರ್ಯತೆಯ ಮೇಲೂ ಹತೋಟಿ ಸಾಧಿಸಿ, ಅಡಿಗಡಿಗೆ ವಚನಗಳ ಅವತರಣಿಕೆಗಳ ತೋರಣ ಕಟ್ಟುವ ಕಲಾಚಾಪಲ್ಯದಿಂದ ಈ ಲೇಖಕಿ ಪಾರಾಗಿರುವುದು ಮಕ್ಕಳ ದೃಷ್ಟಿಯಿಂದ ಸ್ತುತವೆಂದೇ ಹೇಳಬೇಕು. ಅಕ್ಕನ ಚರಿತ್ರೆಯ ಕೊನೆಯ ಭಾಗದಲ್ಲಿ ಮಾತ್ರ ಸಾಂದರ್ಭಿಕವಾಗಿ ಕೆಲವು ವಚನಗಳನ್ನು ಬಳಸಲಾಗಿದೆ, ಅಷ್ಟೆ. ಅಲ್ಲಲ್ಲಿ ಸೂಕ್ತ ಚಿತ್ರಗಳನ್ನು ಬಳಸಿ ಪುಸ್ತಕವನ್ನು ಆಕರ್ಷಕಗೊಳಿಸಲಾಗಿದೆ.

೧೯೭೦ ರಲ್ಲಿ ಮೊದಲಸಲ ಪ್ರಕಟವಾದ ಈ ಪುಸ್ತಕ ಈಗಾಗಲೇ ಅನೇಕಸಲ ಪುನರ್ಮುದ್ರಣ ಕಂಡಿರುವುದೇ ಅದರ ಜನಪ್ರಿಯತೆಗೆ ಸಾಕ್ಷಿಯಾಗಿದೆ. ಈ ಪುಸ್ತಕ ಮೊಟ್ಟಮೊದಲು ಪ್ರಕಟವಾದಾಗ ಅದಕ್ಕೆ ಪ್ರಸ್ತಾವನೆ ಬರೆದ ಪ್ರಖ್ಯಾತ ಸಾಹಿತಿ ಅ. ನ. ಕೃ. ಹೇಳಿರುವಂತೆ "ಕಮಲಾ ಹಂಪನಾ ಅವರು ಕಿರಿಯರ ಮನಸ್ಸಿಗೆ ನಿಲುಕುವಂತೆ ಬರೆದಿರುವ ಈ ಪುಟ್ಟ ಹೊತ್ತಗೆಯಿಂದ ನಮ್ಮ ಮಕ್ಕಳಲ್ಲಿಯೂ ದೈವಭಕ್ತಿ, ಆಧ್ಯಾತ್ಮಿಕ ಭಾವನೆ ಮೂಡುವುದರಲ್ಲಿ ಸಂದೇಹವಿಲ್ಲ. ಮಹಾದೇವಿ ಅಕ್ಕನವರ ದಿವ್ಯ ಜೀವನ ನಾಡ ಮಕ್ಕಳಿಗೆಲ್ಲಾ ಮಾರ್ಗದರ್ಶಿತವಾಗಲಿ".

ನಾಡು ನುಡಿ ನಾವು

ಶಿವಣ್ಣ ಮನ್ವಾಚಾರ್

ಲೇಖಕಿಯಾಗಿ, ಉತ್ತಮ ಉಪನ್ಯಾಸಕರಾಗಿ ಕಮಲಾ ಹಂಪನಾ ಅವರು ಹೆಸರಾಗಿರುವಂತೆ ಉತ್ತಮ ಭಾಷಣಕಾರರಾಗಿಯೂ ಜನಪ್ರಿಯರಾಗಿದ್ದಾರೆ. ಬೆಂಗಳೂರು, ಮೈಸೂರು ವಿಶ್ವವಿದ್ಯಾಲಯಗಳಲ್ಲಿ ಇವರು ಮಾಡಿರುವ ಭಾಷಣಗಳು ಹಲವಾರು. ಕನ್ನಡ ಸಾಹಿತ್ಯಪರಿಷತ್ತು ಮತ್ತಿತರ ಪ್ರತಿಷ್ಠಿತ ಸಂಸ್ಥೆಗಳು ಏರ್ಪಡಿಸಿರುವ ಹಲವಾರು ಸಮ್ಮೇಳನಗಳಲ್ಲಿ, ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ಅನೇಕ ಪ್ರಬಂಧಗಳನ್ನು ಮಂಡಿಸಿ ಜನಪ್ರಿಯರಾಗಿದ್ದಾರೆ. ಪ್ರಸ್ತುತ 'ನಾಡು ನುಡಿ ನಾವು' 1970ರಲ್ಲಿ ಬಂಗಾರಪೇಟೆಯಲ್ಲಿ ನಡೆದ ಕೋಲಾರಜಿಲ್ಲಾ ಸಾಹಿತ್ಯ ಸಮ್ಮೇಳನದ ಮಹಿಳಾ ಗೋಷ್ಠಿಯ ಅಧ್ಯಕ್ಷ ಭಾಷಣ. ಕೇವಲ ಹದಿನಾರು ಪುಟವಿರುವ ಈ ಕಿರು ಕೈಪಿಡಿ ಕನ್ನಡನಾಡು ನುಡಿಯ ಬಗೆಗೆ ಮಾತಾಡುವ ಯಾರಿಗೇ ಆದರೂ ಸಾಕಷ್ಟು ಮಾಹಿತಿಯನ್ನು ಒದಗಿಸುತ್ತದೆ.

ನಮ್ಮ ಪ್ರಾಚೀನ ಕನ್ನಡ ಕವಿಗಳು ಕನ್ನಡ ನಾಡು ನುಡಿಯ ಬಗೆಗಿನ ವಿಸ್ತಾರ ವೈಭವಗಳನ್ನು ಕುರಿತು ಮನಬಿಚ್ಚಿ ಹೊಗಳಿರುವುದನ್ನು ಕಾವ್ಯಗಳಲ್ಲಿ ಕಾಣುತ್ತೇವೆ. ಕನ್ನಡನಾಡು ತನ್ನದೇ ಆದ ನೆಲ ಜಲ ಭಾಷೆಯನ್ನು ಹೊಂದಿದ್ದರೂ ಭೌಗೋಳಿಕ ಪ್ರದೇಶದಲ್ಲಿ ಕನ್ನಡಿಗರ ಬದುಕಿನ ಕಥೆ ಇತ್ತೀಚಿನ ದಿನಗಳಲ್ಲಿ ವ್ಯಥೆಯಾಗಿದೆ, ನೋವಿನ ಹಾಡಾಗಿದೆ, ನಾಚಿ ತಲೆ ಬಗ್ಗಿಸುವಂತಿದೆ. ಕನ್ನಡಿಗರ ನಡುವೆ ಅನ್ಯ ಭಾಷೀಯರು ಪ್ರವೇಶಿಸಿ 'ಎನ್ನಡ' ಎಂದು ಬಾಯ್ದೆರೆಯುವುದನ್ನೂ ಕಿವಿಗೊಟ್ಟು ಕೇಳಬೇಕಾಗಿದೆ. ಕನ್ನಡಾಭಿಮಾನದ ಬಗೆಗೆ ಭಾಷಣಗಳಲ್ಲಿ ಜಂಭ ಕೊಚ್ಚಿಕೊಳ್ಳುವ ಜನತೆ ತಮ್ಮ ಮಕ್ಕಳನ್ನು ಇಂಗ್ಲಿಷ್ ಶಾಲೆಗಳಿಗೆ ಕಳಿಸುವ ವ್ಯವಸ್ಥೆಗಳು ವ್ಯವಸ್ಥಿತವಾಗಿ ಜರುಗುತ್ತಿವೆ. ಮನೆಯಲ್ಲಿ, ಶಾಲೆಯಲ್ಲಿ, ಕಾಲೇಜಿನಲ್ಲಿ ಕನ್ನಡ ಮಾಯವಾಗಿ ಪ್ರತಿಷ್ಠೆಯ ಪ್ರಶ್ನೆಯಾಗಿ ಇಂಗ್ಲಿಷ್ ಭಾಷೆ ದಿನೇ ದಿನೇ ಚಿಗುರುತ್ತಿದೆ. ಇನ್ನು ಆಡಳಿತಾಂಗದಲ್ಲಿ ಕನ್ನಡ ಬಳಕೆ ಅದೊಂದು ದೊಡ್ಡ ಕತೆ. 'ಮೈಯೆಲ್ಲಿ ಚಿನ್ನ, ಕಿವಿ ಮಾತ್ರ ಹಿತ್ತಾಳೆ' ಎಂಬ ಒಂದು ಮಾತಿನಿಂದ ಕನ್ನಡದ ಇಂದಿನ ಪರಿಸ್ಥಿತಿಯನ್ನು ಓದುಗರ ಕಣ್ಣಿನ ಮುಂದೆ ನಿಲ್ಲಿಸಿದ್ದಾರೆ.

ಇದುವರೆಗೆ ಎಷ್ಟೋ ರಾಜ್ಯೋತ್ಸವಗಳು ಬಂದು ಹೋದವು. ಕನ್ನಡಪರ ಘೋಷಣೆಗಳು, ಆಜ್ಞೆಗಳೂ ಹಲವಾರು ಬಂದು ಮಾಯವಾದವು. ಕಾರ್ಯರೂಪಕ್ಕೆ ಬಂದಿರುವುದು ಅತೀ ಕಡಿಮೆ. ಈ ವರ್ಷ ಎಲ್ಲಾ ಕಚೇರಿಗಳಲ್ಲಿ ಕನ್ನಡ ವ್ಯವಹಾರ ಭಾಷೆ ಆಗಬೇಕೆಂದು 'ಕನ್ನಡ ಆಡಳಿತ ಭಾಷಾ ವರ್ಷ' ಎಂದು ಕಟ್ಟಾಜ್ಞೆಯನ್ನು ಸರ್ಕಾರ ವಿಧಿಸಿದೆ. ಹಂಪೆಯಲ್ಲಿ ಕನ್ನಡ ವಿಶ್ವವಿದ್ಯಾಲಯವನ್ನು ತೆರೆಯಬೇಕೆಂಬ ಮಾತೂ ಕೇಳಿಬರುತ್ತಿದೆ. ಈ ಎಲ್ಲವನ್ನೂ ಕಾದು ನೋಡಬೇಕು ಎಷ್ಟರ ಮಟ್ಟಿಗೆ ಕಾರ್ಯರೂಪಕ್ಕೆ ಬರುತ್ತದೆಂಬುದನ್ನು. ಹಿಂದಿಯನ್ನು ಹೇಗಾದರೂ ಮಾಡಿ 'ರಾಷ್ಟ್ರಭಾಷೆ' ಎಂದು ಸಾರಿಬಿಡಬೇಕೆಂಬ ಆಸೆ-ಕುತೂಹಲ ಕೇಂದ್ರ ಸರ್ಕಾರಕ್ಕಿರುವುದು ಕಂಡುಬರುತ್ತದೆ. ದೂರದರ್ಶನದಲ್ಲಿ ಪ್ರಸಾರವಾಗುವ ಪ್ರದರ್ಶಕ ಕಲೆಗಳು, ಪತ್ರಿಕೆಗಳಲ್ಲಿ ಕಂಡುಬರುವ ಪ್ರಧಾನಿಯವರ ಮಾತುಗಳು ಈ ಮಾತಿಗೆ ತಕ್ಕ ಉದಾಹರಣೆಯಾಗಿವೆ. ಮಠೀಯ ಮೌಲ್ಯಗಳ ವಕ್ತಾರರ ಸ್ವತ್ತಾಗಿರುವ 'ಸಂಸ್ಕೃತ' ಭಾಷೆಯು ಕಾಟ ಒಂದು ಕಡೆಗಿದೆ. ಹೀಗೆ ಇಂಗ್ಲಿಷ್, ಹಿಂದಿ, ಸಂಸ್ಕೃತ ಈ ಮೂರೂ ಭಾಷೆಗಳ ನಿರಂತರ ದಬ್ಬಾಳಿಕೆಗೆ—ಶೋಷಣೆಗೆ ಕನ್ನಡ ಗುರಿಯಾಗುತ್ತ ಬಂದಿದೆ. ಈ ಮೂರು ಭಾಷೆಗಳನ್ನು ಮಾತನಾಡುವವರ, ಪ್ರೀತಿಸುವವರ ಜೊತೆಗೆ ತಮಿಳರು, ಮಲೆಯಾಳಿಗಳೂ ಸೇರಿಕೊಂಡು ಕನ್ನಡಿಗರ ನೆಲೆ ಬೆಲೆಗಳ ಸ್ವಂತಿಕೆ ಎಂಬುದು ಗೋಚರವಾಗುತ್ತಿಲ್ಲ. ಬೆಳಗಾವಿ,

ಕಾರವಾರಗಳ ಮೇಲೆ ಮರಾಠಿಗರ ಕಾಕ ಕಣ್ಣು ಇದ್ದೇ ಇದೆ. ಕಾಸರಗೋಡನ್ನು ಕರ್ನಾಟಕಕ್ಕೆ ಪಡೆಯಬೇಕಾಗಿದೆ. ಈ ಎಲ್ಲ ಕಷ್ಟಗಳಿಂದ ಕನ್ನಡ ಬಿಡಿಸಿಕೊಳ್ಳಬೇಕಾಗಿದೆ. ಸರ್ಕಾರವೇ ಆಗಲಿ, ಜನತೆಯೇ ಆಗಲಿ ನಾಡು ನುಡಿ ಜನತೆಯ ಬಗೆಗೆ ಕಾಳಜಿ ವಹಿಸಬೇಕಾದ ಸರಿಯಾದ ಎಚ್ಚರಗಳನ್ನು–ಅನಿವಾರ್ಯತೆಯ ಅಗತ್ಯವನ್ನು ಕಮಲಾ ಹಂಪನಾ ಅವರು ಮನಸ್ಸಿಗೆ ನಾಟುವಂತೆ ಹೇಳಿರುವುದು ಗಮನಾರ್ಹ ಸಂಗತಿ.

ಪ್ರಸ್ತುತ ಭಾಷಣ ಮಾಡಿದ ಸಂದರ್ಭದಲ್ಲಿ ಅಂದರೆ 1970ರಲ್ಲಿ ಕನ್ನಡ ನಾಡಿನಲ್ಲಿ ಉದ್ಭವವಾಗಿದ್ದ ಕನ್ನಡಿಗರ ಸಮಸ್ಯೆಗಳನ್ನು ಗಮನಿಸಿದರೆ ಆ ಸಮಸ್ಯೆಗಳು ನಿವಾರಣೆಯಾಗಿರುವುದರ ಬದಲಿಗೆ ಇನ್ನೂ ಉಲ್ಬಣಗೊಂಡಿದ್ದಾವೆಂದೇ ಭಾಸವಾಗುತ್ತದೆ. ಒಂದು ಭಾಷೆಯನ್ನು ಅರಿತುಕೊಳ್ಳುವುದೆಂದರೆ ಒಂದು ಪ್ರದೇಶದ ಜನರ ಬದುಕನ್ನೂ ಅರ್ಥಮಾಡಿಕೊಳ್ಳುವುದು ಎಂದರ್ಥ. ಅವರ ಸಮಸ್ಯೆಗಳು ಹಲವಾರಿರುತ್ತವೆ. ಈ ಎಲ್ಲವುಗಳನ್ನು ಲೇಖಕಿ ಇಲ್ಲಿ ಗಮನಿಸಲು ಪ್ರಯತ್ನಿಸಿದ್ದಾರೆ. ಕನ್ನಡದಲ್ಲಿ ಆಗುತ್ತ ಬಂದಿರುವ ಪ್ರಮುಖ ಸಾಧನೆಗಳನ್ನು ಗುರುತಿಸುತ್ತ ಬಂದಿರುವುದರ ಜೊತೆಗೆ ಕನ್ನಡನಾಡಿನಲ್ಲಿ ಎಲ್ಲಾ ಹಂತಗಳಲ್ಲೂ ಕನ್ನಡದ ವಾತಾವರಣ ಮೂಡಿಸಲು ಪಣತೊಟ್ಟ ಅಗ್ರಗಣ್ಯರ ವಿಷಯವನ್ನ, ಕ್ರಾಂತಿಕಾರಕ ಸಕ್ರಿಯವಾದ ದಿಟ್ಟ ಹೇಳಿಕೆಗಳನ್ನು ಲೇಖಕಿ ನೀಡಿದ್ದಾರೆ. ಭಾಷಣ ಮಾಡಿ ವೇದಿಕೆ ಇಳಿಯುತ್ತಿದ್ದಂತೆಯೇ “ಇಂತಿಂಥ ವಿಷಯಗಳನ್ನು ಹೇಳಿಬಿಟ್ಟಿರಲ್ಲ ನಿಮಗೆ ಹೆದರಿಕೆಯಾಗಲಿಲ್ಲವೆ ? ಸರ್ಕಾರಿ ಕೆಲಸದಲ್ಲಿ ಇರುವ ನಿಮಗೆ ಕೆಲಸದ ಚಿಂತೆ ಅಡ್ಡಿಬರಲಿಲ್ಲವೆ” ಎಂದು ಅಲ್ಲಿದ್ದವರು ಕೇಳಿದ್ದುಂಟು. ನಮ್ಮ ನಾಡಿನಲ್ಲಿ ನಮ್ಮ ಮೇಲೆ ಭಾಷೆ ವಿಷಯದಲ್ಲಿ ನಡೆಯುತ್ತ ಬಂದಿರುವ ಎಲ್ಲಾ ರೀತಿಯ ಶೋಷಣೆಗಳನ್ನು, ಗೋಸುಬೆ ಸಾಹಿತಿಗಳ ಸಮಯಸಾಧಕತನ ರಾಜಕೀಯ ನಾಯಕರುಗಳ ಒಳಜಗಳದಿಂದ ಕನ್ನಡಕ್ಕೆ ಕೇಂದ್ರದಲ್ಲಿ ಆಗುತ್ತಿದ್ದ ಅನ್ಯಾಯದ ವಿವರಣೆ ಸೋದಾರಣವಾಗಿವೆ. ಅಲ್ಲದೇ ಇಷ್ಟು ಧೈರ್ಯವಾಗಿ ಹೇಳುತ್ತಿದ್ದವರ ಸಂಖ್ಯೆಯೂ ಆ ಸಂದರ್ಭದಲ್ಲಿ ಕಡಿಮೆ ಇತ್ತು. ಅಂಥವರಲ್ಲಿ ಕಮಲಾ ಹಂಪನಾ ಒಬ್ಬರು ಎಂದು ಹೇಳಲು, ಎಲ್ಲ ಕಾಲಕ್ಕೂ ಕನ್ನಡ ಬಾಳಿ ಬದುಕಬೇಕಾದರೆ ಅವರು ಕೊಟ್ಟಿರುವ ಸಲಹೆ ಸೂಚನೆಗಳನ್ನು ಅರ್ಥಗರ್ಭಿತವಾಗಿ ಒಳಗೊಂಡಿರುವ ಈ ಕಿರುಹೊತ್ತಿಗೆ ತುಂಬ ಉಪಯುಕ್ತವಾದುದು ಎಂದು ಹೇಳಲು ಅಭಿಮಾನವೆನಿಸುತ್ತದೆ. ಈ ದೃಷ್ಟಿಯಿಂದ ಲೇಖಕಿ ಅಭಿನಂದನಾರ್ಹರು.

ಹೆಳವನಕಟ್ಟೆ ಗಿರಿಯಮ್ಮ

ಫಿಲೋಮಿನ, ಎಚ್. ಪಿ.

ಈ ಶತಮಾನದ ಸರ್ವತೋಮುಖ ಪ್ರಜ್ಞೆಯುಳ್ಳ ಕನ್ನಡದ ಕೆಲವೇ ಮಂದಿ ಲೇಖಕಿಯರಲ್ಲಿ ಕಮಲಾ ಹಂಪನಾ ಅವರು ಒಬ್ಬರು. ಸಾಹಿತ್ಯ ಕ್ಷೇತ್ರದ ವಿವಿಧ ಪ್ರಕಾರಗಳ ಆಳ, ವಿಸ್ತಾರಗಳನ್ನು ಅಳೆದು, ಅಭ್ಯಸಿಸಿ ಜ್ಞಾನವನ್ನು ಸಂಪಾದಿಸಿಕೊಂಡಿರುವ ವಿಚಾರವಂತೆ. ಯಾವುದೇ ವಿಚಾರವಾದರೂ ಪ್ರಾಮಾಣಿಕ ಶೋಧನೆಮಾಡಿ, ಹತ್ತಿರದಿಂದ ವಿಮರ್ಶಿಸಿ, ಹಲವು ಲೇಖಕ ಲೇಖಕಿಯರಿಗೆ ಜಿಗುಪ್ಸೆತಂದರೂ ನಿಜಾಂಶ ಬಹಿರಂಗವಾಗಿ ಬಯಲಿಗೆಳೆಯುವ ಜನಪ್ರಿಯ ಭಾಷಣಕಾರ್ತಿ.

ಯಾವುದೇ ಒಂದು ಗುಂಪಿಗೆ ಸೇರದೆ, ರಾಜಕೀಯದಲ್ಲಿ ತಲೆಹಾಕದೆ, ದಾಕ್ಷಿಣ್ಯಕ್ಕೆ ಬಲಿಯಾಗದೆ ಹಲವು ಸಂದರ್ಭಗಳಲ್ಲಿ ನಿಷ್ಠುರಗಳಿಗೆ ಗುರಿಯಾದರೂ ಅಂಜದ ಕೆಚ್ಚೆದೆಯ ಬರಹ

ಗಾರ್ತಿ. ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ಖಂಡಿಸುವ ಈ ಲೇಖಕಿ ಸತ್ಯಕ್ಕೆ ತಲೆಬಾಗುವ ಮತ್ತು ಮಾನವೀಯ ಮೌಲ್ಯಗಳನ್ನು ಗೌರವಿಸುವವರು. ಇವೇ ಇವರ ವಿಶೇಷ ಗುಣಗಳು.

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಮಕ್ಕಳ ವಯಸ್ಸಿಗೆ ಅಗತ್ಯವಾದ ಜ್ಞಾನ ಕೋಶಗಳಿವೆ ಮತ್ತು ವೈಜ್ಞಾನಿಕ ಸಾಧನಗಳನ್ನು ಉಪಯೋಗಿಸಿ, ಜ್ಞಾನವನ್ನು ಹೆಚ್ಚಿಸಿಕೊಳ್ಳುವ ಸಾಧ್ಯತೆಗಳುಂಟು. ಅಲ್ಲದೆ ತಂದೆ ತಾಯಿಗಳು ಮಕ್ಕಳ ಜ್ಞಾನಾರ್ಜನೆಗಾಗಿ ನಿಷ್ಠೆಯಿಂದ ಆಸಕ್ತಿವಹಿಸುತ್ತಾರೆ.

ಭಾರತೀಯ ಮಕ್ಕಳಲ್ಲಿ, ನಗರದ ವಿದ್ಯಾರ್ಥಿಗಳಿಗೆ, ವೈಜ್ಞಾನಿಕ ಸಲಕರಣೆಗಳ ಬಳಕೆಯ ಸೌಲಭ್ಯವುಂಟು. ವೈಜ್ಞಾನಿಕ ವಿಷಯಕ್ಕೆ ಸಂಬಂಧಪಟ್ಟಂತೆ, ದೊರಕುವ ಪುಸ್ತಕಗಳಲ್ಲಿ ಮುದ್ರಿತವಾದ ಚಿತ್ರಗಳನ್ನು ನೋಡಿ ಜ್ಞಾನವನ್ನು ಹೆಚ್ಚಿಸಿಕೊಳ್ಳುವ ಸಾಧ್ಯತೆಯುಂಟು. ಆದರೆ ಹಳ್ಳಿಗಾಡಿನ ಚಿಕ್ಕಮಕ್ಕಳು ಈ ಅವಕಾಶದಿಂದ ವಂಚಿತರಾಗಿ ಜ್ಞಾನದ ಕೊರತೆಯಿಂದ ಅವರಲ್ಲಿ ಜ್ಞಾನದ ಬೆಳವಣಿಗೆಯಾಗದಿರುವುದು ಸತ್ಯಸಂಗತಿ.

ಚಿಕ್ಕಮಕ್ಕಳಿಗೆ, ಅವರ ವಯಸ್ಸಿಗೆ ತಕ್ಕ ಜ್ಞಾನವನ್ನು ನೀಡತಕ್ಕಂತಹ ಯತ್ನಗಳು ನಡೆಯುತ್ತಿವೆಯೇ ? ಜ್ಞಾನತೃಷೆಯನ್ನು ಇಂಗಿಸಬಲ್ಲ ವಿಚಾರ ಗ್ರಂಥಗಳಿವೆಯೇ ? ಮಕ್ಕಳಲ್ಲಿ ಹೆಚ್ಚು ಕುತೂಹಲವನ್ನು ಕೆರಳಿಸುವ, ವೈಜ್ಞಾನಿಕ ವಿಚಾರಗಳಿಗೆ ಸಂಬಂಧಪಟ್ಟಂತಹ ಕೃತಿಗಳೆಷ್ಟಿವೇ? ಶಿಶುಸಾಹಿತ್ಯಕ್ಕೆ ಸಂಬಂಧಪಟ್ಟ ಸಮಿತಿಗಳು, ಸರ್ಕಾರ, ಬರಹಗಾರರು ಎಷ್ಟರಮಟ್ಟಿಗೆ ಹೊಣೆ ಹೊತ್ತಿದ್ದಾರೆ ಎಂಬ ಪ್ರಶ್ನೆಗಳು ಉದ್ಭವಿಸುವುದು ಸಹಜ. ಈ ದಿಸೆಯಲ್ಲಿ ಕಮಲಾ ಹಂಪನಾ ಅವರು ತಮ್ಮ 'ಹೆಳವನಕಟ್ಟೆ ಗಿರಿಯಮ್ಮ' ಕೃತಿಯ ಮೂಲಕ ಸ್ವಲ್ಪ ಮಟ್ಟಿಗಾದರೂ ಈ ಕೊರತೆಯನ್ನು ತುಂಬಿದ್ದಾರೆ ಎಂದರೆ ಉತ್ಪ್ರೇಕ್ಷೆಯ ಮಾತಾಗುವುದಿಲ್ಲ. ಮಕ್ಕಳ ಹಸಿವನ್ನು ಹೆಚ್ಚಿಸುವ ಮತ್ತು ಜ್ಞಾನತೃಷೆಯನ್ನು–ಇಂಗಿಸುವ ಕೃತಿಯೇ, 'ಹೆಳವನಕಟ್ಟೆ ಗಿರಿಯಮ್ಮ'

ದಾಸಸಾಹಿತ್ಯದ ಕೊನೆಯವರೆನ್ನಬಹುದಾದ ಕನ್ನಡದ ಕವಯಿತ್ರಿ ಗಿರಿಯಮ್ಮನ ಜೀವನ ಚರಿತೆಯನ್ನು ಹಂತ ಹಂತವಾಗಿ ಕುತೂಹಲ ಕೆರಳಿಸುವಂತೆ ಸರಳ ಸುಂದರ ಶೈಲಿಯಲ್ಲಿ ಹೆಣೆದಿರುವುದು ಅವರು ಮಕ್ಕಳ ಮನಸ್ಸನ್ನು ಅವರ ಅಗತ್ಯಗಳನ್ನು ಅರ್ಥಮಾಡಿಕೊಂಡಿರುವ ವಿದ್ವತ್ತನ್ನು ಎತ್ತಿ ತೋರುತ್ತದೆ.

ವಿಷಯ ನಿರೂಪಣೆಯ ಶೈಲಿ ಅತ್ಯಂತ ಸರಳವಾಗಿದ್ದು ಎಂಥ ಕ್ಲಿಷ್ಟ ವಿಷಯವನ್ನಾದರೂ ತಿಳಿಯಾದ ಭಾಷೆಯಲ್ಲಿ ಹೇಳುವ ಇವರ ಅಸಾಧಾರಣ ಶಕ್ತಿಯನ್ನು ಈ ಕೃತಿಯಲ್ಲಿ ಕಾಣಬಹುದು.

ಶಬ್ದಗಳ ಆಡಂಬರವಿಲ್ಲದೆ ಗಿರಿಯಮ್ಮನ ಕಥೆಯನ್ನು ಪ್ರಾರಂಭಮಾಡುವುದರಲ್ಲಿ ತೋರಿರುವ ಜಾಣ್ಮೆ ವೈಶಿಷ್ಟ್ಯಪೂರ್ಣವಾದುದು. ಚಿಕ್ಕಮಕ್ಕಳಲ್ಲಿ ಕಥೆ ಕೇಳುವ ಕುತೂಹಲಗಳು ಸಹಜವಾಗಿ ಹುಟ್ಟುತ್ತವೆ. ಇದಕ್ಕೆ ಪೂರಕವಾಗಿ ಮತ್ತು ಕುತೂಹಲಿಗಳಿಗೆ ಉತ್ತರವನ್ನೀಯುವಂತಹ ವಸ್ತುವನ್ನು ಈ ಕೃತಿಯಲ್ಲಿ ಆಯ್ದು ಕೊಂಡಿರುವುದರಿಂದ ಮಕ್ಕಳ ಜ್ಞಾನವಿಕಾಸಗೊಳಿಸುವುದರಲ್ಲಿ ಸಂದೇಹವಿಲ್ಲ.

ಹನ್ನೆರಡು ವರ್ಷದ ಬಾಲಕ ಹರ್ಷನಲ್ಲುಂಟಾದ ಕುತೂಹಲ, ಪ್ರಶ್ನೆಗಳಿಗೆ ಗಿರಿಯಮ್ಮನ ಕಥೆಯನ್ನು ಸರಳ ಭಾಷೆಯಲ್ಲಿ ವಿವರಿಸುತ್ತಾ ಅವನಲ್ಲಿ ಕುತೂಹಲದ ಹಸಿವನ್ನು ಹೆಚ್ಚಿಸುತ್ತಾ ಅವನ ಮನಸ್ಸಿಗೆ ತೃಪ್ತಿಕರವಾದ ಉತ್ತರಗಳನ್ನೀಯುತ್ತಾ ಸಾಗುವ ಈ ಕೃತಿ ದೊಡ್ಡವರು ಓದುತ್ತಾಹೋದರೂ ಓದಿಸಿಕೊಂಡು ಹೋಗುತ್ತದೆ.

ಗಿರಿಯಮ್ಮನ ಬಾಲ್ಯ ಮತ್ತು ಅವಳು ಚಿಕ್ಕಮಗುವಾಗಿದ್ದಾಗ ಕೃಷ್ಣನ ಅಳು ನಿಲ್ಲಿಸಿದ್ದನ್ನು ಬಹಳ ಕುತೂಹಲಭರಿತವಾಗಿ ಎಳೆಯ ಮನಸ್ಸಿಗೆ ನಾಟುವಂತೆ ನೀಡಿರುವ ವಿವರಣೆ ಅವರ ಹೊಸದೃಷ್ಟಿಕೋನದ ರಚನಾಶಕ್ತಿ ಪ್ರತಿಬಿಂಬಿಸುತ್ತದೆ.

ಹನ್ನೆರಡನೆಯ ವಯಸ್ಸಿಗೆ ತಂದೆ ತಾಯಿಗಳನ್ನು ಕಳೆದುಕೊಂಡು ತಬ್ಬಲಿಯಾದ ಗಿರಿಯಮ್ಮ ದೊಡ್ಡಪ್ಪ ದೊಡ್ಡಮ್ಮನ ನೆರಳಿನಲ್ಲಿ ಬೆಳೆದದ್ದು, ತಿಪ್ಪಸರರೊಡನೆ ವಿವಾಹವಾದದ್ದು, ಗಿರಿಯಮ್ಮನ ದೈವಭಕ್ತಿ ಮತ್ತು ಹೆಳವನಕಟ್ಟೆ ಎಂದು ಹೇಗೆ ಹೆಸರು ಬಂತು ಎಂಬ ವಿಷಯಗಳನ್ನು ಚಿಕ್ಕಮಕ್ಕಳಿಗೆ ಅರ್ಥವಾಗುವ ಶೈಲಿಯಲ್ಲಿ ತಿಳಿಸುವುದರಲ್ಲಿ ಕಮಲಾ ಹಂಪನಾರವರು ಸಫಲರಾಗಿರುವುದು ಅವರು ಮಕ್ಕಳಿಗೆ ಜ್ಞಾನವನ್ನೀಯುವ ಅವರ ಹಂಬಲವೆಷ್ಟೆಂದು ತಿಳಿಯಬಹುದಾಗಿದೆ.

ಗಿರಿಯಮ್ಮ ಮಲೆಬೆನ್ನೂರಿನ ತನ್ನ ಗಂಡನ ಮನೆಯಲ್ಲಿ ನಡೆಸಿದ ಸರಳ ಜೀವನ, ಅನುಭವಿಸಿದಕಷ್ಟಗಳು, ರಂಗನಾಥಸ್ವಾಮಿಯಲ್ಲಿರಿಸಿದ ಭಕ್ತಿ, ಅತ್ತೆಯ ಮನೆಯಲ್ಲಿ ಅನುಭವಿಸಿದ ಕಿರುಕುಳ ಮಾಡಿದ ಪವಾಡಗಳು ಮುಂತಾದ ಗಹನ ವಿಚಾರಗಳನ್ನು ತಿಳಿಯಾದ ಭಾಷೆಯಲ್ಲಿ ಮಕ್ಕಳಿಗೆ ಹೇಳುವ ಮತ್ತು ಜ್ಞಾನ

ವನ್ನೀಯುವ ಮಾರ್ಗವನ್ನು ಇಲ್ಲಿ ಕಾಣಬಹುದು. ಹರ್ಷನಿಗೆ ದೀಪದಲ್ಲಿ ರಂಗನಾಥ ಪ್ರಜ್ವಲಿಸಿದಾಗ ಅವನಿಗಾದ ಹೊಸ ಅನುಭವ, ಸತ್ಯ ಶೋಧನೆಗಾಗಿ ದೇವರನ್ನೇ ಪ್ರಶ್ನಿಸಿದ ಅವನ ಮುಗ್ಧತನ, ಕುತೂಹಲವರಳಿಸುವ ಅತ್ಯುತ್ತಮ ವಿವರಣೆಯಾಗಿದೆ.

ಗಿರಿಯಮ್ಮನಲ್ಲಿದ್ದ ಕವಿತಾಶಕ್ತಿಯನ್ನು ಉದಾ : "ಮಳೆಯ ದಯ ಮಾಡೋ ರಂಗಾ ಶ್ರೀರಂಗಾ, ನಿಮ್ಮ ಕರುಣ ತಪ್ಪಿದರೆ ಉಳಿಯದೀ ಲೋಕಾ" ಎನ್ನುವ ಈ ಕವಿತೆಯ ಸಾಲು ಮಕ್ಕಳಿಗೆ ಅರ್ಥವಾಗುವುದಕ್ಕೆ ಬಳಸಿರುವ ಸುಲಭಭಾಷೆ ಅದ್ಭುತವಾದುದು.

ಸುಲಭ ವಿವರಣೆಗಳ ಜೊತೆಗೆ ಜ್ಞಾನವನ್ನು ಹೆಚ್ಚಿಸಲು ಬಳಸಿರುವ ಚಿತ್ರಗಳು ಮಕ್ಕಳು ಸುಲಭವಾಗಿ ವಿಷಯಗಳನ್ನು ಅರ್ಥಮಾಡಿಕೊಳ್ಳಲು ಹೆಚ್ಚು ಸಹಕಾರಿಯಾಗಿದೆ.

ಪ್ರಕೃತಿ ಸೌಂದರ್ಯ, ಕೃತಿಯಲ್ಲಿ ಬರುವ ಪಾತ್ರಗಳು, ಊರುಗಳ ಪರಿಚಯ ಮುಂತಾದ ವಿಷಯಗಳನ್ನು ಕುರಿತು ಲೇಖಕಿ ಸರಳ ಶೈಲಿಯಲ್ಲಿ ಹತ್ತು ವರ್ಷದಿಂದ ಹದಿನೈದು ವರ್ಷದ ಮಕ್ಕಳಿಗೆ ಅರ್ಥವಾಗುವಂತೆ ವಿವರಿಸಿದ್ದಾರೆ.

ಒಟ್ಟಿನಲ್ಲಿ ಚಿಕ್ಕಮಕ್ಕಳಿಗೆ ಜ್ಞಾನವನ್ನೀಯುವುದರಲ್ಲಿ ಅವರ ಜ್ಞಾನ ತೃಷೆಯನ್ನು ತಣಿಸುವುದರಲ್ಲಿ ಈ ಕೃತಿ ಯಶಸ್ವಿಯಾಗಿದೆ ಎನ್ನುವುದರಲ್ಲಿ ಸಂದೇಹವಿಲ್ಲ. ಶಿಶುಸಾಹಿತ್ಯ ಪ್ರಕಾರಕ್ಕೆ 'ಹೆಳವನಕಟ್ಟೆ ಗಿರಿಯಮ್ಮ' ಕೃತಿ ಉತ್ಕೃಷ್ಟ ಕೊಡುಗೆ.

ಚಿಕ್ಕವರಿಗೆ ಚಿತ್ರದುರ್ಗ

ಕವಿತಾಕೃಷ್ಣ

ಕರ್ನಾಟಕದ ಗಂಡುಭೂಮಿ ಎನಿಸಿದ ಚಿತ್ರದುರ್ಗ ಐತಿಹಾಸಿಕ ಮಹತ್ವವನ್ನೊಳಗೊಂಡ ಒಂದು ಪ್ರೇಕ್ಷಣೀಯ ಸ್ಥಳ. ಸತ್ಯಕ್ಕೆ ನಿಂತರೆ ಸಧರ್ಮಿಗಳು, ಯುದ್ಧಕ್ಕೆ ನಿಂತರೆ ಕದನಗಲಿಗಳು ಎನಿಸಿದ ಪಾಳೆಯಗಾರರಿಂದ ಆಳಲ್ಪಟ್ಟ ದುರ್ಗ ೨ ಶತಮಾನಗಳ ಹಿಂದಿನ ಇತಿಹಾಸಕ್ಕೆ ಜೀವಂತ ಸ್ಮಾರಕವಾಗಿ ಉಳಿದಿದೆ. ಅಲ್ಲಿನ ದುರ್ಗಮವಾದ ಕೋಟೆ ಕೊತ್ತಲಗಳು, ಮುಗಿಲು ಮುಟ್ಟುವ ಬತೇರಿಗಳು, ಸೋಜಿಗಗೊಳಿಸುವ ಕಂದಕಗಳು, ಪ್ರಾಚೀನವಾದ ದೇಗುಲಗಳು ಪ್ರೇಕ್ಷಕರನ್ನು ಸೋಜಿಗದ ಕಡಲ್ಲಿ ಮುಳುಗಿಸುತ್ತವೆ. ಅಲ್ಲಿನ ಕಲ್ಲು ಕಲ್ಲುಗಳೂ ಸಾರಿ ಹೇಳುವ ಕತೆಗಳು ಮೈ ನವಿರೇಳಿಸುತ್ತವೆ. ನಾಡಿಗಾಗಿ ಪ್ರಾಣಾರ್ಪಣೆ ಮಾಡಿದ ತ್ಯಾಗವೀರರ ಕತೆಗಳು ಶ್ರೋತೃಗಳ ಬದುಕಿಗೊಂದು ಹೊಸ ಪಾಠ ಕಲಿಸುತ್ತವೆ. ಮಾತೃಭೂಮಿಯ ಮೇಲಣ ಭಕ್ತಿಯನ್ನು

ಇಮ್ಮಡಿಗೊಳಿಸುತ್ತವೆ. ನಾಳಿನ ನಾಡಶಿಲ್ಪಿಗಳಾದ ಕಿರಿಯರಿಗೆ ಇತಿಹಾಸದ ಪರಿಚಯ ಮಾಡಿ, ತನ್ಮೂಲಕ ದೇಶಪ್ರೇಮ, ಧೈರ್ಯ, ಸಾಹಸ ಪ್ರವೃತ್ತಿಗಳನ್ನು ಬೆಳೆಸುವ ಹೆಬ್ಬಯಕೆಯಿಂದ ಕಮಲಾ ಹಂಪನಾ ಅವರು ಈ ಕೃತಿ ರಚಿಸಿದಂತಿದೆ.

ಚಿತ್ರದುರ್ಗದ ಇತಿಹಾಸ ಬಹು ವಿಸ್ತಾರವಾದದ್ದು. ಬರೆಯುತ್ತಾ ಹೋದರೆ ಸಾವಿರಾರು ಪುಟಗಳ ಬೃಹತ್ ಗ್ರಂಥವೇ ಆದೀತು. ಆದರೆ ಈ ಬೃಹತ್ ಕೃತಿಯಿಂದ ಕಿರಿಯರಿಗಾದ ಲಾಭವಾದರೂ ಏನು ? 'ನೀರಿಳಿಯದ ಗಂಟಲೊಳ್ ಕಡುಬತುರುಕಿದಂತಾಗುವುದು'. ಈ ಮಾತಿನ ಸತ್ಯವರಿತ ಲೇಖಕಿಯವರು 'ಕರಿಯ ಕನ್ನಡಿಯಲ್ಲಿ ಹಿಡಿದು ತೋರುವ ಸಾಹಸ ಮಾಡಿದ್ದಾರೆ'. ೪೦ ಪುಟಗಳ ಪುಸ್ತಕವನ್ನು ಆರು ಭಾಗಗಳಾಗಿ ವಿಂಗಡಿಸಿಕೊಂಡು ದುರ್ಗದ ಇತಿಹಾಸವನ್ನು ಮಕ್ಕಳ ಮನ ಮುಟ್ಟಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ.

ತಾಯಿ–ಮಕ್ಕಳ ಸಂಭಾಷಣೆಯೊಂದಿಗೆ ವಿಷಯ ಪ್ರವೇಶವಾಗುತ್ತದೆ. ಮಗ ಸತೀಶನಿಗೆ ಚಿತ್ರದುರ್ಗ ನೋಡುವ ಹೆಬ್ಬಯಕೆ. ಶಾಲೆಯಿಂದ ಪ್ರವಾಸ ಹೊರಟಿರುವಾಗ ಅವನ ಆಸೆಯ ಹಕ್ಕಿ ಗರಿಬಿಚ್ಚಿ ಹಾರುತ್ತದೆ. "ಮುಂದಿನ ಭಾನುವಾರ ನಮ್ಮ ಶಾಲೆಯಿಂದ ನಮ್ಮನ್ನು ಚಿತ್ರದುರ್ಗದ ಬೆಟ್ಟಕ್ಕೆ ಕರೆದುಕೊಂಡು ಹೋಗುತ್ತಾರಂತೆ. ಬೆಟ್ಟಕ್ಕೆ ಹೋಗೋರೆಲ್ಲ ಐದೈದು ರೂಪಾಯಿಗಳನ್ನು ಕೊಡಬೇಕಂತೆ, ಕೊಡಮ್ಮ. ನಾಳೇನೆ ನಾನು ನಮ್ಮ ಮಾಸ್ಟರ ಕೈಗೆ ಕೊಡಬೇಕು".

ಮಲ್ಲಿನಾಥಯ್ಯನವರಿಗೆ ಮಡದಿ ಮುಖಾಂತರ ಮಗನ ಆಸೆ ಏನೆಂಬುದು ಅರಿವಾಗುತ್ತಲೆ ಬೆಣ್ಣೆಯಂತೆ ಕರಗಿ, ಮಗನ ಬೆನ್ನುತಟ್ಟಿ ತಮ್ಮ ಹಿರಿತನ ತೋರುತ್ತಾರೆ :

"ನಮ್ಮ ಕನ್ನಡದ ಕಡುಗಲಿಗಳೂ ದೇಶಾಭಿಮಾನಿಗಳೂ ತ್ಯಾಗಿಗಳೂ ಸುಸಂಸ್ಕೃತರೂ ಬದುಕಿ ಬಾಳಿದ ಆ ಚಿತ್ರದುರ್ಗವನ್ನು ಕನ್ನಡಿಗರಾದವರೆಲ್ಲರೂ ನೋಡಲೇಬೇಕು".

'ದೇಶ ಸುತ್ತಿ ನೋಡು ; ಕೋಶ ಓದಿ ನೋಡು' ಎಂಬ ನಾಣ್ಣುಡಿಯನ್ನು ಮನನ ಮಾಡಿಕೊಂಡು, ಮಗನಲ್ಲಿ ಶ್ರದ್ಧಾಸಕ್ತಿಗಳನ್ನು ತುಂಬುವ ಈ ತಂದೆಯ ಪಾತ್ರ ಎಷ್ಟು ಸಹಜ ಸುಂದರವಾಗಿ ಮೂಡಿಬಂದಿದೆ ! ನಾಲ್ಕು ಗೋಡೆಗಳ ನಡುವೆ ಕಲಿಯುವುದು ಮಾತ್ರ ವಿದ್ಯೆ ಅಲ್ಲ ; ದೇಶದ ವಿವಿಧ ಭಾಗ

ಗಳನ್ನು ನೋಡುವುದು ಕೂಡ ವಿದ್ಯೆ. 'ಕನ್ನಡಿಗರಾದವರೆಲ್ಲಾ ಕಡ್ಡಾಯವಾಗಿ ನೋಡಬೇಕು' ಎಂದು ಒತ್ತುಕೊಟ್ಟು ಹೇಳುವ ಲೇಖಕಿಯವರ ಮನೋಧರ್ಮ ಅರಿವಾಗದೆ ಇರದು. 'ನೀನು ಹೋಗುವಾಗ ನಿನ್ನ ಜೊತೆಯಲ್ಲಿ ಒಂದು ಚಿಕ್ಕ ಪುಸ್ತಕ ಹಾಗೂ ಸೀಸದಕಡ್ಡಿಯನ್ನು ತೆಗೆದುಕೊಂಡು ಹೋಗು. ಅಲ್ಲಿ ನೀನು ಕಂಡ ಒಂದೊಂದು ಮುಖ್ಯ ವಸ್ತುವನ್ನು, ಕೇಳಿದ ಮುಖ್ಯ ವಿಷಯವನ್ನು ಬರೆದುಕೊಂಡು ಬಾ. ಅದನ್ನು ತಂದು ನನಗೂ ನಿನ್ನ ತಾಯಿ, ತಂಗಿಯರಿಗೂ ವಿವರಿಸಬೇಕು' ಎಂದು ಮಗನನ್ನು ಎಚ್ಚರಿಸುವ ತಂದೆಯ ಮಾತಿನ ಅಂತರಾಳವನ್ನು ಗ್ರಹಿಸಿದಾಗ ಲೇಖಕಿಯ ಸೂಕ್ಷ್ಮದೃಷ್ಟಿ ಮೆಚ್ಚಿಗೆಯಾಗದಿರದು.

ಪೀಠಿಕಾ ರೂಪವಾದ ಈ ಪ್ರಥಮ ಭಾಗದಲ್ಲಿ ತಾಯಿ–ಮಗನ ಸಂಭಾಷಣೆ ಮೆಲ್ಲುಲಿಯುವಂತಿದೆ. ತಂದೆಯ ಪಾತ್ರ ಚಿತ್ರಣ, ಸುಂದರವಾದ ಸಂಸಾರ ಚಿತ್ರಣ ಅಬಾಲ ವೃದ್ಧರನ್ನೂ ಆಕರ್ಷಿಸುವಂತಿದೆ. ಸರಳ ಹಾಗೂ ಸರಸವಾದ ನುಡಿಗಳು ಕತೆಯ ಓಟಕ್ಕೆ ಪೂರಕವಾಗಿ ಮಕ್ಕಳನ್ನು ಚಿತ್ರದುರ್ಗದ ಕಡೆಗೆ ಸೆಳೆಯುವಲ್ಲಿ, ಅವರ ಕುತೂಹಲ, ಆಸಕ್ತಿ ಕೆರಳಿಸುವಲ್ಲಿ ಯಶಸ್ವಿಯಾಗಿದೆ.

*   *   *   *

ಎರಡನೆಯ ಭಾಗದಲ್ಲಿ ಹಿರಿಯೂರಿನ ಮಾಧ್ಯಮಿಕ ಶಾಲೆಯ ಮಕ್ಕಳ ಪ್ರವಾಸ, ಮುಖ್ಯೋಪಾಧ್ಯಾಯರಾದ ನೇಮಣ್ಣನವರ ಮಾರ್ಗದರ್ಶನ, ಗುರು ಶಿಷ್ಯರೊಡನೆ ಹೃತ್‌ಸ್ಪರ್ಷಿ ಸಂಭಾಷಣೆ ಮುಂತಾದ ವಿಚಾರಗಳು ಮೈಗೂಡಿವೆ. ಅಲ್ಲದೆ ಚಿತ್ರದುರ್ಗದ 'ಪಕ್ಷಿನೋಟ' ಬಹು ರಮ್ಯವಾಗಿ ಮೂಡಿಬಂದಿದೆ. ನೇಮಣ್ಣನವರು ಆದರ್ಶ ಶಾಲೆಯ ಮಾಸ್ತರು. ಕನ್ನಡ, ಇತಿಹಾಸವೆಂದರೆ ಅವರಿಗೆ ಪ್ರಾಣ. ವಿದ್ಯಾರ್ಥಿಗಳಲ್ಲಿ ಶಿಸ್ತು–ಸಂಯಮದೊಂದಿಗೆ ನಾಡು–ನುಡಿಗಳ ಬಗ್ಗೆ ಅಭಿಮಾನ ತುಂಬುವ ಚೈತನ್ಯದ ಚಿಲುಮೆ. ಇಂತಹವರ ಮಾರ್ಗದರ್ಶನದಲ್ಲಿ ಬಸ್ಸು ಚಿತ್ರದುರ್ಗದ ಕಡೆ ಹೊರಟೇಬಿಟ್ಟಿತು. ಮಕ್ಕಳು ಮೌನದ ಗೊಂಬೆಗಳಾಗಿ ಕೂರಲಿಲ್ಲ. ಉದ್ಭವವಾದ ಪ್ರಶ್ನೆಗಳನ್ನು ಕೇಳುತ್ತಲೇ ಇದ್ದರು. ಗುರುಗಳು ತಕ್ಕ ಉತ್ತರ ನೀಡುತ್ತಲೇ ಇದ್ದರು. ದುರ್ಗ ಇನ್ನು ಒಂದು ಮೈಲಿದೂರ ಇರುವಾಗಲೇ ಬಸ್ಸು ನಿಂತಿತು. ಗುರು–ಶಿಷ್ಯರು ಕೆಳಗಿಳಿದರು. ಬೆಟ್ಟದ ಸೊಬಗನ್ನು ದೂರದಿಂದ ನೋಡುವುದೇ ಅದರ ಉದ್ದೇಶ. ನಿಜಕ್ಕೂ ಆ ಉದ್ದೇಶ ಸಫಲವಾಗಿದೆ. ಈ ಭಾಗದಲ್ಲಿ ನಡೆವ ಗುರು–ಶಿಷ್ಯರೊಂದಿಗಿನ ಸಂಭಾಷಣೆ ತುಂಬ ಫಲಕಾರಿಯಾದುದಾಗಿ

ಕಂಡುಬರುತ್ತದೆ. ಸಂಭಾಷಣೆ ಎಷ್ಟು ಸುಂದರವಿದೆಯೋ ವಿಷಯವೂ ಅಷ್ಟೇ ಸುಲಭವಾಗಿ ಮನವರಿಕೆಯಾಗುತ್ತದೆ. ಒಂದು ಮೈಲಿ ದೂರದಿಂದ ಕಾಣುವ ದುರ್ಗದ ಪಕ್ಷಿನೋಟವನ್ನು ಸಂಭಾಷಣೆಯ ಮುಖಾಂತರ ಮಕ್ಕಳ ಮನ ಮುಟ್ಟಿಸುವ ಲೇಖಕಿಯ ಶ್ರಮ ಸಾರ್ಥಕವಾಗಿದೆ. ಗಿಡ, ಮರ, ದೇಗುಲ, ಗರುಡಗಂಭ, ಬತೇರಿ, ಕೋಟೆ, ಕಂದಕಗಳಿಂದ ರಂಜಿಸುವ ಸುಂದರ ಚಿತ್ರಣ ನೀಡುವಲ್ಲಿ ಲೇಖಕಿಯ ಕುಶಲತೆ ನಮ್ಮನ್ನು ಬೆರಗುಗೊಳಿಸುತ್ತದೆ.

ನಗರಕ್ಕೆ ಮೂರು ಬಾಗಿಲುಗಳು ಇರುವುದನ್ನು ಹೇಳಿ, ಮುಖ್ಯ ದ್ವಾರಗಳಾದ ರಂಗಯ್ಯನ ಬಾಗಿಲು, ಸಂತೆ ಬಾಗಿಲುಗಳ ಚಿತ್ರಣವನ್ನು ಕಣ್ಕಟ್ಟುವಂತೆ ಮಾಡಿದ್ದಾರೆ. ನೇಮಣ್ಣ ಮಾಸ್ತರ ಮಾತು ದುರ್ಗದ ಗತಕಾಲದ ವೈಭವವನ್ನು ಕಣ್ಮುಂದೆ ತಂದರೆ, ಯಲ್ಲಪ್ಪ ಮಾಸ್ತರ ಮಾತು ದೇವಿ ಉಚ್ಚಂಗಮ್ಮನ ರುದ್ರ ಮನೋಹರ ಮೂರ್ತಿಯನ್ನೇ ತರುತ್ತದೆ. ನೇಮಣ್ಣ, ಯಲ್ಲಪ್ಪ ಮಾಸ್ತರ ಪಾತ್ರಗಳು ಸಾರ್ಥಕ್ಯಹೊಂದಿವೆ, ಆ ಪಾತ್ರ ಗಳೆಲ್ಲೂ ಔಚಿತ್ಯ ಮೀರಿಲ್ಲ, ವಿವರಣೆ ನೀಡಿ ಮಕ್ಕಳನ್ನು ಗೊಂದಲದಲ್ಲಿ ಕೆಡವಿಲ್ಲ.

ಮೂರನೆಯ ಭಾಗವು ಬಹು ಮುಖ್ಯವಾಗಿದ್ದು ಮಕ್ಕಳ ಅರಿವಿಗೆ ಬಾರದಿದ್ದ ಹಲವಾರು ಹೊಸ ವಿಷಯಗಳನ್ನು ಇಲ್ಲಿ ಹೇಳಲಾಗಿದೆ. ಮೇಲ್ದುರ್ಗದಿಂದ ಕಾಣಬಹುದಾದ ರಮಣೀಯ ನೋಟವನ್ನು ವಿವರಿಸಿರುವ ರೀತಿ ಆಕರ್ಷಣೀಯವಾಗಿದೆ. ಮೆಲ್ದುರ್ಗಕ್ಕೆ ಇರುವ ಗೋಪಾಲಕೃಷ್ಣಸ್ವಾಮಿ ಬೆಟ್ಟ ಎಂಬ ಮತ್ತೊಂದು ಹೆಸರು ಹೇಳಲು ಮರೆತಿಲ್ಲ. ಹಾಗೆಯೆ ಗೋಡೆಗಳ ಮೇಲಿರುವ ಸಿಂಹ, ಗಂಡಭೇರುಂಡ, ಮೀನು, ಹಾವು, ಬಳ್ಳಿ, ತಾವರೆ, ನವಿಲು ಇತ್ಯಾದಿ ಕೆತ್ತನೆ ಚಿತ್ರಗಳನ್ನು ನೆನಪು ಮಾಡಿ, ದುರ್ಗದ ಜನತೆಗೆ ಶಿಲ್ಪಕಲೆಯಲ್ಲಿದ್ದ ಆಸಕ್ತಿಯನ್ನು ತಿಳಿಸಿದ್ದಾರೆ. ಬೀಸುವ ಕಲ್ಲಿನ, ಎಣ್ಣೆ ಕೊಳಗಳ ವಿವರಣೆ ಸಾಕಷ್ಟು ಸಮಂಜಸವಾಗಿದೆ. ಅವುಗಳ ಉದ್ದ, ಆಳ, ಎತ್ತರಗಳ ಬಗೆಗೂ ಮಾಹಿತಿ ಒದಗಿಸಲಾಗಿದೆ. ನಾಲ್ಕು ಬಾಗಿಲುಗಳ ಬಗ್ಗೆ ನಾಲ್ಕು ಮಾತು ಹೇಳಿ, ಐದನೆಯ 'ಟಾಕಿನ ಬಾಗಿಲ' ಬಗ್ಗೆ ವಿಶೇಷವಾಗಿ ಪ್ರಸ್ತಾಪಿಸಲಾಗಿದೆ.

ಟಾಕಿನ ಬಾಗಿಲ ಮುಂದೆ ಕೆಂಪು ಹೆಜ್ಜೆಯ ಗುರುತೊಂದಿದೆ. ಲೇಖಕಿ ಅದು ಭೀಮನ ಪಾದವೆಂದು ಹೇಳಿ, ಮಹಾಭಾರತದಲ್ಲಿರುವ ಹಿಡಿಂಬಾಸುರ ವಧೆಯ ಪ್ರಸಂಗವನ್ನು ಸ್ಮರಿಸಿದ್ದಾರೆ. ನೇಮಣ್ಣ ಮಾಸ್ತರು ನಿರೂಪಿಸುವ

ಕಥಾವಿಧಾನ ಸ್ತುತ್ಯಾರ್ಹ. ಹಾಗೆಯೇ ಗರುಡಿಮನೆ, ಗಣೇಶನ ಗುಡಿಗಳ ಬಗ್ಗೆಯೂ ಅಲ್ಪ ಸ್ವಲ್ಪ ವಿವರಗಳಿವೆ.

ಈ ಭಾಗದಲ್ಲಿ ಗುರು–ಶಿಷ್ಯರ ನಡುವಣ ಸಂಭಾಷಣೆ, ವಸ್ತುಶಿಲ್ಪದ ವಿವರಣೆ ಪುಸ್ತಕ ಓದುವ ಕಿರಿಯನಿಗೆ ಒಂದು ವಿಶಿಷ್ಟವಾದ ಅನುಭವ ಉಂಟಾಗುತ್ತದೆ.

* * * *

ನಾಲ್ಕನೆಯ ಭಾಗವು ಆರನೆಯ ಕೋಟೆ ಹಾಗೂ ಅದರ ಮುಂದಿನ ಬಯಲು ಪ್ರದೇಶಕ್ಕೆ ಸಂಬಂಧಿಸಿದ ವಿವರವನ್ನು ಒಳಗೊಂಡದ್ದಾಗಿದೆ. ಬಯಲು ಪ್ರದೇಶದಲ್ಲಿ ಮುಂಭಾಗದಲ್ಲೂ ಬೆಟ್ಟ ! ಬಲಭಾಗದಲ್ಲೂ ಬೆಟ್ಟ ! ಸುತ್ತಲೂ ದೇವಾಲಯಗಳು ! ಅಲ್ಲಿಯೇ ಗಗನಚುಂಬಿಯಾದ ಗರುಡಗಂಭ ! ಅಲ್ಲಿರುವ ಉಯ್ಯಾಲೆಕಂಬ ಮುಂತಾದ ಪ್ರೇಕ್ಷಣೀಯ ಸ್ಥಳಗಳನ್ನು ಮನೋಜ್ಞವಾಗಿ ವರ್ಣಿಸಲಾಗಿದೆ. ಏಕನಾಥೇಶ್ವರಿ ದೇವಾಲಯದ ಸೊಬಗಿಗೆ ಮಕ್ಕಳು ಮೂಕರಾದರೆ, ಝಂಡಾ ಬತೇರಿಯಲ್ಲಿ ನಿಂತು ಬಾವುಟದಂತೆ ಹಾರಾಡುವರಂತೆ. ಆ ಎತ್ತರದಲ್ಲಿ ನಿಂತು, ಚಿತ್ರದುರ್ಗದ ಕಡೆ ಕಣ್ಣು ಹಾಯಿಸಿದರೆ, ಕಾಣಬಹುದಾದ ರಮ್ಯನೋಟವನ್ನು ಇಲ್ಲಿ ಸೆರೆಹಿಡಿಯಲಾಗಿದೆ. ಇತಿಹಾಸದ ಮುಖ್ಯಾಂಶಗಳನ್ನು ಚಾಚು ತಪ್ಪದೆ ಹೇಳುವ ಲೇಖಕಿ ಪಾಳೆಯಗಾರರು ಕಂಬ ನಿಲ್ಲಿಸಿದ ಕಥೆಯನ್ನು ಹೇಳಿ ಓದುಗರನ್ನು ಭಾವುಕರನ್ನಾಗಿಸುತ್ತಾರೆ. ಗರುಡಗಂಭ ನಿಲ್ಲಿಸಲು ಪ್ರಾಣಾರ್ಪಣೆ ಮಾಡಿದ ಶೂದ್ರ ಗರ್ಭಿಣಿಯ ಕತೆಯು ಕಣ್ಣನ್ನು ತೇವವಾಗಿಸುತ್ತದೆ. ಹಿರಿದಾದ ವಿಚಾರವನ್ನು ಕಿರಿದಾಗಿ ಹೇಳುವ ಕಲೆ ಇವರಿಗೆ ಕರಗತವಾಗಿದೆ.

* * * *

ಐದನೆಯ ಭಾಗದಲ್ಲಿ ದುರ್ಗದ ವಾಸ್ತವಾಂಶಗಳಿಗೆ ರನ್ನಗನ್ನಡಿ ಹಿಡಿಯಲಾಗಿದೆ. ಪೌರಾಣಿಕ ಸಂಗತಿಗಳು ಮೆಲುಕುಹಾಕುವಂತೆ ಮೂಡಿಬಂದಿವೆ.

ತೇರಿನರೂಪದ ಕಲ್ಲು ಮಂಟಪಗಳು ಪೌರಾಣಿಕ ಹಿನ್ನೆಲೆ ಹೇಳಿದರೆ, ಸಂಪಿಗೆ ಸಿದ್ದೇಶ, ಅಕ್ಕ–ತಂಗಿಯರ ಹೊಂಡ, ಏಳನೆಯ ಕೋಟೆ–ದೊಣೆ, ಕಡಿದಾದ ಬತೇರಿ, ಮಂಟಪ, ತುಪ್ಪದಕೊಳ, ಗೋಪಾಲಕೃಷ್ಣನ ಗುಡಿ ಮುಂತಾದವು ದುರ್ಗದ ಇತಿಹಾಸ ಹೇಳುತ್ತವೆ. ಅಂದಿನ ಜನರ ನಾಗರಿಕತೆ, ಸಂಸ್ಕೃತಿಗಳು ಮಕ್ಕಳ ಮನಸ್ಸನ್ನು ಸುಲಭವಾಗಿ ಮುಟ್ಟುತ್ತವೆ.

ಶೃಂಗಾರವನದ ಊಟ, ಲಾಲ್ ಬತೇರಿ ನೋಟ ಬಹು ರಮ್ಯವಂತೆ! ಈ ಭಾಗದ ಕಥನಕಲೆ ಎಲ್ಲರನ್ನು ಆಕರ್ಷಿಸುವಲ್ಲಿ ಮುನ್ನಡೆ ಸಾಧಿಸಿದೆ.

* * * *

ಆರನೆಯ ಭಾಗದಲ್ಲಿ ವೀರವನಿತೆ ಓಬವ್ವನ ಕತೆಯನ್ನು ಮನಮುಟ್ಟುವಂತೆ ಹೇಳಿದ್ದಾರೆ. ಕನ್ನಡ ನಾಡಿನ ಹೆಣ್ಣುಮಕ್ಕಳಲ್ಲಿ ನಾಡಪ್ರೇಮ ಹೇಗೆ ತುಂಬಿ ತುಳುಕುತ್ತಿತ್ತು ಎಂಬುದನ್ನು ತಿಳಿಸುವುದೇ ಅವರ ಉದ್ದಿಶ್ಯ, ಕಾಳನ ಹೆಂಡತಿ ಓಬವ್ವ ಹೈದರಾಲಿ ಕಡೆಯವರನ್ನ ತರಿದಿಕ್ಕುವ ರೀತಿ ಕರಳು ಬಾಯ್ಗೆ ಬರಿಸುವಂತಿದೆ. ಓಬವ್ವೆ ವೀರವನಿತೆ ಮಾತ್ರ ಅಲ್ಲ; ಅವರೇ ಹೇಳುವಂತೆ 'ನಾಡ ರಕ್ಷಾಮಣಿ'. ಲೇಖಕಿಗೆ ಆಕೆ ಕಥೆ ಎಷ್ಟು ಹೇಳಿದರೂ ತೃಪ್ತಿ ಇಲ್ಲ. ಕತೆ ಕೇಳಿದ ಶಾಲಾ ಮಕ್ಕಳು ಓಬವ್ವೆಗೆ ಹಾಕದ ಜಯಕಾರ ನಮ್ಮಲ್ಲೂ ಮಾರ್ಧನಿಸದೆ ಇರದು.

ಈ ಕೃತಿಯನ್ನು ಆಮೂಲಾಗ್ರವಾಗಿ ಓದಿದಾಗ ದುರ್ಗದ ಪೂರ್ಣ ಇತಿಹಾಸ ಮಕ್ಕಳ ಮನಮುಟ್ಟುವುದು. ಭಾಷೆ ಸರಳ–ಸುಂದರವಾಗಿದೆ. ಸಂಭಾಷಣೆಯಂತೂ ತುಂಬಾ ಲಾಲಿತ್ಯದಿಂದ ಕೂಡಿದೆ, ಶೈಲಿ ಮೋಹಕವಾಗಿದೆ. ಅಂತರಂಗದ ಅಭಿವ್ಯಕ್ತಿಗೆ ಈ ಸಂಭಾಷಣೆ ತುಂಬಾ ಪೂರಕವಾಗಿದೆ. ಹೇಳುವ ವಿಚಾರವನ್ನು ಲೀಲಾಜಾಲವಾಗಿ ಹೇಳಿದ್ದಾರೆ. ಹೇಳಿದಷ್ಟೂ ಅಚ್ಚುಕಟ್ಟಾಗಿದೆ. ಮಕ್ಕಳ ಮನೋಗುಣಕ್ಕೆ ತಕ್ಕನಾಗಿ, ಹದವರಿತು, ಮುಖ್ಯಾಂಶಗಳನ್ನು ಚಾಚು ತಪ್ಪದೆ ಹೇಳಿರುವ ಕಮಲಾ ಹಂಪನಾ ಅವರ ಶ್ರಮ ಸಾರ್ಥಕವಾಗಿದೆ. ಪೂರಕವಾಗಿ ಅಲ್ಲಲ್ಲಿ ರೇಖಾಚಿತ್ರಗಳೂ ಇವೆ. ಚಿತ್ರದುರ್ಗ ಬೆಟ್ಟವನ್ನು ಕನ್ನಡಿಗರಾದವರೆಲ್ಲರೂ ನೋಡಲೇಬೇಕೆಂಬ ಲೇಖಕಿಯ ಮಾತಿಗೆ ಚಿಣ್ಣರೆಲ್ಲರೂ 'ಚಿಕ್ಕವರಿಗೆ ಚಿತ್ರದುರ್ಗ' ಪುಸ್ತಕವನ್ನು ಎಲ್ಲರೂ ಓದಲೇ ಬೇಕೆಂಬ ಮಾತನ್ನು ಸೇರಿಸಿದರೆ ಉತ್ಪ್ರೇಕ್ಷೆಯಾಗದು.

ಮಕ್ಕಳ ಅಂತರರಾಷ್ಟ್ರೀಯ ವರ್ಷದ ಪ್ರಯುಕ್ತ 1979ರಲ್ಲಿ ಸಾಹಿತ್ಯ ಪರಿಷತ್ತು ಪ್ರಕಟಿಸಿದ ಮಕ್ಕಳ ಪುಸ್ತಕ ಮಾಲೆಯ ನೂರೊಂದು ಪುಸ್ತಕಗಳಲ್ಲಿ "ಡಾ॥ ಬಿ. ಆರ್. ಅಂಬೇಡ್ಕರ್" ಕೃತಿಯೂ ಒಂದು. ಪರಿಷತ್ತಿನ ಉದ್ದೇಶ ಅರ್ಥಪೂರ್ಣವಾದುದು, ಸ್ತುತ್ಯವಾದುದು. ಕಮಲಾ ಹಂಪನಾ ಅವರು ಮಕ್ಕಳ ಮನಸ್ಸಿಗೆ ವೇದ್ಯವಾಗುವ ರೀತಿಯಲ್ಲಿ ಸರಳವಾಗಿ ಆತ್ಮೀಯವಾಗಿ ಅಂಬೇಡ್ಕರರ ಜೀವನವನ್ನು ನಿರೂಪಿಸಿದ್ದಾರೆ.

ಬಿ. ಆರ್. ಅಂಬೇಡ್ಕರ್

ಎಸ್. ಜಿ. ಸಿದ್ಧರಾಮಯ್ಯ

ಆಧುನಿಕ ಭಾರತಕ್ಕೆ ಗಾಂಧೀಜಿಗಿಂತ ಹೆಚ್ಚು ಪ್ರಸ್ತುತವಾದ ಶಕ್ತಿ ಡಾ॥ ಅಂಬೇಡ್ಕರ್. ಆ ಮಹಾನ್ ಚೇತನದ ಜೀವನ ಚಿತ್ರಣವೆಂದರೆ ಇಂಡಿಯಾದ ಅಸ್ಪೃಶ್ಯ ಜನಾಂಗದ ದಾರುಣ ಬದುಕಿನ ಹೋರಾಟಮಯ ಪ್ರಾತಿನಿಧಿಕ ಪುಟಗಳೆಂದೇ ಅರ್ಥ. ವರ್ಣಾ

ಶ್ರಮ ಧರ್ಮವನ್ನು ವಿರೋಧಿಸುವುದರಿಂದ ಹಿಡಿದು ಮನುಧರ್ಮ ಶಾಸ್ತ್ರವನ್ನು ಸುಡುವ, ಸಮಾನತೆಗೆ ಹೋರಾಡುವ, ಸಂವಿಧಾನಶಿಲ್ಪಿಯಾಗುವ ಘಟನೆಗಳನ್ನು ಒಳಗೊಂಡು ಹಿಂದುವಾಗಿ ಸಾಯಲು ಇಚ್ಛಿಸದೆ ಬೌದ್ಧಮತ ಸ್ವೀಕರಿಸಿದ ಕೊನೆಯ ಘಟ್ಟದವರೆಗಿನ ಅಂಬೇಡ್ಕರರ ಬಾಳು ಒಂದು ವ್ಯಕ್ತಿಯ ಬಾಳು ಮಾತ್ರವಾಗಿಲ್ಲ, ಇಡೀ ಇಂಡಿಯಾದ ಬದುಕಿನ ಪುಟಪುಟಗಳಲ್ಲಿ ಬರೆತ ಅಸ್ಪೃಶ್ಯತೆಯ ವಿರುದ್ಧ ನಡೆಸಿದ ಹೋರಾಟದ ವಿಷಣ್ಣ ವ್ಯಥೆಯೂ ಆಗಿದೆ. ನಿರ್ಭೀತ ವಿಚಾರವಂತ, ದಿಟ್ಟ ಹೋರಾಟಗಾರ, ಮಾನವತಾ ಪ್ರೇಮಿ, ಪ್ರತಿಭಾಪೂರ್ಣ ವಿದ್ವಾಂಸ, ಸ್ವಾಭಿಮಾನತೆಯ ಮೇರುವಾಗಿದ್ದ ಈ ಧೀಮಂತ ಶಕ್ತಿಯ ಜೀವನವನ್ನು ಚಿತ್ರಿಸುವಾಗಲೂ ನಮ್ಮಲ್ಲಿನ ಹಲವು ಪಂಡಿತ ಬುದ್ಧಿಗಳು ಅವೈಜ್ಞಾನಿಕತೆಯ ಅಪಚಾರದಿಂದಲೇ ಮೆರೆದಿವೆ. ಅಂಬೇಡ್ಕರರ ಹುಟ್ಟನ್ನೇ ಒಂದು ಅವತಾರ ಎಂದು ವೈಭವೀಕರಿಸಿ ಅಂಬೇಡ್ಕರರ ಜೀವನ ಸಿದ್ಧಾಂತಕ್ಕೇ ಅವಮಾನ ಮಾಡಿದಂತೆ ನಿರೂಪಿಸಿದ್ದಾರೆ.

ಒಂದು ಸಂತೋಷದ ಸಂಗತಿ ಎಂದರೆ ಕಮಲಾ ಹಂಪನಾ ಅವರು ಮಕ್ಕಳಿಗಾಗಿ ಬರೆದ ಈ ಕೃತಿಯಲ್ಲಿ ಆ ಯಾವುದೇ ಅವೈಜ್ಞಾನಿಕ ಆಭಾಸಗಳೂ ಇಲ್ಲ. ಅಂಬೇಡ್ಕರರ ವ್ಯಕ್ತಿತ್ವವನ್ನು ಮಕ್ಕಳಿಗೆ ಪರಿಚಯಿಸುವಲ್ಲಿ ಲೇಖಕಿ ಅನುಸರಿಸಿರುವ ಕಥನ ರೀತಿ ತುಂಬಾ ಹೃದ್ಯವಾಗಿದೆ. ವೈಜ್ಞಾನಿಕ ದೃಷ್ಟಿ ಬರಹದ ಮೌಲ್ಯವನ್ನು ಹೆಚ್ಚಿಸಿದೆ. ಬಾಬಾಸಾಹೇಬರ ವ್ಯಕ್ತಿತ್ವವನ್ನು ಸಶಕ್ತವಾಗಿ ಒಡಮೂಡಿಸುವಂಥ ಜೀವನ ಸಂಗತಿಗಳ ಆಯ್ಕೆ ಲೇಖಕಿಯ ಔಚಿತ್ಯ ಪ್ರಜ್ಞೆಗೆ ಸಾಕ್ಷಿಯಾಗಿದೆ. ಚಾಂಡಾಲರು ನಾವಲ್ಲ ನೀವೇ ; ಶತಶತಮಾನಗಳ ಕಥೆ ; ಮಹಾಚೈತನ್ಯದ ಉದಯ ; ಹೊಸ ಹೆಸರು ; ಆಧುನಿಕ ಮನು ; ಕೆಚ್ಚಿದೆಯ ಬ್ಯಾರಿಸ್ಟರ್ ; ಹೋರಾಟದ ಬದುಕು ; ಮುಂದುವರಿದ ಹೋರಾಟ ; ಭಾರತದ ಸಂವಿಧಾನ ಶಿಲ್ಪಿ ; ಹೀಗೆ ಒಂಬತ್ತು ಉಪಶೀರ್ಷಿಕೆಗಳ ಚೌಕಟ್ಟಿನಲ್ಲಿ ಅಂಬೇಡ್ಕರರ ಜೀವನ ಸಾಧನೆಯನ್ನು ಕ್ರಮಬದ್ಧವಾಗಿ ನಿರೂಪಿಸಿದ್ದಾರೆ. ಉಪಶೀರ್ಷಿಕೆಗಳು ಧ್ವನಿಪೂರ್ಣವಾಗಿವೆ, ವ್ಯಕ್ತಿತ್ವದ ಒಳನೋಟದ ಕಡೆ ಬೆರಳು ಮಾಡುವಂತಿವೆ.

ಕೃತಿಯ ಪ್ರಾರಂಭದಲ್ಲಿ ನಿರೂಪಿತವಾಗಿರುವ ಗಾಡಿಯ ಪ್ರಸಂಗ ಎಳೆಯ ಮನಸ್ಸುಗಳ ಮೇಲೆ ಪ್ರಭಾವ ಬೀರುವ ಆಯ್ಕೆ. ಚಾಂಡಾಲರು ನಾವಲ್ಲ ನೀವೇ ಎಂದು ದ್ವೇಷದಿಂದ ಮನಸ್ಸಿನಲ್ಲಿಯೇ ಶಪಿಸುವ ಬಾಲಕ ಅಂಬೇಡ್ಕರನ ಮಾತು ಶೀರ್ಷಿಕೆಯಾಗಿರುವುದು ಅರ್ಥವತ್ತಾಗಿದೆ. ಇಲ್ಲಿ

ಚಾಂಡಾಲ ಶಬ್ದಕ್ಕೆ ದಕ್ಕುವ—ಹುಟ್ಟಿನಿಂದ ಕಟ್ಟಿಕೊಳ್ಳುವ ಜಾತಿಗಿಂತ ನಡ ವಳಿಕೆಯಿಂದ ವ್ಯಂಜಿತವಾಗುವ ಮನುಷ್ಯತ್ವದ ಅರ್ಥ ಮಕ್ಕಳ ವಿವೇಚನೆ ಯನ್ನು ಬೆಳೆಸುವಂತಿದೆ. ಅವರ ಭಾವವನ್ನು ಆರ್ದ್ರಗೊಳಿಸುತ್ತದೆ. ಇಂಥ ಹಿನ್ನೆಲೆಯಲ್ಲಿ ಹುಟ್ಟಿದ ಅಂಬೇಡ್ಕರರ ಚೈತನ್ಯ ಕುಟುಂಬದ ಆವರಣದಲ್ಲಿ ಉಂಡ ವಾತ್ಸಲ್ಯಮಯ ಸಂಸ್ಕೃತಿ ಸಾಮಾಜಿಕ ವಾತಾವರಣದಲ್ಲಿ ಭರಿಸಿದ ಅವ ಮಾನಕರ ಕಹಿನೋವುಗಳ ಚಿತ್ರಣವನ್ನು ಸೂಕ್ತ ನಿದರ್ಶನಗಳೊಂದಿಗೆ ಹೃದಯ ಸ್ಪರ್ಶಿಯಾಗಿ ನಿರೂಪಿಸಿದ್ದಾರೆ.

ತಾಯಿ ಸತ್ತಮೇಲೆ ತಂದೆಯ ಆರೈಕೆಯಲ್ಲಿ ಬೆಳೆದ ಅಂಬೇಡ್ಕರ್ ಸೋದರರ ಬಾಲ್ಯ ಜೀವನ; ಮಕ್ಕಳ ಆಟಪಾಠಗಳ ಬಗ್ಗೆ ತಂದೆ ವಹಿಸಿದ ಆಸಕ್ತಿ, ಹರಿಸಿದ ಗಮನ, ತಮ್ಮ ಜನಾಂಗಕ್ಕೆ ರೋಗದಂತೆ ಅಂಟಿರುವ, ಕುಡಿತ ಜೂಜುಗಳಿಂದ ಮಕ್ಕಳನ್ನು ದೂರವಿಟ್ಟಿದ್ದು ಎಂಬ ಸಂಗತಿ ಮನ ಮುಟ್ಟುವಂತೆ ನಿರೂಪಿತವಾಗಿದೆ. ರಾಮ್‌ಜೀಯ ಆಧ್ಯಾತ್ಮಿಕ ಸ್ವಭಾವದ ಪ್ರಭಾವವನ್ನು ಔಚಿತ್ಯ ಮೀರದಂತೆ ನಿರೂಪಿಸಿರುವುದು, ಎಲ್ಲಕ್ಕಿಂತ ಬಹಳ ಮುಖ್ಯ. ಕಾರಣ ಪಂಡಿತ ಬುದ್ಧಿಗಳು ಅಂಬೇಡ್ಕರರ ಹುಟ್ಟನ್ನು ಅಲೌಕಿಕತೆಗೇರಿಸುವುದು, ವೈಭ ವೀಕರಿಸುವುದು ಈ ಸಂಗತಿಯ ಹಿನ್ನೆಲೆಯಲ್ಲಿಯೇ.

ಮುಂಬಯಿಯ ಎಲ್ಫಿನ್ ಶಾಲೆಯಲ್ಲಿ ನಡೆದ ಘಟನೆ—ಕಪ್ಪು ಹಲಗೆಯ ಮೇಲೆ ಅಂಬೇಡ್ಕರ್ ಬರೆಯಲು ಹೋದಾಗ ಅದರ ಹಿಂದಿದ್ದ ತಮ್ಮ ಊಟದ ಡಬ್ಬಿಗಳನ್ನು ಸವರ್ಣೀಯ ಬಾಲಕರು ಓಡಿ ಓಡಿ ಹೋಗಿ ತೆಗೆದು ಕೊಂಡದ್ದು. ಆಗ ಆ ಸವರ್ಣೀಯ ವಿದ್ಯಾರ್ಥಿಗಳು ಮಾಡಿದ ಡಬ್ಬಿಗಳ ಶಬ್ದ ನೂರಾರು ಸಿಡಿಲುಗಳಂತೆ ಬಾಲಕ ಅಂಬೇಡ್ಕರನ ಹೃದಯಕ್ಕೆ ಬಡಿದವು.... ಈ ಎಲ್ಲ ಘಟನೆಗಳು ಅಂಬೇಡ್ಕರನ ನಿರ್ಧಾರವನ್ನು ಬಲಪಡಿಸಿ ಮುನ್ನುಗ್ಗು ವಂತೆ ಮಾಡಿದವೇ ಹೊರತು ಹೆದರಿ ಹಿಮ್ಮೆಟ್ಟುವಂತೆ ಮಾಡಲಿಲ್ಲ." ಈ ಮಾತುಗಳು ಎಳೆಯ ಭಾವಕ್ಕೆ ಬಲಸಂವರ್ಧನೆಗಳಾಗಿವೆ. ಅಂತೆಯೇ 'ಹೋರಾಟದ ಬದುಕು, ಮುಂದುವರಿದ ಹೋರಾಟ' ಭಾಗಗಳಲ್ಲಿ ಈ ನಿರ್ಧಾರದ ಸತ್ವ ವಾಸ್ತವಿಕ ಕ್ರಿಯಾಪೂರ್ಣತೆಗೆ ತೊಡಗಿದ್ದು ಚಿತ್ರಿತವಾಗಿದೆ.

ವಿದೇಶದಿಂದ ಡಾಕ್ಟರೇಟ್ ಪದವಿ ಪಡೆದು ಹಿಂತಿರುಗಿದ ಅಂಬೇಡ್ಕರ್ ಇಂಡಿಯಾದ ಜಾತ್ಯಂಧರ ನಡುವೆ ಅನುಭವಿಸಿದ ನೋವು ಹೃದಯ ಹಿಂಡು ವಂತಿದೆ. ಮುಂಬಯಿಯ ಸಿಡೆನ್ ಹಾಂ ಕಾಲೇಜಿನಲ್ಲಿ ಅಧ್ಯಾಪಕನಾಗಿ ಅಂಬೇಡ್ಕರ್ ಪಡೆದ ಅನುಭವ, ಬ್ಯಾರಿಸ್ಟರ್ ಅಂಬೇಡ್ಕರ್ ಅನುಭವಿಸಿದ ಜಾತಿ ಮೂಲ ತಿರಸ್ಕಾರ ಇವುಗಳ ನಡುವೆಯೂ ಅಂಬೇಡ್ಕರ್ ಬೆಳಸಿಕೊಂಡ

ಸ್ವಾಭಿಮಾನ ಧೈರ್ಯ ಅವರ ಹೋರಾಟಕ್ಕೆ ನೈತಿಕ ಬಲ ನೀಡಿರುವುದನ್ನು ಲೇಖಕಿ ಹಂತ ಹಂತವಾಗಿ ಔಚಿತ್ಯಪೂರ್ಣವಾಗಿ ಬೆಳೆಸಿದ್ದಾರೆ. ಗಾಂಧೀಜಿ ಅಸ್ಪೃಶ್ಯ ಜನಾಂಗಕ್ಕೆ ತೋರುತ್ತಿದ್ದ ಮನೋಧರ್ಮವನ್ನು ಅಂಬೇಡ್ಕರ್ ಅದನ್ನು ತಿರಸ್ಕರಿಸಿದ ರೀತಿಯನ್ನು ಚಿಕ್ಕದಾದರೂ ತುಂಬಾ ಪ್ರಭಾವಿಯಾಗಿ ನಿರೂಪಿಸಿದ್ದಾರೆ. "ಗಾಂಧೀಜಿ ಅಸ್ಪೃಶ್ಯರನ್ನು ಹರಿಜನ ಎಂದು ಕರೆದರು, 'ಹರಿಜನ' ಪತ್ರಿಕೆ ಪ್ರಾರಂಭಿಸಿದರು. ಹೀನಾಯವಾಗಿ ಕಾಣುವುದು ಮಹಾ ಪಾಪವೆಂದು ಹೇಳಿದರು. ಆದರೆ ಅಂಬೇಡ್ಕರರು ಗಾಂಧೀಜಿಯ ಕರುಣೆಯ ಕೂಗನ್ನು ತಿರಸ್ಕರಿಸಿದರು. ಅವರು ಗುಡುಗಿದರು ; 'ನಾವು ಎಲ್ಲರಂತೆ ಭಾರತೀಯರು, ಹಿಂದುಗಳು ನಮಗೆ ಬೇಕಾಗಿರುವುದು ಕರುಣೆಯಲ್ಲ, ದಾನ ವಲ್ಲ, ಎಲ್ಲರಂತೆ ಸಮಾಜದಲ್ಲಿ ಸರಿಸಮಾನರಾಗಿ ಬಾಳುವ ಹಕ್ಕು ಮತ್ತು ಸ್ವಾತಂತ್ರ್ಯ."

ಅಸ್ಪೃಶ್ಯರ ಉದ್ಧಾರಕ್ಕಾಗಿ ಅಂಬೇಡ್ಕರ್ ಕಟ್ಟಿದ ಸಂಘ 'ಬಹಿಷ್ಕೃತ ಹಿತಕಾರಿಣೀ ಸಭಾ'. ಅವರು ತೆರೆದ ಪತ್ರಿಕೆ 'ಬಹಿಷ್ಕೃತ ಭಾರತ.' ಮಹಾಡ್ ನಗರದಲ್ಲಿ ನಡೆಸಿದ ನಿಮ್ನ ವರ್ಗದವರ ಮಹಾಸಮ್ಮೇಳನ, ಚಾವ್ದರ್ ತಲೆನ್ ಕೆರೆಯ ಪ್ರಸಂಗ, ಮನುಧರ್ಮ ಗ್ರಂಥ ಸುಟ್ಟದ್ದು ಹೀಗೆ ಅಂಬೇಡ್ಕರ್ ಕೈಗೊಂಡ ಹೋರಾಟಗಳನ್ನು ಅವುಗಳ ಹಿನ್ನೆಲೆಯ ಪೂರಕ ಸಮರ್ಥನೆಯೊಂದಿಗೆ ನಿರೂಪಿಸಿದ್ದಾರೆ. ಚುನಾವಣಾ ಮೀಸಲಾತಿ ಬಗ್ಗೆ ವರ್ಣಾಶ್ರಮದ ಬಗ್ಗೆ ಗಾಂಧೀಜಿಗೂ ಇರುವ ಅಭಿಪ್ರಾಯ ಭೇದ ಮನ ಗಾಣುವಂತಿದೆ.

ನಾನು ಹಿಂದುವಾಗಿ ಸಾಯುವುದಿಲ್ಲ ಎಂಬ ನಿರ್ಧಾರಕ್ಕೆ ಅಂಬೇಡ್ಕರ್ ಬರಬೇಕಾದರೆ ಅದರ ಹಿಂದೆ ಎಷ್ಟು ನೋವು, ಹಿಂಸೆ, ಅವಮಾನ, ಬೇಗುದಿಗಳ ಪರಂಪರೆ ಇದೆ ಎಂಬುದು ಕೃತಿಯಲ್ಲಿ ಭಾವಿತವಾಗುತ್ತದೆ. ಒಟ್ಟಿನಲ್ಲಿ ಡಾ. ಬಿ. ಆರ್. ಅಂಬೇಡ್ಕರರ ಜೀವನ ಸಾಧನೆ ಸಿದ್ಧಿಗಳನ್ನು ಮಕ್ಕಳ ಮನಸ್ಸಿಗೆ ತಟ್ಟುವಂತೆ ನಿರೂಪಿಸುವಲ್ಲಿ ಕೃತಿಯ ಉದ್ದೇಶ ಸಾರ್ಥಕವಾಗಿದೆ.

ಭರತೇಶ ವೈಭವ

ಪ್ರೊ॥ ಎಚ್. ಎಂ. ಬೀಳಗಿ

ಸುಮಾರು ಕಾಲುಶತಮಾನದ ಅವಧಿಯಲ್ಲಿ ಮೂವತ್ತಕ್ಕಿಂತ ಹೆಚ್ಚು ಮೌಲಿಕ ಕೃತಿಗಳ ರಚನೆಮಾಡಿ, ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹೆಸರುಮಾಡಿಕೊಂಡವರು ಕಮಲಾ ಹಂಪನಾ ಅವರು. ಸತತ ಅಭ್ಯಾಸಿಗಳು, ನುರಿತ ಪ್ರಾಧ್ಯಾಪಿಕೆಯರು, ಉತ್ತಮ ವಾಗ್ಮಿಗಳು, ವೈಚಾರಿಕ ಬರಹಗಾರ್ತಿಯರು ಆಗಿದ್ದು "ಎನಗಾಗಿ ಎನ್ನ ಸಾಹಿತ್ಯಕ್ಕಾಗಿ ಏನೂ ಉಳಿಯಲಿಲ್ಲ" (ಬಿಂದಲಿ ಪುಟ ೬೦) ಎಂದು ಹೇಳಿರುವುದು ಅವರ ವಿನಯವನ್ನು ದರ್ಶಿಸುತ್ತದೆ. ಶಿಶುಸಾಹಿತ್ಯ, ಕಥೆ, ಜೀವನಚರಿತ್ರೆ, ಪ್ರಬಂಧ, ವಚನ, ವಿಮರ್ಶೆ, ಸಂಶೋಧನೆ–ಹೀಗೆ ಹಲವಾರು ಸ್ತರಗಳಲ್ಲಿ ವೈವಿಧ್ಯಪೂರ್ಣವಾದ ಸಾಹಿತ್ಯರಚನೆ ಮಾಡಿದ ಕಮಲಾ ಅವರ ದೃಷ್ಟಿ ಅನುವಾದ, ಸಂಪಾದನೆಗಳತ್ತಲೂ ಹರಿದಿರುವುದು ಗಮನಾರ್ಹ. ಸ್ಮರಣಸಂಚಿಕೆ, ಸ್ಮೃತಿಗ್ರಂಥಗಳ ಸಂಪಾದನೆ- ಮಾಡಿರುವುದಲ್ಲದೆ,

'ಸುಕುಮಾರಚರಿತೆಯ ಸಂಗ್ರಹ'ವನ್ನು ವೈಯಕ್ತಿಕವಾಗಿಯೂ 'ಭರತೇಶ ವೈಭವ', 'ಚಾವುಂಡರಾಯ ಪುರಾಣ' ಕೃತಿಗಳನ್ನು ಇತರರೊಡನೆಯೂ ಸಂಪಾದಿಸಿರುವುದು, ಅವರ ಆಳವಾದ ಅಭ್ಯಾಸ, ಅನುಭವ ವೈಶಾಲ್ಯಕ್ಕೆ ದ್ಯೋತಕವಾಗಿದೆ. ಕಮಲಮ್ಮನವರು ಜಿ. ಬ್ರಹ್ಮಪ್ಪ ಹಾಗೂ ಹಂಪನಾ ಇವರೊಡನೆ ರತ್ನಾಕರವರ್ಣಿಯ ಭೋಗಯೋಗ ಸಮನ್ವಯ ತತ್ವವನ್ನು ಸಾರುವ 'ಭರತೇಶ ವೈಭವ'ವನ್ನು ಸಂಪಾದಿಸಿದ್ದಾರೆ.

ರಚನಾತ್ಮಕ ಸಾಹಿತ್ಯ ಸೃಷ್ಟಿಗಿಂತ ಸಂಪಾದನಾಕಾರ್ಯ ಕಷ್ಟಸಾಧ್ಯವಾದುದು. ಡಾ॥ ಹಾ. ಮಾ. ನಾಯಕ ಅವರು ಹೇಳಿದಂತೆ "ವಿದ್ವತ್ತು, ವ್ಯುತ್ಪತ್ತಿ, ಪ್ರತಿಭೆ ಮೇಳವಿಸಿರುವ ಸಮರ್ಥರು ಕೈಕೊಳ್ಳಬೇಕಾದ ಕಾರ್ಯ ಇದು". ಸಂಪಾದನಾ ಕಾರ್ಯ ಕೈಗೆತ್ತಿಕೊಳ್ಳುವವರಿಗೆ ಪ್ರಾಚೀನ ಕಾವ್ಯಗಳ ವಿಸ್ತೃತವಾದ ಅಭ್ಯಾಸ, ಆಳವಾದ ಅನುಭವ, ಸಂಶೋಧನೆಯ ಪ್ರಾಮಾಣಿಕ ದೃಷ್ಟಿ ಇವು ಅಗತ್ಯವಾಗಿ ಇರಲೇಬೇಕು. ಇದರೊಂದಿಗೆ ವಿವಿಧ ಭಾಷೆ, ಶಾಸ್ತ್ರಗಳ ಪರಿಚಯವೂ ಇರಬೇಕಾಗುತ್ತದೆ. ಸಂಪಾದಕರು ತಮ್ಮ ವೈಯಕ್ತಿಕ ಭಾವನೆಗಳನ್ನು ಬದಿಗಿರಿಸಿ, ಕೃತಿರಚನೆಯ ಕಾಲದ ಪ್ರಜ್ಞೆಯ ಹಿನ್ನೆಲೆಯಲ್ಲಿ ಕವಿಯ ಆಲೋಚನೆ, ಭಾವನೆಗಳಿಗೆ ಬದ್ಧರಾಗಿ ಸಂಪಾದನಾಕಾರ್ಯಕ್ಕೆ ಅಣಿಯಾಗಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಕೃತಿಯನ್ನು ಪರಿಶೀಲಿಸುವುದು ಈ ಲೇಖನದ ಉದ್ದೇಶವಾಗಿದೆ.

ಆರೇಳು ವರ್ಷಗಳ ಪರ್ಯಂತ ಈ ಕೃತಿಯ ತಾಳೆಪ್ರತಿಗಳನ್ನು ಕಲೆಹಾಕಿ, ಅಭ್ಯಸಿಸಿ ಕೊನೆಗೆ ಮೂರು ಪ್ರತಿಗಳನ್ನು ಆಧಾರವಾಗಿ ಬಳಸಿಕೊಂಡಿರುವುದಾಗಿ ಸಂಪಾದಕರು ಆರಂಭದಲ್ಲಿ ಹೇಳಿದ್ದಾರೆ.

(೧) ಸಾಲಿಗ್ರಾಮದ ಉಪಾಧ್ರಿ, ಎಸ್. ಬಿ. ಪಾರ್ಶ್ವನಾಥಯ್ಯನವರಿಗೆ ಸೇರಿದ್ದು. (೨) ತೋವಿನಕೆರೆಗೆ ಸೇರಿದ ಜೀರ್ಣಾವಸ್ಥೆಯಲ್ಲಿದ್ದ ಪ್ರತಿ. (೩) ತುಮಕೂರಿನ ದಿ॥ ಧರಣಸೆಟ್ಟರು ೨೨ ವರ್ಷಗಳ ದೀರ್ಘ ಅವಧಿಯ ಪರ್ಯಂತ ಪರಿಶ್ರಮಿಸಿ ೧೮೯೮ ರಲ್ಲಿ ಬರೆದು ಮುಗಿಸಿದ ಹಸ್ತಪ್ರತಿ. ಈ ಮೂರರಲ್ಲೂ ಕೊನೆಯ ಅಂದರೆ ದಿ॥ ಧರಣಿಶೆಟ್ಟರ ಸ್ಫುಟವಾದ ಬರವಣಿಗೆಯ ಹಸ್ತಪ್ರತಿಯನ್ನು ಮೂಲವಾಗಿಟ್ಟುಕೊಂಡು, ಅವಶ್ಯವೆನಿಸಿದಲ್ಲಿ ಉಳಿದ ಎರಡು ಪ್ರತಿಗಳ ಪಾಠಾಂತರಗಳನ್ನು ಅಡಿಟಿಪ್ಪಣಿಯಲ್ಲಿ ಕೊಟ್ಟಿದ್ದಾರೆ. ಇದಲ್ಲದೆ ನಲ್ವತ್ತು ವರ್ಷಗಳ ಹಿಂದೆ ಪ್ರಕಟವಾಗಿದ್ದ 'ಶ್ರೀ ಉಗ್ರಾಣ ಮಂಗೇಶರಾಯರ' ಮುದ್ರಣ ಪ್ರತಿಯನ್ನೂ ಗಮನಿಸಿರುವುದಾಗಿ ಸಂಪಾದಕರು ಹೇಳಿದ್ದಾರೆ. ಸಂಪ್ರತಿಕಾರರಾದ ದಿವಂಗತ ಧರಣಿಶೆಟ್ಟರಿಗೂ ಅವರ ಪರಿವಾರಕ್ಕೂ ಈ ಕೃತಿ ಸಮರ್ಪಿತವಾಗಿದೆ.

ಆರಂಭದಲ್ಲಿ ಸುಮಾರು ನೂರಿಪ್ಪತ್ತು ಪುಟಗಳಷ್ಟು ವಿಸ್ತಾರವಾದ ಕವಿಕಾವ್ಯ ಪರಿಚಯವಿದೆ. ರತ್ನಾಕರವರ್ಣಿಯ ಜೀವನ, ಕಾವ್ಯ ಪರಂಪರೆಗಳನ್ನು ವಿವರಿಸುತ್ತ, ಕವಿ ಸು. ೧೫೫೭ರಲ್ಲಿ 'ತ್ರಿಲೋಕಶತಕ' ರಚಿಸಿರಬಹುದೆಂದೂ ನಂತರ ಆತನ ಹೃದಯ ಹದಗೊಂಡ ಮೇಲೆ ಕ್ರಿ.ಶ.ಸು. ೧೫೬೭ರಲ್ಲಿ 'ಭರತೇಶ ವೈಭವ' ಕೃತಿಯನ್ನು ಬರೆದಿರಬಹುದೆಂದೂ ಸಂಪಾದಕರು ಅಭಿಪ್ರಾಯ ಪಟ್ಟಿರುವುದು ಸಾಧುವೆನಿಸುತ್ತದೆ. ಕೃತಿಯ ಆಕರ, ಕಥಾವಸ್ತು, ವಸ್ತುವಿನ್ಯಾಸ, ವರ್ಣನೆ, ಹಾಸ್ಯ, ದಿಗ್ವಿಜಯದ ರಣಕೋಲಾಹಲ ಪ್ರಸಂಗಗಳನ್ನು ವಿಮರ್ಶಿಸುತ್ತ, "ಭರತೇಶವೈಭವ ಸಾವಿಲ್ಲದ ಕೃತಿಯಾದರೂ ನೋವಿಲ್ಲದ ಕೃತಿಯೇನಲ್ಲ"ಎಂದು ಹೇಳಿ, ಆಗಾಗ ಬೀಸುವ ವೈರಾಗ್ಯದ ಚಂಡಮಾರುತ ಪ್ರಸಂಗಗಳನ್ನೂ ಎತ್ತಿತೋರಿಸಿದ್ದಾರೆ. ಕವಿಯ ಉಳಿದ ಕೃತಿಗಳ ಶತಕತ್ರಯ, ಆಧ್ಯಾತ್ಮಗೀತೆಗಳು, ಸಂಕ್ಷಿಪ್ತ ಪರಿಚಯವೂ ಇಲ್ಲಿದೆ. ರತ್ನಾಕರವರ್ಣಿಯ ಕಲಾಕುಂಚದಿಂದ ಮೂಡಿಬಂದ ಸ್ತ್ರೀಪಾತ್ರಗಳ ಸುಂದರ ಚಿತ್ರ, ಭರತೇಶ, ಬಾಹುಬಲಿಯರ ಘನಗಂಭೀರ, ಸುಮಧುರ ವ್ಯಕ್ತಿಚಿತ್ರ, ಚಿತ್ತಾಕರ್ಷಕವಾಗಿ ನೆಲೆನಿಂತಿವೆ ತರ್ಕಬದ್ಧ ವಿಮರ್ಶೆಯ ಪ್ರತಿಫಲನದಿಂದಾಗಿ. ನಂತರದಲ್ಲಿ ಕಾಣಿಸಿಕೊಳ್ಳುವ 'ಭೇದ ವಿಜ್ಞಾನ', 'ಚಿದಂಬರ ರಹಸ್ಯ' ಭಾಗಗಳಲ್ಲಿ ಕ್ರಮವಾಗಿ, ಕವಿಯ ಕಲಾತ್ಮಕ ತತ್ವವಿವೇಚನಾ ಸಾಮರ್ಥ್ಯ ಹಾಗೂ ಹಂಸಕಲೋಪಾಸನಾ ಕ್ರಮದಲ್ಲಿ ವಿಕಸಿಸುತ್ತ ಹೋದ ಜೈನಸಿದ್ಧಾಂತ ಪ್ರತಿಪಾದನಾಕ್ರಮ ಇವುಗಳನ್ನು ಅರ್ಥವತ್ತಾಗಿ ಪರಿಚಯಿಸಿಕೊಡಲಾಗಿದೆ. ವಿಸ್ತಾರವೂ ಅಭ್ಯಾಸಪೂರ್ಣವೂ ಆದ ಕವಿಕಾವ್ಯ ಪರಿಚಯ ಪ್ರಸ್ತುತ ಕೃತಿಗೆ ಹೆಚ್ಚಿನ ಮೆರುಗನ್ನಿತ್ತಿದೆ.

ಭೋಗವಿಲ್ಲದೆ ಭೋಗಿಯಹುದು ನಿನ್ನೊಳಗಾತ್ಮ
ಯೋಗವಿಲ್ಲದೆ ಯೋಗಿಯಹುದು ।
ಭೋಗದೊಳಗಿದ್ದು ಯೋಗವಮಾಡಿ ಭವಮುಕ್ತ
ರಾಗುವರಾರು ನಿನ್ನಂತೆ

ಎಂದು ಕವಿ ಹೇಳಿದಂತೆ ಭರತೇಶನ ಊರ್ಧ್ವಮುಖಿಯಾದ ವ್ಯಕ್ತಿತ್ವ, ಭೋಗಜೀವನದ ತುತ್ತತುದಿಯಿಂದ ಯೋಗಜೀವನದತ್ತ ತಿರುಗಿಕೊಂಡು ಕೈವಲ್ಯ ಸಾಮ್ರಾಜ್ಯಕ್ಕೆ ಸಲ್ಲುವ ಪರಿಯನ್ನು ಸಮಗ್ರ ಕಾವ್ಯ ನಿರೂಪಿಸಿಕೊಂಡು ಹೋಗುತ್ತದೆ. ಭೋಗ ವಿಜಯದ ೧೯ ಸಂಧಿಗಳು, ದಿಗ್ವಿಜಯದ ೩೮ ಸಂಧಿಗಳು, ಯೋಗ ವಿಜಯದ ೨೭ ಸಂಧಿಗಳು ಹೀಗೆ ಮೂರು ಘಟ್ಟಗಳು ೮೦ ಸಂಧಿಗಳಲ್ಲಿ ಹರಡಿಕೊಂಡಿದೆ ಈ ಕಾವ್ಯ. ಒಟ್ಟು ೯೯೦೭ ಸಾಂಗತ್ಯ ಪದ್ಯಗಳಿಲ್ಲಿವೆ.

ಇಂತಹ ದೀರ್ಘಕಾವ್ಯವನ್ನು ಪರಿಷ್ಕರಿಸಿ ಸಂಪಾದಿಸುವ ಗುರುತರವಾದ ಕಾವ್ಯವನ್ನು ಸಂಪಾದಕತ್ರಯರು ಯಶಸ್ವಿಯಾಗಿ ಪೂರೈಸಿದ್ದಾರೆ. ಸಮಗ್ರ ಕಾವ್ಯಾಭ್ಯಾಸಕ್ಕೆ ತೋರುಬೆರಳಾಗಿ ನಿಂತಿರುವ ಅಭ್ಯಾಸಪೂರ್ಣ ವಿಮರ್ಶಾತ್ಮಕ ಮುನ್ನುಡಿ, ಕವಿಯ ಮೂಲ ಆಶಯಕ್ಕೆ ಕುಂದು ಬಾರದ ಶುದ್ಧ ಪಾಠಾಂತರ ಗಳನ್ನು ಆಯ್ದುಕೊಂಡ ರೀತಿ–ಇವು ಸಂಪಾದಕರು ಬಹುಮುಖ ವಿದ್ವತ್ತಿಗೆ ಸಾಕ್ಷಿಯಾಗಿವೆ. ಕೃತಿಯ ಕೊನೆಯಲ್ಲಿ ಪದ್ಯಗಳ ಅಕಾರಾದಿ ಪಾರಿಭಾಷಿಕ ಪದಕೋಶ, ಅರ್ಥಕೋಶಗಳನ್ನು ಕೊಟ್ಟಿದ್ದರೆ ಅಭ್ಯಾಸಕ್ಕೆ ಇನ್ನಷ್ಟು ಅನು ಕೂಲವಾಗಬಹುದಿತ್ತು. ಇದೊಂದು ಚಿಕ್ಕ ಕೊರತೆಯನ್ನು ಬಿಟ್ಟರೆ 'ಭರತೇಶ ವೈಭವ' ಒಂದು ಉತ್ತಮ ಸಂಪಾದನಾ ಕೃತಿಯಾಗಿ ಮೂಡಿಬಂದಿದೆ.

ಕಮಲಾ ಹಂಪನಾ ಅವರು ಈ ಯಶಸ್ಸಿನಲ್ಲಿ ಭಾಜನರು ಎಂಬುದು ಹೆಮ್ಮೆಯ ವಿಷಯ. ಸೃಜನಶೀಲ, ಸಂಶೋಧನಾತ್ಮಕ, ವಿಮರ್ಶಾತ್ಮಕ ಕೃತಿರಚನೆಯಲ್ಲಿ ಪಳಗಿದ ಅವರ ಕೈ, ಸಂಪಾದನಾ ಕ್ಷೇತ್ರದಲ್ಲೂ ಹಿಂದೆ ಬಿದ್ದಿಲ್ಲ ಎಂಬುದಕ್ಕೆ ಪ್ರಸ್ತುತ ಬೃಹತ್‌ಗ್ರಂಥವೆ ಸಾಕ್ಷಿಯಾಗಿದೆ.

ಸುಕುಮಾರ ಚರಿತೆಯ ಸಂಗ್ರಹ

ಡಾ॥ ಸುಶೀಲಾ ನೆಲ್ಲಿಸರ

ಶಾಂತಿನಾಥನ 'ಸುಕುಮಾರ ಚರಿತೆ'ಯು ಹನ್ನೊಂದನೆಯ ಶತಮಾನದಲ್ಲಿ ರಚಿತ ಕಾವ್ಯಗಳಲ್ಲಿ ಉತ್ಕೃಷ್ಟವಾದುದೆಂಬುದು ಗಮನಾರ್ಹವಾಗಿದೆ. ಜೈನ ಪರಂಪರೆಯಲ್ಲೇ ರಚಿತವಾದ ಕಾವ್ಯ ಇದಾಗಿದ್ದರೂ ತನಗಿಂತ ಹಿರಿಯ ಕವಿಗಳಾದ ಪಂಪ, ಪೊನ್ನ, ರನ್ನರಂತೆ ಈತ ತನ್ನ ಕಾವ್ಯಕ್ಕೆ ತೀರ್ಥಂಕರರ ಚರಿತೆಯನ್ನು ವಸ್ತುವನ್ನಾಗಿ ಆರಿಸಿಕೊಳ್ಳದೆ ಸ್ವತಂತ್ರ ಮಾರ್ಗವನ್ನು ಅನುಸರಿಸಿ ವೈಶಿಷ್ಟವನ್ನು ಮೆರೆದಿದ್ದಾನೆ. ಶಾಂತಿನಾಥನಿಗಿಂತ ಮೊದಲೇ ಸುಕುಮಾರ ಚರಿತೆಯು ಪ್ರಾಕೃತ ಸಂಸ್ಕೃತ ಭಾಷೆಗಳಲ್ಲಿ ರಚನೆಯಾಗಿದ್ದು ಜೈನಸಮಾಜದಲ್ಲಿ ಅದು ಬಹು ಜನಪ್ರಿಯವಾದ ಕಥೆಯಾಗಿತ್ತೆಂಬುದು ತಿಳಿದು ಬರುತ್ತದೆ. ಜೈನ ಧರ್ಮದ ಬಗ್ಗೆ ಅಪಾರವಾದ ಗೌರವ ಶ್ರದ್ಧೆಗಳನ್ನು ಹೊಂದಿದ್ದ ಶಾಂತಿನಾಥನು ತನ್ನ ಕೃತಿಯಲ್ಲಿ ಆ ಧರ್ಮವೇ ಸರ್ವಶ್ರೇಷ್ಠವೆಂದು ಪ್ರತಿಪಾದಿಸಲು

ಹೊರಟಂತೆ ಕಂಡು ಬರುತ್ತದೆ. "ಈ ಸುಕುಮಾರ ಚರಿತದೊಳ್ ನೋಳ್ಪೆ ಕಾವ್ಯಧರ್ಮಮುಮನಮಳ ಜಿನಧರ್ಮಮುಮಂ" ಎಂದು ಈತನೂ ತನ್ನ ಕಾವ್ಯದಲ್ಲಿ ಕಾವ್ಯಧರ್ಮವನ್ನು ಜಿನಧರ್ಮವನ್ನು ಮೇಳವಿಸಿದ್ದಾನೆ. ಜೈನ ಕವಿಗಳಲ್ಲಿ ಕೆಲವರು ಕಾವ್ಯದ ಜೊತೆಗೆ ಶಾಸನಗಳನ್ನು ರಚಿಸಿರುವಂತೆ ಶಾಂತಿನಾಥನು ಶಾಸನಗಳ ಕರ್ತೃವೂ ಆಗಿದ್ದಾನೆ.

ಕರ್ಣಾಟಕ ಸಂಘ ಶಿವಮೊಗ್ಗ ಇವರು ಪ್ರಕಟಿಸಿರುವ ಶಾಂತಿನಾಥನ 'ಸುಕುಮಾರ ಚರಿತೆ'ಯ ಮೂಲ ಸಂಪಾದಕರು ಡಿ. ಎಲ್. ನರಸಿಂಹಾಚಾರ್ಯರು ಮತ್ತು ತ. ಸು. ಶಾಮರಾವ್ ಅವರು. ಈ ಕೃತಿಯಲ್ಲಿ ಮುನ್ನುಡಿ, ಕವಿ, ಕಥಾಸಾರ, ಕಥೆಯಮೂಲ, ವಿಮರ್ಶೆ, ಕಾವ್ಯ, ಪರಿಶಿಷ್ಟ, ಶಬ್ದಕೋಶ ಇತ್ಯಾದಿ ಎಲ್ಲವೂ ಸೇರಿ ಕಾವ್ಯಗ್ರಂಥ ಮುನ್ನೂರ ಆರು ಪುಟಗಳಷ್ಟು ಸುದೀರ್ಘವಾದುದಾಗಿದೆ. ಇಂತಹ ಬೃಹತ್ ಕಾವ್ಯವೊಂದನ್ನು ಸಂಗ್ರಹಿಸುವಾಗ ಕಮಲಾ ಹಂಪನಾ ಅವರು ಸಾಮಾನ್ಯ ಓದುಗನಿಗೂ ತಲುಪುವ ರೀತಿಯಲ್ಲಿ ಹಲವು ಔಚಿತ್ಯಪೂರ್ಣವಾದ ಶೀರ್ಷಿಕೆಗಳಡಿಯಲ್ಲಿ ಇಡೀ ಕಾವ್ಯವನ್ನು ಅಡಕಗೊಳಿಸಿದ್ದಾರೆ. ೧೪೫ಳಲ್ಲಿ ಪ್ರಕಟವಾದ ಮೂಲ ಕೃತಿಯನ್ನು ಅದರ ಒಳಿತು ಕೆಡುಕುಗಳ ಎಲ್ಲ ಮಗ್ಗುಲುಗಳನ್ನು ಹಿಗ್ಗಿಸಿ ಕುಗ್ಗಿಸಿ ಹಿತಮಿತವಾಗುವಂತೆ ಅತ್ಯಂತ ಸಮರ್ಪಕವಾಗಿ ಪಡಿಮೂಡಿಸಿರುವುದು ಲೇಖಕಿಯ ಹಿರಿಯ ಸಾಧನೆಯಾಗಿದೆ.

ಈ ಕೃತಿಯನ್ನು ಅನೇಕ ರೀತಿಗಳಲ್ಲಿ ನೋಡಬಹುದಾಗಿತ್ತಾದರೂ ಲೇಖಕಿಯೇ ಹೇಳುವಂತೆ ಕಾವ್ಯಸೌಂದರ್ಯಕ್ಕೆ ಕೊಂಚವೂ ಧಕ್ಕೆಬಾರದ ರೀತಿಯಲ್ಲಿ ಅಲ್ಲಿನ ಅನವಶ್ಯಕ ಭಾಗಗಳನ್ನು ಆದಷ್ಟು ಕಡಿಮೆಮಾಡಿ ಸಹೃದಯರ ರಸಾಸ್ವಾದನೆಗೆ ಸುಲಭಗ್ರಾಹ್ಯವಾಗುವಂತೆ ಸಂಗ್ರಹವನ್ನು ಸಿದ್ಧಪಡಿಸಿರುವುದು ಕಂಡು ಬರುತ್ತದೆ. ಜೈನಸಂಸ್ಕೃತಿಯ ಹಲವು ಸಿದ್ಧಾಂತಗಳ, ಹಲವು ಭವಾವಳಿಗಳ ಕಥೆಗಳನ್ನೊಳಗೊಂಡ ಸುಕುಮಾರ ಚರಿತೆಯಂತಹ ಕಾವ್ಯವನ್ನು ಸಂಗ್ರಹಿಸಿರುವ ಕಾರ್ಯ ಸಾಮಾನ್ಯವಾದುದೇನಲ್ಲ. ಆ ಧರ್ಮದ ಬಗ್ಗೆ, ಆ ಕವಿಯ ಬಗ್ಗೆ ಆಳವಾಗಿ ಅಧ್ಯಯನಮಾಡಿದಂಥವರಿಗೆ ಮಾತ್ರ ಸಾಧ್ಯವಾಗುವಂಥದು. ಇಲ್ಲಿ ಸಂಗ್ರಹಕಾರರು ತಮ್ಮ ವಿದ್ವತ್ತನ್ನು ಮೆರೆಯಹೋಗದೆ ಖಚಿತ ನಿರಾಡಂಬರವಾದ ವಿಶಿಷ್ಟ ಶೈಲಿಯ ಮೂಲಕ ಕಥಾಸಾಂದ ಭಾಗಗಳನ್ನು ಅಲ್ಲಲ್ಲಿ ಪರಿಪೂರ್ಣಗೊಳಿಸುತ್ತಾ, ಪದ್ಯಗಳು ವಚನವಾಗುವ ಸಾಧ್ಯತೆಯುದ್ದಕ್ಕೂ ಅಂತಹ ಸರಳಮಾರ್ಗವನ್ನು ಅನುಸರಿಸಿ, ಮೂಲ ಕವಿಯ ತೊಡಕುಗಳೇನು ? ಸಾರವತ್ತಾದ ಭಾಗಗಳಾವುವು ಎಂಬುದನ್ನು ಓದುಗನ ಮನಸ್ಸಿಗೆ ಹಿಡಿಸುವಂತೆ ಸಂಗ್ರಹಿಸಿದ್ದಾರೆ. ಕಾವ್ಯದ ಮೂಲರಸಾಸ್ವಾದನೆಯ ಭಾಗಗಳು ಬಿಟ್ಟು ಹೋಗಿರಬಹುದೆಂಬ ಅಂಶವನ್ನು ಗಮನಿಸಿ ಗ್ರಂಥ ಸಂಪಾದಕನ ಕರ್ತವ್ಯವನ್ನೂ

ಪಾಲಿಸಿದ್ದಾರೆ. ಅದಕ್ಕೆ ಉದಾಹರಣೆಯಾಗಿ ಏನಂ ಪುಟ್ಟಿಸದೋ ತತ್ವರುಚಿ ತಾಳ್ದಿದರಂದು ಪರಮ ದೀಕ್ಷೆಯಂ, ನಾನಾ ಪ್ರಕಾರದಿಂ ಪ್ರಶಂಸೆಗೆಯ್ದಂ ಭೂಪಂ...ಮುಂತಾದ ಭಾಗಗಳನ್ನು ಗಮನಿಸಬಹುದಾಗಿದೆ. ಮೂಲ ಕಾವ್ಯದಲ್ಲಿನ ಸಪ್ತಮಾಶ್ವಾಸಂ, ಅಷ್ಟಮಾಶ್ವಾಸಂಗಳಲ್ಲಿನ ಹಲವಾರು ರಸಭರಿತ ಪದ್ಯಗಳನ್ನು ಈ ಸಂಗ್ರಹಕಾರರು ಬಿಟ್ಟಿರುವುದು ಕಂಡು ಬಂದರೂ ಅದರಿಂದ ಕಾವ್ಯರಸಾಸ್ವಾದನೆಗೆ ಭಂಗವೇನೂ ಆಗಿರುವುದಿಲ್ಲ. ಗ್ರಂಥಸಂಪಾದನೆ ಹಾಗೂ ಪ್ರಮುಖ ಜೈನಕಾವ್ಯಗಳ ಅಧ್ಯಯನದ ಹಿನ್ನೆಲೆಯನ್ನು ಹೊಂದಿರುವ ಸಂಗ್ರಹಕಾರರು ಕೆಲವು ಕಠಿಣ ಪದಗಳ ಬಗೆಗೂ ಪದ್ಯಗಳ ತಾತ್ಪರ್ಯದ ಬಗೆಗೂ ಸರಳವಾಗಿ ಹೇಳಿರುವುದನ್ನು ಮುನ್ನುಡಿಯಲ್ಲಿ ನೋಡಬಹುದಾಗಿದೆ. ಜೈನ ಮುನಿಗಳು ಇಹದ ಸುಖವನ್ನು ಕ್ಷಣಿಕವಾಗಿ ಕಂಡು ಎಂತಹ ಉಪಸರ್ಗಗಳು ಬಂದಾಗ್ಯೂ ಅನಿತ್ಯವಾದ ದೇಹಕ್ಕೆ ಮೋಹಗೊಳ್ಳದೆ ಆಧ್ಯಾತ್ಮಿಕ ಸಿದ್ಧಿಯತ್ತ ಕಣ್ಣಿಟ್ಟು ಅದನ್ನು ಸಾಧಿಸುವ ಅದರ ಸಾಹಸ ಇವನ್ನು ಕಥೆಯಲ್ಲಿ ಹೃದಯ ಸ್ಪರ್ಶಿಯಾಗಿ ನಿರೂಪಿಸಿದ್ದಾರೆ.

ಸುಕುಮಾರ ಚರಿತೆಯ ಸಂಗ್ರಹದಲ್ಲಿನ 'ಎಯ್ದಿದರ್ ರಾಜಗೃಹಾಖ್ಯಮಂ' ಎಂಬ ಆರಂಭದ ಅಧ್ಯಾಯ ಮೂಲದಲ್ಲಿನ ೬೨ ಪದ್ಯಗಳನ್ನು ಬಿಟ್ಟು ೬೩ನೇ ಪದ್ಯವಾದ "ಶ್ರೀ ಮದಘಾರಿ ವೀರಜಿನ ಸನ್ನಿಧಿಯೊಳ್ ವಿಪುಲಾದ್ರಿಯೊಳ್... ಎಂಬುದರಿಂದ ಪ್ರಾರಂಭಗೊಳ್ಳುತ್ತದೆ. ಮೂಲದಲ್ಲಿ ವರ್ಣನೆಗಳೇ ಹೆಚ್ಚು ಬಂದು ಪುನರುಕ್ತಗೊಳ್ಳುತ್ತಿದ್ದ ಪದ್ಯಗಳನ್ನು ಬಿಟ್ಟು ನೇರವಾಗಿ ಕಥೆಗೆ ಬಂದಿರುವುದು ಸ್ಪಷ್ಟವಾಗಿದೆ. "ನೆಗಳ್ತೆಗೆ ಪೊಗಳ್ತೆಗೆ ಜಂಬೂದ್ವೀಪದ ನಟ್ಟನಡುವೆ..." ಈ ವಚನದಲ್ಲಿ ಕಥೆಯನ್ನು ಹೇಳುತ್ತಾ ಮೂಲದ ಸೊಗಸನ್ನು ಉಳಿಸಿಕೊಂಡು, ನಡೆದ ಕಾರ್ಯಗಳನ್ನು ಸಂಕ್ಷಿಪ್ತವಾಗಿ ಅಡಕಗೊಳಿಸಿ ಮುಂದೆಸಾಗುತ್ತಾರೆ. ಮೂಲದಲ್ಲಿನ 'ಪ್ರಥಮಾಶ್ವಾಸಂ' ಮುಗಿಯುವುದು ೮೨ ಪದ್ಯಗಳಿಂದ. ಆದರೆ ಈ ಸಂಗ್ರಹದಲ್ಲಿ ಮೂರು ಪದ್ಯಕ್ಕೆ ಆ ಅಧ್ಯಾಯ ಅಂತ್ಯಗೊಂಡು ನಾಲ್ಕನೆಯ ಪದ್ಯಕ್ಕಾಗಲೇ 'ದ್ವಿತೀಯಾಶ್ವಾಸಂ' ಆಕರವಾಗಿದೆ ಸಂಗ್ರಹಕಾರರು ಕಥಾ ಹಂದರದ ಮೇಲೇ ಕಣ್ಣಿಟ್ಟು ಅದನ್ನು ಹೆಣೆದಿರುವ ಕ್ರಮ ಜನಪದ ಲಾವಣಿಗಳನ್ನು ನೆನಪಿಗೆ ತರುತ್ತದೆ. ಲಾವಣಿಗಳಲ್ಲಿ ಕಥನಕ್ರಿಯೆ ಹಾಗೂ ಘಟನಾವಳಿಗಳ ಕಡೆಗೆ ವತ್ಯವಿನ ಗಮನ ಕೇಂದ್ರೀಕೃತವಾಗಿದ್ದು, ಉಳಿದೆಲ್ಲ ವಿಷಯಗಳು ಸಂಕ್ಷಿಪ್ತವಾಗಿ ನಿರೂಪಿತವಾಗುವಂತೆ ಇಲ್ಲಿ ಕಾವ್ಯವೊಂದರ ಸಂಗ್ರಹಕಾರರಾಗಿರುವ ಲೇಖಕಿ ಸಾಮಾನ್ಯ ಓದುಗನೂ ಸಂಗ್ರಹವನ್ನು ಅರ್ಥೈಸಿಕೊಳ್ಳುವ ರೀತಿಯಲ್ಲಿ ಒಂದು ಘಟನೆಯಿಂದ ಮತ್ತೊಂದು ಮುಖ್ಯ ಘಟನೆಗೆ ಸಾಗುವ ಕ್ರಮವನ್ನು ಅಳವಡಿಸಿಕೊಂಡಿದ್ದಾರೆ. ಹೀಗೆ ಮಾಡುವಾಗ ಕವಿಯ ಶೈಲಿ,

ಪ್ರೌಢಿಮೆ ಪಾಂಡಿತ್ಯಗಳನ್ನು ಗಮನದಲ್ಲಿಟ್ಟುಕೊಂಡೇ ಮುಂದುವರಿದಿದ್ದಾರೆ. ಉದಾಹರಣೆ :

"ಕವಿಗಳ್ ನಿನ್ನ ಮೃದೂಕ್ತಿಯುಂ ಬಯಸಿ ಕೇಳುತಿರ್ಕೆ..."

[ಸು. ಚ. ೪-೬೭]

"ಮುನ್ನೆಂದುಂ ನಿನ್ನನೇನೆಂದರಿಯದೆ ಮತಿಗೆಟ್ಟಿದು ದಿಙ್ಮೂಢನಾದೆಂ..."

[ಸು. ಚ. ೧೨-೪]

"ಅರಲ್ದ ಮುಖ ಪದ್ಮಮುಂ ನಿಬಿಡಬದ್ಧ ಪರ್ಯಂಕದೊಳ್..."

[ಸು. ಚ. ೯-೧೫]

"ಅರೆ ಮುಗಿದಿರ್ದು ಚಾನಿಸುವ ಕಣ್ಮಲರಾಪ್ತ ಪದಾರ್ಥ ತತ್ವಮುಂ...."

[ಸು. ಚ. ೯-೧೬]

ಇಂತಹ ಪದ್ಯಗಳಲ್ಲೆಲ್ಲಾ ಶಾಂತಿನಾಥನು ಅಲ್ಲಿ ನಡೆಯುವ ಕ್ರಿಯೆಗಳನ್ನೆಲ್ಲಾ ಅಂತಃಕರಣಕ್ಕೆ ತಟ್ಟುವಂತೆ ಭಕ್ತಿ, ಕರುಣ, ವೀರರಸಗಳನ್ನು ತಂದು ವೈಶಿಷ್ಟ ವನ್ನು ಮೆರೆದಿರುವುದನ್ನು ಮರೆಯದೆ ಉಳಿಸಿಕೊಂಡಿದ್ದಾರೆ.

ನಾಗಶ್ರೀಯು ಉಗ್ರವಾದ ತಪಸ್ಸನ್ನು ಆಚರಿಸಿದುದನ್ನು ಶಾಂತಿನಾಥ ಕವಿಯು ಹದಿನೈದಕ್ಕೂ ಹೆಚ್ಚಿನ ಪದ್ಯಗಳಲ್ಲಿ ಸುದೀರ್ಘವಾಗಿ ಹೃದಯವೇದ್ಯ ವಾಗುವಂತೆ ವರ್ಣಿಸಿದ್ದಾನೆ. ಆದರೆ ಸಂಗ್ರಹದಲ್ಲಿ ಅದು ಒಂದೇ ವಚನದಲ್ಲಿ "ಇತ್ತಲಾ ನಾಗಶ್ರೀಯುಂ ಪರಮ ತಪಃಶ್ರೀಯುಂ ತಾಳ್ದು ರತ್ನತ್ರಯಮನಾ ರಾಧಿಸಿ ಚರಮಸಮಯದೊಳಾತ್ಮೀಯ ಶರೀರ ಭಾರಂ ಪರಿಚ್ಯುತೆಯಾಗಿ ಸ್ತ್ರೀತ್ವಮುಂ ಪತ್ತುವಿಟ್ಟು ಪದಿನಾರನೆಯಚ್ಯುತ ಕಲ್ಪದೊಳ್ ಬೇಗವೇಗ ಮಾಕ್ಷಣದೊಳೆ ಜವ್ವನಂ ನೆರೆಯೆ ನೆಟ್ಟನೆ ತೊಟ್ಟನೆ ಬಂದು ಪುಟ್ಟಿದಂ" ಎಂದು ಕ್ರಿಯೆಯ ಎಳೆಯನ್ನೇ ಹಿಡಿದು ಜೋಡಿಸಿ ಸಂಗ್ರಹ ಕುಶಲತೆಯನ್ನು ತೋರಿ ದ್ದಾರೆ. ಸುಕುಮಾರ ಚರಿತ್ರೆಯು ಮುಖ್ಯವಾಗಿ ಜೈನಧರ್ಮದ ಕೈಪಿಡಿ ಯಿದ್ದಂತಿದೆ. ಕಾವ್ಯರಸ ಪೋಷಕವಾದ ಕೆಲವು ಪದ್ಯಗಳನ್ನು ಉಳಿಸಿಕೊಂಡು ದೀರ್ಘವಾಗಿ ಹಬ್ಬಿಕೊಂಡಿರುವ ಧರ್ಮಬೋಧನಾಭಿಮುಖವಾಗಿರುವ ಪದ್ಯಗಳನ್ನು ತೆಗೆದುಹಾಕಿ ಸಂಗ್ರಹಿಸಿರುವುದರಿಂದ ಸಂಗ್ರಹಕ್ಕೆ ಯಾವ ಧಕ್ಕೆಯೂ ಆದಂತಿಲ್ಲ, ಬದಲಾಗಿ ಮತ್ತೂ ಸಹೃದಯ ರಂಜಕವಾಗಿದೆ ಎಂದೇ ಹೇಳಬಹುದು.

ಸುಕುಮಾರ ಚರಿತೆಯಲ್ಲಿ ಸುಕುಮಾರ ಸ್ವಾಮಿ ವೈರಾಗ್ಯ ಪರನಾಗು ವುದಕ್ಕೆ ಮೊದಲು ಯಶೋಬದ್ರ ಸ್ವಾಮಿಗಳು ತಮ್ಮ ಮೌನವನ್ನು ಮುರಿದು ತ್ರಿಲೋಕ ಪ್ರಜ್ಞಪ್ತಿಯನ್ನು ಹಾಡುವ ಸನ್ನಿವೇಶದ ಭಾಗ ಸುಕುಮಾರ ಚರಿತ ಕಾವ್ಯದಲ್ಲಿ ಸುಮಾರು ನಲವತ್ತಕ್ಕೂ ಹೆಚ್ಚಿನ ಪದ್ಯಗಳಲ್ಲಿ

ಆತನ ಹಿಂದಿನ ಜನ್ಮಗಳ ವರ್ಣನೆಗಳೊಂದಿಗೆ ಹಬ್ಬಿ ಹರಡಿರುವುದನ್ನು ಸಂಗ್ರಹಿಸಿ ಕೇವಲ ಎರಡೇ ಪದ್ಯಗಳಲ್ಲಿ ಚುಟುಕಾಗಿ ಮುಗಿಸಿ ಈ ಸಂಸಾರದ ಅನಿತ್ಯತೆಯನ್ನು ಮನಗಂಡು ವೈರಾಗ್ಯ ಭಾವನೆಯನ್ನು ಅಪ್ಪಿಕೊಂಡ ಭಾಗಕ್ಕೆ ಜಾರಿ ಮುಂದು ವರಿದಿರುವುದು ಸಂಗ್ರಹದಲ್ಲಿ ತೋರಿಸಿರುವ ಔಚಿತ್ಯ ಜಾಣ್ಮೆಗಳಿಗೆ ನಿದರ್ಶನ ಗಳಾಗಿವೆ.

ಒಟ್ಟಿನಲ್ಲಿ ಸುಕುಮಾರ ಚರಿತೆಯ ಸಂಗ್ರಹವು ಉತ್ತಮ ಸಂಗ್ರಾಹಕರ ಶಕ್ತಿಯೊಂದಿಗೆ ಮೂಲದ ಸತ್ತ್ವವನ್ನು ಪಡೆದು ಸರಳವಾಗಿ, ಸಂಕ್ಷಿಪ್ತವಾಗಿ ಪರಿಣಾಮಕಾರಿಯಾಗಿ ಓದುಗನಿಗೆ ಮುಟ್ಟಿಸುವಲ್ಲಿ ಸಫಲವಾಗಿದೆ. ಔಚಿತ್ಯ ಹಾಗೂ ಸಾಮಂಜಸ್ಯಗಳೇ ಸಂಗ್ರಹದ ಮುಖ್ಯಗುಣವಾಗಿದ್ದು ಮೂಲ ಕಥೆ ಯಲ್ಲಿ ನೀರಸವಾದ, ಧರ್ಮಬೋಧನೆಯಂತಿದ್ದ, ದೀರ್ಘವಾದ ಅಷ್ಟೇನೂ ಅವಶ್ಯಕವಲ್ಲದ ವರ್ಣನೆಗಳ ಪದ್ಯಗಳನ್ನು ತೆಗೆದುಹಾಕಿ ಸಂಗ್ರಹವು ಸಾಮಾನ್ಯ ಓದುಗನಿಗೂ ತಲುಪಬೇಕೆಂಬ ಅಂಶವನ್ನು ಎಲ್ಲೂ ಮರೆಯದೆ ಸಂಗ್ರಹಿಸಿರು ವುದು ಸ್ತುತ್ಯರ್ಹವಾಗಿದೆ. ಸಂಗ್ರಹಕ್ಕೆ ತಕ್ಕುದಾದ ಕಥಾಸಾರ, ಕವಿಪರಿಚಯ, ವಿಮರ್ಶೆ ಈ ಪುಟ್ಟ ಹೊತ್ತಿಗೆಗೆ ಹೆಚ್ಚು ಮೆರುಗನ್ನು ನೀಡಿವೆ.

ಕಾ. ಸ. ಧರಣೇಂದ್ರಯ್ಯನವರ ಬದುಕಿನ ಸರ್ವತೋಮುಖ ಚಲನ ಶೀಲತೆಗೆ ಸತ್ಯ ನಿದರ್ಶನಗಳನ್ನು ಒದಗಿಸಿಕೊಟ್ಟ ನಿಷ್ಠಾವಂತ ಪ್ರಯತ್ನ ಈ ಪುಸ್ತಕ. ಇದರಲ್ಲಿ ಮುಖ್ಯವಾಗಿ ಎರಡು ಭಾಗಗಳಿವೆ. ಮೊದಲನೆಯದು ಡಿ. ವಿರೇಂದ್ರ ಹೆಗ್ಗಡೆಯವರ ಮುನ್ನುಡಿ, ಸಂಪಾದಕರ ಮಾತುಗಳೊಂದಿಗೆ, ಬಾಲ್ಯದಿಂದಲೂ ದಿ॥ ಕಾ. ಸ. ಧ ಅವರೊಂದಿಗೆ ನಿಕಟ ಪರಿಚಯ ಹೊಂದಿ ಅವರ ದಿವ್ಯ ಪ್ರತಿಭೆಗೆ ಕಾರಣರಾದ ಸಂಪಾದಕರ 'ನೆನಪಿನ ಸುರುಳಿ' ಬಿಚ್ಚಿಕೊಂಡಿದೆ. ಇದರಲ್ಲಿ ಕಾ. ಸ. ಧ. ಅವರ ಜೈವಿಕ ಉದಾತ್ತತೆ, ಅವರ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ಆಡಳಿತಾತ್ಮಕ ಕ್ರಿಯಾಶೀಲತೆ, ಅವರ ಸರ್ವಧರ್ಮ ಸಮನ್ವಯ ದೃಷ್ಟಿ, ಬಹುಧರ್ಮಗಳ ಬಗೆಗೆ ಅವರಿಗಿರುವ ಪಾಂಡಿತ್ಯ, ವ್ಯಾಖ್ಯಾನ ವೈಖರಿಗಳು, ಸಂಪಾದಕರ ನೆನಪಿನ ಸುರುಳಿ ಬಿಚ್ಚಿದಂತೆ ಓದುಗರ ಮುಂದೆ ನಿಲ್ಲುತ್ತವೆ.

ಕಾ. ಸ. ಧರಣೇಂದ್ರಯ್ಯ

ಚಂದ್ರಕಾಂತ ಪಡೇಸೂರ

ಇನ್ನು ಹೆಗ್ಗಡೆಯವರು ತಮ್ಮ ಮುನ್ನುಡಿಯಲ್ಲಿ ಬಾಲ್ಯದಲ್ಲಿ ತಮ್ಮನ್ನು ಎತ್ತಿ ಮುದ್ದಾಡುವದರಿಂದ ಹಿಡಿದು ಧರ್ಮ ಮತ್ತು ಸಾಹಿತ್ಯ ಸಮ್ಮೇಳನಗಳ ಪ್ರಧಾನ ಕಾರ್ಯದರ್ಶಿಯಾಗಿ ಬಹುಕಾಲ ಸೇವೆ ಸಲ್ಲಿಸಿದ ಹಿರಿಯ ಚೇತನದ ಸೇವೆಯನ್ನು ಗೌರವದಿಂದ ಸ್ಮರಿಸಿದ್ದಾರೆ.

ಕಾ. ಸ. ಧ. ಅವರ ಹಿರಿಕಿರಿಯ ಸಮಕಾಲೀನರಾಗಿ, ಅವರನ್ನು ತೀರ ಹತ್ತಿರದಿಂದ ಕಂಡ, ಜೀವನದ ಅನೇಕ ಕ್ಷೇತ್ರಗಳಲ್ಲಿ ಅವರೊಡನೆ ಸಂಬಂಧ ವನ್ನಿರಿಸಿಕೊಂಡ, ಅವರ ದಿವ್ಯ ಪ್ರಭೆಯಿಂದ ಪ್ರಭಾವಗೊಂಡ ಪ್ರಭಾವಗೊಳಿ ಸಿದ ಅನೇಕ ಹಿರಿ-ಕಿರಿಯ ಸಾಹಿತಿಗಳು ಆ ದಿವ್ಯ ಚೈತನಕ್ಕೆ ಅರ್ಪಿಸಿದ ಒಂದೊಂದು ನೆನಪಿನ, ಸ್ಮರಣೆಯ ಪುಷ್ಪಗಳ ಸರಮಾಲೆ 'ಬೊಗಸೆ ಹೂ' ಅಧ್ಯಾಯ. ಅವರ ಸಾರ್ವಜನಿಕ ಸೇವಾಕಾರ್ಯಗಳನ್ನು ಅವರ ಬದುಕಿನ ಪ್ರಮುಖ ಘಟ್ಟಗಳನ್ನು ದಾಖಲಿಸಿಕೊಡುವುದರೊಂದಿಗೆ, ಅವರ ಬಗೆಗಿನ ತಮ್ಮ ಆತ್ಮೀಯ ಅನಿಸಿಕೆಗಳನ್ನು ಅಭಿವ್ಯಕ್ತಗೊಳಿಸಿದ್ದಾರೆ. ತ. ಸು. ತುಕೋಲ. ಆ. ನೆ. ಉಪಾಧ್ಯೆ ಸ. ಸ. ಮಾಳವಾಡ. ಕೆ. ಬುಬಲಿಶಾಸ್ತ್ರಿ, ಬಿ. ಶಿವಮೂರ್ತಿ ಶಾಸ್ತ್ರಿ, ಮಿರ್ಜಿ ಅಣ್ಣಾರಾಯ, ಬಿ. ಎಸ್. ಕುಲಕರ್ಣಿ, ಎಂ. ವಿ. ಶ್ರೀನಿವಾಸ್, ವಿಣಾತೃಶ್ರೀ ಡಿ. ರತ್ನಮ್ಮ, ಹಂಪನಾ, ಜಿ. ಬ್ರಹ್ಮಪ್ಪ, ಜಿ. ನಾರಾಯಣ, ಎಸ್. ಪಿ. ಪಾಟೀಲ ಹಾಗು ಗುಡಿಬಂಡೆ ಸುರೇಶ ಮುಂತಾದ ವರ ಲೇಖನಗಳು ಇಲ್ಲಿವೆ. ಈ ಲೇಖನಗಳ ಸಂಯೋಜನೆಯಲ್ಲಿಯೂ ಸಂಪಾದಕರ ಔಚಿತ್ಯ ಪ್ರಜ್ಞೆಯನ್ನು ಸೂಕ್ಷ್ಮಮತಿಯ ಓದುಗರು ಗುರುತಿಸ ಬಹುದಾಗಿದೆ. ಎಲ್ಲ ಲೇಖಕರು ಕಾ. ಸ. ಧ. ಅವರ ಹೃದಯ ವೈಶಾಲ್ಯ, ದೃಷ್ಟಿವೈಶಾಲ್ಯ, ಉದಾರತ್ವ, ಅಜಾತ ಶತ್ರುತ್ವ, ಸರ್ವಧರ್ಮ ಸಮನ್ವಯ ದೃಷ್ಟಿ, ಸರ್ವ ಧರ್ಮಜ್ಞತೆ, ಕ್ರಿಯಾಶೀಲತೆ, ಆಡಳಿತ ದಕ್ಷತೆಗಳನ್ನು ತುಂಬು ಹೃದಯದಿಂದ ಸ್ಮರಿಸಿರುವರು. ಇಂಗ್ಲಿಷಿನ ಮೇಲೆ ಕಾ. ಸ. ಧ. ಅವರಿ ಗಿರುವ ಪ್ರಭುತ್ವವನ್ನು ತೋರಿಸಲು ಕಾ. ಸ. ಧ. ಅವರೇ ಬರೆದ 'Ranna a Great Kannada Poet' ಎಂಬ ಲೇಖನವನ್ನು ಸಂಪಾದಿ ಸಿದ್ದು ಸಂಪಾದಕರ ಕುಶಾಗ್ರಮತಿಗೆ ಸಾಕ್ಷಿಯಾಗಿದೆ.

ಅಂತೂ ಬದುಕಿನುದ್ದಕ್ಕೂ ಇನ್ನೊಬ್ಬರ ಒಳಿತಿಗಾಗಿ, ಏಳ್ಗೆಗಾಗಿ ಗಂಧದ ಕೊರಡಿನಂತೆ ತಮ್ಮ ಬಾಳನ್ನು ತೆಯ್ದು, ಸಾಹಿತ್ಯ ಕೃತಿಗಳನ್ನು ಸ್ವತಃ ಹೆಚ್ಚಾಗಿ ರಚಿಸದಿದ್ದರೂ ಮಂತ್ರಿಮಾನ್ಯರಿಗೆ ಸಾಹಿತ್ಯವನ್ನು ಒದಗಿಸಿ ಅವರನ್ನು ಬೆಳೆಸಿ ನಾಡು, ನುಡಿಗಳ ಸೇವೆಯಲ್ಲಿಯೇ ಸಂಪೂರ್ಣ ಸಂತೃಪ್ತಿ ಯನ್ನು ಪಡೆದು ಕನ್ನಡಿಗರ ಮನಮಂದಿರದಲ್ಲಿ ಚಿರಂತನವಾಗಿ ಉಳಿದಿದ್ದಾರೆ. ಈ ಹಿನ್ನೆಲೆಯಲ್ಲಿ ಸಂಪಾದಕರ ಪ್ರಯತ್ನ ಗಮನಾರ್ಹವಾದುದು.

ವೀರವನಿತೆ ಓಬವ್ವ

ನಲ್ಲೂರು ಪ್ರಸಾದ್

ಮಕ್ಕಳನ್ನು ಸತ್ಪ್ರಜೆಗಳನ್ನಾಗಿ ನಿರ್ಮಾಣ ಮಾಡುವ ಸಂದರ್ಭದಲ್ಲಿ, ನಮ್ಮ ಪೂರ್ವಜರ, ಇತಿಹಾಸ ವ್ಯಕ್ತಿಗಳ ಉದಾತ್ತ ಬದುಕನ್ನು ಅವರಿಗೆ ಪರಿಚಯಿಸಿ ಕೊಡಬೇಕಾದ ಅನಿವಾರ್ಯತೆ ಇದೆ. ಬುದ್ಧ, ಬಸವ, ಚೆನ್ನಮ್ಮ, ಲಕ್ಷ್ಮೀಬಾಯಿ, ಗಾಂಧಿ, ಸುಭಾಸ್, ವಿವೇಕಾನಂದ, ಸಂಗೊಳ್ಳಿ ರಾಯಣ್ಣ, ಪಂಪ, ಕಾಳಿದಾಸ ಮುಂತಾದ ಮಹಾತ್ಮರ, ನಾಡವೀರರ, ವೀರವನಿತೆಯರ ಜೀವನವನ್ನು ಅವರ ಆದರ್ಶಗಳನ್ನು ನಮ್ಮ ಮಕ್ಕಳ ಮನದಾಳದಲ್ಲಿ ಬಿತ್ತಬೇಕಿದೆ. ಫಸಲು ಹುಲುಸಾಗಬೇಕಾದರೆ ಬಿತ್ತಿದ್ದು ಸತ್ವಯುತವಾದದ್ದಾಗಿರಬೇಕು. ಇದಕ್ಕಾಗಿ ಮಕ್ಕಳ ಮಿದುಳಿಗೆ ಒಳಿತನ್ನ ತಿಳಿಯಪಡಿಸುವ ಸಾಹಿತ್ಯ ಸೃಷ್ಟಿ ಆಗಬೇಕು. ಈ ದೃಷ್ಟಿಯಿಂದ ಭಾರತೀಯಸಾಹಿತ್ಯವನ್ನಾಗಲೀ ಅದರಲ್ಲಿನ ಕನ್ನಡ ಸಾಹಿತ್ಯವನ್ನಾಗಲೀ ಗಮನಿಸಿದಾಗ ಮಕ್ಕಳಸಾಹಿತ್ಯ ಬೆಳೆಯು

ಬೇಕಾದಷ್ಟು ಬೆಳೆದಿಲ್ಲ ಎನ್ನಿಸುತ್ತದೆ. ರಷ್ಯ ದೇಶದ ಮಕ್ಕಳ ಪುಸ್ತಕವನ್ನು ಗಮನಿಸಿದಾಗಲಂತೂ ಭಾರತೀಯರ ಸಾಧನೆ ಈ ದಿಕ್ಕಿನಲ್ಲಿ ಸೊನ್ನೆ ಎನ್ನಿಸದಿರದು.

ಕನ್ನಡ ಸಾಹಿತ್ಯ ಕಂಡು ಕೊಂಡ ಮಹತ್ವದ ಲೇಖಕಿಯರಲ್ಲಿ ಕಮಲಾ ಹಂಪನಾ ಕೂಡ ಒಬ್ಬರು. ಅವರು ರಚಿಸಿರುವ ಮೂವತ್ತಕ್ಕೂ ಹೆಚ್ಚು ಕೃತಿಗಳು ಒಂದಲ್ಲ ಒಂದು ವಿಧದಿಂದ ಶ್ರೇಷ್ಠವಾದುವುಗಳೇ. ಕಥೆ, ಕಾದಂಬರಿ, ವಿಮರ್ಶೆ, ಸಂಶೋಧನಾ ಲೇಖನಗಳು ಎಲ್ಲ ವಿಧದ ಸಾಹಿತ್ಯ ಸೃಜನೆಯಲ್ಲಿಯೂ ಕಮಲಾ ಹಂಪನಾ ಅವರು 'ಸೈ' ಅನಿಸಿಕೊಂಡಿದ್ದಾರೆ. ಕೇವಲ ಅಧ್ಯಾಪಕಿ, ಲೇಖಕಿ ಅಷ್ಟೇ ಅಲ್ಲದೆ ಅಕ್ಕರೆಯ ಮಕ್ಕಳಿಗೆ ತಕ್ಕ ತಾಯಿಯೂ ಆದ ಅವರ ಮಾತೃ ಹೃದಯ ಸಹಜವಾಗಿಯೇ ಮಕ್ಕಳ ಸಾಹಿತ್ಯ ಸೃಜನೆಯತ್ತಲೂ ಸ್ಪಂದಿಸಿದೆ. ಅದರ ಪರಿಣಾಮವಾಗಿಯೇ 'ಹೆಳವನಕಟ್ಟೆ ಗಿರಿಯಮ್ಮ' 'ವೀರ ವನಿತೆ ಓಬವ್ವೆ' ಮುಂತಾದ ಮಹತ್ವ ಮಹಿಳೆಯರನ್ನು ಕುರಿತ ಮಕ್ಕಳ ಪುಸ್ತಕ ಸೃಷ್ಟಿಯಾಗಿವೆ.

ಕನ್ನಡ ನಾಡಿನಲ್ಲಿ ನುಡಿಗೆ, ನಾಡಿಗೆ ಪ್ರಾಣತೆತ್ತು ಅಮರರಾದವರ ಸಂಖ್ಯೆ ಅಪಾರ. ಕರ್ನಾಟಕದ ಮೂಲೆ ಮೂಲೆಯಲ್ಲೂ ನಿಂತಿರುವ ಮಾಸ್ತಿಕಲ್ಲು, ವೀರಗಲ್ಲುಗಳು ಅಂಥ ತ್ಯಾಗಮಯಿಗಳ ವೀರಗಾಥೆಯನ್ನು ಕೂಗಿ ಹೇಳುತ್ತವೆ.

ಓಬವ್ವೆ ಕನ್ನಡ ನಾಡಿನ ವೀರವನಿತೆ...ನಾಡಿನ ಉದ್ದಗಲಕ್ಕೂ ಜನ ಸಮುದಾಯದ ನಾಲಿಗೆಯಲ್ಲಿ ಜೀವಂತವಿರುವ ಈ ವೀರ ಮಹಿಳೆಯ ತ್ಯಾಗ ಆದರ್ಶ, ಕೆಚ್ಚು, ಅನುಕರಣೀಯವಾದದ್ದು. ಸಾಮಾನ್ಯ ಹೆಣ್ಣಾಗಿ ಅಸಾಮಾನ್ಯ ಶೌರ್ಯ ತೋರಿದ ಹೆಣ್ಣೊಬ್ಬಳ ಬದುಕಿನ ವಿವರಣೆಯೇ, ಕಮಲಾ ಹಂಪನಾ ಅವರ 'ವೀರವನಿತೆ ಓಬವ್ವೆ'.

ಈ ಕೃತಿಯನ್ನು ಓದಲು ಪ್ರಾರಂಭಿಸುತ್ತಿದ್ದಂತೆಯೇ ಕಮಲಾ ಹಂಪನಾ ಅವರ ಶ್ರೇಷ್ಠ ಕಥನ ತಂತ್ರ, ಸರಳ ಸುಂದರ ಶೈಲಿ, ನಮ್ಮನ್ನು ತಟ್ಟನೆ ಆಕರ್ಷಿಸುತ್ತವೆ. ಮಗಳಿಗೆ ಕಥೆ ಹೇಳುವ ಚಂದ್ರಶೇಖರಯ್ಯ ಅವರು, ಅವರ ಪತ್ನಿ, ಚಿಕ್ಕಪ್ಪ ರವೀಂದ್ರ ಇವರೆಲ್ಲ ನಮ್ಮ ನಡುವೆಯೇ ಇರಬಹುದಾದ ನಮ್ಮವರೇ ಆದ ವ್ಯಕ್ತಿಗಳೇನೋ ಎನಿಸಿಬಿಡುತ್ತಾರೆ. ಇದು ಸುಂದರ ಕಥೆಗೊಂದು ಚಂದದ ಪ್ರಾರಂಭ ಎನ್ನಲಡ್ಡಿಯಿಲ್ಲ. ಶಾಲೆ, ಮನೆ, ತಂದೆ ಮಕ್ಕಳು, ಇಂಥ ಸಹಜ ವಾತಾವರಣದಲ್ಲಿಯೇ ಇತಿಹಾಸ ಗುರುತು ಮಾಡದ, ಆದರೆ ಐತಿಹಾಸಿಕ ವ್ಯಕ್ತಿಯ ಬದುಕೊಂದು ಕಥೆಯಾಗುತ್ತಾ ಓದುಗರ ಹೃದಯ ಸೇರುತ್ತದೆ.

ಚಂದ್ರಶೇಖರಯ್ಯ ಅವರು ಆರತಿಗೆ ಓಬವ್ವೆ ಕಥೆ ಹೇಳಲುಪಕ್ರಮಿಸುತ್ತಿದ್ದಂತೆಯೇ ಚಿತ್ರಗುರ್ಗದ ಇತಿಹಾಸ ಬಿಚ್ಚಿಕೊಳ್ಳುತ್ತದೆ. "ಮದಕರಿ ನಾಯಕ ಯಾರಪ್ಪ ?" ಎಂಬ ಆರತಿಯ ಪ್ರಶ್ನೆಗೆ ಇಡೀ ದುರ್ಗದ ವಂಶದ ಮೂಲ ಪುರುಷ ಹಿರೇಹನುಮಪ್ಪ ನಾಯಕನಿಗೆ ವಿಜಯನಗರದ ರಾಜರಿಂದ ದೊರಕಿದ ಸಾಮಂತಿಕೆ, ಆನಂತರದಲ್ಲಿ ಬಂದ ಕಾಮಗೇಟಿ ತಿಮ್ಮಣ್ಣನ ಶೌರ್ಯ, ದುರ್ಗದ ಕೋಟೆ ಕಟ್ಟುವಿಕೆ, ವಿಜಯನಗರದ ಸಾಮಂತಿಕೆಯನ್ನು ತಿರಸ್ಕರಿಸಿ ಸ್ವತಂತ್ರನಾದದ್ದು, ಕೆರಳಿ ಮೇಲೇರಿ ಬಂದ ಸಾಳ್ವ ನರಸಿಂಗನಾಯಕನಿಗೆ ಬುದ್ಧಿ ಕಲಿಸಿದ್ದು, ಈ ವಿವರಣೆಗಳ ನಡುವೆಯೇ ತನ್ನ ಕೈಕತ್ತರಿಸಿಕೊಂಡು, ಶತ್ರು ಪಾಳಯದಿಂದ ತಪ್ಪಿಸಿಕೊಂಡದ್ದು, ಮೋಟು ಕೈಯಾದರೂ ಕಾಲಿನಿಂದ ಅದುಮಿ ಬಿಲ್ಲಿನಿಂದ ಬಾಣಬಿಟ್ಟು ಸಾಳ್ವ ನರಸಿಂಗನಾಯಕನ ಆಸೆ ಕೊಲ್ಲುವುದು. ಮುಂತಾದ ಘಟನೆಗಳೂ ಇಣುಕುತ್ತವೆ.

ಮದಕರಿ ನಾಯಕ ದುರ್ಗದ ಕೊನೆಯ ರಾಜ. ಮದಿಸಿದ ಆನೆಯ ಮದ ಮುರಿದ ನಾಯಕ ಆದ್ದರಿಂದ ಮದಕರಿ ನಾಯಕ. ಈತನ ಕಾಲದಲ್ಲಿಯೇ ಓಬವ್ವೆಯ ಪ್ರಸಂಗ ಘಟಿಸಿದ್ದು ? ಆದರೆ ಇದಕ್ಕೆ ಸಂಬಂಧಿಸಿದಂತೆ ಯಾವ್ಯಾದರು ದಾಖಲೆಗಳು, ಐತಿಹಾಸಿಕವಾಗಿ ದೊರಕುತ್ತವೆಯೆ ? ಬಹುಶಃ ಅಂಥ ಯಾವುದೇ ಆಕರಗಳು ದೊರಕಲಾರವು ಎಂದೆನಿಸುತ್ತದೆ. ಚಿತ್ರದುರ್ಗ ತನ್ನ ಇತಿಹಾಸದಲ್ಲಿಟ್ಟುಕೊಂಡಿರಬಹುದಾದ ಹಲವು ಗೋಪ್ಯಗಳಲ್ಲಿ ಓಬವ್ವೆಯ ಈ ಪ್ರಸಂಗವೂ ಒಂದು.

ಹೈದರಾಲಿ ಮೈಸೂರರಸರನ್ನು ಮೂಲೆಗೊತ್ತಿ ದುರ್ಗದ ಮೇಲೆ ದಾಳಿಯಿಟ್ಟಾಗ, ಆಕಸ್ಮಿಕ ಧಾಳಿಯಿಂದ ಅವಾಕ್ಕಾದ ನಾಯಕ ಹೈದರಾಲಿಗೆ ಕಪ್ಪ ಕಾಣಿಕೆಗೊಟ್ಟು ಕಳುಹಿಸುತ್ತಾನೆ. ಮುಂದೆ ಪೇಶ್ವೆಯವರಿಗೆ ನಾಯಕ ಸಹಾಯ ಮಾಡಿದಾಗ ಇದರಿಂದ ಕೆರಳಿದ ಹೈದರಾಲಿ ಮತ್ತೆ ದುರ್ಗದತ್ತ ಸೇನಾಸಮೇತನಾಗಿ ಬರುತ್ತಾನೆ. ವಿಷಯ ತಿಳಿದ ಮದಕರಿನಾಯಕ, ಕೋಟೆಯ ದ್ವಾರಗಳನ್ನೆಲ್ಲಾ ಮುಚ್ಚಿಸಿ, ಸೈನ್ಯಕ್ಕೆ ಸನ್ನದ್ಧವಾಗಿರಲು ಸೂಚಿಸುತ್ತಾನೆ. ಇತ್ತ ಹೈದರಾಲಿ, ಆಹಾರ ಸಾಮಗ್ರಿ ಮುಗಿದಾಗ ಕೋಟೆಯ ಬಾಗಿಲು ತಾನಾಗಿಯೇ ತೆರೆಯುತ್ತದೆಂದು ನಂಬಿನಿಂತಿದ್ದಾನೆ, ಆತನ ಎಣಿಕೆ ಸುಳ್ಳಾಗುತ್ತದೆ. ಕಡೆಗೆ ದೂತನೊಬ್ಬ ತಂದ ಸುದ್ಧಿಯಿಂದ ಹೈದರಾಲಿಗೆ ಆನಂದವಾಗುತ್ತದೆ. ದುರ್ಗದ ಪ್ರವೇಶಕ್ಕೆ ಕಳ್ಳ ಗಿಂಡಿಯೊಂದು ಇರುವುದಾಗಿ ದೂತ ತಿಳಿಸುತ್ತಾನೆ.

ಇಲ್ಲಿಂದ ಓಬವ್ವೆ ವೀರಕಥಾನಕ ಪ್ರಾರಂಭವಾಗುತ್ತದೆ. ಕಾಟನಾಯಕ ಕಹಳೆ ಊದಿ ಸುದ್ದಿ ತಿಳಿಸುವ ಕಾಯಕ ಮಾಡುವಾತ. ಆತನ ಹೆಂಡತಿ ಓಬವ್ವೆ

ಬೇಡರ ಕುಲದವಳು. ಬತೇರಿ ಇಳಿದು ಊಟಮಾಡಲು ಕಾಟ ನಾಯಕ ಮನೆಗೆ ಬರುತ್ತಾನೆ. ಗಂಡನಿಗೆ ಉಣ ಬಡಿಸಿ ನೀರಿಗೆಂದು ಕೋಟೆಯ ಕೊಳದತ್ತ ಬಂದ ಓಬವ್ವೆಗೆ ಕಿಂಡಿಯಿಂದ ಪಿಸುಮಾತು ಕೇಳುತ್ತದೆ. ಅಪಾಯದ ಅರಿವಾದಾಕ್ಷಣ ಸುದ್ದಿಯನ್ನು ಗಂಡನಿಗೆ ಮುಟ್ಟಿಸಲು ಮನೆಗೆ ಓಡುತ್ತಾಳೆ, ಗಂಡ ಉಂಡವನೇ ಹೊರತಿರುಗಲು ಹೋಗಿದ್ದಾನೆ. ವಿಧಿಯಿಲ್ಲ ಅಲ್ಲೇ ಇದ್ದ ಒನಕೆ ತೆಗೆದುಕೊಂಡು ಓಡಿಬರುತ್ತಿದ್ದಾಳೆ ಕಳ್ಳ ಗಿಂಡಿಯ ಹತ್ತಿರಕ್ಕೆ. ಅವಳ ಲೆಕ್ಕಾಚಾರ ಸರಿಯಿದೆ. ಹೈದರಾಲಿಯ ಸೈನಿಕರು ಒಬ್ಬೊಬ್ಬರಾಗಿ ನುಸುಳಿ ಬರುತ್ತಾರೆ. ಶತ್ರುವಿನ ತಲೆ ಕಿಂಡಿಯಿಂದ ಹೊರಬಂದತಕ್ಷಣ ಅದು ಓಬವ್ವನ ಒನಕೆಗೆ ಆಹಾರವಾಗುತ್ತದೆ. ಹೀಗೆ ಎಷ್ಟು ಹೊತ್ತು ಶತ್ರು ತಲೆಯನ್ನು ಚಚ್ಚಿದಳೋ. ಅಷ್ಟು ಹೊತ್ತಿಗೆ, ಗಂಡ ಅಲ್ಲಿಗೆ ಬರುತ್ತಾನೆ. ಆವೇಶದಲ್ಲಿದ್ದ ಓಬವ್ವೆ ಗಂಡನನ್ನು ಶತ್ರು ಪಕ್ಷದವನೆಂದೇ ಒನಕೆ ಎತ್ತುತ್ತಾಳೆ. ಅದನ್ನು ಅರಿತ ಗಂಡ ವಿಚಾರ ತಿಳಿಸಿ, ತನ್ನ ಕಹಳೆಯನ್ನು ಮೊಳಗಿಸಿ ದುರ್ಗದ ಸೈನ್ಯಕ್ಕೆ ಅಪಾಯದ ಸೂಚನೆಯನ್ನು ನೀಡುತ್ತಾನೆ. ಹೈದರಾಲಿಯ ಸೈನ್ಯವನ್ನು ಮದಕರಿ ನಾಯಕನ ಸೈನ್ಯ ಹಿಮ್ಮೆಟ್ಟಿಸುತ್ತದೆ. ಜಯಕ್ಕೆ ಕಾರಣಳಾದ ಓಬವ್ವೆಗೆ ಜನ ಜಯಕಾರ ಹಾಕುತ್ತಾರೆ. ಸ್ವತಃ ಮದಕರಿ ನಾಯಕನೇ ಆಕೆಯನ್ನು ಸನ್ಮಾನಿಸಲು ಆಹ್ವಾನಿಸುತ್ತಾನೆ. ಅಷ್ಟರಲ್ಲಿ ರಣಾಂಗಣದಲ್ಲಿ ನಾಡಿಗಾಗಿ ಹೋರಾಡಿ ಬಳಲಿದ್ದ ಆ ವೀರ ಮಹಿಳೆ, "ಮತ್ತೊಮ್ಮೆ ನಾಡಿಗೆ ಸೇವೆ ಸಲ್ಲಿಸುವ ಅವಕಾಶ ನನ್ನದಾಗಲಿ" ಎಂಬ ಆಸೆಯೊಂದಿಗೆ ಅಸುನೀಗಿ, ಏಕನಾಥೇಶ್ವರಿಯ ಪಾದಸೇರುತ್ತಾಳೆ, ಇದಿಷ್ಟು ಕಥೆ.

ಮದಕರಿ ನಾಯಕನ ಕಾಲದಲ್ಲಿ ನಡೆದಿರಬಹುದಾದ ಈ ಪ್ರಸಂಗವನ್ನು ಕಮಲಾ ಹಂಪನಾ ಅವರು ಮಕ್ಕಳ ಮನಸ್ಸನ್ನು ದೃಷ್ಟಿಯಲ್ಲಿಟ್ಟುಕೊಂಡು ಆ ನಿಟ್ಟಿನಲ್ಲಿಯೇ ಕಥೆಯನ್ನು ಬೆಳಸಿಕೊಂಡು ಹೋಗಿದ್ದಾರೆ. ಓಬವ್ವೆಯ ಕಥೆ ಕೇವಲ ಕಥೆಯಾಗದೆ ಅದು ದುರ್ಗದ ಇತಿಹಾಸದಲ್ಲಿನ ಅವಿಭಾಜ್ಯ ಅಂಗ ಎಂಬುದನ್ನು ಸಮರ್ಥವಾಗಿ ಹಿಡಿದಿಟ್ಟಿದ್ದಾರೆ. ಇಷ್ಟಾದರೂ ಈ ಕೃತಿಯಲ್ಲಿ ಕೆಲವು ಗೊಂದಲಗಳು ಹಾಗೇ ಉಳಿದಿವೆ. ಅದಕ್ಕೆ ಬಹುಮುಖ್ಯ ಕಾರಣವೆಂದರೆ ಓಬವ್ವೆಯನ್ನು ಕುರಿತ ಐತಿಹಾಸಿಕ ದಾಖಲೆಗಳ ಕೊರತೆ. ಓಬವ್ವೆ ಬೇಡರವಳು, ಆಕೆಯ ಗಂಡ ಕಾಟನಾಯಕ ಎನ್ನುವಲ್ಲಿ ಹಾಗೂ ಮದಕರಿ ನಾಯಕ ವೇಷ ಮರೆಸಿಕೊಂಡು ಓಬವ್ವೆ ಮತ್ತು ಆಕೆಯ ಗಂಡನ ನಡುವಿನ ಮಾತನ್ನು ಕೇಳಿ ಸಂತೋಷಪಟ್ಟ ಎನ್ನುವುದು ಇಲ್ಲೆಲ್ಲಾ, ಕಮಲಾ ಹಂಪನಾ ಅವರ ಕಲ್ಪನೆ ಕೆಲಸ ಮಾಡಿದೆ. ಐತಿಹಾಸಿಕ ದಾಖಲೆಗಳಿಲ್ಲವಾದ ಕಾರಣದಿಂದಲೇ ಓಬವ್ವೆ ಬೇಡರ ಕುಲದವಳೋ ಚಲವಾದಿ ವಂಶದವಳೋ,

ಗಂಡ ಕಾಟನಾಯಕನೋ ಮುದ್ದ ಹನುಮಪ್ಪನೋ ಮುಂತಾದ ವಿಚಾರಗಳ ಬಗ್ಗೆ 'ಇದಮಿತ್ಥಂ' ಎಂದು ಹೇಳುವಂತಿಲ್ಲ. ಬಹುಶಃ ಇತಿಹಾಸ 'ದೋಖಾ' ಮಾಡುವುದು ಇಂಥ ಕಡೆಯೇ. ಕಿರೀಟವಿಟ್ಟವರು, ಕುರ್ಚಿಯಲ್ಲಿ ಕೂತವರು, ಹುಟ್ಟಿನಿಂದಲೇ ದೊಡ್ಡವರೆನಿಸಿಕೊಂಡವರು ಇದರತ್ತಲೇ ಇತಿಹಾಸದ (ಇತಿಹಾಸಜ್ಞರ) ದೃಷ್ಟಿ ಇರುವುದರಿಂದ ಓಬವ್ವೆ, ಸರ್ಜಪ್ಪನಾಯಕ, ರಾಯಣ್ಣ ಮುಂತಾದವರು ಇತಿಹಾಸದ ಕಗ್ಗಾಡಿನಲ್ಲಿ ನಾಪತ್ತೆಯಾಗಿಬಿಡುತ್ತಾರೆ. ಓಬವ್ವೆಯ ವಿಚಾರದಲ್ಲಿ ಸತ್ಯಾಸತ್ಯತೆಗಳೇನೇ ಇರಲಿ, ಓಬವ್ವೆಯಂಥವರಲ್ಲಿ ಇದ್ದಿರಬಹುದಾದ ಆದರ್ಶ, ತ್ಯಾಗ, ಧೈರ್ಯ, ಸ್ಥೈರ್ಯಗಳನ್ನು ಇವತ್ತಿನ ಎಳೆಯರ ಮನದಲ್ಲಿ ಬಿತ್ತುವ ಆ ಮೂಲಕ ನಾಡ ಪ್ರೇಮವನ್ನು ತುಂಬುವ ಕಮಲಾ ಹಂಪನಾ ಅವರ ಈ 'ವೀರವನಿತೆ ಓಬವ್ವೆ' ಒಂದು ಸತ್ವಯುತ ಚಿಕ್ಕ ಚೊಕ್ಕ ಕೃತಿ.

ಮಹಾವೀರ

'ಘಮ'

ಕರ್ನಾಟಕದ ದಿಗಂಬರ ಜೈನ ಸಮಾಜದ ಕೆಲವರ ಚರ್ಚೆಗೆ ಗುರಿಯಾದ ಒಂದು ಗ್ರಂಥ. ಮಹಾವೀರರ ಜೀವನವನ್ನು ನಿರೂಪಿಸುವ ಕೃತಿ ಇದು. ಮುನ್ನುಡಿಯಲ್ಲಿ ಲೇಖಕಿ "ಸಾಮಾನ್ಯ ಮಾನವರಾಗಿ ಹುಟ್ಟಿ ತನ್ನೆಲ್ಲ ಶ್ರಮಸಾಧ್ಯತೆಗಳಿಂದ ಮಹಾಮಾನವರಾದ ಕಡೆಗೆ ತೀರ್ಥಂಕರರಾದ ಮಹಾವೀರರ ಜೀವನವನ್ನು ಚಾರಿತ್ರಿಕ ದಾಖಲೆಗಳಿಂದ ಚಿತ್ರಿಸುವ ಪ್ರಯತ್ನ ನನ್ನದು. ಮಹಾವೀರರು ನಮ್ಮ ನಿಮ್ಮೆಲ್ಲರಂತೆ ಒಬ್ಬ ವ್ಯಕ್ತಿಯೇ. ಅವರೊಬ್ಬ ಚಾರಿತ್ರಿಕ ವ್ಯಕ್ತಿ. ಆ ದೃಷ್ಟಿಯಿಂದ ಅವರ ಜೀವನವನ್ನು ನಿರೂಪಿಸುವಾಗ ಪೌರಾಣಿಕ ಅಂಶಗಳಿಗೆ ಒತ್ತು ಕೊಡದೆ, ಕೇವಲ ಚಾರಿತ್ರಿಕ ಅಂಶಗಳನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಂಡು ಅವರ ಜೀವನವನ್ನು ನಿರೂಪಿಸುವ ಪ್ರಯತ್ನ ಮಾಡಿದ್ದೇನೆ. ಜೈನ ಧರ್ಮದ ಪ್ರಮುಖ ಶಾಖೆಗಳಾದ ದಿಗಂಬರ ಹಾಗೂ ಶ್ವೇತಾಂಬರ ಈ ಎರಡೂ ಆಮ್ನಾಯ

ಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಗ್ರಂಥ ರಚಿಸಲಾಗಿದೆ." ಹೀಗೆ ಹೇಳಿ ಬಹುಮಟ್ಟಿಗೆ ತಮ್ಮ ಗ್ರಂಥವನ್ನು ಇದೇ ಧೋರಣೆಯಿಂದ ರಚಿಸಿದ್ದಾರೆ.

ಕಮಲಾ ಹಂಪನಾ ಅವರ ಈ ಧೋರಣೆ ಮತೀಯ ಧಾರ್ಮಿಕ ಸಂಕುಚಿತ ದೃಷ್ಟಿಯವರಿಗೆ ಪ್ರಿಯವಾಗಿ ಕಾಣಲಿಲ್ಲ. ಅವರಲ್ಲಿ ಕೆಲವರು ಸ್ವಾಮಿ ತೀರ್ಥಂಕರರನ್ನು ಒಬ್ಬ ಚಾರಿತ್ರಿಕ ವ್ಯಕ್ತಿ ಎಂದು ನಿರೂಪಿಸಿ ಮಹಾವೀರರಿಗೆ ಅಪಮಾನ ಮಾಡಿದ್ದಾರೆ. ತೀರ್ಥಂಕರನಾಗುವ ಜನ್ಮದಲ್ಲಿ ಆ ಮಗುವಿನ ಜನನವಾಗುತ್ತಿದ್ದಂತೆಯೇ ಆತನಿಗೆ ಲೌಕಿಕ ಪಾರಮಾರ್ಥಿಕ ಎಲ್ಲ ವಿದ್ಯೆಗಳೂ ಗೊತ್ತಿರುತ್ತವೆ. ಅಂಥ ತೀರ್ಥಂಕರರಿಗೆ ಲೇಖಕಿ ಗುರುಗಳ ಮೂಲಕ ಪಾಠ ಹೇಳಿಸಿದ್ದಾರೆ; ಕ್ಷತ್ರಿಯೋಚಿತ ವಿದ್ಯೆ ಕಲಿಸಿದ್ದಾರೆ. ಮಹಾವೀರರು ಬ್ರಹ್ಮಚಾರಿಗಳು. ಅವರಿಗೆ ಲೇಖಕಿ ಮದುವೆ ಮಾಡಿಸಿದ್ದಾರೆ. 'ಪರಿನಿಷ್ಕ್ರಮಣ'ದಲ್ಲಿಯೇ ಬೆತ್ತಲೆಯಾಗುವ ಮಹಾವೀರರಿಂದ ಅನಂತರದಲ್ಲಿ ಬ್ರಾಹ್ಮಣನೊಬ್ಬನಿಗೆ ಮಹಾವೀರರ ಮೈಮೇಲಿನ ಬಟ್ಟೆ ಕೊಡಿಸಿದ್ದಾರೆ; ಇವಕ್ಕೆಲ್ಲ ಕಾರಣವೆಂದರೆ ಅವರು ಶ್ವೇತಾಂಬರ ಗ್ರಂಥಗಳಿಗೆ ಮಾರುಹೋಗಿ ದಿಗಂಬರ ತತ್ವಗಳಿಗೆ ಅಪಚಾರ ಮಾಡಿದ್ದಾರೆ—ಇತ್ಯಾದಿಯಾಗಿ.

ಚಾರಿತ್ರಿಕ ವ್ಯಕ್ತಿಯೊಬ್ಬ ಸ್ತರದಿಂದ ಸ್ತರಕ್ಕೆ ಊರ್ಧ್ವಗಾಮಿಯಾಗುವ ವಾಸ್ತವಿಕ ಅಂಶ 'ಮಹಾವೀರ' ಜೀವನ ಚರಿತ್ರೆಯಲ್ಲಿ ಮೂಡಿಬಂದಿದೆ. ಶ್ವೇತಾಂಬರ-ದಿಗಂಬರ ಸಿದ್ಧಾಂತಗಳ ತೌಲನಿಕ ಅಭ್ಯಾಸದಿಂದ, ಚಾರಿತ್ರಿಕ ಅಂಶಗಳಿಂದ ಮಹಾವೀರರ ಬದುಕು ಸಹಜ ರೀತಿಯಲ್ಲಿ ಈ ಗ್ರಂಥದಲ್ಲಿ ದಾಖಲಾಗಿದೆ. ಅಂಥವರನ್ನು ಜನತೆಯ ಹತ್ತಿರಕ್ಕೆ ತಂದಿದ್ದಾರೆ. ಮಹಾವೀರರು ಜೈನಧರ್ಮವನ್ನು ಪುನರುಜ್ಜೀವಿಸಿದವರು. ಅನೇಕ ದೃಷ್ಟಾಂತಗಳ ಮೂಲಕ ತಮ್ಮ ಸಮಕಾಲೀನ ಸಮಾಜದ ಸಾಮಾನ್ಯ ಜನತೆಯನ್ನು ಎಚ್ಚರಿಸಿದವರು. ಅವರು ತೀರ್ಥಂಕರರಾಗಿ ವನಮಧ್ಯದಿಂದ ಜನಮಧ್ಯಕ್ಕೆ ಬಂದವರು. ಜನತೆಗೆ ಕಲ್ಯಾಣಮಾರ್ಗ ತೋರಲು ಜನಸಾಮಾನ್ಯರ ಭಾಷೆಯಾದ ಅರ್ಧಮಾಗಧಿಯಲ್ಲಿ ಧರ್ಮೋಪದೇಶ ಮಾಡಿದವರು. ಅವರ ಉಪದೇಶ ಸಮಸ್ತ ಮಾನವರಿಗೂ ಮುಕ್ತವಾಗಿತ್ತು. ನಿಮ್ನವರ್ಗದಿಂದ ಹಿಡಿದು ಮಹಾರಾಜರವರೆಗೂ ಮಹಾವೀರರ ಶಿಷ್ಯರಾದರು. ಮಹಾವೀರರು ಸಮತಾವಾದದ ಸಮಾಜ ರಚನೆಗೆ ಅಸ್ತಿಭಾರ ಹಾಕಿದರು. ಅವರು ಸಮಾಜವನ್ನು ತಿದ್ದುವಲ್ಲಿ ಅಳವಡಿಸಿಕೊಂಡ ಪಂಚಾಣುವ್ರತಗಳು, ಚತುರ್ವಿದ ಸಂಘ, ರತ್ನತ್ರಯತತ್ವ ಇವು ಬಹು ಮುಖ್ಯವಾದುವು. ಮಹಾವೀರರು ಸಮಸ್ತ ಜನರನ್ನೂ ಪ್ರೀತಿಸಿದರು. ಹರಿಕೇಶಿ ಎಂಬ ಚಂಡಾಲನಿಗೆ ಜೈನಭಿಕ್ಷು ಸಂಪುಟದಲ್ಲಿ ಅಧಿಕಾರ ಕೊಟ್ಟರು.

ಮಹಾವೀರರ ಮೊದಲ ವಿಜಯ ಇಂದ್ರಭೂತಿ ಎಂಬ ಮಹಾ ವಿದ್ವಾಂಸನನ್ನು ಶಿಷ್ಯನನ್ನಾಗಿ ಪಡೆದದ್ದು. ಯಜ್ಞ ಯಾಗಾದಿಗಳಿಂದ ಆತನನ್ನು ವಿಮುಕ್ತಗೊಳಿಸಿ ಅಹಿಂಸೆಯ ಧರ್ಮವಾದ ಜೈನಧರ್ಮವನ್ನು ಪಾಲಿಸುವಂತೆ ಮಾಡಿದ್ದು. ಸ್ತ್ರೀ ವರ್ಗಕ್ಕೆ ಗೌರವದೊಡನೆ ಸಮಾನತೆಯನ್ನು ದೊರಕಿಸಿ ಕೊಟ್ಟದ್ದು. ಆ ಸಂಘಕ್ಕೆ ಮಹಾವೀರರ ಚಿಕ್ಕಮ್ಮ ಚಂದನಾದೇವಿಯೇ ಅಧಿನೇತ್ರಿ. ಆಕೆ ಮುವತ್ತಾರುಸಾವಿರ ಆರ್ಯಿಕೆಯರ ಸಂಘಕ್ಕೆ ದಕ್ಷ ಮೇಲ್ವಿಚಾರಕಳಾದಳು. ಮಹಾವೀರರು ಒಟ್ಟು ಮುವತ್ತೆರಡು ವರ್ಷ ಧರ್ಮ ವಿಹಾರ ಮಾಡಿದರು. ಅವರು ಎಪ್ಪತ್ತೆರಡು ವರ್ಷ ಸಾರ್ಥಕ ಬದುಕು ನಡೆಸಿ ಕ್ರಿ. ಪೂ. ೫೨೭ ಕಾರ್ತೀಕ ಬಹುಳ ಅಮವಾಸ್ಯೆಯಂದು ಮಹಾವೀರರು ನಿರ್ವಾಣ ಹೊಂದಿದರು. ಆ ದಿವಸವನ್ನು ಮಹಾವೀರರ ನಿರ್ವಾಣ ಗೋತ್ರವನ್ನಾಗಿ (ಜೈನಧರ್ಮೀಯರು) ದೀಪಗಳನ್ನು ಬೆಳಗಿಸಿ ಆಚರಿಸುತ್ತಾರೆ. ಇದಿಷ್ಟು ಸ್ಥೂಲವಾಗಿ ಬರುವ ಮಹಾವೀರರ ಜೀವನ ಚರಿತ್ರೆ. ಕಮಲಾ ಹಂಪನಾ ಅವರ 'ಮಹಾವೀರ' ಒಂದು ಉತ್ತಮ ಜೀವನ ಚರಿತ್ರೆಯಾಗಿದೆ. ಪೌರಾಣಿಕ ಸಂಗತಿಗಳಿಂದ ಬಿಡಿಸಿಕೊಂಡು ಮಹಾವೀರರ ಬದುಕನ್ನು ಯಾವ ಅನುಮಾನಗಳೂ ಕಾಡದಂತೆ ಎಚ್ಚರ ವಹಿಸಿರುವುದು ಲೇಖಕಿಯ ಚಾರಿತ್ರಿಕ ಪ್ರಜ್ಞೆ, ವಸ್ತುನಿಷ್ಠ ಧೋರಣೆಗೆ ಸಾಕ್ಷಿಯಾಗಿದೆ. ಒಂದು ಉತ್ತಮ ಕಾದಂಬರಿಯಂತೆ, ತನ್ನ ಸುಲಲಿತ ಶೈಲಿ ನಿರೂಪಣೆಯಿಂದ ಗ್ರಂಥ ಓದಿಸಿಕೊಂಡು ಹೋಗುತ್ತದೆ, ಕುತೂಹಲವನ್ನು ಕಾಯ್ದುಕೊಂಡಿದೆ. ವಸ್ತು ಹಳೆಯದಾದರೂ ಹೇಳಿರುವ ರೀತಿ ಮನೋಜ್ಞವಾಗಿದೆ. ಜೀವನ ಚರಿತ್ರೆಗೆ ಬಹಳ ಮುಖ್ಯವಾದ ಸತ್ಯಸಂಗತಿಗಳು ಎಲ್ಲೂ ವಿಸಂಗತಿಗಳಾಗದಂತೆ ನೇಯ್ದುಕೊಂಡಿವೆ. ಗ್ರಂಥದ ಪ್ರಾರಂಭದಿಂದ ಕೊನೆಯವರೆಗೂ ಕಡೆದು ನಿಲ್ಲಿಸಿರುವ ಶಿಲ್ಪ ಹೆಸರಿಸಲೇಬೇಕಾದ ಅಂಶವಾಗಿದೆ. ಕಥೆಯಿಂದ ಕಥೆಗೆ, ದೃಷ್ಟಾಂತಗಳಿಂದ ಘಟನೆಗಳಿಗೆ ಮುನ್ನಡೆಯುವ ತಂತ್ರವೂ ಉತ್ತಮ ಮಟ್ಟದ್ದಾಗಿದೆ.

ಕಮಲಾ ಹಂಪನಾ ಅವರಿಗಿರುವ, ಮಹಾವೀರರಿಗೆ ಸಂಬಂಧಿಸಿದ ಸಾಹಿತ್ಯದ ಆಳವಾದ ಅಭ್ಯಾಸವನ್ನು ಪ್ರಸ್ತುತ ಗ್ರಂಥದ ಮೂಲಕ ಗುರುತಿಸಬಹುದು. ಈ ಹೇಳಿಕೆಗೆ ಪೂರಕವಾಗಿ ಜೈನಧರ್ಮ ಹಾಗೂ ಸಾಹಿತ್ಯಕ್ಕೆ ಸಂಬಂಧಿಸಿದ ಅವರ ಇನ್ನೂ ಕೆಲವು ಗ್ರಂಥಗಳನ್ನು ಹೆಸರಿಸಬಹುದು. ಅವೆಂದರೆ ಜೈನ ಸಾಹಿತ್ಯ ಪರಿಸರ, ಅನೇಕಾಂತವಾದ, ಚಂದನಾ, ಮಹಾವೀರ ಜೀವನ ಮತ್ತು ಸಂದೇಶ–ಈ ಎಲ್ಲ ಹಿನ್ನೆಲೆ 'ಮಹಾವೀರ' ಕೃತಿಯ ಗಟ್ಟಿತನವನ್ನು ತೋರಿಸಿದೆ.

ಪ್ರೊ॥ ಕಮಲಾ ಹಂಪನಾ ಅವರ ಕೃತಿಗಳು

೧. ಕಥಾ ಸಂಕಲನ

೧. ನಕ್ಕಿತು ಹಾಲಿನ ಬಟ್ಟಲು
ಹರ್ಷವರ್ಧನ ಪ್ರಕಾಶನ ಬೆಂಗಳೂರು ೧೯೭೧

೨. ರೆಕ್ಕೆ ಮುರಿದಿತ್ತು
ಸುಂದರ ಪ್ರಕಾಶನ ಧಾರವಾಡ ೧೯೮೨

೩. ಚಂದನಾ
ವರ್ಧಮಾನ ಪ್ರಕಾಶನ ಬೆಂಗಳೂರು ೧೯೮೨

೨. ಶಿಶು ಸಾಹಿತ್ಯ

೧. ಅಕ್ಕಮಹಾದೇವಿ
ಐ.ಬಿ.ಎಚ್. ಪ್ರಕಾಶನ ಬೆಂಗಳೂರು ೧೯೭೦ ೧೯೭೧ (ಮಾರ್ಚಿ)

೨. ಹೆಳವನಕಟ್ಟೆ ಗಿರಿಯಮ್ಮ
ಐ.ಬಿ.ಎಚ್. ಪ್ರಕಾಶನ ಬೆಂಗಳೂರು ೧೯೭೦ (ಮೊದಲ ಮುದ್ರಣ)
೧೯೭೧ (ಎರಡನೇ ಮುದ್ರಣ)

೩. ವೀರವನಿತೆ ಓಬವ್ವೆ
ಐ.ಬಿ.ಎಚ್. ಪ್ರಕಾಶನ ಬೆಂಗಳೂರು ೧೯೭೧

೪. ಮುಳುಬಾಗಿಲು
ಐ.ಬಿ.ಎಚ್. ಪ್ರಕಾಶನ ಬೆಂಗಳೂರು ೧೯೭೩

೫. ಜನ್ನ
ರಾಷ್ಟ್ರೋತ್ಥಾನ ಪರಿಷತ್ತು ಬೆಂಗಳೂರು ೧೯೭೪

೬. ಚಿಕ್ಕವರಿಗಾಗಿ ಚಿತ್ರದುರ್ಗ
ಪ್ರಭು ಪ್ರಕಾಶನ ೧೯೮೦

೭. ಡಾ॥ ಬಿ. ಆರ್. ಅಂಬೇಡ್ಕರ್
ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ೧೯೮೦

೩. ಅನುವಾದ

೧. ಬೀಜಾಕ್ಷರ ಮಾಲೆ
ಶ್ರೀ ಡಿ. ವೀರೇಂದ್ರ ಹೆಗ್ಗಡೆ ಧರ್ಮಸ್ಥಳ ೧೯೭೦

೨. ಜಾತಿಯ ನಿರ್ಮೂಲನೆ
ಅಮರ ಸಾಹಿತ್ಯ ಪ್ರಕಾಶನ ಬೆಂಗಳೂರು ೧೯೮೫

೪. ಸಂಪಾದಿತ

೧. ಸುಕುಮಾರ ಚರಿತೆಯ ಸಂಗ್ರಹ
ಹರ್ಷವರ್ಧನ ಪ್ರಕಾಶನ ಬೆಂಗಳೂರು ಪ್ರಥಮ ಮುದ್ರಣ ೧೯೬೫
ದ್ವಿತೀಯ ಮುದ್ರಣ ೧೯೬೬

೨. ಭರತೇಶ ವೈಭವ
(ಪ್ರೊ॥ ಹಂಪನಾ ಹಾಗೂ ಪ್ರೊ॥ ಜಿ. ಬ್ರಹ್ಮಪ್ಪ ಅವರೊಂದಿಗೆ)
ಅತ್ತಿಮಬ್ಬೆ ಪ್ರಕಾಶನ ಬೆಂಗಳೂರು ೧೯೬೭

೩. ಕೆ. ಎಸ್. ಧರಣೇಂದ್ರಯ್ಯನವರ ಸ್ಮೃತಿ ಗ್ರಂಥ
ಶ್ರೀ ಡಿ. ವೀರೇಂದ್ರ ಹೆಗ್ಗಡೆ ಅವರು ಧರ್ಮಸ್ಥಳ ೧೯೭೧

೪. ಶ್ರೀಪಚ್ಚೆ (ಸ್ಮರಣ ಸಂಚಿಕೆ)
ಪಿ.ಪಿ.ಪಿ. ಪ್ರಕಾಶನ ಗೌರಿಬಿದನೂರು ೧೯೭೬

೫. ಸಹಸ್ರಾಭಿಷೇಕ (ಸ್ಮರಣ ಸಂಚಿಕೆ)
ಸಹಸ್ರಾಭಿಷೇಕ ಪ್ರಕಾಶನ ಬೆಂಗಳೂರು ೧೯೮೧

೬. ಚಾವುಂಡರಾಯ ಪುರಾಣ
(ಕೆ. ಆರ್. ಶೇಷಗಿರಿ ಅವರೊಡನೆ) ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು ೧೯೮೨

೭. ಡಾ|| ಡಿ. ಎಲ್. ನರಸಿಂಹಾಚಾರ್ಯರ ಆಯ್ದ ಲೇಖನಗಳು
ವಿಶ್ವ ಕನ್ನಡ ಸಮ್ಮೇಳನ ಸಾಹಿತ್ಯ ಸಂಸ್ಕೃತಿ ಇಲಾಖೆ ಬೆಂಗಳೂರು ೧೯೮೨

೫. ಜೀವನ ಚರಿತ್ರೆ

೧. ಮಹಾವೀರ
(ಹಂಪನಾ ಒಡಗೂಡಿ) ಭೂಪಾಲಂ ಪ್ರಕಾಶನ ಬೆಂಗಳೂರು ೧೯೭೪

೬. ಸಂಶೋಧನೆ

೧. ಶಾಂತಿನಾಥ
ಬೆಂಗಳೂರು ವಿಶ್ವವಿದ್ಯಾನಿಲಯ ಬೆಂಗಳೂರು
ಪ್ರಥಮ ಮುದ್ರಣ ೧೯೭೨ ದ್ವಿತೀಯ ಮುದ್ರಣ ೧೯೮೧

೨. ಆದರ್ಶ ಜೈನ ಮಹಿಳೆಯರು
ಶ್ರೀ ಮಹಾವೀರ ಮಿಷನ್ ಬೆಂಗಳೂರು ೧೯೬೮

೩. ಮಹಾವೀರರ ಜೀವನ ಸಂದೇಶ
ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ೧೯೭೫

೪. ಅನೇಕಾಂತವಾದ
ವರ್ಧಮಾನ ಪ್ರಕಾಶನ ಬೆಂಗಳೂರು ೧೯೮೨

೫. ನಾಡು–ನುಡಿ, ನಾವು
ರಾಜ್ಯಶ್ರೀ ಪ್ರಕಾಶನ ಬೆಂಗಳೂರು ೧೯೭೧

೭. ವ್ಯಕ್ತಿಚಿತ್ರಗಳು

೧. ಮುಡಿಮಲ್ಲಿಗೆ
ವರ್ಧಮಾನ ಪ್ರಕಾಶನ ಬೆಂಗಳೂರು ೧೯೮೨

೨. ಆಮುಖ
ವರ್ಧಮಾನ ಪ್ರಕಾಶನ ಬೆಂಗಳೂರು ೧೯೮೫

೮. ವಚನಗಳು

೧. ಬಿಂದಲಿ
ಹರ್ಷವರ್ಧನ ಪ್ರಕಾಶನ ಬೆಂಗಳೂರು ೧೯೭೪

೯. ವಿಮರ್ಶೆ

೧. ಜೈನ ಸಾಹಿತ್ಯ ಪರಿಸರ
ವರ್ಧಮಾನ ಪ್ರಕಾಶನ ಬೆಂಗಳೂರು ೧೯೮೨

೨. ಬಾಸಿಂಗ
ಸುಂದರ ಪ್ರಕಾಶನ ಧಾರವಾಡ ೧೯೮೫

೧೦. ಅಚ್ಚಿನಲ್ಲಿ

೧. ಬಾಂದಳ (ವೈಚಾರಿಕ ಪ್ರಬಂಧಗಳ ಸಂಕಲನ)

ಕಮಲಾ ಹಂಪನಾ ಅಭಿನಂದನ ಸಮಿತಿ

ಸಂಪಾದಕರ ಸಮಿತಿ

ಡಾ॥ ಬಿ. ಎ. ವಿವೇಕ ರೈ

ಶಿವಾನಂದ ಗಾಳಿ

ಡಾ॥ ನಿಂಗಣ್ಣ ಸಣ್ಣಕ್ಕಿ

ಎಸ್. ಜಿ. ಸಿದ್ಧರಾಮಯ್ಯ

ಚಂದ್ರಕಾಂತ ಪಡೇಸೂರ

ರಂಗಾರೆಡ್ಡಿ ಕೋಡಿರಾಂಪುರ

ಜಿ. ಆರ್. ತಿಪ್ಪೇಸ್ವಾಮಿ

ಬೆನಕನಹಳ್ಳಿ ಜಿ. ನಾಯಕ

ನಲ್ಲೂರು ಪ್ರಸಾದ್

ಮಹೇಂದ್ರ

ಎಸ್. ವಿ. ಮನ್ವಾಚಾರ್

ಸ್ವಾಗತ ಸಮಿತಿ

ಶ್ರೀಯುತರಾದ

ಪ್ರಕಾಶ್ ಕಂಬತ್ತಳ್ಳಿ
ಡಾ॥ ಪೋಲಂಕಿ ರಾಮಮೂರ್ತಿ
ಶಿವಾನಂದ ಗಾಳಿ
ಡಾ॥ ಎಂ. ಬಿ. ಕೊಟ್ರಶೆಟ್ಟಿ
ನಿರುಪಮಾ
ಟಿ. ಕೆ. ರಾಮರಾವ್
ಕೆ. ಎಸ್. ನರಸಿಂಹಸ್ವಾಮಿ
ನಿರಂಜನ
ಡಾ॥ ಅನುಪಮಾ ನಿರಂಜನ
ಡಾ॥ ಎಂ. ವಿ. ಶ್ರೀನಿವಾಸ್
ಗೊ. ರು. ಚೆನ್ನಬಸಪ್ಪ
ಎಚ್. ಕೆ. ನಾರಾಯಣ
ನಾರಾಯಣರಾವ್ ಮಾನೆ
ಹೀ. ಚಿ. ಶಾಂತವೀರಯ್ಯ
ಡಾ॥ ಸಿ. ಪಿ. ಸಿದ್ಧಾಶ್ರಮ
ಸರಜೂ ಕಾಟಕರ್
ಡಾ॥ ನಿಂಗಣ್ಣ ಸಣ್ಣಕ್ಕಿ
ಡಾ॥ ಸಾ. ಶಿ. ಮರುಳಯ್ಯ
ಡಾ॥ ರಂ. ಶ್ರೀ ಮುಗಳಿ
ಡಾ॥ ಗೊರೂರು ರಾಮಸ್ವಾಮಿ ಅಯ್ಯಂಗಾರ್
ಸಿ. ಕೆ. ನಾಗರಾಜರಾವ್
ಕೆಂಗೇರಿ ಗೋವಿಂದಸ್ವಾಮಿ
ಡಾ॥ ಸಿ. ಎನ್. ಶ್ರೀನಾಥ್
ಎಸ್. ಬಿ. ವಸಂತರಾಜಯ್ಯ

ದೊಡ್ಡರಂಗೇಗೌಡ
ಕೆ. ರಾಜೇಶ್ವರಿ
ಕೆಂಪಹನುಮಯ್ಯ
ಕಾಶಿ ವಿಶ್ವನಾಥ ಶ್ರೆಷ್ಠಿ
ವಿ. ಸಿ. ಬ್ರಹ್ಮರಾಯಪ್ಪ
ಪ್ರೊ॥ ಜಿ. ಬ್ರಹ್ಮಪ್ಪ
ಭಗವಾನ್ ಕೆ. ಎಸ್.
ಕವಿತಾಕೃಷ್ಣ
ತ. ಪು. ವೆಂಕಟರಾಂ
ಜಿ. ವಿ. ದಾಸೇಗೌಡ
ಪ್ರೊ॥ ಎಚ್. ಜೆ. ಲಕ್ಕಪ್ಪಗೌಡ
ಡಾ॥ ದೇವೇಂದ್ರಕುಮಾರ ಹಕಾರಿ
ಅಬ್ದುಲ್ ಮಜೀದ್‌ಖಾನ್
ರಮಜಾನ ದರ್ಗಾ
ಹೊನ್ನಪ್ಪ ಭಾಗವತರ್
ನಾಗಮಣಿ ಎಸ್. ರಾವ್
ಗೀತಾ ನಾಗಭೂಷಣ
ಚಂದ್ರಕಾಂತ ಪಡೇಸೂರ
ಟಿ. ಎನ್. ಕುಮಾರಸ್ವಾಮಿ
ಜಿ. ಬಿ. ಶೆಟ್ಟಪ್ಪ
ಎಂ. ವಿ. ಧರಣೇಂದ್ರಯ್ಯ
ಲಕ್ಷ್ಮಣ್‌ರಾವ್ ಗೋಗೆ
ಶಾಂತಾ ಸನ್ಮತಿಕುಮಾರ್
ಆರ್. ಆಂಜನೇಯಲು
ಜಿ. ಬಿ. ಮನ್ವಾಚಾರ್
ಕೀಕಾನ ರಾಮಚಂದ್ರ
ಪ್ರೊ॥ ಎಸ್. ಜಿ. ಹಂಡಿ
ಹೆಚ್. ಆಂಜನಪ್ಪ
ಟಿ. ಕೆ. ಮಹಮೂದ್
ಎನ್. ಕೆ. ಇಂಚಲ
ಡಿ. ಜೆ. ಪದ್ಮನಾಭ

ಟಿ. ಗವಿಸಿದ್ಧಪ್ಪ
ಎನ್. ಸೀತಾರಾಮಪ್ಪ
ಕೆ. ವಾಸುದೇವಾಚಾರ್
ಜಿ. ವಿ. ಶಿವಸ್ವಾಮಿ
ಬೆ. ರ. ರಂಗರಾಜು
ಡಾ|| ಸಿ. ಪಾರ್ವತಮ್ಮ
ಚದುರಂಗ
ಮೋಹನ್ ವೆರ್ಣೇಕರ್
ಡಾ|| ಎಸ್. ವಿದ್ಯಾಶಂಕರ್

ವಿಮರ್ಶಕರ ವಿಳಾಸಗಳು

1. ಕವಿತಾಕೃಷ್ಣ
ಕ್ಯಾತ್ಸಂದ್ರ 572 104
ತುಮಕೂರು ಜಿಲ್ಲೆ

2. ಎಚ್. ಪಿ. ಫಿಲೋಮಿನ
ಉಪಸಂಪಾದಕಿ
'ಪ್ರಜಾಮತ' ವಾರಪತ್ರಿಕೆ
1 / 14, ಉತ್ತರ ಆಂಜನೇಯ ಬೀದಿ
ಬಸವನಗುಡಿ
ಬೆಂಗಳೂರು 560 004

3. ಮಹೇಂದ್ರ
ಸಹಾಯಕ ಸಂಪಾದಕ
ಕನ್ನಡ-ಕನ್ನಡ ನಿಘಂಟು ಕಚೇರಿ
ಚಾಮರಾಜಪೇಟೆ
ಬೆಂಗಳೂರು 560 018

4. Sri B. A. SANADI
456, Sector-3, C. G. Colony
BOMBAY 400 037

5. ಡಾ॥ ನಿಂಗಣ್ಣ ಸಣ್ಣಕ್ಕಿ
ಅಧ್ಯಾಪಕರು
ನ್ಯೂ ಇಂಗ್ಲಿಷ್ ಸ್ಕೂಲ್
ಗೋಕಾಕ
ಬೆಳಗಾವಿ ಜಿಲ್ಲೆ

6. ಸಿ. ನಾಗರಾಜು
ಕನ್ನಡ ಉಪನ್ಯಾಸಕರು
ಮಾರುತಿ ಕಿರಿಯ ಕಾಲೇಜು,
ಹದಡಿ, ದಾವಣಗೆರೆ ತಾಲ್ಲೂಕು
ಚಿತ್ರದುರ್ಗ ಜಿಲ್ಲೆ

7. ಕಾವ್ಯಜೀವಿ
(ಡಾ॥ ಎಸ್. ಪಿ. ಪದ್ಮಪ್ರಸಾದ್)
ರೂಂ ನಂ. 1, ಬಿ. ಎಸ್. ಕಾಲೇಜು ಹಾಸ್ಟಲ್
ಬಾಡಾ – ಕಾರವಾರ 581 004

8. ಮಳಲಿ ವಸಂತಕುಮಾರ್
17, ವಿಶ್ವವಿದ್ಯಾನಿಲಯದ ಮನೆಗಳು
ಪಂಪಾಪತಿ ರಸ್ತೆ, ಸರಸ್ವತೀಪುರಂ
ಮೈಸೂರು 570 009

9. ಜಿ. ವಿ. ದಾಸೇಗೌಡ
ಸರ್ಕಾರಿ ಮಹಿಳಾ ಕಾಲೇಜು
ಮಂಡ್ಯ

10. ಸುಕನ್ಯಾ ಮಾರುತಿ
ಪ್ರಶಾಂತ ಕಾಂಪೌಂಡ್
ಕಲ್ಯಾಣನಗರ
ಧಾರವಾಡ 580 003

11. ಡಾ॥ ಸಾ. ಶಿ. ಮರುಳಯ್ಯ
'ರಾಗಿಣಿ' ನಂ. 3, ಸರ್ವೀಸ್ ರಸ್ತೆ
ಆರ್. ಪಿ. ಸಿ. ಬಡಾವಣೆ, ವಿಜಯನಗರ
ಬೆಂಗಳೂರು 560 040

12. ಎಂ. ಎ. ಜಯಚಂದ್ರ
'ರಾಧಾ ಸದನ' ಕವಿಯೂರು
ತೇರು ಬೀದಿ, ಶಿಕಾರಿಪುರ 577 427
ಶಿವಮೊಗ್ಗ ಜಿಲ್ಲೆ

13. ತೇಜಸ್ವಿ ಕಟ್ಟೀಮನಿ
ಜಮಾದಾರ ಚಾಳ, ಕೊನೇಕ್ರಾಸ್
ಸಪ್ತಾಪುರ, ಧಾರವಾಡ 580 001

14. ಕೆ. ಪುಟ್ಟಯ್ಯ
ಕನ್ನಡ ಉಪನ್ಯಾಸಕರು
ಶ್ರೀ ಜೆ. ಸಿ. ಬಿ. ಎಂ. ಕಾಲೇಜು
ಶೃಂಗೇರಿ 577 139

15. ಶಾಂತಾ ಸನ್ಮತಿಕುಮಾರ್
9 / 1, 4ನೇ ಕ್ರಾಸ್, ಗಾಂಧಿನಗರ
ತುಮಕೂರು 572 101

16. ಡಾ॥ ಕೆ. ಆರ್. ಸಂಧ್ಯಾರೆಡ್ಡಿ
588, ಭವಾನಿ ನಗರ
ಗವೀಪುರಂ ವಿಸ್ತರಣ
ಬೆಂಗಳೂರು 560 019

17. ಎಚ್. ಎಸ್. ಪಾರ್ವತಿ
'ಸ್ನೇಹ' 3368, 13ನೇ ಕ್ರಾಸ್
ಹೊಸ ಕೆ. ಆರ್. ರಸ್ತೆ, ಶಾಸ್ತ್ರಿನಗರ
ಬೆಂಗಳೂರು 560 070

18. ರಂಗಾರೆಡ್ಡಿ ಕೋಡಿರಾಂಪುರ
ಕನ್ನಡ ಉಪನ್ಯಾಸಕರು
ಎ. ಇ. ಎಸ್. ನ್ಯಾಷನಲ್ ಕಾಲೇಜು
ಗೌರಿಬಿದನೂರು 561 208

19. ಜಿ. ಆರ್. ತಿಪ್ಪೇಸ್ವಾಮಿ
ಕನ್ನಡ ಉಪನ್ಯಾಸಕರು
ನ್ಯಾಷನಲ್ ಕಾಲೇಜು
ಬಾಗೇಪಲ್ಲಿ
ಕೋಲಾರ ಜಿಲ್ಲೆ

20. ಎಂ. ಶಿವಮಲ್ಲು
ಉಪನ್ಯಾಸಕರು
ವಿ. ವಿ. ಪುರಂ ವಿಜ್ಞಾನ ಕಾಲೇಜು
ವಿಶ್ವೇಶ್ವರಪುರಂ
ಬೆಂಗಳೂರು 560 004

21. ಬೆನಕನಹಳ್ಳಿ ಜಿ ನಾಯಕ
227 / 2ಬಿ. ಭೈರಪ್ಪ 3ನೇ ಬ್ಲಾಕ್
ತ್ಯಾಗರಾಜನಗರ
ಬೆಂಗಳೂರು 560 028

22. ಎಸ್. ಪಿ, ಪಾಟೀಲ
‘ಧವಲ’, ನಿರ್ಮಲನಗರ
ಧಾರವಾಡ 580 003

23. ಡಾ : ಶ್ರೀಕಂಠ ಕೂಡಿಗೆ
ಕನ್ನಡ ವಿಭಾಗ
ಸ್ನಾತಕೋತ್ತರ ಕೇಂದ್ರ
ಬಿ. ಆರ್. ಪ್ರಾಜೆಕ್ಟ್ 577 115
ಶಿವಮೊಗ್ಗ ಜಿಲ್ಲೆ

24. ಡಾ॥ ಪದ್ಮಾ ಶೇಖರ್
ಪ್ರಥಮದರ್ಜೆ ಕಾಲೇಜು
ಹುಣಸೂರು
ಮೈಸೂರು ಜಿಲ್ಲೆ

25. ಕೆ. ರಾಜೇಶ್ವರಿ
ರಾಮಕೃಷ್ಣಾಲಯ
103, 1ನೇ ಮಹಡಿ
2ನೇ ಕ್ರಾಸ್, ಗವಿಪುರಂ ಬಡಾವಣೆ
ಬೆಂಗಳೂರು 560 019

26. ಡಾ : ಸುಶೀಲಾ ನೆಲ್ಲಿಸರ
ಸ್ನಾತಕೊತ್ತರ ಕೇಂದ್ರ
ಬಿ. ಆರ್. ಪ್ರಾಜೆಕ್ಟ್ 577 115

27. ಎಸ್. ಜಿ. ಸಿದ್ದರಾಮಯ್ಯ
ಸರ್ಕಾರಿ ಕಾಲೇಜು
ತುಮಕೂರು

28. ಬೈರಮಂಗಲ ರಾಮೇಗೌಡ
ಕನ್ನಡ ಉಪನ್ಯಾಸಕರು
ಪುರಸಭಾ ಪ್ರಥಮದರ್ಜೆ ಕಾಲೇಜು
ರಾಮನಗರ
ಬೆಂಗಳೂರು ಜಿಲ್ಲೆ

29. ಎಚ್. ಎಂ. ಬೀಳಗಿ
ಕನ್ನಡ ಉಪನ್ಯಾಸಕರು
ಕರ್ನಾಟಕ ಕಾಲೇಜು
ಧಾರವಾಡ 580 001

30. 'ಘಮ'
ಬಂದಪ್ಪ ನಿವಾಸ
ನವೋದಯನಗರ
ಧಾರವಾಡ 580 003

31. ನಲ್ಲೂರು ಪ್ರಸಾದ್
ಕನ್ನಡ ಉಪನ್ಯಾಸಕರು
ವಿ. ವಿ. ಪುರಂ ಕಲೆ ಮತ್ತು ವಾಣಿಜ್ಯ ಮಹಾವಿದ್ಯಾಲಯ
ಕೆ. ಆರ್. ರಸ್ತೆ. ಬೆಂಗಳೂರು 560 018

32. ಎಸ್. ವಿ. ಮನ್ವಾಚಾರ್
ಸುಬ್ಬಯ್ಯನ ಪಾಳ್ಯ ಬಡಾವಣೆ
ಬಾಣಸವಾಡಿ ರಸ್ತೆ, ಮಾರುತಿಸೇವಾನಗರ
ಬೆಂಗಳೂರು 560 033

ಕಮಲಾ ಹಂಪನಾ ಅವರು ಎಂ.ಎ. ಪದವೀಧರರು. ಜನಪ್ರಿಯ ಭಾಷಣಕಾರರು. ನಾಡಿನ ವಿಶ್ವವಿದ್ಯಾಲಯಗಳು ಸಂಘ ಸಂಸ್ಥೆಗಳು ಏರ್ಪಾಟುಮಾಡಿರುವ ಅನೇಕ ಸಮ್ಮೇಳನಗಳಲ್ಲಿ ವಿಚಾರ ಸಂಕಿರಣಗಳಲ್ಲಿ ಪ್ರಬಂಧಕಾರರಾಗಿಯೊ ಅಧ್ಯಕ್ಷರಾಗಿಯೊ ಉದ್ಘಾಟಕರಾಗಿಯೊ ವಿಶೇಷ ಆಹ್ವಾನಿತರಾಗಿಯೊ ಭಾಗವಹಿಸಿ ಜನಪ್ರಿಯರಾಗಿರುವಂಥವರು. ಅಧ್ಯಾಪಕ ವೃತ್ತಿಯ ಜೊತೆಯಲ್ಲಿಯೇ ಮೂವತ್ತಕ್ಕೂ ಹೆಚ್ಚಿನ ಕೃತಿಗಳನ್ನು ಹೊರತರುವುದರ ಮೂಲಕ ಓದುಗರ ಅಭಿಮಾನಕ್ಕೆ ಪಾತ್ರರಾಗಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಸಮರ್ಥ ಲೇಖಕಿಯಾಗಿ ತಮ್ಮದೇ ಆದ ಹೆಜ್ಜೆ ಗುರುತುಗಳನ್ನು ಮೂಡಿಸಿದವರಾಗಿದ್ದಾರೆ. ಇವರ ಬರಹಗಳು ಹೊಸ ಆಲೋಚನೆಯನ್ನು ಸ್ಫುರಿಸುವಂಥವಾಗಿವೆ. ವಿಚಾರ, ವಿಮರ್ಶೆ, ಸಂಶೋಧನೆ—ಈ ಕ್ಷೇತ್ರಗಳಲ್ಲಿ ಇವರ ಕೊಡುಗೆ ಮೌಲಿಕವಾದುದು. ಕಮಲಾ ಹಂಪನಾ ಅವರಿಗೆ ಐವತ್ತು ವರ್ಷ ತುಂಬುತ್ತಿರುವ ಸಂದರ್ಭದಲ್ಲಿ ಅವರು ಕನ್ನಡ ನಾಡು ನುಡಿಗೆ ಸಲ್ಲಿಸಿರುವ ಮಹತ್ತರ ಸೇವೆಗಾಗಿ ಕಿರುಕಾಣಿಕೆ ಪ್ರಸ್ತುತ ಸಮಾರಂಭ ಮತ್ತು ಅಭಿನಂದನಾ ಗ್ರಂಥ. ಇದುವರೆಗೆ ಹೊರಬಂದಿರುವ ಅಭಿನಂದನಾ ಗ್ರಂಥಗಳ ಸ್ವರೂಪ ಮತ್ತು ಆಶಯಗಳಿಗೆ ಇದು ಪ್ರತ್ಯೇಕವಾಗಿ ನಿಲ್ಲುವ ಗ್ರಂಥವೆಂದು ಸಹೃದಯ ಓದುಗರಿಗೆ ಅನ್ನಿಸಿದರೆ ಇದರ ಉದ್ದೇಶ ಹಾಗೂ ಹಿನ್ನೆಲೆಗೆ ಒಂದು ಅರ್ಥಪೂರ್ಣತೆ ಇದೆ ಎಂದು ಭಾವಿಸುತ್ತೇವೆ.

ಸಂಪಾದಕ ಸಮಿತಿ